ಸಲಹೆ ಕೊಡುವುದು ಇಷ್ಟೆ. ಹಿಂದೆ ಈ ರೀತಿಯ ಅನೇಕ ಸಂದರ್ಭಗಳು ಬಂದಾಗ ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸಂಬಂಧಪಟ್ಟ ಫೈಲನ್ನು ನೋಡಿ ಆಮೇಲೆ ಚರ್ಚೆ ಮಾಡಿರತಕ್ಕಂತಹ ಅನೇಕ ಸಂದರ್ಭಗಳು ಉಂಟು. ನಿಜವಾದಂಥ ಚರ್ಚೆಯಾಗಿ ಸತ್ಯ ಹೊರಗಡೆ ಬಂದು ಸಂಬಂಧಪಟ್ಟವರಿಗೆ ಶಿಕ್ಷೆಯಾಗಬೇಕು ನಮ್ಮ ಪರ್‌ಪಸ್ ಸರ್ವ್ ಆಗಬೇಕು ಅಂತ ಇದ್ದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಈ ಸದನದ ಟೇಬಲ್ ಮೇಲೆ ಇಡಬೇಕು. ಸತ್ಯಾಸತ್ಯತೆ ಈ ಸದನಕ್ಕೆ ಗೊತ್ತಾಗಬೇಕು. ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಅದನ್ನು ಬಿಟ್ಟು ಯಾವುದೋ ನಾಲ್ಕು ಗೋಡೆಗಳ ಮಧ್ಯದಲ್ಲಿ ಚರ್ಚೆ ಮಾಡುವುದಷ್ಟೇ ಸೀಮಿತವಾದುದಲ್ಲ ಒಂದು ವೇಳೆ ಈ ಸದನದ ಟೇಬಲ್ ಮೇಲೆ ಅದರ ಸಂಪೂರ್ಣವಾದ ಫೈಲನ್ನು ಇಡುವುದಕ್ಕೆ ಕಷ್ಟವಾಗುತ್ತದೆಂದರೆ, ಬೇರೆ ಅನಿವಾರ್ಯ ಕಾರಣಗಳಿಂದ ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸೀಮಿತವಾಗಿ ವಿರೋಧಪಕ್ಷದ ನಾಯಕರುಗಳು ಸನ್ಮಾನ್ಯ ಮುಖ್ಯಮಂತ್ರಿಗಳು ಸಮಕ್ಷಮದಲ್ಲಿ ಫೈಲನ್ನು ನೋಡಿದ ಮೇಲೆ ಚರ್ಚೆ ಮಾಡಿದರೆ ಅದಕ್ಕೆ ನಿಜವಾದ ಅರ್ಥ ಬರುತ್ತದೆ. ನಿಜಕ್ಕೂ ಇದು ಸಾಕಷ್ಟು ಗಂಭೀರವಾದ ವಿಚಾರ ಏಕೆಂದರೆ ಅನೇಕ ಪ್ರಮುಖರ ಹೆಸರುಗಳು ಪ್ರಸ್ತಾಪವಾಗಿದೆ. ಮೊದಲು ೩೦ ಪ್ರಮುಖರ ಹೆಸರುಗಳಿದ್ದುವು, ಈಗ ೩೦೦ಕ್ಕೆ ಹೋಗಿದೆ. ಹಿಂದೆ ಇದ್ದಂತಹ ಮುಖ್ಯಕಾರ್ಯದರ್ಶಿಗಳು ಹೇಳಿದ ಮಾತಿಗೂ, ಈಗಿನ ಮುಖ್ಯ ಕಾರ್ಯದರ್ಶಿಗಳು ಹೇಳಿದ ಮಾತುಗಳಿಗೂ ವಿವಾದವಿರುವುದರಿಂದ, ದಯಮಾಡಿ ಆ ಫೈಲನ್ನು ತಮ್ಮ ಕೊಠಡಿಯಲ್ಲಿ ನೋಡಿಯಾದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೆಚ್ಚು ಉಪಯೋಗ ವಾಗುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿನ್ನೆ ೧೨೦ ನಿಮಿಷಗಳ ಕಾಲ ಇದೇ ಪ್ರಶ್ನೆಯ ಮೇಲೆ ಮೂಲಭೂತವಾಗಿ ಚರ್ಚೆ ಮಾಡಿದ್ದಾಯಿತು. ಅದರ ಬಗ್ಗೆ ಈಗಾಗಲೇ ನನ್ನ ರೂಲಿಂಗನ್ನು ಕೊಟ್ಟಿದ್ದೇನೆ. ಈಗ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರಿಸುತ್ತಾರೆ.

ನಿಯಮ ೬೯ರ ಮೇರೆಗೆ ಅಲ್ಪಕಾಲಾವಧಿಯ ಚರ್ಚೆ
ದೂರವಾಣಿ ಕದ್ದಾಲಿಕೆಯ ಬಗ್ಗೆ

† ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಸಭಾಧ್ಯಕ್ಷರೆ, I will try to quickly sum up the points that I am trying to make out yesterday to connect my thinking on this subject to-day. ಬಹಳ ಮುಖ್ಯವಾಗಿ ಸನ್ಮಾನ್ಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ವಿವರವಾದ ಚರ್ಚೆಯನ್ನು ಮಾಡುತ್ತಾ ಇಂಡಿಯನ್ ಟೆಲಿಫೋನ್ ಆಕ್ಟ್ ಏನು ಇದೆ, ಇದು ೧೦೫ ವರ್ಷಗಳ ಕಾಲ ಜೀವಂತವಾಗಿ ಉಳಿದುಕೊಂಡು ಬಂದಿರತಕ್ಕ ಮತ್ತು ಅದೊಂದು ಜ್ವಲಂತ ಸಮಸ್ಯೆಯಾಗಿ ರಾಷ್ಟ್ರಾದ್ಯಂತ ಚರ್ಚೆಯಾಗುತ್ತಿರತಕ್ಕಂತಹ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತಾ ಕೆಲವು ಮಾತುಗಳನ್ನು ಹೇಳಿದ್ದರು. ಅದಕ್ಕೆ ಪೂರ್ವಭಾವಿಯಾಗಿ ನಾನು ಹೇಳಿದೆ.

The Indian Telegraph Act is a Central Act. The State is only an executing machinery While doing so. certain procedures, inbuilt or conventions brought in have been discussed in detail. ಮುಖ್ಯವಾಗಿ ನನ್ನ ನಿನ್ನೆಯ ವಾದ ಸೆಕ್ಷನ್ (೫) ಸಬ್ ಕ್ಲಾಸ್ (೨) ನಲ್ಲಿ ಹೇಳಿರುವಂತೆ ಒಮ್ಮೆ ಯಾರು ಅಥಾರಿಟಿಯನ್ನು ನಿಗದಿಯನ್ನು ಮಾಡಬೇಕೋ ಅವರು ನಿಗದಿ ಮಾಡಿದಮೇಲೆ ಟೆಲಿಫೋನ್‌ನ ಕದ್ದಾಲಿಕೆ ಪ್ರಸಂಗದಲ್ಲಿ ಅವರು ಡೀಲಿಂಕ್ ಆಗುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೂ ರಾಜ್ಯದ ಮುಖ್ಯಮಂತ್ರಿ ಅವರು ಈಗಾಗಲೇ ಪಬ್ಲಿಕ್ ಡಾಕ್ಯುಮೆಂಟ್ ಎಂದು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ೧೯೬೨ ರಿಂದ ಇತ್ತೀಚಿಗೆ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯಗಳನ್ನು ಯಾವ ವರ್ಷಕ್ಕೆ ಸೀಮಿತವಾಗಿ ಎಂದು ಹೇಳದೇ ಒಂದು ಸ್ವೀಪಿಂಗ್ ರಿಮಾರ್ಕ್ಸ್‌ನ್ನು ಮಾಡಿದ್ದಾರೆ. ಅದು ಇವತ್ತು ಸದನದ ದಾಖಲೆ ಆಗಿರುವುದರಿಂದ, ಅದರ ಬಗ್ಗೆ ವಿಸ್ತಾರವಾದ ಚರ್ಚೆ ಆಗಿದೆ. ಮುಖ್ಯವಾಗಿ ಶ್ರೀಮಾನ್ ಖರ್ಗೆಯವರು ೨೯-೬-೮೮ರಲ್ಲಿ ಮುಖ್ಯ ಕಾರ್ಯದರ್ಶಿ ಸತೀಶ್‌ಚಂದ್ರ ಅವರು ಮಾಡಿದ ಆಜ್ಞೆ ಆಗಿನ ಮುಖ್ಯಮಂತ್ರಿಗಳ ಆದೇಶದಿಂದಲೇ ಆಗಿತ್ತು ಎನ್ನುವ ಅಭಿಪ್ರಾಯವನ್ನು ಸಭೆಗೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಂಬಂಧದಲ್ಲಿ ಬೆಂಗಳೂರು ಟೆಲಿಫೋನ್ಸ್‌ನ ಜನರಲ್

ಮ್ಯಾನೇಜರ್ ಅವರು ೨೨-೨-೮೪ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಬರೆದಂಥ ವಿಷಯವನ್ನು ಒಟ್ಟಾರೆ ಪ್ರಸ್ತಾಪ ಮಾಡದೇ ಸೂಕ್ಷ್ಮವಾಗಿ ಅದರಲ್ಲಿ ಬರೆದಿರುವುದನ್ನು ನಾನು ಹೇಳುತ್ತೇನೆ ಅದರಲ್ಲಿ: it is stated thus.

"The order in respect of Telephone tapping is old, and therefore, fresh authorisation by the present Government is necessary for extending the facility beyond 31st March, 1984".

ಅದೇ ದಿವಸ ರಾಜ್ಯದ ಗೃಹ ಕಾರ್ಯದರ್ಶಿಗಳು ಮತ್ತೊಂದು ಸರ್ಕಾರದ ಅಭಿಪ್ರಾಯವನ್ನು ಜನರಲ್ ಮ್ಯಾನೇಜರ್ ಬೆಂಗಳೂರು ಟೆಲಿಫೋನ್ಸ್ ಇವರಿಗೆ ಬರೆದು ತಿಳಿಸುತ್ತಾರೆ, ಅದರಲ್ಲಿ

"It is understood that you wanted a fresh Government Order regarding above, The matter was examined by the Government and it is felt that there is no need for another Government Order on the subject. I hereby confirm that the above order holds good until further orders."

ಇದು ಉತ್ತರ ಸಾಕಾಗುವುದಿಲ್ಲ ಎಂದು ಹೇಳಿ ೨೦-೫-೮೪ರಲ್ಲಿ ಕೇಂದ್ರ ಸರ್ಕಾರದವರು ಪುನಃ ಪತ್ರ ಬರೆಯುತ್ತಾರೆ. ಅವರಲ್ಲಿ

"The above legal position is brought to the notice of the State Government so that in case of authorisation made earlier under Section 5 (1) (b) is required to be revalidated, they may like to issue fresh authorisation under Section 5 (2)".

ಇದು ಕೇಂದ್ರ ಸರ್ಕಾರ ಬರೆಯುತಕ್ಕದ್ದು. ಆದಾದ ಮೇಲೆ ಜೂನ್ ೨೮ಕ್ಕೆ ಆಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮಾನ್ ಸತೀಶ್‌ಚಂದ್ರ ಅವರು ಹೀಗೆ ಆಜ್ಞೆ ಮಾಡುತ್ತಾರೆ

"In exercise of the powers conferred under Section 5 (2) of the Indian Telegraphic Act, the Government of Karnataka hereby specially authorises the DIG to exercise all powers under the said sub-section in the interest of the public safety".

ಆಮೇಲೆ ನಮ್ಮ ಗೃಹ ಕಾರ್ಯದರ್ಶಿಯವರು ಮತ್ತೊಂದು ಕರೆಕ್ಷನ್ ಅನ್ನು ಹಾಕುತ್ತಾರೆ. ಇದಕ್ಕೆ ಪೂರ್ವಭಾವಿಯಾಗಿ ಕೇಂದ್ರ ಸರ್ಕಾರದಿಂದ ಮತ್ತೊಂದು ಪತ್ರ ಬರುತ್ತದೆ. ಇವರು ಹಾಕಿರತಕ್ಕ ಕರೆಕ್ಷನ್ಸ್ ಎಂದರೆ, ಡಿಐಜಿ ಇಂಟೆಲಿಜೆನ್ಸ್ ಅವರ ಡೆಸಿಗ್ನೇಷನ್‌ನ್ನು ಐಜಿ ಇಂಟಲಿಜೆನ್ಸ್ ಎಂದು ಮಾಡಿದ್ದೇವೆಂದು ಕರೆಕ್ಷನ್ಸ್ ಕೊಟ್ಟಿದ್ದಾರೆ. ಈ ಒಟ್ಟು ದಾಖಲೆಗಳನ್ನು ತಮ್ಮ ಗಮನಕ್ಕೆ ತರುವಂತೆ ಮಾಡಿದ ಉದ್ದೇಶ. ಇದು ರಾಜ್ಯದ ಮುಖ್ಯಮಂತ್ರಿಗಳ ಬಯಕೆ ಮೇಲೆ ಬಂದಂತಹ ಹೊಸ ಆಜ್ಞೆ ಅಲ್ಲ, ಕೇಂದ್ರ ಸರ್ಕಾರದವರ ಒತ್ತಡ ಮತ್ತು.

ಜನರಲ್ ಮ್ಯಾನೇಜರ್ ಬೆಂಗಳೂರು ಟೆಲಿಫೋನ್ಸ್ ಅವರ ಒತ್ತಡಕ್ಕೆ ಈ ಹೊಸ ಆಜ್ಞೆ ಅಸ್ತಿತ್ವಕ್ಕೆ ಬಂತು, ಇದರಲ್ಲಿ ಯಾವುದೇ ಒತ್ತಡ ಇರುವುದಕ್ಕೆ ಕಾರಣ ಇರಲಿಲ್ಲ ಎನ್ನುವ ವಿಚಾರವನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದಕ್ಕೆ ಮುಂದಾಗಿ ಕೇಂದ್ರ ಸರ್ಕಾರ ಮತ್ತೊಂದು ಪರ್‌ಫಾರ್ಮ್‌ವನ್ನು ಕಳುಹಿಸಿ ಯಾರ‍್ಯಾರ ಟೆಲಿಫೋನ್‌ಗಳನ್ನು ಇಂಟರ್‌ಸೆಪ್ಟ್ ಮಾಡಬೇಕು ಎಂದು ಹೇಳಿತ್ತು. ಅದರಲ್ಲಿ ಸಮಾಜಘಾತುಕ ಶಕ್ತಿಗಳು, ದರೋಡೆಕೋರರು ದೇಶ ದ್ರೋಹಿಗಳ ಜೊತೆಯಲ್ಲಿಯೇ ಪೊಲಿಟಿಕಲ್ ಪಾರ್ಟಿ ಲೀಡರ್ಸ್ ಎನ್ನುವ ಒಂದು ಕಾಲಂ ಕೂಡ ಇದೆ ಎಂದು ಹೇಳಿದರು. ಅದು ಹಾಗೆ ಪರ್‌ಫಾರ್ಮ್ ಇದ್ದರೆ ಅದು ತಮ್ಮ ಸ್ವಾಧೀನದಲ್ಲಿರಬೇಕು. ದಯ ಮಾಡಿ ಅದನ್ನು ಕೂಡ ಸದನದ ಮುಂದೆ ಇಟ್ಟರೆ ಚರ್ಚೆಗೆ ಅನುಕೂಲವಾಗುತ್ತದೆ. ಇದಕ್ಕೆ ಸಂಬಂಧ ಪಟ್ಟಿದ್ದು ಅಲ್ಲದೇ ಇದ್ದರೂ ೧೯೮೧ ರಲ್ಲಿ ಮಾನ್ಯ ಶ್ರೀ ಆರ್. ಗುಂಡೂರಾಯರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ಇಂತಹುದ್ದೆ ಒಂದು ಚರ್ಚೆ ಈ ಸದನದಲ್ಲಿ ನಡೆದಿದೆ. ಈ ಪ್ರಸ್ತಾಪ ಕೂಡ ಈ

ಇದೇ ವ್ಯಾಲ್ಯೂಮ್‌ನಲ್ಲಿ ಡಿಸ್‌ಕಸ್ ಆಗುತ್ತದೆ. ಆ ಕಾಲಕ್ಕೆ ಆಗಿನ ಮುಖ್ಯಮಂತ್ರಿಗಳು ಈ ವಿಚಾರವನ್ನು ಹೇಗೆ ನೋಡಿದ್ದರು ಎನ್ನುವುದನ್ನು ತಿಳಿಯುವುದಾದರೆ. ಈ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಆ ವಿಚಾರ ಹೈಕೋರ್ಟ್ ರಿಟ್ ಮೂಲಕ ಪ್ರಸ್ತಾಪ ಆಗುತ್ತದೆ. ಆಗ ಶ್ರೀಮಾನ್ ಗುಂಡೂರಾಯರು ಹೇಳಿದಂತಹ ಮಾತುಗಳು ಸಹ ಈ ಕಡತದಲ್ಲಿವೆ. ನಾನು ಆ ವಿವರಕ್ಕೆ ಹೋಗುವುದಿಲ್ಲ. ಆದರೆ ಈ ಚರ್ಚೆ ಇದೇ ಮೊದಲಲ್ಲ. ಹಿಂದೆ ಕೂಡ ಆಗಿತ್ತು. ಟೆಲಿಫೋನ್ ಮತ್ತು ಕಾಗದಗಳು ಇಂಟರ್ ಸೆಪ್‌ಷನ್ ಆಗಿತ್ತು ಎನ್ನುವುದಕ್ಕೆ ಈ ಉದಾಹರಣೆಗಳನ್ನು ಹೇಳಿದ್ದೇನೆ. ಅದನ್ನು ಹೇಳುವಾಗ ಈಗ ಮಾಡಿರುವುದು ಸರಿಯೆನ್ನುವುದು ನನ್ನ ವಾದವಲ್ಲ. ಅದಕ್ಕೇ ನಾನು ಪ್ರಾರಂಭ ಮಾಡುವುದಕ್ಕೆ ಮೊದಲು ಹೇಳಿದೆ As per sub-clause 2 of Section 5 of Indian Telegraphs Act, the Chief Minister of any State, under the Act of Parliament is under bound and duty bound to tap the telephone. keep it for himself, in the larger interest of the nation. ಅಂದರೆ ಯಾರದ್ದು ಮಾಡಬೇಕು ಅನ್ನುವ ಬಗ್ಗೆ ಮಾರ್ಗಸೂಚಿಯಲ್ಲಿರುವುದನ್ನು ಬಿಟ್ಟು ಸಾಮಾನ್ಯ ಜನರ ಮತ್ತು ಗೌರವಾನ್ವಿತ ಸದಸ್ಯರುಗಳ ಟೆಲಿಫೋನ್‌ಗಳನ್ನು ಇಂಟರ್ ಸೆಪ್ಷನ್ ಮಾಡಿದ್ದರೆ ಅದು ಬರೀ ಅಪರಾಧ ಅಲ್ಲ. ಮಹಾ ಅಪರಾಧ. ಹಾಗೆ ಆಗಿದ್ದರೆ ಯಾರು ಮಾಡಿದ್ದಾರೆ ? ಅದನ್ನು ಯಾರು ನಿರ್ಧಾರ ಮಾಡಬೇಕು ? ಆ ನಿರ್ಧಾರ ಮಾಡುವುದಕ್ಕೆ ಇಬ್ಬರಿಗೆ ಮಾತ್ರ ಸಾಧ್ಯ. ಅದರಲ್ಲಿ ರಾಜ್ಯದ ಮುಖ್ಯ ಮಂತ್ರಿಗಳು. ಮತ್ತೊಬ್ಬರು ಆ ಕಾಲಕ್ಕೆ ಯಾರು ಅಥರೈಸ್ಡ್‌ಗೆ ಅಧಿಕಾರಿಗಳಿದ್ದರು ಅವರು. ಈ ವಿಚಾರದಲ್ಲಿ ಇಂದಿನ ಕಾನೂನು ಮಂತ್ರಿಗಳ ಅಂದಿನ ಸಲಹೆ ಕೂಡ ಬಹಳ ಪ್ರಸ್ತುತವಾಗುತ್ತದೆ. ಅಂದಿನ ಈ ಸಭೆಯ ಹಿರಿಯ ಸದಸ್ಯರು ಹಾಗೂ ಹಿಂದಿನ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಈ ವಿಚಾರದಲ್ಲಿ ಏನು ಹೇಳಿದ್ದಾರೆನ್ನುವುದನ್ನು ನೋಡೋಣ. ಇದೇ ವಾಲ್ಯುಮ್–೧೧ ೫ನೇ ಅಧಿವೇಶನ.

ಶ್ರೀ ಕೆ. ಹೆಚ್. ರಂಗನಾಥ್.—(ಶಿಕ್ಷಣ, ಯುವಜನ ಸೇವೆ, ಕ್ರೀಡಾ, ಕನ್ನಡ ಮತ್ತು ಸಂಸ್ಕೃತಿ ಸಚಿವರು) ನಾವು ನೆನ್ನೆಯಿಂದ ತಮ್ಮ ಭಾಷಣವನ್ನು ಕೇಳುತ್ತಿದ್ದೇವೆ. ಈ ಸಭೆಯಲ್ಲಿ ಒಂದು ಸಂಶಯವನ್ನು ಒಬ್ಬ ಮಾನ್ಯ ಸದಸ್ಯರು ವ್ಯಕ್ತ ಮಾಡಿದರು. ಅದಕ್ಕೆ ತಾವು ಏನೂ ಉತ್ತರ ಕೊಡುತ್ತಿಲ್ಲ. ನನ್ನ ಹೆಸರು ಸಹ ಆ ಪಟ್ಟಿಯಲ್ಲಿದೆ. ಅದು ಏಕೆ ಇದೆಯೋ ಯಾವ ಅಧಿಕಾರಿ ಮಾಡಿದ್ದಾರೋ ಗೊತ್ತಿಲ್ಲ. ಪ್ರಮುಖವಾದಂಥ ಒಂದು ವಿಚಾರ ಅಂದರೆ, ಅವರ ಮಂತ್ರಿಮಂಡಲದ ಸದಸ್ಯರದ್ದೇ ಕದ್ದು ಕೇಳಿದ್ದಾರೆ ಎನ್ನುವುದಿದೆ. ಆ ನಂಬರ್‌ಗಳೆಲ್ಲಾ ಇವೆ ಒಂದು ಪ್ರಶ್ನೆ ಈ ಸದನದಲ್ಲಿ ಬಂತು. ಮಾನ್ಯ ಸದಸ್ಯರೊಬ್ಬರು ಕೇಳಿದರು. ಏತಕ್ಕೆಂದರೆ ಅದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯಾಗುತ್ತದೆ. ಇವತ್ತು ಏನು ಆಗುತ್ತದೆ ಎಂದರೆ, ಹಿಂದೆ ಇದ್ದಂಥ ಮುಖ್ಯ ಮಂತ್ರಿಗಳು ಕಾನೂನು. ಕಡತ ಎಲ್ಲಿದೆ. ಅದರಲ್ಲಿ ನನ್ನದಿದ್ದರೆ ಎಂದರು. ಅದು ವಾಸ್ತವಾಂಶ ಇರಲಿ, ಅದಕ್ಕೆ ಉತ್ತರ ಹೇಳುವಾಗ ಹೇಳುತ್ತಾರೆ. ಒಂದು ಪ್ರಶ್ನೆ ಏನು ಬಂತು ಎಂದರೆ ಅವರ ಮಂತ್ರಿಮಂಡಲದ ಸದಸ್ಯರ ಹೆಸರನ್ನು ಸೇರಿಸಿ ಅವರ ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳುವಾಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಧಿಕಾರಿಗಳು ಆ ಮಟ್ಟಕ್ಕೆ ಹೋಗಿದ್ದಾರೆಯೇ ? ಮಂತ್ರಿಮಂಡಲದ ಸದಸ್ಯರನ್ನು ಮುಖ್ಯಮಂತ್ರಿಗಳ ಅನುಮತಿ ಇಲ್ಲದೆ ಟ್ಯಾಪ್ ಮಾಡುವುದಕ್ಕೆ ಅವರೇ ಒಂದು ಸ್ವಯಂಪ್ರೇರಿತರಾಗಿ ಅಧಿಕಾರ ತೆಗೆದುಕೊಂಡು ಆಥರೈಸ್ಡ್ ಲಿಸ್ಟ್‌ನಲ್ಲಿ ಅದನ್ನು ಕೇಳತಕ್ಕಂಥ ಮಟ್ಟಕ್ಕೆ ಹೋಗಿದ್ದಾರೆಯೇ ? ಅಷ್ಟು ಅಧಿಕಾರವನ್ನು ಅವರಿಗೆ ಕೊಟ್ಟಿದ್ದರೆ? ಒಂದು ವೇಳೆ ಅವರಿಗೆ ಇದ್ದರೆ ಈ ಸದನದ ಮುಖಾಂತರ ಈ ರಾಜ್ಯ ರಾಜ್ಯದ ಜನತೆ ನಿರ್ವಿವಾದವಾದಂಥ ಒಂದು ಅಭಿಪ್ರಾಯಕ್ಕೆ ಬರಬೇಕಾಗುತ್ತದೆ, ಮುಖ್ಯಮಂತ್ರಿಗಳು ಹೇಳಿಯೇ ಇದ್ದಾರೆ. ಮುಖ್ಯ ಮಂತ್ರಿಗಳು ಹೇಳದೆ ಇದು ನಡೆದಿಲ್ಲ ಎನ್ನತಕ್ಕಂಥ ನಿರ್ವಿವಾದವಾದಂಥ ಒಂದು ಅಭಿಪ್ರಾಯ ಬರುತ್ತದೆ ಆದ್ದರಿಂದ ನಮ್ಮ ಅಭಿಪ್ರಾಯ ಅದಲ್ಲ ಅಂತ ತಾವು ಸಾಬೀತು ಮಾಡಿದರೆ ಉಪಯೋಗವಾಗುತ್ತದೆ ವಿನಹ, ಇಲ್ಲದೇ ಹೋದರೆ ಅಧ್ಯಕ್ಷರೇ ಸ್ವಲ್ಪ ನಾವು ಕಾಲವ್ಯಯ ಮಾಡಿದ ಹಾಗೆ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅದರಲ್ಲಿ ತಾವು ಬೆಳಕು ಚೆಲ್ಲಿದರೆ ನಮಗೆ ಬಹಳಷ್ಟು ಅನುಕೂಲವಾಗುತ್ತದೆ. ಇಲ್ಲಿ ಪ್ರಶ್ನೆ ಇರುವುದು ಇಷ್ಟೆ ಅದು ಏನೆಂದರೆ, ನಮ್ಮ ರಾಜ್ಯದ ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ಈ ಕದ್ದು ಕೇಳತಕ್ಕಂಥ ಸಂಪ್ರದಾಯ ಹಾಕಿಕೊಂಡಿದ್ದು ಸರಿಯೇ ಎಂಬುದು. ಇವತ್ತು ಕಾರಣಾಂತರಗಳಿಂದ ಈ ವಿಚಾರ ಹೊರಗೆ ಬಂದಿದರಿಂದ, ಈ ಕದ್ದು ಕೇಳಬಾರದು ಎನ್ನತಕ್ಕಂಥ ವಿಚಾರ ಏನಿದೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಇದಕ್ಕೆ ಪ್ರಮುಖವಾಗಿ ಮುಖ್ಯ ಮಂತ್ರಿಗಳು ಅಧಿಕಾರ ವಹಿಸಿದಾಗ ಇವತ್ತು ಒಂದು ನೀತಿಯನ್ನು ಹೇಳಿದ್ದಾರೆ. ನಾನು ಇದಕ್ಕೆ ಅವಕಾಶ ಕೊಡುವುದಿಲ್ಲ ಕೇಳುವುದಿಲ್ಲ ಎಂದು ತಮ್ಮ ಅಭಿಪ್ರಾಯವನು

ಹೇಳಿದ್ದಾರೆ. ಆದ್ದರಿಂದ ತಾವು ದಯಮಾಡಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ, ಇದಕ್ಕೆ ಉತ್ತರ ಹೇಳಿದರೆ ಬಹಳ ಮಟ್ಟಿಗೆ ಚರ್ಚೆಗೆ ಅನುಕೂಲವಾಗುತ್ತದೆ.

MR. SPEAKER.—Were you one of those victims? Was your telephone tapped?

ಶ್ರೀ ಕೆ. ಎಚ್. ರಂಗನಾಥ್.—ನನ್ನದೂ ಬಂದಿದೆಯೆಂದು ಲಿಸ್ಟ್‌ನಲ್ಲಿ ಓದಿದರು.

ಅಧ್ಯಕ್ಷರು.—ನೀವು ಸಂಕೋಚಪಟ್ಟು ಕೊಳ್ಳಬೇಕಾಗಿಲ್ಲ. ಹೇಳಿ.

ಶ್ರೀ ಕೆ. ಎಚ್. ರಂಗನಾಥ್.—ನಾನು ಈ ಯಾವ ವ್ಯವಹಾರದಲ್ಲೂ ಕೈಹಾಕದೇ ಇರುವುದರಿಂದ ಎಷ್ಟು ವರ್ಷ ಕದ್ದು ಕೇಳಿದರೂ ಅವರಿಗೆ ಏನೂ ಸಿಗುವುದಿಲ್ಲ. I am not worried about it ನನ್ನ ಹೆಸರು ಅದರಲ್ಲಿ ಇದೆ.

MR. SPEAKER:—Now the Leader of Opposition, I think he is trying to clinch the issue. The question boils down to this. It is a fact that Certain telephones belonging to politicians were also tapped at a given point of time i.e. in 1988. Now did the then Chief Secretary pass an order mentioning the certain telephone numbers tapped? According to the procedure which has been spelt out before the appropriate bodies, did he do it on his own or did he do it at the behest of somebody in consultation with somebody or at the orders of somebody? I think the whole question boils down to this. You can go ahead in your own way to meest this point.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಏನು ಹೇಳುತ್ತಿದ್ದೇನೆ ಎಂದು ಕೇಳುವ ತಾಳ್ಮೆ ಅತ್ಯಂತ ಹಿರಿಯ ಸದಸ್ಯರಿಗೆ ಇಲ್ಲದಿದ್ದರೆ...

ಶ್ರೀ ಕರಿಯಣ್ಣ.—ಅಧ್ಯಕ್ಷರೇ...

(ಗೊಂದಲ)

MR. SPEAKER.—Let us be serious about it. ಶ್ರೀ ಕರಿಯಣ್ಣನವರೇ, ನೀವು. ಕುಳಿತುಕೊಳ್ಳಿ. ನಿಮ್ಮ ಫೋನು ಟ್ಯಾಪ್ ಆಗಿಲ್ಲ. ನೀವು ಈಸಲ ಬಂದಿದ್ದೀರಿ ನೀವು ಕುಳಿತುಕೊಳ್ಳಿ

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೇ...

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಹಿಂದುಗಡೆ ಇರುವ ಸದಸ್ಯರ ಕಾಟದಿಂದ ನಮ್ಮನ್ನು ತಪ್ಪಿಸದಿದ್ದರೆ ಕಷ್ಟವಾಗುತ್ತದೆ. ಅವತದ್ದು ಏನು ಪೊಂಡುವಾದ

MR. SPEAKER.—Mr. Shivarame Gowda, I would like to request you not to interrupt the proceeding unless you are called. The same applies to Shri Vatal Nagaraj. Unless you are called...

ಶ್ರೀ ವಾಟಾಳ್ ನಾಗರಾಜ್.—ಶ್ರೀ ಚಂದ್ರೇಗೌಡರು ಹೇಳುತ್ತಿರುವುದು ನನಗಲ್ಲ. ಅವರನ್ನೇ ಕೇಳಿ. ಅವರು ನನಗೆ ಹೇಳುತ್ತಿಲ್ಲ, ಅವರು ಶಿವರಾಮೇಗೌಡರಿಗೆ ಹೇಳುತ್ತಿದ್ದಾರೆ. ಬೇಕಾದರೆ ಅವರನ್ನೇ ಕೇಳಿ.

ಅಧ್ಯಕ್ಷರು.—ಯಾರಿಗೆ ಹೇಳ್ತಾ ಇರೋದು ನೀವು ?

ಶ್ರೀ ಡಿ. ಬಿ. ಚಂದ್ರೇಗೌಡ.—ಶಿವರಾಮೇಗೌಡರಿಗೆ...

ಅಧ್ಯಕ್ಷರು.—ಶಿವರಾಮೇಗೌಡರಿಗಾ...

ಶ್ರೀ ಡಿ.ಬಿ. ಚಂದ್ರೇಗೌಡ.—ಹೌದು ಆತ ಏನು ಸರ್ವಜ್ಞನೇ. Is he the only Member who is Sarvagnya?
ಬೇರೆ ಸದಸ್ಯರ ಬಗ್ಗೆ ಸ್ವಲ್ಪ ಗೌರವ ಇರಬೇಕು. This is not the way.

MR. SPEAKER.—Shri Shivarame Gowda, again you are getting up.

(Interruption)

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಸದನದ ಸಮಯ ಹಾಳಾಗುತ್ತಿದೆಯಲ್ಲ ಎಂಬ ನೋವಿನಿಂದ ಹೇಳಿದೆ.

(ಗೊಂದಲ)

ಶ್ರೀ ಪಿ. ಸಿ. ಸಿದ್ದನಗೌಡರ.—ಇವತ್ತು ಬೆಳಿಗ್ಗೆಯಿಂದ ಇದೇ ರೀತಿಯಾಗುತ್ತಿದೆ. ಇದು ಸರಿಯಾಗುವುದಿಲ್ಲ, ಅವರು ಸಹ ಸಭಾಧ್ಯಕ್ಷರಿಗೆ ಗೌರವ ಕೊಟ್ಟು ನಡೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಸಿದ್ದನಗೌಡರೇ, ನಾನು ಹೇಳುತ್ತಾ ಇದ್ದೇನೆ, ನೀವೂ ಕೇಳುತ್ತಾ ಇದ್ದೀರಲ್ಲ. ನೀವು ಕೇಳಬೇಕು ಇಲ್ಲದೇ ಹೋದರೆ ನಾನು ಕೇಳಬೇಕು. ನಾನು ಯಾವ ಮಾನ್ಯ ಸದಸ್ಯರನ್ನು ಕರೆಯುತ್ತೇನೆ ಅವರು ಮಾತನಾಡುತ್ತಿರತಕ್ಕ ಕಾಲದಲ್ಲಿ, ಅವರ ಅಭಿಮತ ಇಲ್ಲದೆ ಯಾವ ಇಂಟರಪ್‌ಷನ್‌ಗೂ ನಾನೂ ಅವಕಾಶ ಕೊಡುವುದಿಲ್ಲ. ಮಧ್ಯೆ, ಮಧ್ಯೆ ಈ ರೀತಿ ಎದ್ದು ಮಾತನಾಡುವುದು ಸರಿಯಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಏನು ಪೊಂಡಮಾದ ಎಂದು ಹೇಳಿದ್ದಾರೆ...

MR. SPEAKER.—No. It does not go into the records.

ಶ್ರೀ ಡಿ. ಬಿ. ಚಂದ್ರೇಗೌಡ.—ಹಿರಿಯ ಸದಸ್ಯರಾದ ಮಾನ್ಯ ರಂಗನಾಥ್‌ರವರು ಕೊಟ್ಟ ಸಲಹೆ ಉತ್ತಮವಾದುದು. ನಾನೂ ಕೂಡ ಅಲ್ಲಿಗೇ ಬರುತ್ತಿದೆ. ತಾವು ಅದನ್ನು ಎಂಡಾರ್ಸ್ ಮಾಡಿದ್ದೀರಿ, ನನ್ನ ಉದ್ದೇಶವೂ ಕೂಡ ಅದೇ. ಈ ಒಂದು ಸಸ್‌ಪಿಷನ್ ಏನಿದೆ, ಈ ಒಂದು ಶಂಕೆ ಏನಿದೆ, ಈ ಶಂಕೆಗೆ ಅಂತಿಮವಾದಂಥ ಪರದೆಯನ್ನು ಎಳೆಯಬೇಕುಹೇಗೆ ಎಳೆಯಬೇಕೆನ್ನುವುದಕ್ಕೆ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಇವತ್ತಿನ ಕಾನೂನು ಮತ್ತು ಸಂಸದೀಯ ಮಂತ್ರಿಯಾಗಿ ಈ ಸದನದಲ್ಲಿ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಹೇಳುವುದು ಬೇಡವೇ ಅವರು ಏನು ಸಲಹೆ ಕೊಡುತ್ತಾರೆ, ಈ ಸಸ್‌ಪಿಷನ್ ತೆಗೆದುಹಾಕುವುದಕ್ಕೆ ಏನು ಮಾಡಬೇಕು ಎಂದು...

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಕಡೆಯಿಂದ ಈ ವಿವೇಕ ಏಕೆ ಇಷ್ಟು ತಡವಾಗಿ ಬಂತು?

ಶ್ರೀ ಡಿ.ಬಿ. ಚಂದ್ರೇಗೌಡ.—ಈ ರೆಕಾರ್ಡ್ಸ್ ಓದಿದ ಮೇಲೆ ನೀವು ವಿವೇಕಿಗಳು ಎಂದು ನಮಗೆ ಗೊತ್ತಾಗಿದ್ದು. ಅದಕ್ಕೆ ಮುಂಚೆಯೇ ಗೊತ್ತಾಗಬೇಕೆಂದು ಹೇಳಿದರೆ ಹೇಗೆ ಗೊತ್ತಾಗುತ್ತದೆ. ಒಂದು ಸಂದರ್ಭದಲ್ಲಿ ಬರಬೇಕಲ್ಲ. ಆದ್ದರಿಂದ ಈಗ ಆ ಸಮಯ ಬಂದಿದೆ, ಹೇಳುತ್ತಿದ್ದೇನೆ. ತಾವು ನಮಗೆ ಒಂದು ವಿವೇಕ ಹೇಳಿದ್ದೀರಿ. ತಮಗೆ ಏನು ಅನುಮಾನ, ಶಂಕೆ ಇದೆ...''If you want to be out of suspicion,'' I quote from page 369, ''kindly place all the files before the House. Let things be clear' ಈ ಸಲಹೆಯನ್ನು ಒಪ್ಪುತ್ತೇನೆಂದು ಹೇಳಿದರೆ ಅಪರಾಧವೇ? ಯಾವ ಯಾವ ಶಂಕಾಸ್ಪದವಾದ, ಈ ಶಂಕೆಯನ್ನು ನಿವಾರಣೆ ಮಾಡುವುದಕ್ಕೆ ದಾಖಲೆಗಳು ಇವೆ, ಅವೆಲ್ಲವನ್ನೂ ಸದನದ ಮುಂದೆ ಇಟ್ಟುಬಿಡಿ ಅಪರಾಧಿ ಎಂದು ಹೇಳಿ ನಿರ್ಧಾರವಾದರೆ, ನಾವೆಲ್ಲಾ ಸೇರಿ ಹ್ಯಾಂಗ್ ಮಾಡೋಣ ಆದರೆ ೧೦ ಜನ ಅಪರಾಧಿಗಳಿಗೆ ಬಿಡುಗಡೆಯಾದರೂ ಪರವಾಯಿಲ್ಲ. ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂಬುದು ಕ್ರಿಮಿನಲ್ ಲಾನ ಸಿದ್ಧಾಂತ ಅದರಲ್ಲಿ ನಾವು ಇನ್‌ಫರೆನ್ಸ್‌ನಲ್ಲಿ ಡ್ರಾ ಮಾಡಿ. ಶಿಕ್ಷೆ ವಿಧಿಸುವುದು ಬೇಡ, ಕಾನೂನು ಮಂತ್ರಿಗಳ ಸಲಹೆಯನ್ನು ನಾವು ಗಮನದಲ್ಲಿಟ್ಟುಕೊಂಡು, ಈ ಶಂಕೆಗಳನ್ನೆಲ್ಲಾ ನಿವಾರಣೆ ಮಾಡುವುದಕ್ಕೆ ಈ ಎಲ್ಲ ಫೈಲ್‌ಗಳನ್ನು ಸದನದಲ್ಲಿ ಇಡಿ ಚರ್ಚೆ ಮಾಡೋಣ ಎನ್ನತಕ್ಕಂಥ ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಮತ್ತೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ನ್ಯಾಯಾಂಗ ತನಿಖೆಯನ್ನು ಮಾಡಿ ಎನ್ನುವಂಥ ಮಾತನ್ನು ಹೇಳಿದರು. ಅಲ್ಲಿಯಾದರೂ ಸತ್ಯ ಹೊರಕ್ಕೆ ಬರಬಹುದು. ಅದಕ್ಕೂ ಕೂಡ ಶ್ರೀಮಾನ್ ಮೊಯ್ಲಿಯವರು ಮುಂದುವರಿದು ಹೇಳುತ್ತಾರೆ, I quote from page 367, ''The Central Government has no authority to make judicial enquiry into this. It is the subject before the State. It is the absolute prerogative of the State to make judicial enquiry for the phone tapping'' I accept that poitions, If you cannot place

records on the table of the House and clear the suspision as has been rightly pointed out by the present Minister for Parliamentary affairs, if he dose not question the records again. I accept his demand. Let the Government order for a judicial enquiry and clear the case.

೧೧-೧೦ ಎ.ಎಂ.

I am not suggesting. I am accepting his demand. ಈ ವಿಚಾರದಲ್ಲಿ...

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಸಚಿವರು) — ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ ಸನ್ಮಾನ್ಯ ಸದಸ್ಯರು ಈ ಸದನದ ಸದಸ್ಯರು ನಿನ್ನೆ ಇಲ್ಲಿ ಇದ್ದರು. ಈ ಸದನದ ಮುಂದೆ ಈ ಪ್ರಶ್ನೆ ಬಂದಿದೆ. ನಾನು ಬರವಣಿಗೆಯ ಮುಖಾಂತರವಾಗಲೀ ಬಾಯಿ ಮಾತಿನ ಮುಖಾಂತರವಾಗಲೀ ಆದೇಶ ಕೊಟ್ಟಿಲ್ಲ. ಆಥರೈಸ್ಡ್ ಮಾಡಿಲ್ಲ ಎಂದು ಇಲ್ಲಿ ಅವರು ಹೇಳಿದ್ದರೆ ಚೆನ್ನಾಗಿತ್ತು. ಆದರೆ ಏತಕ್ಕೆ ಹೇಳಲಿಲ್ಲ. ಕಾಗದ ಪತ್ರ ಇಡಿ, ಕಾಗದ ಪತ್ರ ಇಡಿ ಎಂದರೆ ಏನು? ನಾವು ಇವತ್ತು ಪ್ರಸ್ತಾಪ ಮಾಡತಕ್ಕ ವಿಚಾರವನ್ನು ಹಿಂದೆ ಮಾನ್ಯ ಬೊಮ್ಮಾಯಿಯವರು ಚೀಫ್ ಮಿನಿಸ್ಟರ್ ಆಗಿದ್ದಾಗ ಇದನ್ನು ಪ್ರಸ್ತಾಪ ಮಾಡಿದಾಗ ಬಹಳ ಮಟ್ಟಿಗೆ ಬೊಮ್ಮಾಯಿಯವರನ್ನು ವಿರೋಧಪಕ್ಷದಲ್ಲಿರತಕ್ಕವರು ಕೇಳಬಹುದು. ಅವತ್ತು ಹೇಳಿದ ಅಭಿಪ್ರಾಯ ಇವತ್ತೂ ಇರಬೇಕೆಂದೇನು ಇಲ್ಲ. ದಯಮಾಡಿ ಕೇಳಿ. ನಿನ್ನೆ ಅವರು ಈ ಸದನದಲ್ಲಿ ಇದ್ದರು. ಇವತ್ತು ಅವರು ಈ ಸದನದ ಸದಸ್ಯರಾಗಿದ್ದಾರೆ. ಪ್ರಶ್ನೆ ನಿನ್ನೆ ಉದ್ಭವವಾಗಿದ್ದೇನೂ ಅಲ್ಲ. ಮಾನ್ಯ ಖರ್ಗೆಯವರು ಅದಕ್ಕಿಂತ ಮುಂಚೆ ಒಂದೂವರೆ ಘಂಟೆ ಕಾಲ ಪ್ರಸ್ತಾಪ ಆಗಿತ್ತು. ತದನಂತರ ಅಧ್ಯಕ್ಷರು ಒಂದು ನಿರ್ಣಯ ಕೊಟ್ಟಮೇಲೆ ಡಿಸ್ಕಷನ್ ಆಗುತ್ತಿದೆ. ನಾನು ಆದೇಶ ಕೊಟ್ಟೇ ಇಲ್ಲ ಎಂದು ಈ ಸದನದ ಮುಂದೆ ಹೇಳಬಹುದಲ್ಲ. ಇದ್ದರೆ ಕಾಗದ ಇಡಿ ಎಂದರೆ ಹೇಗೆ? ಮೊದಲೇ ನಾನು ಹೇಳಿಲ್ಲ ಎಂದು ಈ ಸದನದಲ್ಲಿ ಹೇಳಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ.— ಇಬ್ಬರೂ ಸೇರಿ ಸತ್ಯ ಮುಚ್ಚಿಡುತ್ತಿದ್ದೀರಿ. ರೆಕಾರ್ಡ್ಸ್ ಎಲ್ಲಾ ಈ ಸದನದಲ್ಲಿ ಇಟ್ಟರೆ ಆಗ ಸನ್ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಹೇಳಿದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.— ಕಾಂಗ್ರೆಸ್‌ನವರಿಂದ ಈ ವಿಷಯ ಪ್ರಸ್ತಾಪವಾಗುತ್ತಿಲ್ಲ. ಈ ದೇಶದಲ್ಲಿ, ಈ ಸದನದಲ್ಲಿ ನಮ್ಮಿಂದ ಆಗುತ್ತಿಲ್ಲ. ಇದು ಅವರ ಪಕ್ಷದಲೇ ಭಿನ್ನಾಭಿಪ್ರಾಯ ಬಂದು ಹೇಳಿಕೆ ಕೊಟ್ಟ ಮೇಲೆ, ಅದು ಪತ್ರಿಕೆಗಳಲ್ಲಿ ಬಂದ ಮೇಲೆ, ಒಬ್ಬರಿಗೊಬ್ಬರು ಹೇಳಿಕೆ ಕೊಟ್ಟಿದ್ದರಿಂದ ಕಾರಣಾಂತರದಿಂದ ಈ ಸರಕಾರದ ವಿಚಾರಗಳು ಬಂದುದರಿಂದ ಅವರು ನೋಟೀಸ್ ಕೊಟ್ಟಿದ್ದಾರೆ. ಹಾಗೆ ಇದು ಉದ್ಭವವಾಗಿದೆಯೇ ವಿನಹ ಇದನ್ನು ಪ್ರಸ್ತಾಪ ಮಾಡುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಯಾವ ಲಾಭವೂ ಬರುವುದಿಲ್ಲ. ಈ ವಿಚಾರ ಹೊರಗೆ ಬಂದರೆ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡರೆ ಇಂತಹ ಅನಿಷ್ಟವಾದ ಕಾರ್ಯಕ್ರಮವನ್ನು ಯಾವುದೇ ಸರಕಾರವೂ ಮಾಡಬಾರದೆಂಬ ನಿರ್ಣಯಕ್ಕೆ ಬರುತ್ತೇವೆಯೇ ವಿನಹ ಇದರಿಂದ ನಮಗೆ ಏನು ಲಾಭ ಬರುತ್ತದೆ? ನಾವೇನೋ ಮಾಡುತ್ತಿದ್ದೇವೆ ಎಂದು ಒಂದು ವಿಚಾರ ಇದೆ. It is being painted like that. That is not the point. ಇವತ್ತು ಇದು ನಿಮ್ಮಿಂದ ಬಂದಿದೆ. ನಿಮ್ಮ ವ್ಯವಹಾರ ಇದು. ಅವರು ಆಲ್ ಇಂಡಿಯಾ ರಾಜಕಾರಣ ಮಾಡುವುದಕ್ಕೆ ಹೋಗಿದ್ದಕ್ಕೆ ಇದೆಲ್ಲಾ ಮಾಡುತ್ತಿರುವುದು. ಅವರು ಪ್ರಧಾನಿಗಳಾಗಬೇಕೆನ್ನುವುದಕ್ಕೆ ಹೊರಟು ಹೀಗೆ ಆಗುತ್ತಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್.— ಅವರು ಆಲ್ ಇಂಡಿಯಾ ರಾಜಕಾರಣ ಮಾಡಬಾರದೆಂಬ ಉದ್ದೇಶದಿಂದ ಇಲ್ಲಿ ಇದೆಲ್ಲಾ ನಡೆಯುತ್ತಿರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಸಚಿವರು).— ಮಾನ್ಯ ಅಧ್ಯಕ್ಷರೇ, ನಿನ್ನೆ ಅವರು ನನ್ನ ಭಾಷಣ ಕೋಟ್ ಮಾಡಿದ್ದರು. ಇವತ್ತೂ ಕೂಡಾ ಕೋಟ್ ಮಾಡುತ್ತಿದ್ದಾರೆ. ನನ ಮಾತು ಅವರ ಬಾಯಲ್ಲಿ ಬಂದುದರಿಂದ ನಾನು ಪಾವನವಾದೆ. ಅದರಲ್ಲಿ ಏನೂ ತೊಂದರೆ ಇಲ್ಲ. ಆದರೆ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಫೋನ್ ಟ್ಯಾಪಿಂಗ್ ವಿಚಾರದಲ್ಲಿ ಆ ಸಂದರ್ಭ ಏನಿತ್ತು, ಇವತ್ತು ಏನು ಪರಿಸ್ಥಿತಿ ಇದೆ ಎಂದು Lot of water has flown under the bridge, ಆ ದಿವಸ ಏನಿತ್ತು? ನಾನು ರಿಪ್ಲೈ ಕೊಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ರಿಪ್ಲೈ ಕೊಡುತ್ತಾರೆ. To bring certain fact because some times we forget

the history. ಆ ದಿವಸ ಏನಿತ್ತು. ಆಗಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಬೊಮ್ಮಾಯಿಯವರ ಯಾವುದೇ ವಿಚಾರ ಹೇಳಲಿಲ್ಲ, ರೆಕಾರ್ಡ್ಸ್ ಇರುವುದು ಬಿಡಿ. ಅಷ್ಟು ಡಿಬೇಟ್ ಆದರೂ ಕೂಡಾ ತಾವು ನೋಡಿ, ಸನ್ಮಾನ್ಯ ಬೊಮ್ಮಾಯಿಯವರು ಪೂರ್ತಿ ಸತ್ಯವನ್ನು ಮರೆಮಾಚತಕ್ಕಂಥ ಅತ್ಯಂತ ಅಪ್ರಮಾಣಿಕವಾದ ಕೆಲಸ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿದರು, ಒಂದು ಪ್ರಾಮಾಣಿಕವಾದ ಹೇಳಿಕೆ ಡಿಬೇಟ್‌ನಲ್ಲಿ ಇದ್ದರೆ ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ.— ಆ ಕೆಲಸ ನೀವು ಮಾಡಿರಿ. He is casting aspersions on the previous Chief Minister who is not here to defend himself.

(INTERRUPTION)

MR. SPEAKER.— I will rule on that point of order which has been raised by the Leader of Opposition. The Minister for Law and Parlimentary affairs is only referring to a discussion which took place in the month of October 1988. His impression on hind-sight is that what the then Chief Minister submitted to this House was "ಅಪ್ರಾಮಾಣಿಕ" to put it in his own words. So he is well within his rights as a Member of this House to say whatever happened at a given point of time, whether in his opinion it is "ಪ್ರಾಮಾಣಿಕ" or "ಅಪ್ರಾಮಾಣಿಕ" he cannot be barred from making the observations. You can also make observations. You have quoted Shri Moily as one of the Leaders from the Opposition benches. You are entitlee to say anything. He is not making any personal accusations againsa the former Chief Minister. He is making out a point with reference to a particular debate which takes place on the Floor of this House which has a direct bearing on the present discussion.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಮಾತನಾಡಬಾರದು ಎಂದು ಬಹಳ ಸಂಯಮದಿಂದ ಕುಳಿತುಕೊಂಡಿದ್ದೆ. ಆದರೆ ಅವರು ನಿನ್ನೆ ಮತ್ತು ಈ ದಿನ ಸಾಕಷ್ಟು ಕೆಣಕಿ ಕೆಣಕಿ ಮಾತನಾಡಿದ್ದರಿಂದ ಹೇಳಬೇಕಾಯಿತು. I am sorry, you must be prepared to take back also.

SRI D.B. CHANDRE GOWDA.— I have not said anything.

MR. SPEAKER.— The Hon Minister will certainly appreciate that the Leader of Opposition has not made any derogatory references He is only quoting what you said sitting from this side of the benches. You are entitled to read out your own speeches so that all must realise who are in public life and parlimentary life, in word or concept any thought which you give expression to might be quoted after 10 years and it should not boomrang on you.

ಶ್ರೀ ಎಂ. ವೀರಪ್ಪ ಮೊಯ್ಲಿ.— ಆಗಲಿ. I will correct it as "ಕೆದಕಿ" "ಕೆಣಕಿ" could be interpreted as "ಕೆದಕಿ". It does not matter. I was only making a point. ಏಕೆಂದರೆ ಇದು ಡಿಬೇಟ್‌ನಲ್ಲಿ ಇವತ್ತು ಆ ಪರಿಸ್ಥಿತಿ ಇಲ್ಲ.

ಆಗ ಸರ್ಕಾರದ ಪತಿಯಿಂದ ಆಗಲಿ ಅಥವಾ ಯಾವುದೇ ಇದರಿಂದ ಆಗಲಿ ಒಂದು ಇನ್‌ಪರ್ ಮೇಶನ ಅವತ್ತು ನಾವು ಚರ್ಚೆ ಮಾಡುವಾಗ ಹೊರಗಡೆ ಬಂದಿರಲಿಲ್ಲ. What was the option left to us ? That is why that arose. ಈಗ ಆ ಪರಿಸ್ಥಿತಿ ಇಲ್ಲ. Now thereis a repor. from the Rajya Sabha Subordinate Legislatin Committee ರಾಜ್ಯ ಸಭೆಯ ಸಬಾರ್ಡಿನೇಟ್ ಲೆಜಿಸ್ಲೇಶನ್ ಕಮಿಟಿ ವರದಿ ಇದೆ. ಇದರಲ್ಲಿ ಮುಖ್ಯ ಕಾರ್ಯದರ್ಶಿಗಳ ವಿಚಾರ ಇದೆ, ಇದರಲ್ಲಿ ಪ್ರೈಯರ್ ಪಬ್ಲಿಕೇಶನ್

ತೆಗೆದುಕೊಂಡು ಹೆಸರುಗಳನ್ನು ಡಿಲೀಟ್ ಮಾಡಬೇಕು ಯಾರ ಹೆಸರನ್ನು ಆಡ್ ಮಾಡಬೇಕು ಎನ್ನುವ ಒಂದು ವಿಚಾರ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ೧೬ನೇ ಜೂನ್‌ನಲ್ಲಿ ವಿಧಾನ ಸಭಾಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ. ಅದು ಇಲ್ಲಿ ಈ ಸದನದಲ್ಲಿ ಕೂಡ ಇದೆ. ಇಷ್ಟು ವಿಚಾರಗಳು ಇದ್ದ ಪಕ್ಷದಲ್ಲಿ it pinpoints that a prior permission for adding these names including my name, Mr. Bangarappa's name has been done with the prior permission of the Chief Minister, the then Chief Minister. The burden is on him now. ನಾವು ಪ್ರೂವ್ ಮಾಡತಕ್ಕಂಥ ಅವಶ್ಯಕತೆ ಅಥವಾ ಸದಸ್ಯರು ಪ್ರೂವ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. Now it is for Mr. Ramakrishna Hegde as an hon' Member to disprove that the permission has been given. Afterall it is for him to disprove the clinching evidence that the prior permission has been obtained from the Chief Minister. ಅವರು ತಮ್ಮ ಈ ಒಂದು ಜವಾಬ್ದಾರಿಯಿಂದ ಜಾರಿಕೊಳ್ಳುವುದಕ್ಕೆ ಯಾರಾದರೂ ಅಧಿಕಾರಿಗಳ ಮೇಲೆ ಹಾಕಿದರೆ Of course it is not for me to question the propriety. It is for the people. Here is a former Chief Minister who wants to wriggle out of the situation. It is for him to do it. I am not speaking about it. Facts will come. ಈಗ ರಾಮಕೃಷ್ಣ ಹೆಗಡೆಯವರು ಮಾತನಾಡುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ಆಗಿನ ಪರಿಸ್ಥಿತಿ ಇವತ್ತಿಗೆ ಇಲ್ಲ. Certain records have been out, certain reports have been out. ಕರೆದು ಕರೆದು ನಾವು ಹೇಳುತ್ತಿದ್ದೆವು, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಸದನಕ್ಕೆ ಬರಬೇಕು, ಅವರು ಹೇಳಿಕೆ ಕೊಡಬೇಕು I think, many many days of this House have been spent invite the then Member and the present hon' member Mr. Ramakrishna Hegde, to this House. ಬಹುಶಃ ಅವರು ಹೌಸ್‌ಗೆ ಬರುತ್ತಿದ್ದರೆ. I think there is no other file has been as important as Mr. Ramakrishna Hegde himself, who is present to-day, no evidence, as substantial, as important as Mr. Ramakrishna Hegde himself. ಆದ್ದರಿಂದ, ಅಧ್ಯಕ್ಷರೇ, ಆ ದಿವಸ ಏನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ನಾನು ಹೇಳಿದ್ದೇವೆ, ಆ ಪರಿಸ್ಥಿತಿ ಇವತ್ತು ಇಲ್ಲ. Perhaps, the cat is already out of the bag.

Sri D. B. Chandre Gowda.—I am thankful to the Hon. Speaker who have reminded us our responsibility, in the sense whatever we speak will be permanently on the record. I am thankful to you Sir. I take care to see what I say I own it for ever in my life time and not deny them. ಈಗ ಕನ್‌ಕ್ಲೂಸೀವ್ ಆಗಿ ಮುಖ್ಯ ಮಂತ್ರಿಗಳು ಸಲಹೆ ತೆಗೆದುಕೊಂಡು ಮಾಡಿದ್ದರೆಂದು ಹೇಳಿ ಈ ಪತ್ರದಲ್ಲಿದೆ ಎನ್ನುವ ಭಾವನೆಯಿಂದ ಏನು ಹೇಳಿದ್ದಾರೆ, conclusive evidence is there again in Question (d) where very clearly the same Chief Secretary, in the same letter, same document, says that no instance of misuse has come to the notice of the Government. Why does the quote ? If this is not conclusive proof, then, there is suspicion If there is suspicion, I only said I accept the suggestion of the present Hon. Minister for Law and Parliamentary Affairs, who suggested sitting here at that point of time. That is all my submission To that extent I was quoted. To be above suspicion. Ceaser's wife should be above suspicion. ಯಾರಿಗಾದರೂ ಶಿಕ್ಷೆ ಕೊಡಬೇಕಾದರೆ ತಾವು ಹೇಳಿದ ಹಾಗೆ ಅಷ್ಟೇ ಕನ್‌ಕ್ಲೂಸಿವ್ ಆಗಿ ಆಗಿದೆ. ಅಥವಾ ಇವತ್ತಿನ ಪತ್ರದಲ್ಲಿ ಅದು ಅಷ್ಟೇ ಹೇಳಿಬಿಟ್ಟಿದ್ದರೆ ಕನ್‌ಕ್ಲೂಸೀವ್ ಏನೋ ಎಂಬ ಅನುಮಾನಕ್ಕೆ ಆದರೂ ಕಾರಣವಾಗುತ್ತದೆ. ಏನೂ ಆಗಿಲ್ಲವೆಂದು ಮುಂದೆ ಹೇಳಿದ್ದಾರೆ. ಆದರೂ ಶಿಕ್ಷೆ ಕೊಟ್ಟು ಬಿಡಿ, ವಿಧಿಸಿ ಬಿಡಿ ಎಂದು ಟೇಬಲ್ ಗುದ್ದಿಬಿಟ್ಟರೆ

ಸರಿಯೋ ? ತಾವು ಮೊದಲನೇ ಸಲಹೆ ಆಗಿ ದಾಖಲೆಗಳನ್ನು ಸಭೆಯ ಮುಂದೆ ಇಡಿ ಎಂದು ಹೇಳಿದಿರಿ. ದಾಖಲೆಗಳನ್ನು ನೋಡಿ ಇವರು ಅಪರಾಧಿ ಎಂದು ಕಂಡರೆ ಶಿಕ್ಷೆಯನ್ನು ವಿಧಿಸುವುದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ದಾಖಲೆಗಳನ್ನು ಸದನದ ಮುಂದೆ ಇಡುವುದಕ್ಕೆ ಸಾಧ್ಯವಿಲ್ಲವೆಂಬುದು ನಿಮ್ಮ ಅಭಿಪ್ರಾಯವಾದರೆ ತಾವೇ ಒಂದು ಜುಡಿಷಿಯಲ್ ಎನ್‌ಕ್ವಯರಿಯನ್ನು ಮಾಡಿಸಿ, ಅದನ್ನು ನಾವು ಒಪ್ಪುತ್ತೇವೆ. ಈ ಎರಡನ್ನೂ ಮಾಡುವ ಅಧಿಕಾರ ತಮಗೇ ಇದೆ. ನೀವೇ ಮಾಡಿ ಎಂದು ಹೇಳಿದ್ದೇವೆ. ಈಗ ಸನ್ನಿವೇಶ ಸಂದರ್ಭಗಳು ಹಾಗಿಲ್ಲವೆಂದರೆ ಏನು ಮಾಡುವುದಕ್ಕಾಗುತ್ತದೆ? ಈಗಿನ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಆಗ ತಮ್ಮ ಅಭಿಪ್ರಾಯವನ್ನು ಇದರ ಬಗ್ಗೆ ವ್ಯಕ್ತಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಮತ್ತೆ ಪತ್ರಿಕೆಗಳಲ್ಲಿ ಬಂದಿರುವುದು ಸರಿಯೋ ತಪ್ಪೋ ಎಂದರೆ ಪುನಃ ಹೇಗೆ ಹೇಳುವುದೆಂದು ನನಗೆ ಗೊತ್ತಾಗುವುದಿಲ್ಲ. ಆದ್ದರಿಂದ ನನಗೆ ತಿಳಿದಿದ್ದನ್ನು ನಾನು ಹೇಳುತ್ತೇನೆ. ದಿನಾಂಕ ೧೨-೯-೮೮ರಂದು ಕನ್ನಡ ಪ್ರಭಾ ಪತ್ರಿಕೆಗಳಲ್ಲಿ ಈಗ ಮುಖ್ಯಮಂತ್ರಿಗಳಾಗಿರುವ ತಾವು ಒಂದು ಹೇಳಿಕೆಯನ್ನು ಕೊಟ್ಟು ಇದರ ಬಗ್ಗೆ ಎಲ್ಲಾ ದಾಖಲೆ ಪತ್ರಗಳನ್ನು ಪಡೆಯುವ ಸ್ಥಿತಿಯಲ್ಲಿರುವ ಮಾನ್ಯ ಹೆಗಡೆಯವರು ತಮ್ಮ ಆರೋಪವನ್ನು ಸಾಕ್ಷಾಧಾರಗಳ ಸಮೇತ ಸಾಬೀತು ಮಾಡಲಿ. ಮುಖ್ಯ ಮಂತ್ರಿಗಳಾಗಿ ರಾಮಕೃಷ್ಣ ಹೆಗಡೆಯವರಿಗೆ ಎಲ್ಲಾ ದಾಖಲಾತಿಗಳನ್ನು ಪಡೆಯುವ ಅಧಿಕಾರ ಹೇಗಿತ್ತೋ ಅದೇ ಈಗ ಮುಖ್ಯ ಮಂತ್ರಿಗಳಾಗಿರುವ ನಿಮಗೂ ಆ ದಾಖಲಾತಿಗಳನ್ನು ಪಡೆಯುವುದಕ್ಕೆ ಅಧಿಕಾರ ಇದೆ. ತಾವು ಹೇಳಿದ ಮಾತು ನಿಜವಾದರೆ, ತಾವು ಹೇಳಿದ ಹಾಗೆ ನಿಮಗೇ ಆ ಸಂದರ್ಭ ಬಂದಿದೆ. ತಾವು ಈಗ ಎಲ್ಲಾ ದಾಖಲಾತಿಗಳನ್ನು ಸದನದ ಮುಂದೆ ಇಡಿ. ಇದರ ಬಗ್ಗೆ ಸತ್ಯ ಏನೆಂದು ಹೇಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾರನ್ನಾದರೂ ರಕ್ಷಣೆ ಮಾಡುವುದೇನಿದೆ ? ಹಾಗಾದರೆ ಸದನದ ಸದಸ್ಯರಾಗಿ ನಾವು ಕೇಳಬಾರದೇ ? ನಾವು ಸದಸ್ಯರಾಗಿ ಸಭಾನಾಯಕರನ್ನು ಕೇಳುವುದು ಬಿಟ್ಟು ಇನ್ಯಾರನ್ನು ಕೇಳುವುದು ? ಸತ್ಯ ಏನಿದೆ ಎಂದು ಹೇಳಿದರೆ ಅದರಿಂದ ಸತ್ಯಶೋಧನೆಗೆ ಅನುಕೂಲವಾಗುತ್ತದೆ, ವಿಚಾರಗಳನ್ನು ತಿಳಿಯುವುದಕ್ಕೂ ಅನುಕೂಲವಾಗುತ್ತದೆ. ಆದುದರಿಂದ ಈ ಸತ್ಯಶೋಧನೆ ಕಾರ್ಯದಲ್ಲಿ ನನಗಿಂತಲೂ ಹೆಚ್ಚಿಗೆ ಅನುಭವಿಗಳು, ಹಿರಿಯರು ಮತ್ತು ಇವೊತ್ತು ರಾಜ್ಯದ ಮುಖ್ಯಮಂತ್ರಿಗಳಾಗಿರತಕ್ಕಂಥ ತಮ್ಮ ಸಲಹೆ ಏನಿದೆ, ಅದನ್ನಾದರೂ ಕೊಡುವ ಕೃಪೆ ಮಾಡಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಮೊದಲನೆ ಸಲಹೆ ರಿಕಾರ್ಡ್ಸ್‌ನ್ನು ಇಡಿ ಎಂದು ಮಾನ್ಯ ವೀರಪ್ಪ ಮೊಯ್ಲಿಯವರು ಸಸ್ಪೀಶಿಯಸ್‌ನ್ನು ಗೆಟ್‌ಓವರ್ ಮಾಡುವುದಕ್ಕೆ ಏನು ಹೇಳಿದರು ಅದನ್ನು ಮಾಡಿ. ಅದು ಆಗುವುದಿಲ್ಲ ಅಂದರೆ ಮೊಯ್ಲಿಯವರು ಹೇಳಿದ ಹಾಗೆ ಆಗ ಸನ್ನಿವೇಶ ಬಾಕಿಯದಕ್ಕೆ ಬದಲಾವಣೆ ಆಗಿದೆ, ಆದರೆ ಇದು ಈ ರಾಜ್ಯಕ್ಕೆ ಸೀಮಿತವಾದ ಸಮಸ್ಯೆ ಎಂಬುದೇನೂ ಬದಲಾವಣೆ ಆಗಿಲ್ಲವಲ್ಲ ? ಇದನ್ನು ಅವರೇ ಹೇಳಿದ್ದು, ನಾನೇನೂ ಹೇಳಿಲ್ಲ. ಕೇಂದ್ರ ಸರಕಾರದವರಿಂದ ನ್ಯಾಯವಾಗಿ ತನಿಖೆ ಮಾಡುವುದಕ್ಕೆ ಆಗುವುದಿಲ್ಲ. ಇದು ರಾಜ್ಯದ ಸಮಸ್ಯೆ. ರಾಜ್ಯದವರೇ ಜುಡೀಶಿಯಲ್ ಎನ್‌ಕ್ವಯರಿ ಮಾಡಬಹುದು ಎಂದು ಏನು ಹೇಳಿದ್ದಾರೆ, ಈ ಸ್ಥಿತಿಯಲ್ಲೇನೂ ಬದಲಾವಣೆಗಳು ಆಗಿಲ್ಲವಲ್ಲ ? ಉಳಿದುದು ಬದಲಾವಣೆಯಾಗಿರಬಹುದು. ಇಂಥ ಬದಲಾವಣೆಗಳು ಆಗಿಲ್ಲ ಎನ್ನುವಂಥಾದ್ದನ್ನಾದರೂ ಗಮನದಲ್ಲಿಟ್ಟುಕೊಂಡು ಜುಡೀಶಿಯಲ್ ಎನ್‌ಕ್ವಯರಿ ಮಾಡಿ. ಅದು ಆಗುವುದಿಲ್ಲವೆಂದರೆ, ಮೂರನೆಯ ಸಲಹೆ ತಾವೇ ಹೇಳಿದಂತೆ ಇವೊತ್ತು ದಾಖಲೆಗಳು ಅಧಿಕೃತವಾಗಿ ನಿಮ್ಮ ಕೈಯಲ್ಲಿವೆ. ಆ ದಾಖಲೆಗಳನ್ನು ಆದರೂ ನೋಡಿ ಸತ್ಯ ಸಂಗತಿಯನ್ನು ಹೊರಕ್ಕೆ ಹಾಕುವಂತಹ ಈ ಮೂರರಲ್ಲಿ ಒಂದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದುದರಿಂದ ಸತ್ಯಶೋಧನೆ ಮಾಡಬೇಕೆನ್ನುವುದು ನಿಮ್ಮ ನಿರ್ಧಾರವಾಗಿದ್ದರೆ, ಅದರ ಮೂಲಕ ಈ ಒಂದು ಕದ್ದಾಲಿಕೆ ಪ್ರಕರಣಕ್ಕೆ ಅಂತಿಮವಾದಂಥ ತೆರೆಯನ್ನು ಎಳೆಯುವುದಕ್ಕೆ ಸಾಧ್ಯವಾದರೆ, ಆ ರೀತಿ ಮಾಡಿ. ಅದನ್ನು ಮಾಡದೇ ಹೋದರೆ ಈ ಒಂದು ಶಂಕೆ ಹುಟ್ಟಿದ್ದು ಒಬ್ಬ ವ್ಯಕ್ತಿಯ ಮೇಲೆ ಅಲ್ಲ. ನಮ್ಮ ರಾಜ್ಯದ ಒಬ್ಬ ನಾಯಕರ ಮೇಲೆ, ಒಬ್ಬ ರಾಷ್ಟ್ರೀಯ ನಾಯಕರ ಮೇಲೆ, ಅತ್ಯಂತ ಗುರುತರವಾದಂಥ ರಾಷ್ಟ್ರೀಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಒಬ್ಬ ನಾಯಕರ ಮೇಲೆ ಈ ಒಂದು ಶಂಕೆ ಬಂದಿದೆ. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಾ ಇದ್ದೇನೆ. ಆದುದರಿಂದ ಇದನ್ನು ನಿವಾರಣೆ ಮಾಡತಕ್ಕಂಥ ಒಂದು ಜವಾಬ್ದಾರಿಯು ಕರ್ನಾಟಕ ರಾಜ್ಯದ ಮತ್ತು ಈ ರಾಜ್ಯದ ಮುಖ್ಯ ಮಂತ್ರಿಯವರ ಜವಾಬ್ದಾರಿಯಾಗಿರುತ್ತದೆ. ನಾವು ಒಂದು ಪಕ್ಷಕ್ಕೆ ಸೇರಿದವರು ಎನ್ನುವ ಕಾರಣಕ್ಕಾಗಿ ಇದನ್ನು ಪಕ್ಷಕ್ಕಷ್ಟೇ ಸೀಮಿತವಾಗಿ ನೋಡಬಾರದು. ಈ ಒಂದು ಜವಾಬ್ದಾರಿಯನ್ನು ತಾವುಗಳು ಒಪ್ಪಿಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ, ಈ ಮಾತನ್ನು ಕಳಕಳಿಯಿಂದ ಮನ ನೊಂದು ಹೇಳುತ್ತಾ ಇದ್ದೇನೆ. We taking shelter under the Official Secrets Act-

ಅಫಿಷಿಯಲ್ ಸೀಕ್ರೆಟ್ ಆಕ್ಟ್‌ನಿಂದ ನಾವು ರಕ್ಷಣೆ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಇದು ನಿಜವೇ ? We are all bound by the Official Secrets Act. I do not say, No. I would like to draw your attention to the fact, how did the file came to the possession of Mr. Veerabhadra Singh, the then Communications Minister, who revealed the names on the floor of the Lok Sabha. ಇವೊತ್ತು ಅಫಿಶಿಯಲ್ ಸೀಕ್ರೆಟ್ ಆಕ್ಟ್ ಅಪ್ಲೆ ಆಗುವುದಾದರೆ, for having disclosed names in the Lok Sabha, does not the provision attract the man who revealed the whole issue on the Floor of the House in Lok Sabha ? Does it not ? It is a logic.

ಶ್ರೀ ಕೆ. ಹೆಚ್. ರಂಗನಾಥ್.—ಅದನ್ನು ಹಾಗೆಯೇ ಇಟ್ಟುಕೊಂಡು ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಮ್ಮ ಅಭಿಪ್ರಾಯವೇ ? ಯಾರು ಆಥರೈಸ್ ಮಾಡಿದರು, ಏನು ಮಾಡಿದರು ಯಾವುದು ಅಫಿಶಿಯಲ್ ಸೀಕ್ರೆಟ್ ಹೌದೋ ಅಲ್ಲವೋ ಎಂಬುದು... ಆ ಮಾತು ಬೇರೆ. ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಪ್ರಶ್ನೆ ಅದಲ್ಲ ಎನ್ನತಕ್ಕಂಥ ಅಭಿಪ್ರಾಯ ಬಂತು. ಇಲ್ಲಿ ಏನು ಬಂತು ಎನ್ನುವುದು ಪ್ರಶ್ನೆ. ಲೋಕಸಭೆಯಲ್ಲಾಗಲೀ, ರಾಜ್ಯ ಸಭೆಯಲ್ಲಾಗಲೀ, ಇಲ್ಲಿಯೇ ಆಗಲಿ, ಯಾರ್ಯಾರ ಹೆಸರನ್ನು ಮಾಡಿದ್ದಾರೆ ಎಂದು ವಿವರ ಕೊಟ್ಟರೆ ಅದರಲ್ಲಿ ಅಫೀಶಿಯಲ್ ಸೀಕ್ರೆಟ್ ಏನು ಬಂತು ? ಯಾರು ಇದರಲ್ಲಿ ಆದೇಶ ಕೊಟ್ಟರು ? ಕೊಡಬೇಕೆ ಬಿಡಬೇಕೆ ? ಎನ್ನುವುದು ಬೇರೆ ಮಾತು. ಆದರೆ ನೀವು ಹೇಗೆ ಮಂತ್ರಿಗಳು ಅಲ್ಲಿ ಸಭೆಯಲ್ಲಿ ಇಟ್ಟದ್ದು ತಪ್ಪು ಎಂದು ಹೇಳುತ್ತೀರಿ ? ಹಾಗೆ ಅವರು ಇಟ್ಟದ್ದು ತಪ್ಪು ಆಯಿತೆ ? ಹಾಗಿದ್ದರೆ ಕೊಡಬಾರದಾಗಿತ್ತೆ ? ಇದು ಹಾಗೆಯೇ ನಡೆದುಕೊಂಡು ಹೋಗಬೇಕೆನ್ನುವುದು ತಮ್ಮ ಅರ್ಥವೇ ?

SRI D. B. CHANDRE GOWDA.—I have raised the question to a limited purpose that you cannot take shelter under the Official Secrets Act. That is all. I do not say whatever he produced is right or wrong. We are trying to take shelter under the Official Secrets Act. If that is really the case, is he above the Official Secrets Act, Mr. Veerabhadra Singh the then Communications Minister ?

ಶ್ರೀ ಕೆ. ಹೆಚ್. ರಂಗನಾಥ್.—ಅವರು ಏನು ಹೇಳಿದ್ದಾರೆ, ಯಾರ್ಯಾರದ್ದು ಟ್ಯಾಪಾಗುತ್ತಿದೆ ಎಂಬ ಪ್ರಶ್ನೆ ಕೇಳಿದಾಗ ಇಂಥಿಂಥವರದ್ದು ಆಗುತ್ತಿದೆ ಎಂದು ಹೇಳಿದ್ದಾರೆ. ಇದರಲ್ಲಿ ಅಫಿಶಿಯಲ್ ಸೀಕ್ರೆಟ್ ಆಕ್ಟ್ ಎಂಥಾದ್ದು ಇದೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದನ್ನು ಸದನಕ್ಕೇ ಬಿಡೋಣ ನಾನು ಹೆಚ್ಚು ಹೇಳುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರಿಗೆ ಅದು ಸಮ್ಮತವಾದರೆ ಆಗಲಿ. ಆಗದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದು ನನ್ನ ಇಂಪ್ರೆಷನ್. ಆದ್ದರಿಂದ ಅಂತಿಮವಾಗಿ ಈ ವಿವಾದಕ್ಕೆ ತೆರೆ ಎಳೆಯಬೇಕೆಂದು ಪ್ರಾಮಾಣಿಕ ಇಚ್ಛೆ ಈ ಸದನಕ್ಕೆ ಇದ್ದರೆ, ಸತ್ಯ ಹೊರಬರಬೇಕೆಂಬ ಇಚ್ಛೆ ಸಭಾನಾಯಕರಿಗೆ ಇದ್ದರೆ, ನೀಡಲ್ ಆಫ್ ದಿ ಸಸ್ಪಿಸಿಯನ್ ಎಂದು ಏನು ಹೇಳಲಾಗಿದೆ, ಅದರಿಂದ ಗೆಟ್ ಓವರ್ ಮಾಡುವುದಕ್ಕೆ ಮಾನ್ಯ ಮೊಯಿಲಿಯವರು ಹೇಳಿರುವಂತೆ ಎಲ್ಲ ದಾಖಲೆಗಳನ್ನೂ ಸದನದಲ್ಲಿಡಿ. ಅದಾಗದಿದ್ದರೆ ಪುನಃ ಅವರೇ ಸಲಹೆ ಮಾಡಿರುವಂತೆ ಇದು ರಾಷ್ಟ್ರದ ಸಮಸ್ಯೆಯಲ್ಲ, ರಾಜ್ಯದ ಸಮಸ್ಯೆಯಾದ್ದರಿಂದ, ರಾಜ್ಯವೇ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡಿ ಎಂದು ಏನು ಹೇಳಿದ್ದಾರೆ, ಅದನ್ನಾದರೂ ಮಾಡಿ. ಅದು ಸಾಧ್ಯವಿಲ್ಲವೆಂದರೆ, ಅವರ ಮೂರನೆಯ ಸಲಹೆಯಂತೆ ಈ ಸದನದ ನಾಯಕರಾದ ಶ್ರೀ ವೀರೇಂದ್ರ ಪಾಟೀಲ್ ಅವರು ಏನು ಹೇಳಿದ್ದಾರೆ, ಕಡತಗಳು ನಿಮ್ಮ ಹತ್ತಿರವಿವೆ, ಅದನ್ನು ನೋಡಿ, ಸತ್ಯಾಸತ್ಯಗಳನ್ನು ತಿಳಿದು ಹೇಳಿ ಎಂದು ಹೇಳಿರುವುದನ್ನಾದರೂ, ಮಾಡಲಿ ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಂಡು, ಈ ಒಂದು ಪ್ರಕರಣಕ್ಕೆ ಅಂತಿಮವಾಗಿ ತೆರೆ ಎಳೆಯಬೇಕೆಂದು ಕೇಳುತ್ತೇನೆ. ಈ ಬಗ್ಗೆ ನನಗೆ ಏನು ಶಂಕೆ ಬಂದಿದೆ ಎಂದರೆ, ಯಾವುದೋ ದೊಣ್ಣೆ ತೆಗೆದುಕೊಂಡು ಯಾರನ್ನೋ ಹೊಡೆಯಬೇಕೆಂದು ಹೊರಟು, ಅದೇ ದೊಣ್ಣೆಯಿಂದ ಎರಡೆರಡು ಮುಖಂಡರನ್ನು ಹೊಡೆಯಬೇಕೆಂದು ಹೊರಟಿದ್ದಾರೆನೋ ಎಂಬ ಶಂಕೆ ಬಂದಿದೆ. ಈ ಕೆಲಸ ಪದೇ ಪದೇ ಆಗಬಾರದು. ನನ್ನ ಮನಸ್ಸಿಗೆ ಏನು ಅನಿಸಿದೆ ಅಂದರೆ............

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಎಲ್ಲ ಅಡ್ಮಿಟೆಡ್ ಫ್ಯಾಕ್ಟ್ಸ್ ಇದೆ ಯಾರು ಮಾಡಿದವರು? ಚೀಫ್ ಸೆಕ್ರೆಟರಿಯೊ ಅಥವಾ ಮುಖ್ಯ ಮಂತ್ರಿಯೋ ಎಂದು, ಈಗ ನಾವು ಒಂದು ಆರೋಪ ಮಾಡಿದ್ದೇವೆ, ಕೋರ್ಟಿನಲ್ಲಿ ಆರೋಪದ ಪಟ್ಟಿ ಸಲ್ಲಿಸಿದಾಗ ಆ ಆರೋಪಿ ಅದನ್ನು ಡಿನೈ ಮಾಡಿದರೆ ಮುಂದಿನ ಎನ್‌ಕ್ವಯರಿಗೆ ಬರುತ್ತದೆ. ಅಡ್ಮಿಟ್ ಮಾಡಿದರೆ ? ಇಲ್ಲಿ ಅವರೇ ಇದ್ದಾರೆ. ಅವರು ಅಡ್ಮಿಟ್ಟೂ ಮಾಡುವುದಿಲ್ಲ, ಡಿನೈ ಸಹ ಮಾಡುವುದಿಲ್ಲ. ಈ ಬಗ್ಗೆ ಮುಂದಿನ ಯಾವುದೇ ಕ್ರಮ ತೆಗೆದುಕೊಳ್ಳಬೇಕಾದರೂ ಸಹ Whether Sri Ramakrishna Hegde, who is sitting here and who has acted as Chief Minister is going to deny or accept ? What is the point in going on arguing ? Then all questions of Judicial enquiry placing records and everything comes. ಈ ಮನೆಯ ಸದಸ್ಯರ ಪರವಾಗಿ, ವಕಾಲತ್ ಮಾಡುವ ಅವಶ್ಯಕತೆಯಿಲ್ಲ. Privilege of the House is involved here. Member's privilege is involved here. ಅವರು ಇಲ್ಲಿರುವಾಗ ಅವರೇ ವಾದ ಮಾಡಬೇಕು. ಅವರ ಪರವಾಗಿ ನೀವು ಏಕೆ ವಾದ ಮಾಡುತ್ತೀರಿ ?

ಡಾ॥ ಜೀವರಾಜ ಆಳ್ವ.—ನಿನ್ನೆಯೇ ನಾಯಕರು ಇದನ್ನು ಸೂಚ್ಯವಾಗಿ ಹೇಳಿದ್ದಾರೆ ಯಾವ ಚರ್ಚೆಯ ಅಗತ್ಯವೂ ಇಲ್ಲ, ಒಂದು ಪಕ್ಷ ಆರೋಪ ನಿಜವಾದರೆ ರಾಜಕೀಯ ಸನ್ಯಾಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಇದಕ್ಕಿಂತ ಬೇರೆ ಇನ್ನೇನು ಬೇಕು ?

—(ಗೊಂದಲ)—

MR. SPEAKER.—Order, order.

(ಗೊಂದಲ)

ಅಧ್ಯಕ್ಷರು.—ಚಿಕ್ಕೇಗೌಡರೇ, ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇದು ರಾಜೀನಾಮೆಯ ನಾಟಕ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಮುಗಿಸಿ ಬಿಡುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ನಿನ್ನೆ ಸದನದಲ್ಲಿ ಇದ್ದರು ಎಂದು ನಾನು ತಿಳಿದಿದ್ದೆ. ಇಲ್ಲಿ ನೀವು ಇಲ್ಲದೇ ಇದ್ದುದರಿಂದ, ನಿಮ್ಮ ಕಿವಿಯಿಂದ ಕೇಳುವುದಕ್ಕಾಗಲಿಲ್ಲ. ಹೋಗಲಿ, ಕಣ್ಣಿದ್ದೂ ಪತ್ರಿಕೆಯಲ್ಲಿ ನೋಡುವುದಕ್ಕಾಗಲಿಲ್ಲವೇ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ಸುಮ್ಮನೆ ಇದರ ಬಗ್ಗೆ ಏತಕ್ಕೆ ಹೇಳುತ್ತೀರಿ? ಅಧ್ಯಕ್ಷರೇ, ನಾನು ಸಭೆಯಲ್ಲಿ ಇರಲಿ, ಇಲ್ಲದೇ ಇರಲಿ, ನಿನ್ನೆ ಅವರು ಏನು ಹೇಳಿದ್ದಾರೆ. ಇದು ರುಜುವಾತಾದರೆ ನಾನು ಸಾರ್ವಜನಿಕ ಜೀವನದಿಂದ ನಿವೃತ್ತನಾಗುತ್ತೇನೆ ಎಂದು ಹೇಳಿದ್ದಾರೆ. ಇದನ್ನು ಮಾಡುವುದು ಯಾವಾಗ? ನಾನು ಏನು ಆಜ್ಞೆ ಮಾಡಿಲ್ಲ, ನನಗೆ ಏನೂ ಸಂಬಂಧ ಗೊತ್ತಿಲ್ಲ ಎಂದು ನೇರವಾಗಿ ಹೇಳಿಕೆಯನ್ನು ಈ ಸದನಕ್ಕೆ ಕೊಟ್ಟು ಬಿಟ್ಟರೆ ಸಾಕು. ಇದಕ್ಕೆಲ್ಲಾ ಯಾರು ಜವಾಬ್ದಾರಿ ಎನ್ನತಕ್ಕಂಥದ್ದಕ್ಕೆ ಎನ್‌ಕ್ವೈರಿ ಮಾಡತಕ್ಕಂಥ ಸಂದರ್ಭ ಬಂದಿದೆ. ಪತ್ರಿಕೆಯಲ್ಲಿ ವರದಿಯಾದ ಪ್ರಕಾರ ಅವರು ಹೇಳುವುದು ರುಜುವಾತಾದರೆ, ನಾನು ಸಾರ್ವಜನಿಕ ಕ್ಷೇತ್ರದಿಂದ ನಿವೃತ್ತನಾಗುತ್ತೇನೆ ಎಂದು ಹೇಳಿದ್ದಾರೆ. ಆದರೆ ರುಜುವಾತು ಮಾಡುವುದು ಆಮೇಲೆ. Prima facie you have to place a charge sheet against it. On the basis of the admitted facts, whether he is going to deny or not ?

ಶ್ರೀ ಡಿ.ಬಿ. ಚಂದ್ರೇಗೌಡ.—ಆದುದರಿಂದ ನಾನು ಇಲ್ಲಿ ಅಂತಿಮವಾಗಿ ಹೇಳತಕ್ಕಂಥದ್ದು ಒಬ್ಬ ರಾಷ್ಟ್ರೀಯ ಮುಖಂಡರ ಎತ್ತರಕ್ಕೆ ಏರಿದಂಥ ನಮ್ಮ ರಾಜ್ಯದ ಪ್ರತಿನಿಧಿಯ ಬಗ್ಗೆ ನಾವು ಸ್ವಲ್ಪ ಸೌಜನ್ಯಗಳನ್ನು ಇಟ್ಟುಕೊಳ್ಳುವುದು ಸಮಂಜಸ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇಡೀ ಕರ್ನಾಟಕಕ್ಕೆ ಅಪಮಾನ. ನಾಚಿಕೆಗೇಡು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಇದು ನಿಮ್ಮ ಪಕ್ಷದ ಸಮಸ್ಯೆ, ನೀವೇ ಬಗೆಹರಿಸಿಕೊಳ್ಳಿ. ಇದು ನಮ್ಮ ಸಮಸ್ಯೆ ಅಲ್ಲ. ಟ್ಯಾಪಿಂಗ್ ನಿಮ್ಮ ವಿಚಾರ, ನಿಮ್ಮವರೇ ಚರ್ಚೆ ಮಾಡುತ್ತಿದ್ದಾರೆ...

(ಗೊಂದಲ)

ಶ್ರೀ ಜೀವರಾಜ ಆಳ್ವ.—೧೯೭೬ನೇ ಇಸವಿಯಲ್ಲಿ ಮಾನವ ಸಂಪನ್ಮೂಲಗಳ ಹಕ್ಕುಗಳ ಚ್ಯುತಿಯಾದಾಗ ನಮ್ಮಂಥವರನ್ನು ಜೈಲಿಗೆ ಹಾಕಿದಾಗ ಯಾರು ಕೇಳಿದರು ?

(ಗೊಂದಲ)

ಶ್ರೀ ರಮಾನಾಥ ರೈ.—ಅಧ್ಯಕ್ಷರೇ...

(ಗೊಂದಲ)

ಶ್ರೀ ಜೀವರಾಜ ಆಳ್ವ.—ನೀವು ಮಾನವತಾ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದೀರಿ ಯಾವುದೋ ಒಂದು ಟೆಲಿಫೋನನ್ನು ಕದ್ದು ಕೇಳಿದ್ದನ್ನು ಇಲ್ಲ ಎಂದು ಹೇಳಿದರೂ ಎರಡು ವರ್ಷಗಳಿಂದಲೂ ಹೇಳಿದ್ದನ್ನೇ ಕುಟ್ಟುತ್ತಿದ್ದೀರಿ. ಅವರು ಮಾರಲ್ ರೆಸ್ಪಾನ್ಸಿಬಿಲಿಟಿ ಮೇಲೆ ರಾಜೀನಾಮೆಯನ್ನು ಕೊಟ್ಟರು—

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ.—ಮುಖ್ಯಮಂತ್ರಿಯವರು ರಾಜೀನಾಮೆಯನ್ನು ಕೊಟ್ಟಿದ್ದು ..

(ಗೊಂದಲ)

ಶ್ರೀ ಜೀವರಾಜ ಆಳ್ವ.—ಈ ಅಸೆಂಬ್ಲಿ ಪೂರ್ತಿ ಚರ್ಚೆಯಾಗಲಿ, ನಾವು ಕೇಳುತ್ತಿದ್ದೇವೆ. ನೀವು ಹೇಳುತ್ತಲೇ ಇರಿ.

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಮುಖ್ಯಮಂತ್ರಿಯವರು...

(ಗೊಂದಲ)

ಶ್ರೀ ಜೀವರಾಜ ಆಳ್ವ.—ಅವರನ್ನು ಸೋಲಿಸಲಿಕ್ಕೆ ಎಷ್ಟು ಪ್ರಯತ್ನ ಮಾಡಿದ್ದೀರಿ ?

(ಗೊಂದಲ)

ಅಧ್ಯಕ್ಷರು.—ಶ್ರೀಮಾನ್ ಚಿನ್ನಪ್ಪನವರೇ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರೇ ದಯವಿಟ್ಟು ಕುಳಿತುಕೊಳ್ಳಿ. ಆರ್ಡರ್, ಆರ್ಡರ್.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಶಂಕಾತೀತವಾಗಿ ಇರಬೇಕು ಎನ್ನತಕ್ಕಂಥದ್ದಕ್ಕೆ ಈ ಸದನದ ಅತ್ಯಂತ ಹಿರಿಯ ಸದಸ್ಯರಾದ ಕೆ. ಹೆಚ್. ಪಾಟೀಲರು ಕೂಡ ಒಂದು ಮಾತನ್ನು ಹೇಳುತ್ತಾರೆ. ಅಕ್ಟೋಬರ್ ೧೯೮೮ರಲ್ಲಿ ಅವರು ಒಂದು ಮಾತನ್ನು ಏನು ಹೇಳುತಾರೆ ಎಂದರೆ, "ಮಹತ್ತರವಾದ ಪಾತ್ರವನ್ನು ಇದರಲ್ಲಿ ವಹಿಸಬೇಕಾದರೆ ಯಾವ ಅಧಿಕಾರಿಯೂ ಕೂಡಾ ಮುಖ್ಯಮಂತ್ರಿಯವರನ್ನು ಗೃಹ ಇಲಾಖೆಯ ಮಂತ್ರಿಗಳನ್ನು ಕೇಳದೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಮಂತ್ರಿಗಳ ಮೇಲೆ ಅವರಿಗೆ ಇರುವ ಗೌರವದಿಂದ ಮತ್ತು ಇವರು ಇಂಥ ಕೆಲಸಗಳನ್ನು ಹೇಳುತ್ತಾರೆ ಎಂಬ ಸಂಶಯ ಇರುವುದರಿಂದ ಅವರು ತಮ್ಮ ಸ್ಥಾನವನ್ನು ಕಾನೂನು ಪ್ರಕಾರವಾಗಿ ಇಟ್ಟುಕೊಳ್ಳಲು ಮಂತ್ರಿಗಳಿಂದ ಅಧಿಕಾರಿಗಳು ಸಿಗ್ನೇಚರನ್ನು ತೆಗೆದುಕೊಳ್ಳುತ್ತಾರೆ. ಅಥವಾ ಓರಲ್ ಇನ್‌ಸ್ಟ್ರಕ್ಷನನ್ನು ತೆಗೆದುಕೊಳ್ಳುತ್ತಾರೆ. ಸಂಬಂಧಪಟ್ಟ ಕಾಗದಪತ್ರಗಳ ಮೇಲೆ ಕಿರು ಸಹಿಯನ್ನಾದರೂ ತೆಗೆದುಕೊಂಡಿರುತ್ತಾರೆ. ಇದೆಲ್ಲಾ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದ್ದರೂ ಕೂಡಾ ಈ ಪ್ರಕರಣದಲ್ಲಿ ಅವರು ಸತ್ಯಕ್ಕೆ ದೂರವಾದಂಥದ್ದನ್ನು ನುಡಿದಿದ್ದಾರೆ."

೧೧-೪೦ ಎ ಎಂ.

ಹಾಗಿದ್ದರೆ ಎಲ್ಲಾದರೂ ಒಂದು ಕಡೆ ದಾಖಲೆ ಇದೆ, ಅದನ್ನು ನೋಡಬೇಡವೇ ? ನನ್ನದು ಅಭಿಪ್ರಾಯ ಇಷ್ಟೇ ? ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಖರ್ಗೆಯವರು, ನಮ್ಮ ಹೊಸ ನಗರದ ಹಿರಿಯ ಶಾಸಕರು ಇವರು ಎಲ್ಲಾ ಮಂತ್ರಿ ಆಗುತ್ತಾರೆ ಎಂದು ಪಟ್ಟಿಯಲ್ಲಿ ಇತ್ತು, ಅದು ಸಿಕ ಲಿಲ್ಲ ಎಂದು...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಬಗ್ಗೆ ನಾನು ಒಂದು ಏನು ಹೇಳುತ್ತೇನೆಂದರೆ, ಈ ಒಂದು ವಿಚಾರಕ್ಕೆ ಅಂತಿಮವಾದ ತೆರೆಯನ್ನು ಎಳೆಯಬೇಕು ಎಂದು...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಮಂತ್ರಿಗಳ ಪಟ್ಟಿಯಲ್ಲಿ ಚಿಕ್ಕೇಗೌಡರ ಹೆಸರೂ ಇತ್ತು, ಆದರೆ ಅವರದ್ದೂ ಆಗಿಲ್ಲ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಆದ್ದರಿಂದ ಇದ್ದಕ್ಕೆ ತಾವು ಒಂದು ಅಂತಿಮವಾದ ತೆರೆಯನ್ನು ಎಳೆಯಬೇಕು. ಈ ಚರ್ಚೆ ಸಾಕು ಮಾಡುವುದಕ್ಕೆ ತಾವು ಏನಾದರೂ ಸಲಹೆ ಕೊಡಬೇಕೆಂದು ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಒಳ್ಳೆಯ ಕೇಸ್‌ನ್ನು ಹಿಡಿದಿದ್ದಾರೆ. ಇದರಲ್ಲಿ ಬಹುಶಃ ಯಶಸ್ವಿ ಆದರೆ ತಮಗೆ ಮಂತ್ರಿ ಪದವಿ ಸಿಗಬಹುದೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಕೇಸೇ ನಾನು ಹಿಡಿದಿರುವುದು...

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಯಶಸ್ವಿ ಆದರೆ ನಿಮಗೆ ಮಂತ್ರಿ ಪದವಿ ಸಿಗಬಹುದೇ. ತಾವು ಏನು ಅಪಾದನೆ ಮಾಡುತ್ತಿದ್ದೀರಿ ಎಂದರೆ ನಾವು ಮಂತ್ರಿ ಪದವಿಗೆ ಈ ರೀತಿ ಮಾಡುತ್ತಿದ್ದೇವೆ ಎಂದು...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೆ ಹೇಳಬೇಕಾಗಿದ್ದರೆ, ಮಂತ್ರಿ ಪದವಿಗೋಸ್ಕರ ಜೋತು ಕೊಂಡು ಈ ದೇಶದಲ್ಲಿ ರಾಜಕಾರಣಕ್ಕೆ ನಾವು ಪ್ರವೇಶಮಾಡಿಲ್ಲ. ಅಧಿಕಾರದ ಆಸೆಗಾಗಿ ಶಾಸನ ಸಭೆಯ ರಾಜಕಾರಣಕ್ಕೆ ಪ್ರವೇಶ ಮಾಡಿಲ್ಲ. ಜೀವನದ ಕೆಲವು ಗೊತ್ತುಗುರಿಗಳಿಗೋಸ್ಕರವಾಗಿ ಹೊರಟ್ಟಿದ್ದೇವೆ...

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಅಪಾದನೆಯನ್ನೇ ಮಾಡಿಲ್ಲ. ನೀವು ಯಾಕೆ ಉತ್ತರ ಹೇಳುತ್ತಿದ್ದೀರಿ.

† ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ಸದನದ ಸಮಯವನ್ನು ಅನಾವಶ್ಯಕವಾಗಿ ವ್ಯರ್ಥ ಮಾಡುತ್ತಿರುವುದಕ್ಕೆ ಕಾರಣ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರು. ನಾವು ಸಾರಿ ಸಾರಿ ಇದರಲ್ಲಿ ಕಂಡು ಬಂದಂತಹ ವಿಷಯವನ್ನು ಹೊಸದಾಗಿ ಪ್ರಸ್ತಾಪಮಾಡಲು ಕಾರಣ ಏನು ಅಂದರೆ, ಇವೊತ್ತು ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ರಾಜ್ಯಸಭಾ ಸಮಿತಿ ಮುಂದೆ ಕೊಟ್ಟಂತಹ ಹೇಳಿಕೆಯ ಆಧಾರದ ಮೇಲೆ, ಈಗಾಗಲೇ ಶ್ರೀಮಾನ್ ಮೊಯಿಲಿಯವರು ಪ್ರಸ್ತಾಪಮಾಡುತ್ತಾ ಹೇಳಿದರು. ಈ ಚರ್ಚೆಗೆ ಹೊಸ ಅಧ್ಯಾಯ, ಹೊಸ ಆಯಾಮ ಯಾಕೆ ಬಂತು ಎಂದರೆ, ಹಿಂದೆ ಸರ್ಕಾರದ ವತಿಯಿಂದ ಇಂತಹ ಒಂದು ನಿರ್ಧಾರ ತೆಗೆದುಕೊಂಡಿರತಕ್ಕ ಸಂದರ್ಭದಲ್ಲಿ ದಾಖಲಾತಿ ಮುಖಾಂತರ ಬಂದಿರಲಿಲ್ಲ. ಇವೊತ್ತು ದಾಖಲಾತಿ ಹೊರಬಂದಿದೆ. ಆ ಕಾರಣಕ್ಕಾಗಿ ಈ ಚರ್ಚೆಗೆ ಹೊಸ ಆಯಾಮ ಸಿಕ್ಕಿದೆ. ಅದನ್ನು ನಾನು ದೃಢಪಡಿಸುತ್ತಿದ್ದೇನೆ. ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳಾದಂತಹವರಿಗೆ ಒಂದು ಪ್ರೊರಾಗೆಟಿವ್ ಇರುತ್ತದೆ. ಇಲ್ಲವೆಂದು ನಾನು ಹೇಳುವುದಿಲ್ಲ.

ಅದನ್ನು ಉಪಯೋಗಿಸಿಕೊಳ್ಳಬಹುದು ಅಥವಾ ಉಪಯೋಗಿಸಿಕೊಳ್ಳದೇ ಇರಬಹುದು ಒಂದುವೇಳೆ ಈ ಪೋನ್ ಹಗರಣದ ವಿಚಾರ ಕೇವಲ ಸದನದಲ್ಲಿ ಮಾತ್ರ ಅಲ್ಲದೆ, ಇಡೀ ರಾಷ್ಟ್ರಮಟ್ಟದಲ್ಲಿ ಅನೇಕ ವಿಧದಿಂದ ಚರ್ಚೆ ಆಗಿದೆ. ಇದಕ್ಕೆ ಪರದೆ ಎಳೆಯಬೇಕಾದವರು ರಾಮಕೃಷ್ಣ ಹೆಗಡೆಯವರೆ ವಿನಹ ಬೇರೆಯವರಲ್ಲ. ಆಗ ವಿರೋಧ ಪಕ್ಷದಲ್ಲಿ ಕುಳಿತಂತವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಕೂಡ ಕಡತಗಳು ಅವರ ಕೈಯಲ್ಲಿಯೇ ಇತ್ತು. ಆಗ ಸದನದ ಮುಂದಿಡಬಹುದಾಗಿತ್ತು. ಅವರ ನಂತರ ಶ್ರೀಮಾನ್ ಬೊಮ್ಮಾಯಿಯವರು ಮುಖ್ಯ ಮಂತ್ರಿಯಾದ ನಂತರ ಅದನ್ನು ಇಡಬಹುದಿತ್ತು. ಅದನ್ನು ಯಾರೂ ತಡೆಯುವುದಕ್ಕೆ ಹೋಗಲಿಲ್ಲ, ನಮ್ಮ ಪಕ್ಷದವರು ಸಹ ತಡೆಯಲು ಹೋಗಲಿಲ್ಲ. ಈಗ ಆ ಕಡತ ಎನ್‌ಕ್ವೈರಿಗೆ ಹೋಗಬೇಡವೇ ? When you get into the enquiry... ಎನ್‌ಕ್ವೈರಿಯಲ್ಲಿ ಇದನ್ನು ಪ್ರೂವ್ ಮಾಡಬೇಕು ಎಂಬುದು ಎಲ್ಲಿಂದ ಬರುತ್ತದೆ, ಯಾಕೆ ಬರುತ್ತದೆ. ನಾನು ಆಜ್ಞೆ ಮಾಡಲಿಲ್ಲ ಎಂದು ಹೇಳುತ್ತಾರೆ. ಆದರೆ ನಾವುಗಳ ಪ್ರಮಾಣವನ್ನು ಮಾಡಿ ಈ ಸದನದಲ್ಲಿ ಸದಸ್ಯರಾಗಿ ಕುಳಿತಿದ್ದೇವೆ. ಇಲ್ಲಿ ಏನು ಹೇಳುತ್ತೇವೆ ಅದು ಸತ್ಯ, ಪ್ರಮಾಣವಾಗಿ ಹೇಳುತ್ತೇವೆ ಎನ್ನತಕ್ಕದನ್ನು it is a legal inference...

ಅವರು ನಾನು ಆಜ್ಞೆ ಕೊಡಲಿಲ್ಲ. ನನಗೂ ಇದಕ್ಕೂ ಏನೂ ಸಂಬಂಧ ಇಲ್ಲ ಎಂದು ಒಂದು ಮಾತನ್ನು ಈ ಸದನದಲ್ಲಿ ಹೇಳಿ ಬಿಟ್ಟರೆ ಈ ಸದನದ ರೆಕಾರ್ಡ್‌ನಲ್ಲಿ ಅದು ಉಳಿಯುತ್ತದೆ. ಹಾಗಾದರೆ, ಆ ಆಜ್ಞೆ ಕೊಟ್ಟಿರುವವರು ಯಾರು ? ಚೀಫ್ ಸೆಕ್ರೆಟರಿ ಆಗಿರಬಹುದು ಅಥವಾ ಹೋಂ ಸೆಕ್ರೆಟರಿ ಆಗಿರಬಹುದು ಅಥವಾ ಯಾವುದೇ ಅಧಿಕಾರಿ ಆಗಿರಬಹುದು. ಈ ಮನೆಯ ಒಬ್ಬ ಸದಸ್ಯರ, ಒಬ್ಬ ಸಚಿವರ ಯಾವ ಸೆಕ್ಷನ್ ಐದರ ಪ್ರಕಾರ ಯಾವ ವ್ಯಕ್ತಿಗಳು ಬೇಕೋ ಇವರ ಹೊರತಾಗಿ ಇರತಕ್ಕ ವ್ಯಕ್ತಿಗಳನ್ನು ಏನು ಈ ಪಟ್ಟಿಯಲ್ಲಿ ಸೇರಿಸಿದ್ದಾರೆ, ಒಂದು ವೇಳೆ ಮುಖ್ಯ ಮಂತ್ರಿಗಳು ಇದಕ್ಕೆ ಜವಾಬ್ದಾರರಲ್ಲ ಎಂದು ಹೇಳಿದರೆ ಬೇರೆ ಯಾರಾದರೂ ಹೊಣೆಗಾರರು ಆಗಲೇಬೇಕು.

ಇಲ್ಲ, ಆಗಿನ ಮುಖ್ಯ ಕಾರ್ಯದರ್ಶಿಗಳು ಆಗಿರಬೇಕು, ಇಲ್ಲ ಆಗಿನ ಹೋಂ ಸೆಕ್ರೆಟರಿ ಆಗಿರಬೇಕು. ಅವರೂ ಕೂಡ ಪ್ರಿವಿಲೇಜ್‌ಗೆ ಬಂದೇ ಬರುತ್ತಾರೆ. Whether this Officer of the Minister..

ಆದುದರಿಂದ ಇವತ್ತು ಶಿಕ್ಷೆಗೆ ಗುರಿಯಂತೂ ಆಗಲೇಬೇಕು. ಏಕೆಂದರೆ, ಮಾನ್ಯ ಚಂದ್ರೇಗೌಡರು ಹೇಳಿದರು, ಮಿಸ್‌ಯೂಸ್ ಮಾಡತಕ್ಕಂಥ ಅವಕಾಶವಿದೆಯೆಂದು. ಆದ್ದರಿಂದ ಮಿಸ್‌ಯೂಸ್ ಯಾರು ಮಾಡಿದಾರೆ ಎಂದು ಕಂಡುಹಿಡಿಯಬೇಕು. ಅದನ್ನು ಕಂಡುಹಿಡಿಯುವುದಕ್ಕೆ ಯಾರು ಆಫರ್ ಇದ್ದಾರೆ, ಇವತ್ತು ಮುಖ್ಯ ಕಾರ್ಯದರ್ಶಿಯವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹೆಸರನ್ನು ಸೇರಿಸುವುದಾಗಲಿ ಅಥವಾ ಯಾರ ಹೆಸರನ್ನು ಬಿಡುವುದಾಗಲಿ, ಮುಖ್ಯ ಮಂತ್ರಿಗಳ ಆದೇಶವಿಲ್ಲದೆ ಮಾಡುವುದಕ್ಕಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಇದನ್ನು ನಾನು ಮಾಡಿಲ್ಲ ಎಂದು ಹೇಳಬೇಕಲ್ಲ. ಹಾಗಿದ್ದರೆ then Chief Secretary is responsible for all these things. It is only at the instance of the Chief Secretary a letter was sent...ಆ ಚೀಫ್ ಸೆಕ್ರೆಟರಿ ತನ್ನ ಸ್ವಯಂಪ್ರೇರಣೆಯಿಂದ ಮಾಡಿದ್ದಾರೋ ಅಥವಾ ಮುಖ್ಯ ಮಂತ್ರಿಗಳ ಆದೇಶದಿಂದ ಮಾಡಿದ್ದಾರೋ ? ಈ ಎರಡೇ ಹೈಯಸ್ಟ್ ಬಾಡಿ ಇರತಕ್ಕಂಥಾದ್ದು. ಇದು ಸಿಂಪಲ್. ಇವರು ಅಲ್ಲ ಎಂದು ಹೇಳಿಬಿಟ್ಟರೇ ಚೀಫ್ ಸೆಕ್ರೆಟರಿಯನ್ನು ಕರೆಸಿ ಏನು ಪ್ರಿವಿಲೇಜ್‌ಗೆ ಕಳಿಸಬಹುದೋ ಅಲ್ಲಿಗೆ ಕಳಿಸಬಹುದು. ಆದುದರಿಂದ ಇವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು...

ಶ್ರೀ ಡಿ. ಬಿ. ಚಂದ್ರೇಗೌಡ.—ಕೊನೆಯಲ್ಲಿ ಓದಿ. ಏನು ಹೇಳುತ್ತಾರೋ ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ.—In para 19 it is stated :

"List of members to be intercepted and order thereon were made by the Officers who are authorised to exercise power under sub-section 2 of Section 5 of the Telegraphic Act. The number were added or deleted by the authorised person in consultation and with the prior permission of the Chief Minister. No other functionary was kept advice of the list...

ಶ್ರೀ ಡಿ. ಬಿ. ಚಂದ್ರೇಗೌಡ.—'ಡಿ' ಓದಿ.

ಅಧ್ಯಕ್ಷರು.—ಕಾಗೋಡು ತಿಮ್ಮಪ್ಪನವರೆ, ನೀವು 'ಎ' ತೆಗೆದುಕೊಂಡು 'ಬಿ' ತೆಗೆದುಕೊಂಡು 'ಡಿ' ತೆಗೆದುಕೊಂಡು ಏನು ಮಾಡುತ್ತೀರಿ. ನೀವು 'ಡಿ' ಸಹ ಓದಿ.

ಶ್ರೀ ಕಾಗೋಡು ತಿಮ್ಮಪ್ಪ.—Question D. is like this what was the method adopted to prevent misuse ?

Ans. Government of India has not issued any guidelines as required under Section 7 (2) of the Indian Telegraphic Act.

No instance of misuse had come to the notice of the Government ಮಿಸ್ ಯುಸ್ ಆಗಿಲ್ಲ, ಮಿಸ್‌ಯೂಸ್ ಆಗಿರತಕ್ಕದ್ದು ಸರ್ಕಾರದ ಗವರ್ನಕ್ಕೆ ಬಂದಿಲ್ಲ ಎಂದು ಅವರ ಪತ್ರದಲ್ಲಿ ಉತ್ತರದಲ್ಲಿ ಹೇಳಿದ್ದಾರೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಮುಖ್ಯ ಕಾರ್ಯದರ್ಶಿ ಆಗಬಹುದು ಅಥವಾ ಆಗಿನ ಮುಖ್ಯ ಮಂತ್ರಿಗಳು ಆಗಿರಬಹುದು ತಮ್ಮ ವಿವೇಚನೆಯ ನಿರ್ವಹಣೆಯ ಕಾಲದಲ್ಲಿ ಅವರು ಮಂತ್ರಿಗಳ ಹೆಸರನ್ನು, ಶಾಸಕರ ಹೆಸರನ್ನು ಸೇರಿಸುವುದೂ ಕೂಡ well within misuse of power......

ಅಂದರೆ ಮಿಸ್‌ಯುಸ್ ಅಲ್ಲ ಇತಿಮಿತಿಯಲ್ಲಿ ಮಾಡಿದ್ದಾರೆ ಎಂದು ಅವರ ವ್ಯಾಖ್ಯಾನದಲ್ಲಿ ಇರಬಹುದು, ಆದರೆ ಮಿಸ್ ಯೂಸ್ ಆಫ್ ಪವರ್ ಎಂದು ನಾವು ಹೇಳಬಹುದು. because they are not the judges. ಆವತ್ತು ಮುಖ್ಯ ಮಂತ್ರಿಗಳು ತಮ್ಮ ವಿವೇಚನೆಯನ್ನು ನಿರ್ವಹಿಸತಕ್ಕಂಥ ಕಾಲದಲ್ಲಿ ಮಂತ್ರಿಗಳು ಮತ್ತು ಶಾಸಕರ ಫೋನನ್ನು ಕದ್ದು ಆಲಿಸತಕ್ಕಂಥ ಕೆಲಸ ಕೂಡ ಅಗತ್ಯ ಎಂದು ಅವರಿಗೆ ಕಂಡಿರಬಹುದು. ಆ ಕಾರಣಕ್ಕಾಗಿ ಆಗ ಚೀಫ್ ಸೆಕ್ರೆಟರಿ ಮಿಸ್‌ಯೂಸ್ ಮಾಡಿಲ್ಲ ಎಂದು ಹೇಳಬಹುದು.. ಆದರೆ ನಾವು ಹೇಳುತ್ತೇವೆ.. ಆ ರೀತಿ ಮಂತ್ರಿಗಳ. ಶಾಸಕರ ಫೋನನ್ನು ಕದ್ದಾಲಿಕೆ ಮಾಡಿರತಕ್ಕಂಥ ಕೆಲಸ ಮಿಸ್‌ಯೂಸ್ ಆಫ್ ಪವರ್ ಎಂದು. This is the subject matter of interpretation. Whether it was misused or not. ಈ ಪ್ರಶ್ನೆ ಯಾವಾಗ ಬರುತ್ತದೆ, misuse arise only if he concede there was a instruction from to include or delete of names... ಆದುದರಿಂದ ಇವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ತಾವು ಹೇಳುವ ಮಾತನ್ನು ನೇರವಾಗಿ, ಸರಳವಾಗಿ ಈ ಸದನಕ್ಕೆ ಹೇಳದೇ ಇದ್ದರೆ he has to own the responsibilty, ಏಕೆಂದರೆ, ಇದು ಯಾರೂ ಸೃಷ್ಟಿಸಿರತಕ್ಕಂಥ ಕರ್ಮಕಾಂಡ ಅಲ್ಲ. ಇದು ಅವರ ಸ್ವಯಂ ಕೃತಾಪರಾಧದಿಂದ ಸೃಷ್ಟಿಯಾಗಿರತಕ್ಕಂಥ ಕರ್ಮಕಾಂಡವೇ ವಿನ: ಬೇರೆಯವರಿಂದ ಅಲ್ಲ. ಏಕೆಂದರೆ ನಾವು ಈ ಸದನದ ಸದಸ್ಯರು. ಅವರು ರಾಷ್ಟ್ರದಲ್ಲಿ ಹೆಸರನ್ನು ಪಡೆದಿದ್ದಾರೆ, ಇದು ಇಷ್ಟೊಂದು ದೊಡ್ಡ ವ್ಯಾಖ್ಯಾನವಾಗಿ ಅವರ ಪಕ್ಷದಲ್ಲಿ ನಮ್ಮ ಪಕ್ಷದಲ್ಲಿ, ಲೋಕಸಭೆಯಲ್ಲಿ, ಶಾಸನಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಏನಾದರೂ ಈ ಪ್ರಚಾರದಿಂದಲೇ ತೃಪ್ತಿಪಡಬೇಕು ಎಂದು ಅವರ ಮನಸ್ಸಿನಲ್ಲಿ ಇತ್ತೇ? ಇಲ್ಲ, ಸ್ಥಾನ ಮಾನದಲ್ಲಿ ಇಷ್ಟು ದೊಡ್ಡ ಸ್ಥಳದಲ್ಲಿದ್ದು, ಚರ್ಚೆಗೆ ಅವಕಾಶವಾಗಬಾರದಾಗಿತ್ತು. ಏನಾದರೂ ಇದ್ದರೆ ಹೇಳಿಬಿಡಿ. ಒಂದು ವೇಳೆ ತಪ್ಪಾಗಿದ್ದರೆ. ತಪ್ಪಾಗಿದೆ ಆ ಸನ್ನಿವೇಶದಲ್ಲಿ ಮಾಡಬೇಕಾದ ಪ್ರಸಂಗ ಇತ್ತು, ಆ ಕಾಲದಲ್ಲಿ ಚಾಣಾಕ್ಯನಂತ ರಾಜಕಾರಣಿ ಇದ್ದ. ಇವತ್ತಿಗೂ ರಾಜಕಾರಣದಲ್ಲಿ ಚಾಣಾಕ್ಷತನ ಬೇಕೆಂದು ಹೇಳುತ್ತಿದ್ದೇವೆ. ಆದ್ದರಿಂದ ಆ ಚಾಣಾಕ್ಷತನವನ್ನು ಆ ಸಂದರ್ಭದಲ್ಲಿ ಉಪಯೋಗಿಸಿಕೊಂಡಿದ್ದೆ ಎಂದು ನೇರವಾಗಿ ಹೇಳಿಬಿಟ್ಟರೆ. ಈ ಸದನಕ್ಕೆ ಈ ರಾಷ್ಟ್ರದ ಜನರಿಗೆ ಅಂತಿಮವಾಗಿ ನೇರವಾಗಿ ಸಾರುವುದಕ್ಕೆ ಆಗುತ್ತದೆ. ಇದು ನನ್ನ ಪ್ರಕಾರ ಮಿಸ್‌ಯೂಜ್ ಆಫ್ ಪವರ್ ಅಲ್ಲವೆಂದು ಹೇಳಿಬಿಟ್ಟರೆ ಆಯಿತು. ಈಗ ನಮ್ಮ ನಮ್ಮ ಮಧ್ಯದಲ್ಲಿ ಬಿಚ್ಚು ಮನಸ್ಸಿನಿಂದ ಎರಡು ಮಾತನ್ನು ಆಡತಕ್ಕಂಥಾದ್ದೇ ನಮ್ಮ ಮುಂದಿರತಕ್ಕ ಪ್ರಶ್ನೆ ಆಗಿದೆ.

† ಶ್ರೀ ಎಸ್. ಬಂಗಾರಪ್ಪ (ಕೃಷಿ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಹಲವಾರು ಮುಖಗಳನ್ನು ಒಳಗೊಂಡಿರತಕ್ಕ ಚರ್ಚೆ ಈಗಾಗಲೇ ಸಾಕಷ್ಟು ನಡೆದಿರತಕ್ಕಂಥಾದ್ದನ್ನು ನಾವೆಲ್ಲಾ ಕಂಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ.—ಇದು ರಿಪ್ಲೈ ಏನು ಸ್ವಾಮಿ. ? He being a Council of Minister whether he can participate in the discussion. I want to know. I am not against that the Minister should participate. Normally, in General Discussion only Members can participate......

ಶ್ರೀ ಡಿ. ಬಿ. ಚಂದ್ರೇಗೌಡ.—ನೋ ಕಾನ್‌ಫಿಡೆನ್ಸ್ ಮೋಷನ್ ಮೇಲೆ, ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಇಂಟರ್‌ವೆನ್ಷನ್ ಆಫ್ ದಿ ಮಿನಿಸ್ಟರ್ ಅಂತ ಒಂದು ಇರುತ್ತದೆ, ನಿಯಮ

೬೮ ರಲ್ಲಿ ಇಂಟರ್‌ವೆನ್‌ಷನ್ ಆಫ್ ದಿ ಮಿನಿಸ್ಟರ್ ಅಂತ ಇರಲಿಲ್ಲ. ಆದ್ದರಿಂದ ಇದು ಉತ್ತರವೋ ಅಥವಾ ಇಂಟರವೆನಷನ್ನೋ ಎಂದು ಕೇಳುತ್ತಿದ್ದಾರೆ ?

ಅಧ್ಯಕ್ಷರು.—ನಾನು ರೆಗ್ಯೂಲೇಟ್ ಮಾಡುತ್ತೇನೆ. When I need your help I will certainly call upon. Right now, I am in total control of the House. Mr. Bangarappa has told me that he is one of the aggrieved party. In that capacity, I have called upon him to speak.

SRI S. BANGARAPPA.—I thank the Chair and other Members who Just now stood up. Thank you very much. ನಾವು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದನ್ನು ಎರಡು ವಿಧವಾಗಿ ವಿಂಗಡಣೆ ಮಾಡಿ ಚರ್ಚೆ ಮಾಡುತ್ತಿದ್ದೇವೆ. ಇದು ಒಂದ ಕ್ಕೊಂದಕ್ಕೆ ಪೂರಕವಾಗಿದೆಯೇ ಎನ್ನುವ ಅಭಿಪ್ರಾಯವನ್ನು ಆಧಾರವಾಗಿಟ್ಟುಕೊಂಡು ಚರ್ಚೆ ಮಾಡುತ್ತಿದ್ದೇವೆ. ಒಂದು ಟೆಲಿಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಇರತಕ್ಕ ಮಾನ್ಯತಾಂಶಗಳು ಏನು ಎನ್ನುವುದನ್ನು ಗಮನಿಸಿ, ಅದನ್ನು ಆಧಾರವಾಗಿಟ್ಟುಕೊಂಡು ಪ್ರಜಾ ಪ್ರಭುತ್ವದ ಚೌಕಟ್ಟಿನಲ್ಲಿ ಯಾವ ವ್ಯವಸ್ಥೆ ಇರಬೇಕೆಂಬುದರ ವಿಚಾರದ ಬಗ್ಗೆ ಕೂಡ ಚರ್ಚೆ ಮಾಡುತ್ತಿದ್ದೇವೆನ್ನುವುದು ನನ್ನ ಅನಿಸಿಕೆ. ಏಕೆಂದರೆ ಈ ಒಂದು ಕದ್ದಾಲಿಕೆ ಪ್ರಕರಣ ಇವತ್ತು ರಾಷ್ಟ್ರದಲ್ಲಿ, ರಾಜ್ಯದಲ್ಲಿ ಒಂದು ಹಗರಣವಾಗಿದೆ. ಈ ಚರ್ಚೆಯ ಉದ್ದೇಶ ಎರಡು ವಿಧವಾಗಿದೆಯೆಂದು ನಾನು ಭಾವಿಸಿದ್ದೇನೆ. ಶ್ರೀಮಾನ್ ಖರ್ಗೆಯವರು ಮತ್ತು ಶ್ರೀಮಾನ್ ಲಕ್ಕಪ್ಪನವರು ಇನ್ನಿತರೆ ಮಿತ್ರರು ಕಳುಹಿಸಿರತಕ್ಕ ನಿಯಮಾವಳಿ ೬೮ರ ಪ್ರಕಾರ ನಮಗೆಲ್ಲಾ ಗೊತ್ತಿರುವ ಹಾಗೆ, ಇದರಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವಂತಾದ್ದು ಇದರಲ್ಲಿ ಇಲ್ಲ. ಈ ವಿಚಾರದ ಚೌಕಟ್ಟಿನಲ್ಲಿ ಈ ವಿಷಯವನ್ನು ಚರ್ಚೆ ಮಾಡುತ್ತಿದ್ದೇವೆ. ಹಾಗಾದರೆ, ಈ ನಿಯಮಾವಳಿ ಪ್ರಕಾರ ಮುಂದೆ ಏನು ಎನ್ನತಕ್ಕ ಪ್ರಶ್ನೆಗೆ, ಅದಕ್ಕೇನೂ ಇಲ್ಲ. ಈ ಸದನದಲ್ಲಿ ಇದೇನೂ ಈ ಮೊದಲನೇ ಸಲವಲ್ಲ. ನಾವು ಆ ಕಡೆ ಕುಳಿತಾಗ, ಈ ಕಡೆ ಕುಳಿತಾಗ ಇಂಥ ಸಂದರ್ಭ ಬಂದಾಗ ವಿಷಯವನ್ನು ಚರ್ಚೆ ಮಾಡಿ ಅಲ್ಲಿಗೇ ಮುಕ್ತಾಯ ಮಾಡಿದ್ದೇವೆ. ಇದರ ಮೇಲೆ ಓಟಿಂಗಾಗಲೀ, ಧ್ವನಿ ಮತ ಹಾಕುವುದರ ಮೂಲಕವಾಗಲೀ ತೀರ್ಮಾನ ಮಾಡುವುದಕ್ಕೆ ಈ ನಿಯಮಾವಳಿಯಲ್ಲಿ ಅವಕಾಶ ಇಲ್ಲ.

ಇದು ಒಂದು ಸದನದ ಕಾನೂನು ಪರಿಮಿತಿಗೆ ಒಳಪಟ್ಟಿರತಕ್ಕಂಥ ಪ್ರಶ್ನೆ, ಇದರ ಉದ್ದೇಶ ಒಂದು ಇದೆ. ಒಂದು ಇಂತಹ ಪ್ರಕರಣಗಳು ನಡೆಯಬಾರದು ಎನ್ನತಕ್ಕಂಥಾದ್ದು ಆದರೆ, ಮತ್ತೊಂದು ಇದಕ್ಕೆ ಸಂಬಂಧಪಟ್ಟಿರತಕ್ಕಂತಹವರು ಇದ್ದಾರೆ. ನಾನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಬಗ್ಗೆಯೇ ಹೇಳತಕ್ಕ ವಿಚಾರದ ಬಗ್ಗೆ ಅನಂತರ ಬರುತ್ತೇನೆ. ಇಲ್ಲಿ ಒಂದು ನೀತಿಯನ್ನು ಕುರಿತು ನಾವು ಚರ್ಚೆ ಮಾಡುತ್ತಿದ್ದೇವೆಂದು ನಾನು ಭಾವಿಸಿದ್ದೇನೆ. ಮುಂದೆ ಯಾವುದೇ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಅಧಿಕಾರದಲ್ಲಿದ್ದಾಗ ಯಾವುದೇ ಹಂತದಲ್ಲಿದ್ದರೂ ಕೂಡ. ಈ ಮಾತನ್ನು ತಮಗೋಸ್ಕರ ಆಡುತ್ತಿಲ್ಲ, ನಮ್ಮನ್ನು ಸೇರಿಸಿಕೊಂಡು ಈ ಮಾತನ್ನು ಆಡುತ್ತಿದ್ದೇನೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಇಲ್ಲಿ ಒಂದು ಮೂಲಭೂತವಾದ ವಿಚಾರವನ್ನು ಗಮನದಲ್ಲಿಟ್ಟುಕೊಂಡೇ ಮಾತನಾಡಬೇಕಾಗುತ್ತದೆ. ನಮ್ಮ ಈ ಚರ್ಚೆ ರಾಜ್ಯದ ಈ ರಾಷ್ಟ್ರದ ಇಂದಿನ ಜನತೆಗೆ ಮತ್ತು ಭವಿಷ್ಯದ ಪೀಳಿಗೆಗೆ ಅದು ಮಾರ್ಗದರ್ಶನವಾಗಿ ಆಗಿಯಬೇಕು. ಈ ದೃಷ್ಟಿಯಿಂದ ನಾವು ಇಲ್ಲಿ ಈ ಚರ್ಚೆ ಮಾಡುತ್ತಿದ್ದೇವೆ. ಅಧಿಕಾರದ ದುರುಪಯೋಗ ಒಂದುವೇಳೆ, ಯಾವುದೇ ಮಟ್ಟದಲ್ಲಿ ಎಷ್ಟೇ ಹಂತದಲ್ಲಿ ಎಷ್ಟು ದೂರದವರಗೆ ಇರಬೇಕು. ಆ ರೀತಿ ಅಧಿಕಾರ ದುರುಪಯೋಗ ನಡೆದಾಗ, ಅದು ಸ್ವಾತಂತ್ರ್ಯ ಗಳಿಕೆಯ ಸಮಯದಲ್ಲಿ ಎಷ್ಟೊಂದು ವಿಶ್ವಾಸವನ್ನು ಇಟ್ಟು ತ್ಯಾಗದ ಆಧಾರದ ಮೇಲೆ ಗಳಿಕೆಯನ್ನು ಮಾಡಿಕೊಂಡು ಹೋಗಿದ್ದಾರೆ ಅದರ ದುರುಪಯೋಗ ಇದು ಮತ್ತೊಂದು ದಾರಿಯನ್ನು ಹಿಡಿದು ನಡೆದಿದೆ ಎನ್ನುವ ಅಭಿಪ್ರಾಯ ಜನತೆಗೆ ಒಂದು ವೇಳೆ ಬಂದರೆ ಅದು ಒಳ್ಳೆಯ ಭವಿಷ್ಯತ್ತಿಗೆ ಅದು ಮಾರ್ಗವಾಗಿ ಪರಿಣಾಮವಾಗುತ್ತದೆ ನಾವು ಈ ಉದ್ದೇಶದಿಂದ ಯಾವುದೇ ಮಟ್ಟದ ವಿಚಾರಕ್ಕೂ ಕೂಡ ಹೋಗುವುದಿಲ್ಲ. ನಾನು ನಿಜವಾಗಿ ಹೇಳಬೇಕೆಂದರೆ, ನಿಯಮ ೬೮ರ ಪ್ರಕಾರ ಕಳುಹಿಸಿರತಕ್ಕಂಥ ನಮ್ಮ ಮಿತ್ರರಾದ ಖರ್ಗೆಯವರು ಮತ್ತು ಇತರೆ ಮಿತ್ರರು ಏನಿದ್ದಾರೆ ಅವರನ್ನು ನಾನು ಅಭಿನಂದಿಸುತ್ತೇನೆ. ನಮಗೆ ಇಲ್ಲಿ ಬಹುಮತ ಇದೆ ಎನ್ನುವ ದೃಷ್ಟಿಯಿಂದ ಯಾವುದೇ ಒಂದು ಬೇರೆ ನಿಯಮ ಆಗಿಸಿಲ್ಲ, ಅದನ್ನು ಇಲ್ಲಿ ಗಮನಿಸಬೇಕು. ಶ್ರೀಮಾನ್ ಖರ್ಗೆಯವರಾಗಲಿ ಅಥವಾ ಇತರೆ ಮಿತ್ರರಾಗಲಿ, ನಮಗೆ ಬಹುಮತ ಇದೆ. ಬ್ರೂಟ್ ಮೆಜಾರಿಟಿ ಇದೆ ನಾವು ಅದರ

ಉಪಯೋಗವನ್ನು ಪಡೆದು, ಅಂತಿಮವಾಗಿ ಅದು ದುರುಪಯೋಗ ಎನ್ನುವ ಮಾತು ಬರಬಹುದು ಎನ್ನುವುದರ ಬಗ್ಗೆ ವಿಚಾರ ಮಾಡಿ. ಇವರ ಇತಿಮಿತಿಯನ್ನು ಗಮನಿಸಿ ಇದು ಬಹುಮತ, ಅಲ್ಪಮತದ ಪ್ರಶ್ನೆ ಅಲ್ಲ, ನಾವು ವಿಚಾರ ಮಾಡತಕ್ಕಂತಾದ್ದು, ನಾವು ಚರ್ಚೆ ಮಾಡತಕ್ಕಂತಾದ್ದು, ಇದು ಬಹಳ ಪ್ರಾಮುಖ್ಯವಾಗಿರಬೇಕಾದಂಥ ಅಂಶ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಪೂರಕವಾಗಿರತಕ್ಕಂಥ ವಿಚಾರಧಾರೆ ಎನ್ನತಕ್ಕ ದೃಷ್ಟಿಯಿಂದ ನಿಯಮಾವಳಿ ೭೭ಕ್ಕೆ ಸೀಮಿತಗೊಳಿಸಿ, ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ, ನಮಗೆ ಬಹುಮತ ಇದೆ ಎನ್ನುವ ಕಾರಣದಿಂದ, ಒಂದು ಅಂತಿಮವಾದ ತೀರ್ಮಾನಕ್ಕೆ ನಾವು ಹೋಗಿಬಿಟ್ಟಿದ್ದರೆ ನಾಳೆ ರಾಜ್ಯದ ಅಥವಾ ರಾಷ್ಟ್ರದ ಜನತೆಗೆ ಇದನ್ನು ನೋಡಿ, ಬಹುಮತ ಇಲ್ಲಿ ಒಂದು ಇದೆ. ಅದು ವಾಸ್ತವಾಂಶ ಇರಬಹುದು. ಇಲ್ಲದೇ ಇರಬಹುದು ಬಹುಮತದ ಆಧಾರದ ಮೇಲೆ ಒಂದು ತೀರ್ಪು ಇಲ್ಲಿ ಕೊಟ್ಟುಬಿಟ್ಟಿದ್ದಾರೆ, ಇಲ್ಲಿ ಒಂದು ಅಧಿಕಾರದ ದುರುಪಯೋಗ ನಡೆದಿದೆ ಎನ್ನುವ ಶಂಕೆಗೆ ಆಸ್ಪದ ಕೊಡತಕ್ಕಂಥ ಸಂದರ್ಭ ಅಲ್ಲಿ ಉದ್ಭವವಾಗುವ ಸಂದರ್ಭ ಅಲ್ಲಿ ಬರುತ್ತಿತ್ತು. ಆ ಒಂದು ಸಂದರ್ಭಕ್ಕೆ ಎಳ್ಳಷ್ಟು ಅವಕಾಶ ಕೊಡದೆ ವಿಷಯದ ಚರ್ಚೆ ಬಿಟ್ಟು ಸದನದ ಅಂತಿಮ ತೀರ್ಮಾನಕ್ಕೆ ಇದೊಂದು ಎಚ್ಚರಿಕೆ ಗಂಟೆಯಾಗಿ ಈ ಸದನದ ಮುಖಾಂತರ ಸಮಾಜಕ್ಕೆ, ರಾಜ್ಯಕ್ಕೆ ರಾಷ್ಟ್ರಕ್ಕೆ ಇದೊಂದು ಎಚ್ಚರಿಕೆ ಗಂಟೆಯಾಗಿ ಉಳಿಯಬೇಕೆಂದು ಈ ಚರ್ಚೆಯನ್ನು ಸೀಮಿತಗೊಳಿಸಿ ನಾವು ಮಾತನಾಡುತ್ತಿದ್ದೇವೆ. ನಾನು ಈ ಮಾತನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಸಂಬಂಧಪಟ್ಟ ಮೌಲ್ಯದ ವಿಚಾರಕ್ಕೆ ಬಂದಾಗ, ಕ್ಷಮಿಸಬೇಕು, ನಾನು ಮೌಲ್ಯ ಅಂದಾಗ ಇದು ಒಬ್ಬರದೇ ಸ್ವತ್ತಾಗಿ ಉಳಿದಿತ್ತು ಎನ್ನತಕ್ಕಂಥ ಒಂದು ಸಂದರ್ಭ ಇತ್ತು ನಾನು ಆ ವಿಚಾರಕ್ಕೆ ಅನಂತರ ಬರಬೇಕಾಗುತ್ತದೆ. ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಎರಡು ವಿಧವಾಗಿ ಈ ವಿಚಾರಗಳು ಇದ್ದಾಗ, ನಿಜ ಹೇಳಬೇಕೆಂದರೆ, ವೈಯಕ್ತಿಕವಾಗಿ ಯಾರ ಮೇಲೂ ಕೂಡ ದ್ವೇಷ ನಮಗೆ ಇಲ್ಲ. ಅದು ಇರಬಾರದು. ಇವೊತ್ತು ಅಧಿಕಾರದಲ್ಲಿ ನಾವು ಈ ಕಡೆ ಕುಳಿತಿರಬಹುದು, ಮತ್ತೆ ನಾಳೆ ಆ ಕಡೆ ಕುಳಿತುಕೊಳ್ಳಬೇಕಾಗುತ್ತದೆ ಎನ್ನುವ ಪರಿಜ್ಞಾನದ ಹಿನ್ನೆಲೆಯಲ್ಲಿ ಮಾತನಾಡಬೇಕಾಗುತ್ತದೆ. ಇದು ಹೊಸದೇನೂ ಅಲ್ಲ. ರಾಜಕೀಯ ಜೀವನದಲ್ಲಿ ಮಾನ್ಯ ಹೆಗಡೆಯವರು ಬಹಳ ವರ್ಷ ಕಳೆದಿದ್ದಾರೆ. ನಾನು ಬಹಳ ಸಂತೋಷ ಪಡುತ್ತೇನೆ. ಹಲವಾರು ಜನ ಬಹಳ ವರ್ಷಗಳವರೆಗೆ ಜನತೆಯ ನೇಮಕರಾಗಿ, ಜನತೆಯ ಪ್ರತಿನಿಧಿಯಾಗಿ ಹಲವಾರು ಹಂತದಲ್ಲಿ ಇವತ್ತು ರಾಜಕಾರಣದಲ್ಲಿ ಜೀವಂತವಾಗಿ ಉಳಿದು ಶಕ್ತಿಯುತವಾಗಿ ಬೆಳೆದರೆ ಅದನ್ನು ನೋಡಿ ಸಂತೋಷಪಡತಕ್ಕಂತಹ ವ್ಯಕ್ತಿಗಳಲ್ಲಿ ನಾನು ಕೂಡ ಒಬ್ಬನಾಗಿ ಈ ಮಾತನ್ನು ಆಡುತ್ತಿದ್ದೇನೆ. ಅನಿವಾರ್ಯವಾಗಿ ಇದನ್ನು ಆಡುತ್ತಿಲ್ಲ. ಈ ನೀತಿಯನ್ನು ಮೂಲಭೂತವಾಗಿ ಇಟ್ಟುಕೊಳ್ಳಬೇಕೆಂಬ ಅನಿಸಿಕೆಯ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಕೆಲವೊಮ್ಮೆ ನಾವು ಅಧಿಕಾರದಲ್ಲಿದ್ದಾಗ ಅದರ ಸದುಪಯೋಗದ ಬಗ್ಗೆ ಗಮನ ಕೊಡದೆ ನಮ್ಮ ಚಿಂತನೆಯನ್ನು ಮತ್ತೊಂದು ದಿಶೆಯಲ್ಲಿ ಹರಿದು ಬಂದಾಗ ಅದು ಅಡ್ಡ ದಾರಿ ಹಿಡಿಯತಕ್ಕಂತಹ ಸಂದದರ್ಭ ಬರುತ್ತದೆ. ಆ ಸಂದರ್ಭದಲ್ಲಿ ಅಧಿಕಾರ ಕೈಯಲ್ಲಿದ್ದಾಗ ಅದರ ದುರುಪಯೋಗ ಸ್ವಲ್ಪ ಮಟ್ಟಿಗೆ ನಡೆದರೂ ಕೂಡ ಅದರ ಪರಿಣಾಮ ಬಹಳ ಕೆಟ್ಟದಾಗುತ್ತದೆ. ಅಧಿಕಾರಿ ನನ್ನ ಮಾತನ್ನು ಕೇಳುತ್ತಾನೆಂದು ನಾನು ಒಬ್ಬ ಸಚಿವನಾಗಿ ಅಥವಾ ಮುಖ್ಯ ಮಂತ್ರಿಯಾಗಿ ಅಧಿಕಾರಿಗಳು ನಾನು ಹೇಳಿದ ಮಾತು ಕೇಳುತ್ತಾರೆಂಬ ದೃಷ್ಟಿಯಿಂದ ಒಂದು ಆದೇಶವನ್ನು ಕೊಡತಕ್ಕಂಥಾದ್ದು ಸಹಜವಾಗಿರತಕ್ಕಂಥಾದ್ದು. ಆದರೆ ಅದರ ಪರಿಣಾಮದ ಕಡೆಗೆ ಎಚ್ಚರಿಕೆಯನ್ನು ವಹಿಸದೇ ಇದ್ದರೆ ಅದು ನಿಜವಾಗಲೂ ಕೂಡ ಒಂದು ದುರಂತವಾಗುತ್ತದೆ. ಆ ಒಂದು ದುರಂತಗಳು ಕೆಲವೊಮ್ಮೆ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಮೌಲ್ಯಗಳ ವಿಚಾರದಲ್ಲಿ ಪರಿಣಾಮವನ್ನು ಹೊಂದಬಹುದು, ಇದರ ಜೊತೆಗೆ ಒಂದು ವ್ಯಕ್ತಿ ಇಲ್ಲವೇ ಒಂದು ಕುಟುಂಬ ನಾಶವಾಗಿ ಹೋಗಿ ಬಿಡಬಹುದು. ನಾಳೆ ನಮ್ಮ ಭವಿಷ್ಯದ ಜನಾಂಗಕ್ಕೆ ಇದು ಕೊಡುಗೆಯಾಗಿ ಉಳಿಯುವ ಸಂದರ್ಭ ಬರುತ್ತದೆ. ಈ ಮೂಲ ವಿಚಾರವನ್ನು ಗಮನದಲ್ಲಿಟ್ಟು ಗಮನದಲ್ಲಿಟ್ಟು ನಾವು ಪ್ರತಿಯೊಂದು ಸಾರಿ ಮಾತನಾಡಬೇಕಾಗುತ್ತದೆ. ಇವೊತ್ತು ಇರುವ ಅಧಿಕಾರ ಬೆಳಕು ಹರಿದರೆ ಹೋಗಬಹುದು ಎಂಬ ವಿಚಾರವನ್ನು ಗಮನದಲ್ಲಿಟ್ಟು ಅಧಿಕಾರ ಚಲಾವಣೆ ಮಾಡಬೇಕಾಗುತ್ತದೆ. ಕೆಲವು ಜನ ಅದರ ಕಡೆಗೆ ಗಮನ ಕೊಡಬಹುದು ಇಲ್ಲವೇ ಗಮನ ಕೊಡದೇ ಇದ್ದಾಗ ಇಂತಹ ಆ ಒಬ್ಬ ವ್ಯಕ್ತಿ ಒಬ್ಬರನ್ನು ಹಾಳು ಮಾಡುವುದಲ್ಲ, ಅವರ ಸಂಗಡಿಗರನ್ನು ಹಾಳು ಮಾಡುವುದು ಅಲ್ಲ ಪ್ರಜಾಪ್ರಭುತ್ವದಲ್ಲಿ ಹಲವಾರು ವರ್ಷಗಳು ಹುಟ್ಟಿ ಇರುವಿಕೆ ಇದು ಸಹಜವಾಗಿ ಮೂಲಭೂತವಾಗಿ ಇರತಕ್ಕಂಥ ಲಕ್ಷಣ ಇದನ್ನು ನಾವು ಮಾನ್ಯತೆ ಮಾಡಿದ್ದೇವೆ. It is a political system.

ರಾಜಕೀಯದಲ್ಲಿ ಒಂದು ವ್ಯವಸ್ಥೆಯನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ಆ ಪಕ್ಷವನ್ನು ಹಾಳು ಮಾಡುವುದಲ್ಲದೆ ಯಾವ ಪಕ್ಷಕ್ಕೆ ಜನತೆಯು ಮತದಾನದ ಮುಖಾಂತರ ಬಹುಮತದ ಹೆಸರಿನಲ್ಲಿ ಅಧಿಕಾರದ ಬುತ್ತಿಯನ್ನು ಕಟ್ಟಿ ಅವರ ಉಡಿಯಲ್ಲಿ ಇಟ್ಟಿರುತ್ತಾರೆಯೋ. ಅದರ ದುರುಪಯೋಗ ಆದರೆ ಇಡೀ ರಾಷ್ಟ್ರದ ಮೇಲೆ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಒಂದು ಚಿಂತನೆಯನ್ನು ನಾವು ಮೂಲಭೂತವಾಗಿ ಮಾಡಬೇಕಾಗುತ್ತದೆ. ಇದನ್ನು ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ಇದನ್ನು ಮುಂದುವರಿಸುವುದಕ್ಕೆ ನನಗೆ ಇಚ್ಛೆ ಇಲ್ಲ. ನನ್ನ ಮನಸ್ಸು ಇನ್ನೂ ಕೂಡ ಮಾತನಾಡಬೇಕೆಂಬ ವಿಚಾರಧಾರೆಯಲ್ಲಿ ಇದ್ದರೂ ಕೂಡ ತಮ್ಮ ಅಪ್ಪಣೆ ಪಡೆದು ಇದನ್ನು ಇಲ್ಲಿಗೇ ನಿಲ್ಲಿಸುತ್ತೇನೆ. ಇನ್ನು ನೇರವಾಗಿ ವಿಚಾರಕ್ಕೆ ಬರೋಣ. ನಾವು ಇವತ್ತು ರಾಜಕಾರಣ ಮಾಡಬೇಕಾದರೆ ಮಾತನಾಡಬೇಕಾಗುತ್ತದೆ. ವ್ಯಕ್ತಿ ವ್ಯಕ್ತಿ ಖಾಸಗಿಯಾಗಿ ಕೂತಾಗ ಒಂದು ಪಕ್ಷದಲ್ಲಿ ಇರತಕ್ಕಂತಹ ಮಿತ್ರರುಗಳು ಕೆಲವೊಮ್ಮೆ ಒಂದು ಪಕ್ಷದವರು ಅಷ್ಟೇ ಅಲ್ಲ, ಹತ್ತೆಂಟು ರಾಜಕೀಯ ಪಕ್ಷಗಳು ಸೇರಿ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ನಾವೆಲ್ಲರೂ ಪ್ರಜಾಪ್ರಭುತ್ವದಲ್ಲಿ ಅಣ್ಣತಮ್ಮಂದಿರು ಇದ್ದ ಹಾಗೆ. ಮಹಾರಾಷ್ಟ್ರದ ಜೊತೆಯಲ್ಲಿ ಗಡಿಯ ಬಗ್ಗೆ ಮಾತನಾಡುತ್ತೇವೆ. ಆಗ ಒಂದು ಇತಿ ಮಿತಿಯೊಳಗೆ ಒಳಪಟ್ಟು ಮಾತನಾಡಬೇಕಾಗುತ್ತದೆ. ಅದು ಅನಿವಾರ್ಯ. ಮಹಾರಾಷ್ಟ್ರದವರ ಮತ್ತು ತಮಿಳುನಾಡಿನವರ ಜೊತೆ ಮಾತನಾಡಬೇಕಾದುದು ಅನಿವಾರ್ಯ ಇರಬಹುದು. ಅದು ಮಹಾಜನ್ ಆಯೋಗ ಇರಬಹುದು ಅಥವಾ ಮತ್ತೊಂದು ಇರಬಹುದು. ನಾವೆಲ್ಲರೂ ಅಣ್ಣ ತಮ್ಮಂದಿರು. ನಮ್ಮ ದೇಶದ ಒಂದು ಅವಿಭಾಜ್ಯ ಅಂಗ. ಈ ಮೂಲಭೂತವಾದಂತಹ ಅನಿಸಿಕೆಯನ್ನು ಮರೆತು ಜೀವನ ಮಾಡುವುದಕ್ಕಾಗುವುದಿಲ್ಲ. ರಾಜಕೀಯ ಪಕ್ಷಗಳು ಕೂಡ ಹಾಗೇ. ಕೆಲವೊಮ್ಮೆ ಈ ಕಡೆ ಇರತಕ್ಕಂತಹ ಪಕ್ಷಕ್ಕೆ ಆ ಕಡೆಯವರು ಬರಬಹುದು, ಆ ಕಡೆ ಇರತಕ್ಕಂತಹ ಪಕ್ಷಕ್ಕೆ ಈ ಕಡೆ ಇರತಕ್ಕಂತಹವರು ಹೋಗಬಹುದು ಅಥವಾ ಹೋಗಿರಬಹುದು. ಇದು ಕೆಲವೊಮ್ಮೆ ರಾಜಕಾರಣದಲ್ಲಿ ಅನಿವಾರ್ಯವೆಂಬ ಪ್ರಶ್ನೆ ನಮ್ಮ ಅನುಭವದ ಚೌಕಟ್ಟಿಗೆ ಬಂದಿರತಕ್ಕಂತಹ ವಿಚಾರಗಳು ನಿನ್ನೆ ಒಬ್ಬ ಸದಸ್ಯರು ಮಾತನಾಡುತ್ತಾ ರಾಜಕೀಯ ಪಕ್ಷಗಳು ಎಂದರೆ ಪಾಂಡವರು ಕೌರವರು ಇದ್ದ ಹಾಗೆ ಎಂಬ ಉದಾಹರಣೆಯನ್ನು ಕೊಟ್ಟರು. ನಾನು ಅದನ್ನು ಉದಾಹರಣೆಯಾಗಿ ಕೊಡುವುದಕ್ಕೆ ಹೋಗುವುದಿಲ್ಲ. ಪಾಂಡವರು ಕೌರವರು ಎಂದು ಉದಾಹರಣೆ ಕೊಟ್ಟು ಹೇಳತಕ್ಕಂತಹ ಅವಶ್ಯಕತೆ ನನಗೆ ಇಲ್ಲ, ಏಕೆಂದರೆ ಭಾರಿ ಯುದ್ಧವನ್ನು ಮಾಡಿ ಇದು ಏನೋ ಈ ರಾಷ್ಟ್ರದ ಸಂಪೂರ್ಣ ಭವಿಷ್ಯ
ವನ್ನು ವಿನೂತನವಾಗಿ ಬರೆಯುತಕ್ಕಂಥ ಸಂದರ್ಭ ಬಂದಾಗ ಮಾಡೋಣ. ನಾವು ಇನ್ನು
ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಅಳತೆಗೋಲು ಇಟ್ಟು ಅಳೆಯುತಕ್ಕಂತಹ ಈ ಪ್ರಯೋಗ
ಮಾತ್ರ ಮುಂದುವರೆದಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಇದು ಒಂದು ಪ್ರಯೋಗ. ಈ
ಹಂತದಲ್ಲಿ ನಾವು ಕೆಲವು ಸಾರಿ ಖಾಸಗಿಯಾಗಿ ದೂರವಾಣಿಯ ಮುಖಾಂತರ, ಪತ್ರಗಳ ಮುಖಾಂತರ
ಮಾತನಾಡತಕ್ಕ ಸಂದರ್ಭ ಬರುತ್ತದೆ. ನಿಜವಾಗಿ ಹೇಳಬೇಕೆಂದರೆ, ಅನಿವಾರ್ಯ ದೃಷ್ಟಿಯಿಂದ
ನಾನು ಇದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರದಲ್ಲಿ ಮಾನ್ಯ ವಿ. ಪಿ. ಸಿಂಗ್‌ರವರು ಪ್ರಧಾನ
ಮಂತ್ರಿಗಳಾಗಿದ್ದಾರೆ ಮಾನ್ಯ ರಾಜೀವ್ ಗಾಂಧಿಯವರು ವಿರೋಧಪಕ್ಷದ ನಾಯಕರಾಗಿ ಕೆಲಸ
ಮಾಡುತ್ತಿದ್ದಾರೆ. ಹಲವಾರು ವಿಷಯಗಳ ಬಗ್ಗೆ ಒಬ್ಬರಿಗೊಬ್ಬರು ಪರಸ್ಪರ ಕೂತು ಮಾತನಾಡ
ಬೇಕಾಗುತ್ತದೆ. ಅದು ಪಂಜಾಬ್ ಸಮಸ್ಯೆ ಇರಬಹುದು. ಕಾಶ್ಮೀರದ ಸಮಸ್ಯೆ ಇರಬಹುದು
ಸಿಲೋನ್ ವಿಚಾರ ಇರಬಹುದು. ಅಥವಾ ಬೇರೆ ಇನ್ಯಾವುದೇ ಪ್ರಶ್ನೆ ಇರಬಹುದು. ಅಭಿಪ್ರಾಯಗಳು
ಭಿನ್ನವಾಗಿದ್ದರೂ ಕೂಡ ಅನೇಕ ಸಾರಿ ಒಟ್ಟಿಗೆ ಕೂತು ಮಾತನಾಡಿರುವುದನ್ನು ನಾವು ನೋಡಿದ್ದೇವೆ.

ಇವತ್ತು ದೂರವಾಣಿಯಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಯಾವ ವಿಚಾರವನ್ನು ಮಾತನಾಡು
ವ್ಯಕ್ತಿಗಳ ಮೇಲೆ ನಿರ್ಧಾರವಾಗುತ್ತದೆ. ರಾಜಕಾರಣದಲ್ಲಿ
ತ್ತಾರೆ. ಯಾರು ಮಾತನಾಡುತ್ತಾರೆ. ಆ ವ್ಯಕ್ತಿ ವ್ಯಕ್ತಿಯ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು
ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಕೂಡ ... ಟೆಲಿಗ್ರಾಫ್ ಆ್ಯಕ್ಟ್ ಪ್ರಕಾರ ಯಾವ ವ್ಯಕ್ತಿ ಮಾತನಾಡು
ಮಾತನಾಡಬೇಕಾಗುತ್ತದೆ. ಇಂಡಿಯನ್ ... ಗುತ್ತಾನೆ ಎಂಬುದನ್ನು ನೋಡಬೇಕು. ನಮ್ಮ
ತ್ತಾನೆ, ಯಾವ ವಿಚಾರಕ್ಕೆ, ವಿರುದ್ಧ ಪಾರ್ಟಿ ... ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ
ಕರ್ನಾಟಕ ರಾಜ್ಯದಲ್ಲಿ ಮಾನ್ಯ ರಾಮಕೃಷ್ಣ ಅಧಿಕಾರ ದುರುಪಯೋಗ ನಡೆದಿದ್ದರೆ ಈ ವಿಚಾರದ
ಅಧಿಕಾರಾವಧಿಯಲ್ಲಿ ಅವರ ವ್ಯಾಪ್ತಿಯಲ್ಲಿ ಇಲ್ಲ. ಯಾವ ವ್ಯಕ್ತಿ ದೂರವಾಣಿಯಲ್ಲಿ ಮಾತನಾಡತಕ್ಕ
ವ್ಯಾಪ್ತಿಗೆ ಅವರು ಬರುತ್ತಾರೆ. ಇಲ್ಲದಿದ್ದರೆ ... ನಾಗುತ್ತದೆ ಅನ್ನುವ ಬಗ್ಗೆ ಒಂದು ಪಟ್ಟಿಯನ್ನೇ ಮಾಡಿ
ಸಂದರ್ಭದಲ್ಲಿ ಅದನ್ನು ಕೇಳುವುದಕ್ಕೆ ಸಾಧ್ಯ ... ಇಂತಹ ಜನರ...
ದ್ದಾರೆ. ೭-೮ ವರ್ಗಗಳಿಗೆ ಸೇರಿದ

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರಾದ ಬಂಗಾರಪ್ಪನವರು ಇದುವರೆಗೆ ಸುಮಾರು ೨೦ ನಿಮಿಷ ಕಾಲ ಮಾತನಾಡಿದರು. ಅವರು ಮಾತನಾಡುವಾಗ ನನಗೆ ಜೂನ್ ೨೬ನೇ ತಾರೀಖು ನೆನಪಿಗೆ ಬಂತು ೧೯೭೫ನೇ ಜೂನ್ ೨೬ನೇ ತಾರೀಖು ಎನಿದೆ ಬಹಳ ಮಹತ್ವದ ದಿನ. ಇದೇ ೨೬ನೇ ತಾರೀಖು ನಮ್ಮನ್ನು ಹಿಡಿದುಕೊಂಡು ಹೋಗಿ ೨-೩ ವರ್ಷ ಜೈಲಿಗೆ ಹಾಕಿದ್ದರು. ನಾವು ಜೈಲಿನಲ್ಲಿದ್ದೆವು. ಮಾನ್ಯ ಬಂಗಾರಪ್ಪನವರು ಮೂಲಭೂತ ಹಕ್ಕಿನ ಬಗ್ಗೆ ಇಲ್ಲಿ ಮಾತನಾಡುತ್ತಿದ್ದಾರೆ. ನಮ್ಮನ್ನು ೧೮ ತಿಂಗಳಕಾಲ ಜೈಲಿಗೆ ತೆಗೆದುಕೊಂಡು ಹೋಗಿ ಹಾಕಿದ್ದಾಗ ಈ ಮೂಲಭೂತ ಹಕ್ಕು ಎಲ್ಲಿಗೆ ಹೋಗಿತ್ತು ? ಆಗ ನೀವು ಈ ಬಗ್ಗೆ ಏನಾದರೂ ಹೇಳಿದ್ದಿರಾ ?

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ವೀರೇಂದ್ರ ಪಾಟೀಲರು ಆಗ ಈ ಕಡೆ ಇದ್ದರು. ಅದು ನಿಮಗೆ ಗೊತ್ತಿಲ್ಲ...

(ಗೊಂದಲ)

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.— ಬಂಗಾರಪ್ಪನವರೇ, ನೀವು ಯಾರಿಗೆ ಈಲ್ಡ್ ಆಗಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ನಂಜುಂಡಸ್ವಾಮಿಯವರಿಗೆ.

† ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಜೂನ್ ೨೬ನೇ ತಾರೀಖು ಎನ್ನುತಕ್ಕ ಮಾತು ಬಂದಿದ್ದರಿಂದ ನಾನು ಈಗ ಮಾತನಾಡವೇಕಾಗಿ ಬಂತು.

೧೧.೦೦ ಎ. ಎಂ.

ಜೂನ್ ೨೬ ರ ಬಗ್ಗೆ ಮಾತನಾಡಿದರು. ನಾನು ಆಗ ಯಾವ ಪಾತ್ರ ವಹಿಸಿದೆ ಎಂಬುದು ಅವರಿಗೆ ಗೊತ್ತು. ಪ್ರಜಾತಂತ್ರದ ಮೌಲ್ಯಗಳಿಗಾಗಿ ಜೈಲಿಗೆ ಹೋದವರ ಬುದ್ಧಿ ಮತ್ತೆ ವಿಚಾರ ಏತಕ್ಕೆ ಎದಲಾಯಿತು, ಎಂಬುದಕ್ಕೆ ನಾನು ಆಶ್ಚರ್ಯಪಡುತ್ತಿದ್ದೇನೆ. ಇಲ್ಲಿ ಎಲ್ಲಾ ಸ್ಪಷ್ಟವಾಗಿದೆ. ಕಾನೂನು ಸ್ಪಷ್ಟವಾಗಿದೆ. ಯಾರೋ ಮಾತನಾಡುತ್ತಾ ಸಿ. ಓ. ಡಿ. ಓದಿ ಎಂದು ಹೇಳುತ್ತಿದ್ದರು. ಕೇಂದ್ರ ಸರ್ಕಾರ ಯಾವ್ಯಾವುದರ ಬಗ್ಗೆ ಉಲ್ಲಂಘನೆ ಆಗುತ್ತಿವೆ ಎಂಬುದರ ಬಗ್ಗೆ ವಿವರ ಕೊಟ್ಟಿಲ್ಲ. ಯಾವುದೇ ಕಾನೂನಿನಲ್ಲಿ ಆ ವಿವರ ಬರುವುದಿಲ್ಲ, ಮತ್ತೆ ಸರ್ಕಾರಗಳು ಎಲ್ಲಾ ವಿವರಗಳು ಇರುವಂಥ ಡೈರೆಕ್ಷನ್ ಅನ್ನು ಎಲ್ಲ ಕಾನೂನುಗಳಿಗೆ ಸಂಬಂಧಪಟ್ಟಂತೆ ಕೊಡುವುದಿಲ್ಲ. ಆದರೆ ನನಗೆ ಗೊತ್ತಿರುವ ಕಾನೂನು ಪ್ರಕಾರ ಸಬ್ ಸೆಕ್ಷನ್ ೨ ಆಫ್ ಸೆಕ್ಷನ್ ೫ ರಲ್ಲಿ ಏನಿದೆ ಅಂದರೆ

"Occurrence of any public emergency or in the interest of public safety, the soverignity and integrity of India th security of the State, friendly relations with foreign States public order or for preventing excitement to the Commission of an offence."

ಇವು ಏನೇನು ಇವೆ ಇದರ ಬಗ್ಗೆ ಸುಪ್ರೀಂ ಕೋರ್ಟ್‌ನವರು ಅತ್ಯಂತ ಸ್ಪಷ್ಟವಾದಂಥ ಅಭಿಪ್ರಾಯಗಳನ್ನು ನಿರೂಪಿಸಿದ್ದಾರೆ. ಹಲವಾರು ಸಂದರ್ಭದಲ್ಲಿ ಅದನ್ನು ಇಲ್ಲಿ ಆಡಳಿತ ಮಾಡುವ ಅಂತಹ ಮುಖ್ಯಮಂತ್ರಿಯವರಾಗಲಿ ಅಥವಾ ಬೇರೆ ಸಚಿವರಾಗಲಿ, ಅವರ ಕೈ ಕೆಳಗೆ ಕೆಲಸ ಮಾಡುವ ಅಧಿಕಾರಿಯಾಗಲಿ ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ನಾವು ತಿಳಿದುಕೊಂಡಿರುವುದು. ಇದರಲ್ಲಿ ಸ್ಪಷ್ಟವಾಗಿದೆ. ಯಾರು ಹೆಸರುಗಳ ಪಟ್ಟಿಯಿಂದ ಹೆಸರನ್ನು ತೆಗೆಯುವವರ ಮತ್ತೆ ಹೆಚ್ಚಿಗೆ ಹೆಸರನ್ನು ಸೇರಿಸುವವರು ಹಾಗೂ ಯಾವ ರೀತಿ ಸೇರಿಸಬಹುದು ಎಂಬುದರ ಬಗೆ ಪ್ರೊಸಿಜರ್ ಇದರಲ್ಲಿ ಇದೆ.

It is lways done in consultation with & with the prior permi- of the Chief Minister ಅಂತ ಸ್ಪಷ್ಟವಾಗಿದೆ.

Even supposing that the authorised authority has done it without even discussing with the Chief Minister, it implies that he has taken the consult. He has consulted the Chief Minister & he has taken the prior consent of the Chief Minister. That is the construction.

ಈಗ ಸಿ. ನೋಡು ಡಿ ನೋಡು ಎನ್ನುವುದಕ್ಕೆ ಬದಲು ನಾವು ಏತಕ್ಕೆ ಈ ಮಾತನ್ನು ಹೇಳುತ್ತೇವೆ ಅಂದರೆ ಈಗ ಚರ್ಚೆಯನ್ನು ನೋಡುತ್ತಾ, ನೋಡುತ್ತಾ ಮತ್ತೆ ಇವತ್ತು ಕಾನೂನು ವಿದ್ಯಾರ್ಥಿಯಾಗಿ ಇಲ್ಲಿ ಮಾತನಾಡುತ್ತಿದ್ದೇನೆ. ತಾವು ಕಾನೂನು ತಜ್ಞರಾದ್ದರಿಂದ ತಾವು ನನ್ನನ್ನು ಪೂರ್ತಿ ಅರ್ಥ ಮಾಡಿಕೊಂಡಿದ್ದೀರೆಂದು ತಿಳಿದುಕೊಂಡಿದ್ದೇನೆ. ನಮ್ಮ ವೀರಪ್ಪನ್ ಚರ್ಚೆಗೂ ಈ ಚರ್ಚೆಗೂ ಏನೂ ವ್ಯತ್ಯಾಸ ಇಲ್ಲ. ನಾವು ಚರ್ಚೆ ಮಾಡಿ ವೀರಪ್ಪನನ್ನು ಹಿಡಿದಿದ್ದಾಯಿತು. ಇದನ್ನು ಇವತ್ತು ಚರ್ಚೆ ಮಾಡಿ ನಾವು ಈ ಕದ್ದಾಲಿಕೆ ಮಾಡಿದವರನ್ನು ಅಷ್ಟೇ ಯಶಸ್ವಿಯಾಗಿ ಹಿಡಿಯುತ್ತೇವೆಯೋ ಎನ್ನುವ ಸಂಶಯ ನನಗೆ ಬಂದುಬಿಟ್ಟಿದೆ. ಆದಕಾರಣ ವಿರೋಧ ಪಕ್ಷದ ನಾಯಕರು ಮೂರು ಪರ್ಯಾಯ ಮಾರ್ಗಗಳನ್ನು ಸೂಚನೆ ಮಾಡಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಸತ್ಯಶೋಧನೆಗೆ ಒಂದು ವಿಧಾನವನ್ನು ಹೇಳಿದ್ದಾರೆ. ಶ್ರೀ ರಾಮಕೃಷ್ಣ ಹೆಗಡೆಯವರು ನಾನು ಮಾಡಿಲ್ಲವೆಂದರೆ ನಾವು ಚರ್ಚೆ ಮುಗಿಸಬಹುದು. ಮುಂದೆ ನಾವು ಏನು ಮಾಡಬಹುದೋ ಅದನ್ನು ಮಾಡಬಹುದು ಇಲ್ಲವೇ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಕಡತಗಳನ್ನು ಇಲ್ಲಿ ಇಡಬಹುದು ಇಲ್ಲವೇ ನ್ಯಾಯಾಂಗ ತನಿಖೆಯನ್ನು ಮಾಡಬಹುದು. ನಾನು ಒಂದು ಸಲಹೆ ಕೊಡುತ್ತೇನೆ. ಈ ಎರಡೂ ಸದನದ ಸದಸ್ಯರ ಜಂಟಿ ಸಮಿತಿಯನ್ನು ಮಾಡಿ ತನಿಖೆ ಮಾಡಬಹುದು. ಹೀಗೇನಾದರೂ ಒಂದು ಮಾಡೋಣ. ಏತಕ್ಕೆಂದರೆ ಇಲ್ಲಿ ಸನ್ಮಾನ್ಯ ಸಚಿವರಾದ ಶ್ರೀ ರಂಗನಾಥ್‌ರವರು ಹೇಳಿದ ಹಾಗೆ ಇನ್ನು ಮುಂದೆ ಈ ರೀತಿ ನಡೆಯಬಾರದು. ಏಕೆಂದರೆ ನಾವು ನನ್ನಂಥವರು ಇಲ್ಲಿ ಸ್ವಲ್ಪ ಕೆಲಸ ಮಾಡಬೇಕಾಗಿದೆ, ಒಳ್ಳೆಯ ಕೆಲಸ ಮಾಡುವುದಕ್ಕೆ ನಾವು ಹುಟ್ಟಿರುವುದು. ನಮ್ಮ ಫೋನನ್ನು ಕದ್ದು ಆಲಿಸುವಂತಹ ಒಂದು ವಾತಾವರಣದಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕಾಗುವುದಿಲ್ಲ. ಆ ಕಾರಣ ಅದಕ್ಕೆ ಅನುವು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ. ಜೀವರಾಜ ಆಳ್ವ.—ಜೂನ್ ೨೬ ರ ನೆನಪು ಆಯಿತು ನಾನು ಅವರ ಮುಂಚೂಣಿಯಲ್ಲಿದ್ದೆ ಎಂದು ಇವರು ಹೇಳಿದರು ಇವರು ವೀರಪ್ಪನ್ ತರಹ ಗಡಿ ಪಾರಾಗಿ ಯಾವ ಕಾಡಿನಲ್ಲಿದ್ದರು ? ಯಾವ ಫಾರೆಸ್ಟ್‌ನಲ್ಲಿದ್ದರೋ ಗೊತ್ತಿಲ್ಲ. ಇವರು ಯಾವ ಮುಂಚೂಣಿಯಲ್ಲಿಯೂ ಇವರು ಇರಲಿಲ್ಲ ಹಾಗಿದ್ದರೆ ಇವರು ಅರೆಸ್ಟ್ ಏಕೆ ಆಗಲಿಲ್ಲ ? ಇವರು ಮುಂಚೂಣಿಯಲ್ಲಿದ್ದರೆ: ಪ್ರಜಾಪ್ರಭುತ್ವದ ಪ್ರತಿಪಾದನೆ ಮಾಡುವಂತಹ ನಾಯಕರು ನೀವಾಗಿದ್ದರೆ ನ್ಯಾಯಾಂಗದ ಬಗ್ಗೆ ಮಾತನಾಡಲು ಹೋಗಬೇಡಿ. ಮಾನವತಾ ಹಕ್ಕುಗಳ ಬಗ್ಗೆ ಮಾತನಾಡುವಂತಹ ಧೈರ್ಯ ಮತ್ತು ಕೆಚ್ಚೆದೆ ತಮ್ಮಲ್ಲಿ ಇಲ್ಲ. ಆದರೂ ನ್ಯಾಯಾಂಗದ ಬಗ್ಗೆ ಮಾತನಾಡುತ್ತೀರಿ. Speak as luminary You don't talk for human rights It is totally misleading the startling ಎಂದು ಹೇಳುತ್ತೇನೆ.

ಪ್ರೊ|| ಎಂ. ಡಿ. ನಂಜುಂಡಸ್ವಾಮಿ.—ನಾನು ಮುಂಚೂಣಿಯಲ್ಲಿದ್ದೆ ಎಂದು ಹೇಳಲಿಲ್ಲ. ತಾವು ಬೇಕಾದರೆ ಕಡತ ತೆಗೆಸಿ ನೋಡಬಹುದು ನಾನು ಯಾವತ್ತೂ ನಾಯಕ ಎಂದು ಕರೆದುಕೊಂಡವನು ಅಲ್ಲ. ನಾನು ನಾಯಕನು ಅಲ್ಲ ನಾನು ನವ ನಿರ್ಮಾಣ ಚಳುವಳಿಯಲ್ಲಿ ಏನು ಕೆಲಸ ಮಾಡಿದೆ ಎಂದು ಇಲ್ಲಿ ಹೇಳಬೇಕಾಗಿಲ್ಲ.

ಅಧ್ಯಕ್ಷರು.—ಬಂಗಾರಪ್ಪನವರೇ ನೀವು ಯಾರಿಗೂ ಈಲ್ಡ್ ಆಗಬೇಡಿ. ನಿಮ್ಮ ಭಾಷಣವನ್ನು ಬೇಗ ಮುಗಿಸಬೇಕಾಗುತ್ತದೆ. ಏಕೆಂದರೆ ಚರ್ಚೆಯನ್ನು ೧೨ ಗಂಟೆಗೆ ಮುಗಿಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು. ಒಂದೇ ಒಂದು ಉತ್ತರ ಹೇಳಬೇಕಾಗುತ್ತದೆ. ಸಿಂಧ್ಯರವರು ಉಪನಾಯಕರಾಗಿ ಹೇಳಿದ್ದಕ್ಕೋಸ್ಕರ, ಅವರು ಮೂಲಭೂತ ಹಕ್ಕಿನ ವಿಚಾರದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ವಿಚಾರದಲ್ಲಿ ಮಾತನಾಡಿದಾಗ ಈ ರಾಷ್ಟ್ರದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಆದಾಗ, ನಮ್ಮನ್ನು ಜೈಲಿಗೆ ಹಾಕಿದಾಗ ಅಂಥ ವಿಚಾರ ಹೇಳಿದರಲ್ಲ ಅದಕ್ಕೆ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ನೀವೆಲ್ಲಾ ಪಾರ್ಲಿಮೆಂಟಿನಲ್ಲಿ ತೀರ್ಮಾನ ಮಾಡಿ ಆಯ್ಕೆಯಾದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಜೈಲಿಗೆ ಕಳುಹಿಸಿದರಲ್ಲ ಆಗ ನಿಮಗೆ ಏಕೆ ಈ ಹಕ್ಕಿನ ವಿಚಾರ ನೆನಪಿಗೆ ಬರಲಿಲ್ಲ? ಯಾರೇ ಆಗಲಿ: ಈ ರಾಷ್ಟ್ರದ ಪ್ರಧಾನ ಮಂತ್ರಿಯಾಗಿದ್ದವರನ್ನು ಫಾರ್ಲಿಮೆಂಟಿಗೆ ಆಯ್ಕೆಯಾದವ

ರನ್ನು ಬಹುಮತ ಇದೆ ಎಂದು ತೆಗೆದುಕೊಂಡು ಹೋಗಿ ಜೈಲಿಗೆ ಇಟ್ಟರಲ್ಲ. ಆಗ ಹಕ್ಕಿನ ಬಗ್ಗೆ ನಿಮ್ಮ ಚಿಂತನೆ ಎಲ್ಲಿ ಹೋಗಿತ್ತು ?

SRI D. B. CHANDRE GOWDA.—It is a decision of the Parliament. It should not go on the record.

MR. SPEAKER.—Are you questioning the decision taken by the Parliament ?

SRI S. BANGARAPPA.—No. Why should I question that ? It is not at all my intention I know my limits while speaking,

ನಾನು ಪಾರ್ಲಿಮೆಂಟ್ ಡಿಶಿದೆನ್ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ನನ್ನ ಪ್ರಶ್ನೆ ಇಷ್ಟೆ. ಬಹುಮತದ ಆಧಾರದ ಮೇಲೆ ಇಂದಿರಾಗಾಂಧಿಯವರನ್ನು ಜೈಲಿಗೆ ಕಳುಹಿಸಿದಿರಲ್ಲ ಆಗ ನಿಮಗೆ ಈ ಹಕ್ಕಿನ ವಿಚಾರ ಎಲ್ಲಿ ಹೋಗಿತ್ತು ? ಇದನ್ನು ರಾಜಕೀಯ ಚಿಂತನೆಯ ಆಧಾರದ ಮೇಲೆ ಹೇಳಿದರೆ ಪಾರ್ಲಿಮೆಂಟಿನ ಡಿಶಿಷನ್ ಅನ್ನು ಪ್ರಶ್ನೆ ಮಾಡಿದ ಹಾಗೆ ಆಗುತ್ತದೆಯೆ ? ಇಲ್ಲ, ಬಿಡಿ. ಈಗ ನಾನು ಟೆಲಿಗ್ರಾಫಿಕ್ ಆ್ಯಕ್ಟ್ ಪ್ರಕಾರ ಇರತಕ್ಕ ಕೆಲವು ಪಟ್ಟಿಗಳ ಬಗ್ಗೆ ಹೇಳುತ್ತಿದ್ದೆ. ರಾಜ್ಯಾಂಗದಲ್ಲಿರತಕ್ಕ ಮೂಲಭೂತ ಹಕ್ಕುಗಳಾದ ವ್ಯಕ್ತಿ ಸ್ವಾತಂತ್ರ್ಯ ಮಂತಾದ ಕಾನೂನಿನ ಚೌಕಟ್ಟಿನಲ್ಲಿ ಬರತಕ್ಕ ಅರ್ಥದ ವ್ಯಾಪ್ತಿಯ ಜೊತೆಯಲ್ಲಿ ಇಂಡಿಯನ್ ಟೆಲಿಗ್ರಾಫಿಕ್ ಆ್ಯಕ್ಟ್ ಪ್ರಕಾರ ಇರತಕ್ಕ ಕೆಲವು ವಿಷಯಗಳನ್ನು ನಮೂದು ಮಾಡಿದ್ದಾರೆ. ಒಬ್ಬ ವ್ಯಕ್ತಿ ಟೆಲಿಫೋನ್ ಇಂಟರ್‌ಸೆಕ್ಟ್ ಮಾಡಬಹುದು, ಕದ್ದಾಲಿಸಬಹುದು, ಹೇಗೆ ಆಲಿಸಬೇಕೆಂಬ ಪ್ರೊಸೀಜರಲ್ ಮ್ಯಾಟರ್‌ಗೆ ಹೋಗುವುದಿಲ್ಲ. ಇಂಟಲಿಜೆನ್ ಆಫೀಸರ್ಸ್ ಏನು ಮಾಡಬೇಕೆಂಬ ವಿಚಾರ ಪ್ರತ್ಯೇಕ. ಅಲ್ಲಿ ರಾಜಕೀಯ ಭದ್ರತೆಗೆ ಧಕ್ಕೆ ತರತಕ್ಕ ಒಬ್ಬ ವ್ಯಕ್ತಿ ಇರಬೇಕು ಜಮ್ಮು ಮತ್ತು ಕಾಶ್ಮೀರದ ವಿಚಾರ ಬಂದಾಗ ಟೆಲಿಫೋನ ಇಂಟರ್‌ಸೆಕ್ಟ್ ಮಾಡಲೇಬೇಕಾಗುತ್ತದೆ, ಇಲ್ಲದಿದ್ದರೆ ಯಾವ ಪಕ್ಷದವರಾಗಲಿ, ದೇಶವನ್ನು ನಡೆಸುವುದಕ್ಕಾಗುವುದಿಲ್ಲ. ಆರ್ಥಿಕ ಅಪರಾಧಿಗಳು ಇದ್ದರೆ, ದೇಶದ್ರೋಹಿಗಳು ಇದ್ದರೆ ಅಂಥವರ ಫೋನನ್ನು ಇಂಟರ್‌ಸೆಕ್ಟ್ ಮಾಡಬೇಕಾಗುತ್ತದೆ. ಇಕಾನಾಮಿಕ್ ಅಫೆಂಡರ್ಸ್ ಬೇಕಾದಷ್ಟು ಮಂದಿ ಇದ್ದಾರೆ. ರಾಷ್ಟ್ರದ ಸಾರ್ವಭೌಮತ್ವದ ಪ್ರಶ್ನೆ ಬಂದಾಗ, ಲಾ ಅಂಡ್ ಆರ್ಡರ್ ಪ್ರಶ್ನೆ ಬಂದಾಗ, ದೇಶದ ಹಿತಕ್ಕೆ ಧಕ್ಕೆ ಬಂದಾಗ ಅಂಥ ವ್ಯಕ್ತಿಗಳ ಟೆಲಿಫೋನ್ ನಂಬರ್ ತೆಗೆದುಕೊಂಡು ಟೆಸ್ಟ್ ಮಾಡಬಹುದು. ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಹೇಗೆ ಮಾಡಬೇಕೆಂಬ ವಿಚಾರದಲ್ಲಿ ಸಾಕಷ್ಟು ವಿಚಾರಧಾರೆಗಳು ಹರಿದು ಬಂದಿವೆ. ಈ ಕಡೆ ಆ ಕಡೆ ಎಲ್ಲಾ ಕಡೆಯಿಂದಲೂ ಬಂದಿವೆ. ಅಂದರೆ ಎರಡು ರೀತಿಯ ಪಟ್ಟಿಯನ್ನು ತಯಾರು ಮಾಡತಕ್ಕದ್ದು. ಒಂದು ಅಧಿಕಾರಿಗಳು under the provisions of the Indian Telegraph Act ಅವರೇ ಪಟ್ಟಿ ಮಾಡತಕ್ಕದ್ದು. ಪ್ರತಿಯೊಂದನ್ನೂ ಕೂಡ ಮುಖ್ಯಮಂತ್ರಿಗಳಾಗಲಿ ದೇಶದ ಪ್ರಧಾನ ಮಂತ್ರಿಗಳಾಗಲಿ, ಪ್ರಧಾನ ಮಂತ್ರಿಯವರ ವಿಚಾರ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. let me confine myself to the Chief Minister's Power only, ಅಷ್ಟಕ್ಕೆ ಕನ್‌ಫೈನ್ ಆಗಿ ಮಾತನಾಡುತ್ತೇನೆ ಇವತ್ತು ಅಧಿಕಾರಿಗಳು ಮುಖ್ಯಮಂತ್ರಿಗಳ ಅಪ್ಪಣೆ ಪಡೆದೇ ಯಾವುದೇ ರೀತಿಯ ಪಟ್ಟಿಯನ್ನು, ಟೆಲಿಫೋನ್ ನಂಬರ್‌ಗಳಿರುವ ಪಟ್ಟಿಯನ್ನು ತಯಾರು ಮಾಡಬೇಕು ಎಂಬ ಕಾನೂನು ಇಲ್ಲ. ಅಧಿಕಾರಿಗಳೇ ಅವರ ಗಮನಕ್ಕೆ ವಿಷಯಗಳು ಬಂದಾಗ ಯಾವ ಯಾವ ಟೆಲಿಫೋನ್ ಇಂಟರ್‌ಸೆಪ್ಟ್ ಮಾಡಬೇಕು ಎಂಬ ವಿಚಾರದಲ್ಲಿ ಪಟ್ಟಿ ಮಾಡಬಹುದು. without consulting the Chief Minister, without obtaining his prior permission of the Chief Minister ಮಾಡಬಹುದು. ಆ Existing ಲಿಸ್ಟ್‌ಗೆ ಯಾವುದೇ ನಂಬರ್‌ಗಳನ್ನು ಸೇರಿಸುವುದಿರಲಿ, ಕಿತ್ತುಹಾಕುವುದಿರಲಿ ಅಥವಾ ಅದರಿಂದ ಬಿಡುಗಡೆ ಮಾಡುವುದಿರಲಿ, ತೆಗೆದುಹಾಕುವುದಿರಲಿ, ಆಗ ಮಾತ್ರ ಮಾನ್ಯ ಮುಖ್ಯಮಂತ್ರಿಗಳ ಪಾತ್ರ ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೆ. This is all the point. ಕಾನೂನು ಪ್ರಕಾರ ಇರತಕ್ಕದ್ದು. ಹಾಗಾದರೆ ಇಲ್ಲಿ ೧೯೮೭–೮೮ ಇರಬಹುದು, ಆ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದ್ದರು. ತಮ್ಮ ಸರ್ಕಾರ ಇತ್ತು. ಅವರಿದ್ದರು. ಆ ಸಂದರ್ಭದಲ್ಲಿ ಅಡಿಷನ್ಸ್ ಅಥವಾ ಡಿಲಿಷನ್ ಆ ಎಗ್ಸಿಸ್ಟಿಂಗ್ ಲಿಸ್ಟ್‌ಗೆ ಒಂದು ವೇಳೆ ಆಗಿರತಕ್ಕದ್ದು ಎಲ್ಲಾದರೂ ಪುರಾವೆ ನಮಗೆ ಸ್ವಲ್ಪ ಕಂಡುಬಂದರೆ ಆಗ ನೇರವಾಗಿ ಹೊಣೆಗಾರಿಕೆ ಮುಖ್ಯಮಂತ್ರಿಗಳಾಗುತ್ತಾರೆ. ಇದನ್ನು ತಾವೂ ಒಪ್ಪುತ್ತೀರೆಂದು ಭಾವಿಸಿದ್ದೇನೆ. ಇಲ್ಲಿರತಕ್ಕ ಪ್ರಶ್ನೆ ಇಷ್ಟೆ. ನಾವು ಇದನ್ನು ಪತ್ತೆ ಹಚ್ಚುವುದು ಹೇಗೆ? ನೀವು ಕಡತಗಳನ್ನು ನೋಡಿದ್ದೀರಿ. ಕಡತದ ಬಗ್ಗೆ ಮಾತನಾಡಿದ್ದೀರಿ. ನಾನು ಅದಕ್ಕೆ ಹೋಗಿಲ್ಲ. ಇಲ್ಲಿ ಕಡತ ಅಲ್ಲ, ಕಡತ. ಅದೂ ಬಂದಿದೆ. ಈ ಸದನದಲ್ಲಿ ಅದು

ಪಾರ್ಲಿಮೆಂಟರಿ ವರ್ಡ್ ಎಂದು ಕೂಡ ನಮೂದಾಗಿದೆ. I still remember that. ಆ ಕಾಲದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು, ತಾವೇ ಅಧ್ಯಕ್ಷರಾಗಿದ್ದೀರಿ. ತಾವೇ ರೂಲಿಂಗ್ ಕೊಟ್ಟಿದ್ದೀರಿ. ಕಡಿತ ಎಂಬುದು...

ಅಧ್ಯಕ್ಷರು.—ಆ ರೂಲಿಂಗ್‌ಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸಂಬಂಧ ಇಲ್ಲ. ನಾನು ಆ ವಿಚಾರಕ್ಕೆ ಹೋಗುವುದಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದರು. ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಮೊಯಿಲಿ ಅವರಿದ್ದರು. ಆ ಸಂದರ್ಭದಲ್ಲಿ ನಿಮಗೆ ಕೆಳಗೆ ಕಡಿಯಬೇಕಾಗಿದೆಯೋ ಎಂದು ಹೇಳಿದಾಗ ನಾವು ಅಬ್ಜೆಕ್ಷನ್ ತೆಗೆದಾಗ ಇಲ್ಲ ಇಲ್ಲ ಅದು ಪಾರ್ಲಿಮೆಂಟರಿ ವರ್ಡ್ ಎಂದು ಹೇಳಿದ್ದು ದಾಖಲೆಯಲ್ಲಿದೆ. ನಾಳೆ ಉಪಯೋಗ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ಎಂದು ಹೇಳಿದ್ದೀರಿ. ನಾನು ಆ ವಿಚಾರಕ್ಕೆ ಹೋಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—Please Produce. ಅದನ್ನು ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ತೋರಿಸೋಣ. ಮೌಲ್ಯದ ಬಗ್ಗೆ ಮಾತನಾಡುವವರು ಪದಗಳ ಬಗ್ಗೆಯೂ ಕೂಡ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅದಿಲ್ಲ ಎಂದರೆ ನಾನು ತಲೆ ಬಾಗಿಸುತ್ತೇನೆ. ಅದಿದೆ. ನಾನು ಇಲ್ಲಿ ತೋರಿಸಿಕೊಡುತ್ತೇನೆ. ಅದರ ಬಗ್ಗೆ ಅರ್ಧ ದಿವಸ ಚರ್ಚೆಯಾಯಿತು.

ಅಧ್ಯಕ್ಷರು.—ಅದನ್ನು ಬಿಡಿ. ಸಬ್ಜೆಕ್ಟ್‌ಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಕಡತದ ಬಗ್ಗೆ ಗಮನ ಕೊಡೋಣ. ಮಾನ್ಯ ಸಭಾಧ್ಯಕ್ಷರೇ, ಅದು ಇದ್ದರೆ ತೋರಿಸಿ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅದರ ಬಗ್ಗೆಯೂ ಮುಂದೆ ಉತ್ತರ ಕೊಡುವಾಗ ಹೇಳುತ್ತಾರೆ. ನಾನು ಇವತ್ತು ಸಚಿವನಾಗಿರಬಹುದು. ಆದರೆ ನಾನು ಸದನದ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ಏಕೆಂದರೆ, ಅಗಿನ ಪಟ್ಟಿಯಲ್ಲಿ ಟೆಲಿಫೋನ್ ನಂಬರ್ ಸೇರಿಸಿದ್ದಾರಲ್ಲ. ಆ ಪಟ್ಟಿಯಲ್ಲಿ ನನ್ನ ನಂಬರ್ ಕೂಡ ಇದೆಯಲ್ಲ ಎಂಬ ವಿಚಾರ ಪಾರ್ಲಿಮೆಂಟಿನಲ್ಲಿ ಪ್ರಶ್ನೆಯಾದಾಗ, ನನ್ನದೊಬ್ಬನದೇ ಅಲ್ಲ, ಮಾನ್ಯ ಕೆ ಎಚ್ ಪಾಟೀಲ್ ಅವರದು, ಮಾನ್ಯ ಮೊಯಿಲಿ ಅವರದು, ಮಾನ್ಯ ರಂಗನಾಥ್ ಅವರದು, ಮಾನ್ಯ ದೇವೇಗೌಡರದು ಇನ್ನೂ ಅನೇಕ ಜನ ಸದಸ್ಯರದ್ದು ಇತ್ತು.

ಶ್ರೀ ಎಚ್. ಆರ್. ಶಿವರಾಮೇಗೌಡ.—ರಾಜಕೀಯ ವ್ಯಕ್ತಿಗಳದ್ದು ಎಲ್ಲರದ್ದು ಇತ್ತು.

ಶ್ರೀ ಎಸ್. ಬಂಗಾರಪ್ಪ.—ಅದು ಬದಲಾಗುತ್ತಲೇ ಇರುತ್ತದೆ. ರಾಜಕೀಯ ಬದಲಾವಣೆ ಆದ ಹಾಗೆ ಅಡಿಷನ್ಸ್ ಕೂಡ ಆಗುತ್ತಾ ಇರುತ್ತದೆ ಕಡು ವಿರೋಧಿಗಳದು, ಅವರು ಸ್ನೇಹಿತರಾದಾಗ ಡಿಲಿಷನ್ ಆಗುತ್ತಿರುತ್ತದೆ. ಪೊಲಿಟಿಕಲ್ ಕನ್‌ವೀನಿಯನ್ಸ್‌ಗೋಸ್ಕರ ತಮ್ಮ ರಾಜಕೀಯದ ಸ್ವಾರ್ಥಕ್ಕೋಸ್ಕರ ಸ್ಪಷ್ಟವಾಗಿ ಅಡಿಷನ್ಸ್, ಡಿಲಿಷನ್ಸ್ ನಡೆದಿದೆ. ಇದು ಕಾನೂನಿನ ಚೌಕಟ್ಟಿನಲ್ಲಿ ನಡೆದಿಲ್ಲ. ತಮ್ಮ ಅಧಿಕಾರದ ಗುರಿ ಏನು ಮುಟ್ಟಬೇಕಾಗಿತ್ತು, ಅದಕ್ಕೋಸ್ಕರ ಅಡಿಷನ್ಸ್ ಡಿಲಿಷನ್ಸ್ ಆಗುತ್ತಾ ಹೋಗಿತ್ತು. ಅದನ್ನೇ ಇವರಿ ನೇರವಾಗಿ ನಾನು ಅಫೆಕ್ಟೆಡ್ ಪಾರ್ಟಿಯಾಗಿ ನಾನು ಪ್ರಶ್ನೆ ಕೇಳುತ್ತೇನೆ because I have been the member of this August House ever since 1967. ನಾನು ಯಾವುದೇ ಒಂದು ಹಿರಿತನ ತೋರಿಸುವುದಕ್ಕೆ ನಾನು ಮಾತನಾಡುತ್ತಿಲ್ಲ ಕ್ಷಮಿಸಬೇಕು. ಅದರ ಅವಶ್ಯಕತೆ ನನಗೆ ಇಲ್ಲ, ಸುಮಾರು ೨೩ ವರ್ಷಗಳಿಂದ ಸತತವಾಗಿ ಬಿಟ್ಟೂ ಬಿಡದೆ ಈ ಸದನದ ಸದಸ್ಯನಾಗಿ ನಾನು ಬಂದಿದ್ದೇನೆ. ಯಾರೂ ಕೂಡ ಈ ರೀತಿ ಕದ್ದಾಲಿಕೆ ಮಾಡುವ ವಿಚಾರದಲ್ಲಿ, ಈ ಮಟ್ಟಕ್ಕೆ ಬಂದಿರಲಿಲ್ಲ.

ಎಷ್ಟೋ ಸಾರಿ ವಿರೋಧಮಾಡಿ ಚರ್ಚೆಯಲ್ಲಿ ಮಾತನಾಡಿರಬಹುದು ಜಗಳವಾಡಿದ್ದರೂ ಇರಬಹುದು. ಜಗಳವಾಡಿದ್ದೇವೆಂದು ಇಟ್ಟುಕೊಳ್ಳೋಣ ಹಾಗಿದ್ದರೂ ಕೂಡ ಇವತ್ತು ನಾನು ಕೇಳುತ್ತಿದ್ದೇನೆ. ನನ್ನ ಕಡು ವಿರೋಧಿ ನನ್ನ ಕ್ಷೇತ್ರದಲ್ಲಿ ಇದ್ದರೂ ಕೂಡ ನಾನು ಅವರಿಗೆ ತೊಂದರೆ ಕೊಡುವುದಕ್ಕೆ ಹೋಗಿಲ್ಲ ನೀವೇ ಒಂದು ಸಾರಿ ಈ ಪ್ರಶ್ನೆಯನ್ನು ಯಾವುದೋ ವಿಷಯದಲ್ಲಿ ಎತ್ತಿದಾಗ ಇದನ್ನು ವೆರಿಫೈ ಮಾಡುವುದಕ್ಕೋಸ್ಕರ ದಯಮಾಡಿ ನೀವೇ ಬನ್ನಿ, ಎಂಬುದಾಗಿ ವಿನಂತಿ ಮಾಡಿಕೊಂಡೆ. ಒಂದೆರಡು ತಿಂಗಳ ಮುಂಚೆ ಕೇಳಿದ್ದೇನೆ. ಅದೇ ಸಮಯದಲ್ಲಿ ಹಾಗೇನಾದರೂ ಇದ್ದಲ್ಲಿ ಅದಕ್ಕೆ ನಾನು ತಲೆಬಾಗುತ್ತೇನೆ ಎನ್ನುವಂತಹ ಮಾತನ್ನು ಕೂಡ ಆಡಿದ್ದೇನೆ. ಇಷ್ಟೊಂದು ನೀತಿಯನ್ನು ಇಟ್ಟುಕೊಂಡು ಬಂದಿರತಕ್ಕ ಜನರ ಪೈಕಿ ನಾನೂ ಒಬ್ಬ ಎಂಬ ನಂಬಿಕೆ ನನಗೆ ಮೊದಲು ಇರಬೇಕಾಗುತ್ತದೆ. ಅದನ್ನು ಇಟ್ಟುಕೊಂಡು ರಾಜಕಾರಣ ಮಾಡುತ್ತಿದ್ದೇನೆ. ನನಗೆ ಗೊತ್ತಿದೆ ಇವತ್ತು ಮಂತ್ರಿಯಾಗಿರ

ಬಹುದು. ಮುಖ್ಯಮಂತ್ರಿಗಿರಿಯನ್ನು ಬಿಟ್ಟುಕೊಟ್ಟು ಬಂದು ರಾಜಕಾರಣವನ್ನು ನಾನು ಮಾಡಿದ್ದೇನೆ. ಅದರ ಅವಶ್ಯಕತೆ ನನಗೆ ಇಲ್ಲ. ಮೌಲ್ಯಗಳ ಬಗ್ಗೆ ನಾನು ಮಾತನಾಡುವುದಾದರೆ, ಅದರ ಬಗ್ಗೆ ಯಾವುದೇ ಸಂದರ್ಭದಲ್ಲಿ ರಾಜಿ ಮಾಡಿಕೊಂಡಿಲ್ಲ. ಮೌಲ್ಯಗಳನ್ನು ಹಾಳುಮಾಡಿಕೊಂಡು ನಾವು ಯಾವುದೋ ಒಂದು ಗುರಿಯನ್ನು ಮುಟ್ಟುವುದಕ್ಕೋಸ್ಕರ, ಅದರ ಆವಶ್ಯಕತೆಯನ್ನು ಇಟ್ಟುಕೊಂಡು ರಾಜಕಾರಣವನ್ನು ಇವತ್ತಿಗೂ ಮಾಡುವುದಕ್ಕೆ ಹೋಗಿಲ್ಲ. ಒಂದು ವೇಳೆ ತಪ್ಪಾಗಿದ್ದರೆ ಪುನಃ ನಾನು ತಲೆಬಾಗುತ್ತೇನೆನ್ನುವ ಮಾತನ್ನು ಮತ್ತೊಂದು ಸಾರಿ ಸಭಾಧ್ಯಕ್ಷರ ಮೂಲಕ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ೭-೮ ಕಲಮುಗಳು ಇದ್ದಾವಲ್ಲಾ ಆ ಇಂಡಿಯನ್ ಟೆಲಿಫೋನ್ ಆಕ್ಟ್‌ನಲ್ಲಿ, ಯಾವ ದೇಶದ್ರೋಹಿ ನಾನು ? ಯಾವ ಪರದೇಶದ ಸ್ನೇಹವನ್ನು ಭಂಗ ಮಾಡುವುದಕ್ಕೆ ಹೋಗಿದ್ದೇನೆ ? ಯಾವ ದೇಶದ ಭದ್ರತೆಯನ್ನು ಹಾಳು ಮಾಡುವುದಕ್ಕೆ ಹೊರಟಿದ್ದೀನಿ ? ಯಾವ ಸಾರ್ವಭೌಮತ್ವವನ್ನು ಖಂಡನೆ ಮಾಡುವುದಕ್ಕೆ ನಾನು ಹೋಗಿದ್ದೇನೆ ? ಯಾವ ಆರ್ಥಿಕ ಅಪರಾಧವನ್ನು ಮಾಡಿದ್ದೇನೆ ನಾನು? ನನ್ನ ಬಗ್ಗೆ ನಾನೇ ಹೇಳುತ್ತಿದ್ದೇನೆ. ನನ್ನ ಟೆಲಿಫೋನ್ ನಂಬರ್ ಏಕೆ ಆ ಟೆಲಿಫೋನ್ ಪಟ್ಟಿಯಲ್ಲಿ ಹೋಯಿತು, ಏತಕ್ಕಾಗಿ ಇದನ್ನು ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಇದು ಯಾವುದೇ ಕಾನೂನು ಚೌಕಟ್ಟಿನಲ್ಲಿ ಬರುವುದಿಲ್ಲ. ಅದರ ಬದಲು ರಾಜಕೀಯದ ಸೇಡನ್ನು ತೀರಿಸುವುದಕ್ಕೋಸ್ಕರ ಈ ಇಂಡಿಯನ್ ಟೆಲಿಫೋನ್ ಆಕ್ಟನ್ನು ಉಪಯೋಗ ಮಾಡಿಕೊಂಡಿದ್ದಾರೆ.

ಇಷ್ಟೇ ಅಲ್ಲ. ಅದು ಯಾವ ಮಟ್ಟಕ್ಕೆ ಹೋಯಿತು ಎಂದರೆ ಈ ಸದನದ ಸದಸ್ಯರು ಯಾರು ಈಗ ಇಲ್ಲವೋ ಅವರ ಹೆಸರನ್ನು ಹೇಳತಕ್ಕಂತಹದ್ದು ನನಗೆ ಆಸಕ್ತಿ ಇಲ್ಲ. ಆದರೂ ಅವರ ಹೆಸರನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿಬಿಟ್ಟಿದ್ದಾರೆ. ಅದನ್ನೇ ಪುನಃ ಉಚ್ಚಾರ ಮಾಡುವಂತಹ ಪರಿಸ್ಥಿತಿ ಬಂದಿದೆ. ಶ್ರೀನಿವಾಸಪುರ ತಾಲ್ಲೂಕಿನ ಹಿಂದೆ ಈ ಮನೆಯ ಸದಸ್ಯರಾಗಿದ್ದಂತಹ ಶ್ರೀ ರಮೇಶ್ ಕುಮಾರ್ ಕ್ಷಮಿಸಬೇಕು. ಅದು ತಪ್ಪಾದರೆ ಶ್ರೀನಿವಾಸಪುರ ತಾಲ್ಲೂಕಿನ ಸದಸ್ಯರು ಅಂತ ತಿದ್ದಿಕೊಳ್ಳುತ್ತೇನೆ.

ಅಧ್ಯಕ್ಷರು.—ಹಿಂದಿನ ಸದಸ್ಯರು ಅಂತ ಹೇಳಿ ಸಾಕು.

ಶ್ರೀ ಎಸ್. ಬಂಗಾರಪ್ಪ.—ತಿದ್ದಿಕೊಳ್ಳುತ್ತೇನೆ. ಅವರು ಒಂದು ಟೇಪನ್ನು ಇಲ್ಲಿ ತೆಗೆದುಕೊಂಡು ಬಂದು ತೋರಿಸತಕ್ಕ ಪ್ರಯತ್ನ ಮಾಡಿದರು. ಎಲ್ಲರಿಗೂ ಅರ್ಥವಾಗಿದೆ ಇದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಿದ್ದರೆ ಹೇಳಬೇಕು. ಇಲ್ಲದಿದ್ದರೆ ತಮ್ಮ ಹೃದಯವನ್ನು ಮುಟ್ಟಿ ವಿಚಾರ ಮಾಡಿಕೊಳ್ಳಿ. ರಮೇಶ್ ಕುಮಾರ್‌ರವರ ಕೈಯಲ್ಲಿ ಹೇಗೆ ಹೋಯಿತು ? ಒಂದು ವೇಳೆ ಅದು ಏನಾದರೂ ನಡೆದಿದೆ ಎಂದಾದರೂ ಕೂಡ ಅದು ಅವರ ಕೈಯಲ್ಲಿ ಹೇಗೆ ಹೋಯಿತು ? ಇಷ್ಟೇ ನನ್ನ ಪ್ರಶ್ನೆ ಒಂದುವೇಳೆ ನಾನು ಶಿವಮೂರ್ತಿಯವರು ಅದರಲ್ಲಿ ಏನೋ ಮಾತನಾಡಿದ್ದೇವೆ.....

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಟೇಪಿನ ಸಂಬಂಧವಾಗಿ ಒಂದಷ್ಟು ದುಡ್ಡು ಇತ್ತು, ಅದು ಏನಾಯಿತು ?

ಶ್ರೀ ಎಸ್. ಬಂಗಾರಪ್ಪ.—ಆ ಕೇಸಿಗೂ ನನಗೂ ಸಂಬಂಧವಿಲ್ಲ. ಅದು ನನಗೆ ಗೊತ್ತಿಲ್ಲ. ಈ ವಿಚಾರದಲ್ಲಿ ಕನ್‌ಫ್ಯೂಸ್ ಮಾಡಿಕೊಳ್ಳುತ್ತಿದ್ದೀರಿ. ದುಡ್ಡಿನ ಕೇಸಿಗೂ ನನಗೂ ಸಂಬಂಧವಿಲ್ಲ ನಾನು ಮತ್ತು ಶ್ರೀಮಾನ್ ಶಿವಮೂರ್ತಿಯವರು ಏನೋ ಮಾತನಾಡಿದ್ದೇವೆಂದು ಟೆಲಿಫೋನ್ ಕದ್ದಾಲಿಕೆಯನ್ನು ಇವರು ಕೇಳಿದರು ಎನ್ನುವ ವಿಚಾರವನ್ನು ಕೇಳಿದ್ದೇನೆ. ಆ ಟೇಪನ್ನು ಕೇಳಿದ್ದರೂ ಕೂಡ ಒಂದು ವೇಳೆ ನಿಜವಾಗಿ ಏನೇ ಮಾತನಾಡಿದ್ದರೂ ನಾನು ಆ ರೀತಿ ಮಾತನಾಡಿಯೇ ಇಲ್ಲವೆಂದು ಆವಾಗಲೇ ಡಿನೇ ಮಾಡಿದ್ದೇನೆ. ಈಗಲೂ ಡಿನೇ ಮಾಡುತ್ತಿದ್ದೇನೆ. ಕುಚೋದ್ಯದಿಂದ ಮಾಡಿದ ಡ್ರಾಫ್ಟ್ ಅದು. ಈಗಲೂ ಅದೇ ಮಾತನ್ನು ಹೇಳುತ್ತೇನೆ. ಆದರೆ ಒಂದು ವೇಳೆ ಕೇಳಿದ್ದರೂ ಸಹ ಅಲ್ಲಿ ನಡೆದದ್ದು ಏನು ? ಪೇಪರ್‌ನಲ್ಲಿ ಸೇರಿಸಿ ಬರೆಸಿದ್ದೇನು ? ಬರೆಸಿಲ್ಲವೆ ? ಇದನ್ನು ಮಾತನಾಡಿದರು ಇದನ್ನು ಮಾತನಾಡಿದರು ಅಂತ ಬರೆಸಿಲ್ಲವೆ ? ಇಂಡಿಯನ್ ಟೆಲಿಫೋನ್ ಆಕ್ಟ್ ಪ್ರಕಾರ ಯಾವ ಕಲಮಿನ ಮೇಲೆ ಯಾವ ಅಪರಾಧದಲ್ಲಿ ಇದು ಬರುತ್ತದೆ. ಒಂದು ವೇಳೆ ನಿಜ ಇದ್ದರೂ ಕೂಡ ಯಾವ ಉದ್ದೇಶಕ್ಕಾಗಿ ರಮೇಶ್‌ಕುಮಾರ್‌ರವರು ಅಲ್ಲೆಲ್ಲೋ ಕುಳಿತುಕೊಳ್ಳುತ್ತಿದ್ದರು. ಆಮೇಲೆ ಅವರು ಈ ಕಡೆ ಬಂದರು ? ಹೇಗೆ ಹೋಯಿತು ಅದು ಅವರ ಕೈಗೆ ? ರಾಜಕೀಯ ದುರುದ್ದೇಶದಿಂದ ಟೇಪ್ ಪ್ರುಕಾರ್ ಮಾಡಿ, ಎಷ್ಟೋ ದಿವಸಗಳಿಂದ ರಾಜಕೀಯದಲ್ಲಿ ನಾವು ಕಳೆದಿದ್ದೇವೆ ಘನತೆ ಗೌರವಗಳಿಂದ ಬಂದಿದ್ದೇವೆ. ನಾವು ರಾಜಕೀಯ ಹಲವಾರು ಕಾರಣಗಳಿಂದ ಅವರನ್ನು ಅಟ್ಯಾಕ್ ಮಾಡಿರಬಹುದು. ವೈಯಕ್ತಿಕವಾಗಿ ಅಲ್ಲ. ನೀವು ಇಲ್ಲಿ ಮುಖ್ಯಮಂತ್ರಿಯಾಗಿದ್ದುಕೊಂಡು ಏನು ಹೇಳಿದ್ದೀರಿ

ನನ್ನನ್ನು ಬಿಟ್ಟಿಲ್ಲ. ನನ್ನ ಮಕ್ಕಳನ್ನು ಬಿಟ್ಟಿಲ್ಲ. ನನ್ನ ಮರಿ ಮಕ್ಕಳನ್ನು ಬಿಟ್ಟಿಲ್ಲ ಎನ್ನುವಂತಹ ಮಾತನ್ನು ಹೇಳಿದರು. ಆಗಲೇ ನಾನು ನಿಮ್ಮನ್ನು ಕುರಿತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರೆ. ಕ್ಷಮಿಸಬೇಕು. ರಾಜಕೀಯ ಪ್ರಸ್ತಾಪ ಬಂದಾಗ ನಾನು ಹೇಳಿದ್ದೇನೆಯೇ ಹೊರತು ವೈಯಕ್ತಿಕವಾಗಿ ಅಲ್ಲ ಅಂತ

ಅದು ಸಾರಾಯಿ ಬಾಟ್ಲಿಂಗ್ ವಿಚಾರ ಇರಬಹುದು, ರೆಕ್ಟಿಫೈಡ್ ಸ್ಪಿರಿಟ್ ವಿಚಾರ ಇರಬಹುದು, ಇವುಗಳಲ್ಲಿ ತಮಗೆ ಒಳ್ಳೆಯ ಸರ್ಟಿಫಿಕೇಟ್ ಸಿಕ್ಕಿರಬಹುದು ಅಥವಾ ಸಿಗದೇ ಇರಬಹುದು, ಸುಪ್ರೀಮ್ ಕೋರ್ಟ್ ವಿಚಾರದ ಬಗ್ಗೆ ನಾನು ಹೋಗುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಇದ್ದಾಗ, ವಿರೋಧ ಪಕ್ಷದ ನಾಯಕರಾಗಿದ್ದಾಗ, ವಿರೋಧಿ ಪಕ್ಷದ ಸದಸ್ಯರಾಗಿದ್ದಾಗ ನಾವು ಕೋಟಿಗಟ್ಟಲೆ ಹಣ ಸೋರಿ ಹೋಗುವ ಬಗ್ಗೆ ನಾವು ಮಾತನಾಡಿದ್ದೇವೆ. ಕಾನೂನು ವಿರುದ್ಧ ಟೆಂಡರ್ ಕರೆಯಂದೆ ಬರೀ ಸೆಲೆಕ್ಟೆಡ್ ಆ ಜನರಿಗೆ ಕೊಟ್ಟುಬಿಟ್ಟರೆ ತಪ್ಪಾಗುತ್ತದೆ ನಾನು ವಿವರಗಳಿಗೆ ಹೋಗುವುದಿಲ್ಲ. ನಾನು ಹೇಳಿದ್ದೇನೆ. ರಾಮಕೃಷ್ಣ ಹೆಗಡೆಯವರೇ ಇದು ನಿಮ್ಮ ವೈಯಕ್ತಿಕ ವಿಚಾರ ಅಲ್ಲ. ನೀವು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ನಿಮ್ಮ ಅಧಿಕಾರದಲ್ಲಿ ಇದೆಲ್ಲಾ ನಡೆದಿದೆ. ನೀವು ನಡೆದಿಲ್ಲ ಎಂದು ಹೇಳಿ ಎಂದು ಹೇಳಿದೆ. ನಾನೂ ಕೂಡಾ ಎಲ್ಲವನ್ನೂ ಆಧಾರ ಇಟ್ಟುಕೊಂಡು ಹೇಳುತ್ತಿದ್ದೇನೆ. ತೀರ್ಮಾನ ತೆಗೆದುಕೊಳ್ಳುವುದು ತಮಗೆ ಬಿಟ್ಟಿದ್ದು. ರಾಜ್ಯದ ಜನತೆಗೆ ಬಿಟ್ಟಿದ್ದು. ನ್ಯಾಯಾಲಯಕ್ಕೆ ಹೋದರೆ ಅದು ನ್ಯಾಯಾಲಯಕ್ಕೆ ಬಿಟ್ಟಿದ್ದು, ಆದರ ಮುಂದೆ ತಲೆ ಬಾಗಿಸೋದು ಪ್ರಜಾಪ್ರಭುತ್ವದ ಮೂಲ ಭೂತ ನೀತಿ, ತೀರ್ಪು ನಮಗೆ ವಿರೋಧವಾಗಿ ಬರಬಹುದು ಅಥವಾ ನಮ್ಮ ಪರವಾಗಿಯೂ ಬರುಬಹುದು ಅದು ಹೇಗೆಬಂದರೂ ನಾವು ಅದಕ್ಕೆ ತಲೆಬಾಗುತ್ತೇವೆ. ಅವತ್ತು ಇದು ನಿಮ್ಮ ವೈಯಕ್ತಿಕ ವಿಚಾರ ಅಲ್ಲ ಎಂದು ನಾನು ಹೇಳಿದೆ. ಆಗ ಟೇಪ್ ಹಗರಣದ ವಿಚಾರದಲ್ಲೂ ಕೂಡಾ ನಾನು ಹೇಳಿದ್ದೇನೆ ಆ ದಿನ ಸದನಕ್ಕೆ ಟೇಪು ತಂದು ಅದನ್ನು ಪ್ಲೇ ಮಾಡಬೇಕು ಎನ್ನುವ ಒತ್ತಡವನ್ನೂ ಕೂಡಾ ಮಾಡಿದರು. ಅವತ್ತು ತಮ್ಮ ವರ್ತನೆ ಏನಿತ್ತು ? ನಿಮ್ಮ ಪಕ್ಷದವರು ಹೌದು ರೆಕಾರ್ಡ್ ಪ್ಲೇ ಮಾಡಿ ಕೇಳೋಣ ಎನ್ನುವ ಧೋರಣೆ ! ನಿಮ್ಮ ಪಕ್ಷದವರಲ್ಲಿ ಇತ್ತು. ಒಂದುವೇಳೆ ಅದನ್ನು ಅವತ್ತು ಪ್ಲೇ ಮಾಡಿದ್ದರೆ, ನಾವು ಮಾತುಕತೆಮಾಡಿದ್ದು ನಿಜ ಎಂದರೆ I am posing a question- Does it come under the purview of this Indian Telegraphic Act ಸ್ವಲ್ಪ ವಿಚಾರಮಾಡಿ ಸತ್ಯ ಇದ್ದರೆ ಉತ್ತರ ಕೊಡಿ. ಸತ್ಯ ಇಲ್ಲದಿದ್ದರೆ ಅದು ಜನಕ್ಕೆ ಬಿಟ್ಟಿದ್ದು. ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನೀವು ಅವತ್ತು ನಮ್ಮ ಟೆಲಿಫೋನ್ ನಂಬರ್‌ನ್ನು ತೆಗೆದುಕೊಂಡು ಹೋಗಿ ಪಟ್ಟಿಯಲ್ಲಿ ಸೇರಿಸಿದ್ದು ನಾವು ಅಪರಾಧ ಮಾಡಿದ್ದಲ್ಲ. You have committed this grave mistake. Why should you not agree for this ? Fairly, you must agree that during your tenure as Chief Minister of Government of Karnataka· all these things happened. Not only this happened in this case, but in so many other matters...

Mr. Speaker.—We are confined only to the Telephone Tapping matter.

Sri S. Bangarappa.—I am sorry, if I have gone little away from the subject. I thank the Chair. I must say that you moved with swollen head. ಮಾನ್ಯ ಸಭಾಧ್ಯಕ್ಷರೇ, ಇದನ್ನು ನಾನು ಮನನೊಂದು ಮಾತನಾಡುತ್ತಿದ್ದೇನೆ. ವೈಯುಕ್ತಿಕವಾಗಿ ಈಗಲೂ ಕೂಡಾ ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ ದ್ವೇಷ ಇಲ್ಲ ಇವತ್ತು ಅದಕ್ಕೆ ಜಾಗ ಇಲ್ಲ ಪ್ರಜಾಪ್ರಭುತ್ವದಲ್ಲಿ ಇದನ್ನು ನಾವು ಕಾಯ್ದುಕೊಂಡು ಬರೋಣ ಆದರೆ ನೀವು ಆ ಸಂದರ್ಭದಲ್ಲಿ ಅಧಿಕಾರದಲ್ಲಿ ಇದ್ದಾಗ ಅಧಿಕಾರ ಸಂಪೂರ್ಣವಾಗಿ ನಿಮಗೆ ಏರಿತ್ತು ಯಾರದ್ದೇ ಮಾತನ್ನು ಕೇಳುವ ರೀತಿಯಲ್ಲಿ ಇರಲಿಲ್ಲ. ಬರೀ ಬಲಿ ತೆಗೆದುಕೊಳ್ಳತಕ್ಕ ಕೆಲಸವನ್ನು ಇಂಡಿಯನ್ ಟೆಲಿಫೋನ್ ಆಕ್ಟ್ ಪ್ರಕಾರ ನೀವು ಪ್ರಯತ್ನವನ್ನು ಮಾಡಿದಿರಿ ನಾನು ಇದನ್ನು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ನನ್ನ ಟೆಲಿಫೋನ್ ನಂಬರ್ ಹೇಗೆ ಹೋಯಿತು ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಬಂಗಾರಪ್ಪನವರೇ, we are not here for trying any other hon. Member of this House. We are dealing with the general discussion about the Telephone Tapping episode.

ಶ್ರೀ ಎಸ್. ಬಂಗಾರಪ್ಪ.—ನಾನು ಅಷ್ಟಕ್ಕೇ ಸೀಮಿತಗೊಳಿಸುತ್ತೇನೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ನನ್ನ ಟೆಲಿಫೋನ್ ನಂಬರ್ ಆ ಪಟ್ಟಿಯಲ್ಲಿ ಹೋದಾಗ You should have

taken all the possible care to see that it was immediately removed from the list. ಏಕೆ ತಾವು ಮಾಡಿಲ್ಲ. ತಮ್ಮ ಕಾಲದಲ್ಲಿ ಹೇಗೆ ನಡೆಯಿತು ? ಮತ್ತೊಂದು ವಿಚಾರ ಹೇಳುತ್ತೇನೆ.

ಈ ವಿಚಾರ ಈ ಸದನದಲ್ಲಿ ಬಂದಾಗ ಕೂಡ, ಟೇಪ್ ಮತ್ತೊಂದು ವಿಚಾರ ಬಂದಾಗ ಕೂಡ ಟೆಲಿಫೋನ್ ಟ್ಯಾಪಿಂಗ್ ವಿಚಾರ ಬಂದಾಗ ಕೂಡ, ಅದನ್ನು ತೆಗೆಯತಕ್ಕ ಪ್ರಯತ್ನಕ್ಕೂ ಕೂಡ ಇವರು ಹೋಗಲಿಲ್ಲ ಅದು ಹಾಗೆಯೇ ಇತ್ತು. ಇವರ ಅಧಿಕಾರ ಯಾವ ಮಟ್ಟಕ್ಕೆ ಹೋಗಿತ್ತೆಂದರೆ, ಇವರು ಏನು ತಿಳಿದುಕೊಂಡಿದ್ದರು ಅಂದರೆ ಅಧಿಕಾರದಲ್ಲಿ ನಾವು ಖಾಯಂ ಆಗಿ ಇರುತ್ತೇವೆ, ಗೋಡೆಗೆ ಗೂಟ ಹೊಡೆದುಕೊಂಡು ಇಲ್ಲೇ ಇರುತ್ತೇವೆಂದು ತಿಳಿದುಕೊಂಡಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದು ನಡೆಯುವುದಿಲ್ಲ ; ಎಂತೆಂತಹವರೋ ಏನೇನೋ ಆಗಿ ಈ ರಾಜ್ಯದಲ್ಲಿ ಹೊರಟು ಹೋಗಿದ್ದಾರೆ. ನಾನು ಶ್ರೀ ಹೆಗಡೆಯವರೇ, ಎಂದು ಹೇಳಿದೆ, ಆದರೆ ಇವರು ಕೇಳತಕ್ಕ ಮಟ್ಟದಲ್ಲಿ ಇರಲಿಲ್ಲ. ರಮೇಶ್‌ಕುಮಾರ್‌ರವರು ಇಲ್ಲಿ ತೋರಿಸಿದಂತಹ ಟೇಪ್‌ನಲ್ಲಿ ಏನು ಮಾಡಿದರೂ ಗೊತ್ತೆ ?

ಅಧ್ಯಕ್ಷರು :—ತಾವು ಟೆಲಿಫೋನ್ ಟ್ಯಾಪಿಂಗ್‌ಗೆ ಬನ್ನಿ. ಟೇಪ್ ಟ್ಯಾಪಿಂಗ್‌ಗೆ ಬೇರೆ ನೋಟೀಸ್ ಕೊಡಿ ; ಆಗ ಪ್ರಸ್ತಾಪ ಮಾಡೋಣ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ತಮ್ಮ ರಕ್ಷಣೆ ಮಾಡಿಕೊಳ್ಳತಕ್ಕ ಶಕ್ತಿಯಿಲ್ಲವೆಂದು ನೀವು ತಿಳಿದುಕೊಂಡಿದ್ದೀರಾ ? ಅವರು ಹೇಳುತ್ತಾರೆ ; ಆದ್ದರಿಂದ ಎದ್ದು ನಿಂತಿರತಕ್ಕ ಸದಸ್ಯರುಗಳೆಲ್ಲಾ ಕುಳಿತುಕೊಳ್ಳಿ ; ಅವರು ಹೇಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅರ್ಥದ ವ್ಯಾಪ್ತಿಗೆ ವಿಷಯವನ್ನು ಮಂಡಿಸುವ ವಿಚಾರದಲ್ಲಿ ವಿಫಲನಾಗಿದ್ದರೆ ಮತ್ತೊಮ್ಮೆ ತಮ್ಮ ಅನುಮತಿಯನ್ನು ಪಡೆದು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ, ಇನ್ನು ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ಹೇಳುವುದಾದರೆ, ಆ ಪಟ್ಟಿಯಲ್ಲಿ ನನ್ನ ಹೆಸರು ಏನು ಇದೆ. ಅದನ್ನು ಇಲ್ಲಿ ತಂದು ಇಡಿರಿ. ಏನು ಮಾಡಿದರೂ ಅಂದರೆ, ಏನಾದರೂ ಮಾಡಿ ನಮಗೆ ತೊಂದರೆ ಕೊಡಬೇಕು. because we were political rivals. Even now we are rivals. I stand by that statement. I said, 'afterall we are in different political parties' ಇರಬೇಕಾಗುತ್ತದೆ. ತೀರ್ಮಾನ ಮಾಡತಕ್ಕ ಜನ ಇದ್ದಾರೆ. ಏನು ಮಾಡಿದರೂ ಇವರು ; ಏನಾದರೂ ಮಾಡಿ ಇದೇ ಟೆಲಿಫೋನ್ ವಿಚಾರದಲ್ಲಿ ಟೇಪ್ ತಯಾರುಮಾಡಿ, ಜುಡಿಷಿಯಲ್ ಎನ್‌ಕ್ವಯರಿ ಮಾಡಿ ನನ್ನನ್ನು ಇತಿಶ್ರೀ ಮಾಡಬೇಕೆಂದು ಹೈಕೋರ್ಟ್‌ಗೆ ಬರೆದರು. ಹೈಕೋರ್ಟ್‌ಗೆ ಬರೆಯಲಿಲ್ಲವೆ ? ಪುಣ್ಯಕ್ಕೆ ಹೈಕೋರ್ಟ್‌ಗೆ ನಾನು ಅಭಿನಂದಿಸಬೇಕು. ನಮ್ಮಲ್ಲಿರತಕ್ಕ ನ್ಯಾಯಾಂಗ ಏನಿದೆ, ಆ ನ್ಯಾಯಾಂಗದ ಬಗ್ಗೆ ನಾವು ಅಪಾರವಾದ ಗೌರವವನ್ನು ಇಟ್ಟುಕೊಂಡು ಬಂದಿದ್ದೇವೆ. ನನ್ನ ಮೇಲಿರತಕ್ಕ ಕೇಸುಗಳನ್ನು ತೆಗೆದುಕೊಂಡು ಬಂದರು. ನಮ್ಮಲ್ಲಿರಬಹುದು, ಇವರಲ್ಲಿ ಇರಬಹುದು ಆ ಪ್ರಶ್ನೆ ಬೇರೆ. ಹೈಕೋರ್ಟ್‌ನವರು they wrote back saying that this ಟೇಪು ಟಾಪು ಇವೆಲ್ಲಾ ಎ ಬಿ ಸಿ ಡಿ, ಏನಿವೆ, ಇವಿಷ್ಟೂ ಸೆಕೆಂಡರಿ ಎವಿಡೆನ್ಸ್ ಇಂತಹವುಗಳ ಬಗ್ಗೆ ಸುಪ್ರೀಂಕೋರ್ಟಿನ ತೀರ್ಮಾನಗಳು ಬೇಕಾದಷ್ಟು ಇವೆ ; ಇವುಗಳಿಗೆ ಶಿ ಪೈಸೆ ಬೆಲೆಯಿಲ್ಲ ; ಆದ್ದರಿಂದ ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಬರೆದರು. ನೀವು ನಾಳೆ ಡಿಮ್ಯಾಂಡ್ ಮಾಡಬಹುದು ಹಾಗೆ ಏನಿದ್ದರೂ, ಆ ರೆಕಾರ್ಡ್ ಇದ್ದರೆ ಇಲ್ಲಿ ತಂದು ಇಡಿ ಎಂದು. ನೀವು ಎದೆ ಮುಟ್ಟಿಕೊಂಡು ಹೇಳಿ, ಕರ್ನಾಟಕ ಹೈಕೋರ್ಟ್‌ಗೆ ಬರೆಯಲಿಲ್ಲವೆಂದು. ಕರ್ನಾಟಕ ಹೈಕೋರ್ಟ್‌ನವರು ಆ ವಿಚಾರವನ್ನು ಮುಂದುವರಿಸುವುದಿಲ್ಲವೆಂದು ಹೇಳಿದರು. ಅಂದರೆ ಯಾವರೀತಿಯಾಗಿ ತಮ್ಮ ವಿರೋಧಿಗಳನ್ನು

ಶ್ರೀ ಆರ್. ಎಲ್. ಜಾಲಪ್ಪ.—ಯಾವುದು ಹೇಳಬೇಕೋ ಅಷ್ಟು ಹೇಳಿರಿ, ಒಂದೇ ಕಡೆ ಹೋಗಬೇಡಿ. ಯಾವುದು ಹೇಳಬೇಕೋ ಅಷ್ಟನ್ನು ಹೇಳಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಬಂಗಾರಪ್ಪನವರು ಹೇಳಿದರು, ಒಂದು ನಿಮಿಷ ಕೇಳಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ. ಮಾನ್ಯ ಬಂಗಾರಪ್ಪನವರು ಜುಡಿಷಿಯಲ್ ಎನ್‌ಕ್ವಾಯರಿ ಬಗ್ಗೆ ಹೇಳುತ್ತಿದ್ದಾರೆ. ಯಾವುದರ ಬಗ್ಗೆ ಜುಡಿಷಿಯಲ್ ಎನ್‌ಕ್ವಾಯರಿ ಆಗಬೇಕೆಂದು ಸರ್ಕಾರದವರು ಬರೆದರು ಎಂದು ಕೇಳುತ್ತಿದ್ದೇನೆ ಅದನ್ನು ಅವರು ಕ್ಲಿಯರ್ ಮಾಡಲಿ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಒಂದು ನಿಮಿಷ. ಈ ಚರ್ಚೆಯ ಸಮಯ ಮತ್ತು ಚರ್ಚೆಮಾಡುವ ಸಮಯದಲ್ಲಾಗಲೀ ಯಾರಿಗೆ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುತ್ತೇನೆ ಅವರು ಮಾತನಾಡಲಿ ಯಾರಾದರೂ ಮಧ್ಯೆ ಇಂಟರೆಪ್ಟ್ ಮಾಡಬೇಕಾದರೆ ಸದಸ್ಯರು ಸಹಮತ ಕೊಟ್ಟರೆ ಈಲ್ಡ್ ಆದರೆ ಮಾತ್ರ ಅವಕಾಶ ಕೊಡುತ್ತೇನೆ. ಇದು ಬಂಗಾರಪ್ಪನವರಿಗೂ ಅನ್ವಯ ಚಂದ್ರೇಗೌಡರಿಗೂ ಅನ್ವಯವಾಗುತ್ತದೆ. ಯಾರಾದರೂ ಇಂಟರಪ್ಟ್ ಮಾಡಿದರೆ, ಸದಸ್ಯರು ವಾಗುತ್ತದೆ. ಈಲ್ಡ್ ಆದರೆ don't get me wrong.

ನಾನು ಹೇಳುತ್ತಿದ್ದೇನೆ ಅವರು ಈಲ್ಡ್ ಆದರೆ ಮಾತ್ರ ಅವರಿಗೆ ಅವಕಾಶ ಕೊಡುತ್ತೇನೆ. ಇಲ್ಲದಿದ್ದರೆ ಕೊಡುವುದಿಲ್ಲ. ಈಗ ಮಾನ್ಯ ದೇಶಪಾಂಡೆಯವರು ಎದ್ದಿದ್ದಾರೆ. ಮಾನ್ಯ ಬಂಗಾರಪ್ಪನವರು ಈಲ್ಡ್ ಆದರೆ ಅವರಿಗೆ ಅವಕಾಶ ಕೊಡುತ್ತೇನೆ ಇಲ್ಲದಿದ್ದರೆ ಕೊಡುವುದಿಲ್ಲ. ಅವರು ಈಲ್ಡ್ ಆಗಿದ್ದಾರೋ ಇಲ್ಲವೋ ಕೇಳಿ.

೧೧.೪೦ ಎ.ಎಂ.

I will not permit unless it is a point of order. Now, the floor is yours.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಬಂಗಾರಪ್ಪನವರು ಹೇಳಿದರು, ಸರ್ಕಾರದವರು ಅವರ ಮೇಲೆ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡಬೇಕೆಂದು ಕರ್ನಾಟಕದ ಉಚ್ಚನ್ಯಾಯಾಲಯಕ್ಕೆ ಬರೆದರು ಅಂತ. ಯಾವ ವಿಚಾರದಲ್ಲಿ ಬರೆದರು ? ಅದು ನಮಗೆ ಗೊತ್ತಾಗುತ್ತಿಲ್ಲ. ಅವರು ಸ್ಪಷ್ಟವಾಗಿ ಹೇಳಬೇಕು. ಯಾವಾಗ ಸರ್ಕಾರದವರು ಬರೆದರು, ಯಾವ ವಿಚಾರದಲ್ಲಿ ಬರೆದರು ? ಎಂದು ಸ್ಪಷ್ಟೀಕರಣ ಕೊಟ್ಟರೆ ನಮಗೂ ಸಹ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ಪುನಃ ಪುನಃ ಹೇಳುವುದಕ್ಕೆ ನನಗೆ ಇಚ್ಛೆ ಇಲ್ಲ. ಈಗಾಗಲೇ ನಾನು ಹೇಳಿದ್ದೇನೆ. ತಮಗೆ ಅರ್ಥವಾಗದಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಈಗಾಗಲೇ ಅದು ರೆಕಾರ್ಡಿನಲ್ಲಿದೆ. ಯಾವ ಟೇಪ್ ವಿಚಾರದಲ್ಲಿ ಶಾಸನಸಭೆಯಲ್ಲಿ ಪ್ರದರ್ಶನ ಮಾಡತಕ್ಕಂಥ ಪ್ರಯತ್ನ ಮಾಡಿದರೋ, ಅದೇ ವಿಚಾರದಲ್ಲಿ ಮತ್ತೊಂದು ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡಬೇಕು ಎನ್ನತಕ್ಕದ್ದು ಮತ್ತು ಅದರ ಜೊತೆಯಲ್ಲಿ ಬೇರೆ ವಿಚಾರ ಕೂಡ ಸೇರಿಸಿ ಕರ್ನಾಟಕ ಹೈಕೋರ್ಟಿಗೆಲ್ಲ ಬರೆದರು. ಅವರು ಹೇಳಲಿ ನಾವು ಬರೆದಿಲ್ಲ ಎಂದು. ಬಂಗಾರಪ್ಪನವರ ವಿಚಾರದಲ್ಲಿ ಅಥವಾ ಟ್ರೇಪ್ ವಿಚಾರದಲ್ಲಿ ಹೈಕೋರ್ಟಿಗೆ ಬರೆಯಲಿಲ್ಲ, ಜ್ಯೂಡಿಶಿಯಲ್ ಎನ್‌ಕ್ವೈರಿಗೆ ಒಬ್ಬ ಜಸ್ಟೀಸ್ ಸರ್ವೀಸ್ ಸ್ಪೇರ್ ಮಾಡಬೇಕೆಂದು ತಾವು ಬರೆದಿಲ್ಲ ಎಂದು ಅವರು ಹೇಳಲಿ. ತಮಗೆ ನಾನು ಆ ವಿಚಾರವನ್ನು ಅನಂತರ ಹೇಳುತ್ತೇನೆ, ಹೋಗಲಿ, ಯಾವುದಕ್ಕೂ ಬರೆದಿರಲಿಲ್ಲ ಅಂತ ಹೇಳಲಿ. ಜ್ಯೂಡಿಶಿಯಲ್ ಎನ್‌ಕ್ವೈರಿಗೆ ತಾವು ಬರೆದಿರಲಿಲ್ಲ ಎಂದು ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ಉತ್ತರದಲ್ಲಿ ಹೇಳಲಿ, ನಾನು ನಂತರ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಮೊನ್ನೆ ಅವರು ದೆಲ್ಲಿಯಲ್ಲಿ ಪತ್ರಿಕಾಗೋಷ್ಠಿ ಮಾಡಬೇಕಾದರೆ, ನಾಲ್ಕೈದು ದಿವಸಗಳ ಮುಂದೆ ಹೇಳಿಕೆ ಕೊಟ್ಟಿದ್ದಾರೆ. ಸಬಾರ್ಡಿನೇಟ್ ಲೆಜಿಸ್ಲೇಟಿವ್ ಕಮಿಟಿ ಮುಂದೆ ರಾಜ್ಯದ ಮುಖ್ಯಕಾರ್ಯದರ್ಶಿಯವರು ಅವರ ಒಂದು ಎವಿಡೆನ್ಸ್ ಏನು ಕೊಟ್ಟಿದ್ದಾರೆ. ಅದಕ್ಕೆ ಆಧಾರ ಇಲ್ಲ, ಮತ್ತೊಂದು ಇಲ್ಲ ಅಂತ ಅವರು ಹೇಳಲಿ. ಅದು ಅವರಿಗೆ ಬಿಟ್ಟಿರತಕ್ಕಂಥ ವಿಚಾರ. ಅದು ಏನು ಎಂದು ಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರ ಕೊಡುತ್ತಾರೆ. ಇಲ್ಲಿಗೆ ಮೊನ್ನೆ ಬಂದಮೇಲೆ, ಒಂದೆರಡು ದಿವಸ ಮುಂಚೆ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ೨೬-೬-೧೯೮೦ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ನನ್ನ ಮೇಲೆ ಒಂದು ಶಬ್ದವೂ ಇಲ್ಲವಲ್ಲ, ಯಾವ ಮಾತನ್ನು ಕೂಡ ಹೇಳಿಲ್ಲವಲ್ಲ, ಸಬಾರ್ಡಿನೇಟ್ ಲೆಜಿಸ್ಲೇಶನ್ ಕಮಿಟಿಯವರು ಒಂದು ಮಾತನ್ನೂ ಹೇಳಿಲ್ಲವಲ್ಲ ಎಂದು ಹೇಳಿದ್ದಾರೆ. ಇದು ಅವರಿಗೇ ಅರ್ಥವಾಗಬೇಕು. ಏಕೆಂದರೆ ನನಗೆ ಅರ್ಥವಾಗುವುದಿಲ್ಲ. ಮುಖ್ಯಮಂತ್ರಿಗಳ ಪರವಾನಿಗಿ ಇಲ್ಲದೆ

ಆಡಿಶನ್ ಅಥವಾ ಡಿಲಿಶನ್ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ವಿಚಾರ ಮುಖ್ಯ ಕಾರ್ಯದರ್ಶಿಯವರು ಆಗಿನವರು ಇರಬಹುದು, ಅಥವಾ ಈಗಿನವರು ಇರಬಹುದು, That is the procedure adopted under the provisions of the Indian Telegraphic Act. ಎನ್ನತಕ್ಕಂಥ ಮಾತು ಬಂದಮೇಲೆ we cannot take recourse to that situation. ಅದು ಮಾಡುವುದಕ್ಕೆ ಬರುವುದಿಲ್ಲ. ಹಿಂದೆಯೂ ಹೇಳಿದರು ಅವರು ನನ್ನ ಮೇಲೆ ಏನೂ ಹೇಳಿಲ್ಲ, ನನ್ನ ಮೇಲೆ ಏನೂ ಹೇಳಿಲ್ಲ ಎಂದು ಹೀಗೆ ಹೇಳುತ್ತಲೇ ಇರುತ್ತಾರೆ. ಅವರು ಬರೆಯುತ್ತಲೇ ಇರುತ್ತಾರೆ ಮಾನ್ಯ ಅಧ್ಯಕ್ಷರೇ, ಹಲವಾರು ಪ್ರಶ್ನೆಗಳಿಗೆ ....

SRI D. B. CHANDRE GOWDA.—Sir, I rise to a point of order. Again, we are going to the Report of the Committee and probably beyond the observation of the Committee. ನಾನು ಪತ್ರಿಕೆ ಓದಿರುವ ಹಾಗೆ ಕಮಿಟಿ ಅಬ್ಸರ್ವೇಶನ್ ನನ್ನ ಮೇಲೆ ಮಾಡಿಲ್ಲವೆಂದರೆ ಅದು ಸರಿಯೋ ತಪ್ಪೋ ಎಂದು ಕಮಿಟಿ ರಿಪೋರ್ಟ್ ನೋಡಬೇಕು, ಕಮಿಟಿ ರಿಪೋರ್ಟ್ ನೋಡಬೇಕು ಎಂದು ತೀರ್ಮಾನವಾದರೆ, ಪತ್ರಿಕಾ ಹೇಳಿಕೆಯೊಳಗೆ ಅವರು ಏನು ಹೇಳಿದ್ದಾರೆ ಎಂದರೆ......

ಅಧ್ಯಕ್ಷರು.—ಅದು ಬೇಡ ಬಿಡಿ.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರವಾಗಿ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನನ್ನ ಉತ್ತರ ಇಷ್ಟೇ. ನಾವು ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರಗಳ ಬಗ್ಗೆ ನಾವೂ ಕೋಟ್ ಮಾಡಿದ್ದೇವೆ, ನೀವೂ ಕೋಟ್ ಮಾಡಿದ್ದೀರಿ. ಇಷ್ಟು ವರ್ಷಗಳ ಅನುಭವದಲ್ಲಿ ಇಲ್ಲಿ ನೂರಾರು ಅಲ್ಲ ಸಾವಿರಾರು ಉದಾಹರಣೆಗಳು ಇವೆ. ಈ ಸದನ, ಆ ಸದನ, ಪಾರ್ಲಿಮೆಂಟ್‌ನಲ್ಲಿ ಬೇಕಾದಷ್ಟು ಇವೆ. ತಾವು ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡುವ ಹಾಗಿದ್ದರೆ......

ಅಧ್ಯಕ್ಷರು.—ರೂಲಿಂಗ್ ಏನೂ ಇಲ್ಲ. Please try to avoid any direct references to the proceedings of the Committee.

ಶ್ರೀ ಡಿ.ಬಿ. ಚಂದ್ರೇಗೌಡ.—ತಾವು ಸರಿಯಾಗಿ ಕೋಟ್ ಮಾಡಿ. Let it be on record.

ಶ್ರೀ ಎಸ್. ಬಂಗಾರಪ್ಪ.—ಸರಿಯಾಗಿಯೇ ಕೋಟ್ ಮಾಡುತ್ತೇನೆ. ನನ್ನ ಹತ್ತಿರ ಇದೆ. ಅದನ್ನು ಓದಿಬಿಡುತ್ತೇನೆ. ಇವರು ಯಾವ ಮಟ್ಟಕ್ಕೆ ಪತ್ರಿಕೆಗಳ ಬಗ್ಗೆ ಕೆಂಡ ಕಾರಿದ್ದಾರೆ ಎಂದರೆ 'ಈ ಪತ್ರಿಕೆಯವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ನನ್ನನ್ನು ಮುಗಿಸಬೇಕು ಅಂತಲೂ ತೀರ್ಮಾನ ಮಾಡಿದ್ದಾರೆ' ಎಂದೂ ಹೇಳಿಬಿಟ್ಟಿದ್ದಾರೆ. ಯಾವ ಪತ್ರಿಕೆಯನ್ನು ಬಳಸಿಕೊಂಡರೋ ಆಲ್ ಇಂಡಿಯಾ ಲೆವಲ್‌ಗೆ ನಿಮ್ಮ ಸ್ವಾರ್ಥಕ್ಕೋಸ್ಕರ ಈ ರಾಷ್ಟ್ರದಲ್ಲಿ, ಅದೇ ಪತ್ರಿಕೆಯವರು ಈಗ ನಿಮ್ಮ ಮೇಲೆ ತಿರುಗಿಬಿದ್ದಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಟೆಲಿಫೋನ್ ಹಗರಣ ವಿಚಾರದಲ್ಲಿ ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ, ನೀವು ಹೇಳಿಬಿಟ್ಟು ಇಲ್ಲಿ ನಮಗೂ ಟೆಲಿಫೋನ್‌ಗೂ ಸಂಬಂಧ ಇಲ್ಲ ಎಂದು ಹೇಳಿದರೆ ಹೇಗೆ ? ನೀವೇ ಓದಿ ಹೇಳಿ. ಟೆಲಿಫೋನ್ ಕದ್ದಾಲಿಕೆ ಪ್ರಕರಣ. ರಾಜಕೀಯ ಸನ್ಯಾಸ ಇಲ್ಲ ಶ್ರೀಮಾನ್ ಹೆಗಡೆಯವರು ಇದನ್ನು ನಾವೇನು ಹೊಸದಾಗಿ ಪ್ರಿಂಟ್ ಮಾಡಿಸಿದ್ದೇವೆಯೇ ? ಎಲ್ಲಾ ಪೇಪರಿನಲ್ಲೂ ಬಂದಿದೆ. ಅಲ್ಲಿ ಯಾವ ಯಾವ ಪದಗಳನ್ನು ಪ್ರಯೋಗ ಮಾಡಿದ್ದಾರೆಂದರೆ ಮಾನ್ಯ ಪತ್ರಿಕಾ ಮಿತ್ರರು ಪ್ರಶ್ನೆಗಳನ್ನು ಕೇಳಿದಾಗ, ಅನೇಕ ಸಂದರ್ಭಗಳಲ್ಲಿ ಕೆರಳಿದರು, ಕೆಂಡ ಕಾರಿದರು, ಅಸಮಾಧಾನಗೊಂಡರು, ವ್ಯಂಗ್ಯ ಮಾಡಿದರು...

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ......

(ಗೊಂದಲ)

ಡಾ॥ ಜೀವರಾಜ ಆಳ್ವ.—ಮಾನ್ಯ ಬಂಗಾರಪ್ಪನವರಿಗೆ ಹೆಗಡೆಯವರು obsession. ಏನಿದ್ದರೂ ಹೆಗಡೆಯವರೇ ಕಾಣುತ್ತಾರೆ, ಹೆಗಡೆ ವ್ಯಕ್ತಿತ್ವದ ಬಗ್ಗೆ, ಹೆಗಡೆ ರಾಜಕಾರಣದ ಬಗ್ಗೆ ಬೇಕಾದರೆ ೪ ದಿವಸ ಚರ್ಚೆ ಮಾಡೋಣ. ಅವರಿಗೆ ಬೇರೆ ಏನೂ ಕಾಣುವುದಿಲ್ಲ, ಹೆಗಡೆಯವರೇ ಕಾಣುವುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು ವಿಚಾರ. ಒಂದು ರೀತಿಯಿಂದ ಹೆಗಡೆಯುವರು ನನಗೆ ಕಾಣಬವುದಿದ್ದರೆ. ಮಾನ್ಯ ಆಳ್ವ ಅವರಿಗೆ ಹೆಗಡೆಯುವರು ಮತ್ತೊಂದು ರೀತಿಯಲ್ಲಿ ಕಾಣುತ್ತಿದ್ದಾರೆ. ಏಕೆಂದರೆ, ನೋಡತಕ್ಕ ದೃಷ್ಟಿಕೋನ ಬೇರೆ ಬೇರೆ.

ಶ್ರೀ ಆರ್. ಎಲ್. ಜಾಲಪ್ಪ.—ಬೇರೆ ಏನೂ ಸಿಕ್ಕಿಲ್ಲವೆಂದು, ಮಾನ್ಯ ಹೆಗಡೆಯುವರ ಮೇಲೆ ದ್ವೇಷ ಕಾರಿಕೊಂಡು ಕುಳಿತುಕೊಳ್ಳುವುದು ಯೋಗ್ಯರ ಲಕ್ಷಣ ಅಲ್ಲ. ಪೇಪರಿನವರಿಗೆ ಇದೆಲ್ಲಾ ಯಾವ ರೀತಿಯಾಗಿ ಗೊತ್ತಾಯಿತು.

ಶ್ರೀ ಎಸ್. ಬಂಗಾರಪ್ಪ.—ಜಾಲಪ್ಪನವರೇ ಯೋಗ್ಯರ ಲಕ್ಷಣ ಅಲ್ಲವೆಂಬ ಪದ ಪ್ರಯೋಗ ಮಾಡಬೇಡಿ. ನಾವು ಇಲ್ಲಿ ಬಹಳ ಸೆನ್ಸಿಟೀವ್ ಆಗಿ ಇದ್ದೇವೆ...

ಶ್ರೀ ಆರ್. ಎಲ್. ಜಾಲಪ್ಪ.—ನಾನು ನಿಮ್ಮನ್ನು ಅಯೋಗ್ಯರು ಎಂದು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಯೋಗ್ಯರ ಲಕ್ಷಣ ಅಲ್ಲ ಎಂದು ಹೇಳಿದರೆ ಏನರ್ಥ ?

ಶ್ರೀ ಆರ್. ಎಲ್. ಜಾಲಪ್ಪ.—ನಾನೇನು ನಿಮ್ಮನ್ನು ಅಯೋಗ್ಯರು ಎಂದು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಅದೇ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಯಾರು ಯೋಗ್ಯರು, ಯಾರು ಅಯೋಗ್ಯರು ಎಂಬ ವಿಚಾರವನ್ನೇ ಚರ್ಚೆ ಮಾಡುತ್ತಿದ್ದೇವೆ. ಅಯೋಗ್ಯರನ್ನು ಕೆಲವುಸಾರಿ ಏನಾದರೂ ಸಲೆಕ್ಟ್ ಮಾಡಿ. ಅಧಿಕಾರ ಸ್ಥಾನದಲ್ಲಿ ಕುಳ್ಳಿರಿಸಿದರೆ ಗತಿ ಏನಾಗುತ್ತದೆಂಬ ಪ್ರಿನ್ಸಿಪಲ್ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ನಾಟಕೀಯವಾಗಿ ಏನೋ ಹೇಳುತ್ತಿದ್ದಾರಲ್ಲ, ಇದರಿಂದ ಏನೂ ತೀರ್ಮಾನವಾಗುವುದಿಲ್ಲ. ಕೆಲವು ದಿವಸ ನಿಧಾನ ಮಾಡಿ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಇನ್ನೂ ಕೆಲವು ದಿವಸ ನಿಧಾನ ಮಾಡಿ. ಕೊಯಮತ್ತೂರಿನಲ್ಲಿ ಏನಾಯಿತು ಎಂಬುದನ್ನೂ ಹೇಳುತ್ತೇನೆ.

(ಗೊಂದಲ)

Mr. Speaker.—Nothing will go no record.

(INTERRUPTION)

Mr. Speaker.—I have already ruled.

(INTERRUPTION)

Mr. Speaker.—Mr. Kanade and Mr. Jalappa—I call you to order.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಜಾಲಪ್ಪನವರ ಬಗ್ಗೆ ನನಗೆ ಬಹಳ ಗೌರವ ಇದೆ...

(INTERRUPTION)

Sri R. V. Deshpande.—Mr. Speaker Sir......

Mr. Speaker.—Sri Chandregowda, I seek you protection now Mr. Deshpande has committed the same mistake which Mr. Kanade has committed. How am I concerned with what happened in Sirsi ? How is this House concerned right now about what happened in Coimbatore ? Nothing shall go no record. Neither Sirsi nor Coimbatore. Nothing shall go no record about the cross-conversation that took place between the two sides including the words used i.e., 'Yogya', 'Ayogya'.

ಶ್ರೀ ಎಸ್. ಬಂಗಾರಪ್ಪ.—ಇದೇ ಸಂದರ್ಭದಲ್ಲಿ ಯಾವ ಮಟ್ಟದಲ್ಲಿ ಈ ಸದನಕ್ಕೆ ಗೌರವ ಸಿಗುತ್ತದೆ ಎಂಬುದು ಮುಖ್ಯ. ಅವರು ಪುನಃ ಅದೇ ಸಂದರ್ಭದಲ್ಲಿ ಹೇಳತಕ್ಕಂಥ ಮಾತು ಎಂದರೆ "ಚರ್ಚೆಗೆ ಪ್ರಮುಖವಾದ ವಿಷಯ ಏನೂ ಇರಲಿಲ್ಲ ಎಂದು" ಕಾಣುತ್ತದೆ ಆದುದರಿಂದ ಈ ಬಗ್ಗೆ

ಚರ್ಚಿಸಲು ತೀರ್ಮಾನ ಮಾಡಿರಬಹುದೆಂದು ವ್ಯಂಗ್ಯವಾಗಿ ಹೇಳಿದರು'' ಇದೂ ಮಾನ್ಯ ರಾಮಕೃಷ್ಣ ಹೆಗಡೆಯವರು ನಮ್ಮ ಸದನದ ಬಗ್ಗೆ ಹೇಳಿರತಕ್ಕ ಮಾತು. ಇದರ ಬಗ್ಗೆ ಯಾರೋ ಒಬ್ಬ ಮಾನ್ಯ ಸದಸ್ಯರು ರಾಮಕೃಷ್ಣ ಹೆಗಡೆಯವರ ಬಗ್ಗೆ ಹಕ್ಕುಚ್ಯುತಿ ಸೂಚನೆಯನ್ನು ತಮ್ಮ ಗಮನಕ್ಕೋಸ್ಕರ ಕಳುಹಿಸಿದ್ದಾರೆ ಎಂದು ನನಗೆ ಗೊತ್ತಾಗಿದೆ. He has said something against the very dignity, honour, decorum and the business of this Hon'ble House. Can he do that ? ವ್ಯಂಗ್ಯವಾಗಿ ಹೇಳಿರತಕ್ಕಂಥ ವಿಚಾರ. ಇದನ್ನು ಮಾಡ ಬಹುದೇ ? ಟೆಲಿಫೋನ್ ಕದ್ದಾಲಿಕೆ ಚರ್ಚೆಗೆ ಬರತಕ್ಕಂಥ ವಿಚಾರದ ಬಗ್ಗೆ ಬೇರೆ ಏನೂ ಬಿಸಿನೆಸ್ ಇಲ್ಲ ಎಂದರೆ, ಡಿಮ್ಯಾಂಡ್ಸ್ ವಿನಿವೆ, ಅದಕ್ಕೆ ಘನತೆ ಗೌರವ ಇಲ್ಲವೇ, ನಿಯಮ ೩೩೪ ಇರಬಹುದು, ಬೇರೆ ಕಲಾಪದ ಪಟ್ಟಿಯಲ್ಲಿ ಇರತಕ್ಕ ಕಲಾಪಗಳು ಇರಬಹುದು, ಅದಕ್ಕೆ ಘನತೆ ಗೌರವ ಇಲ್ಲವೇ ? ಈ ರೀತಿ ಸದನದ ಕಾರ್ಯಕಲಾಪದ ಬಗ್ಗೆ ಇವರು ಎಷ್ಟು ಗೌರವ ಕೊಡುತ್ತಾರೆ ಎಂಬ ಬಗ್ಗೆ ನೋಡ ಬಹುದು, ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಭಾಷಣ ಮಾಡುತ್ತಾ, ಮಾತನಾಡುತ್ತಾ ಬಂದಿದ್ದೀರಿ. ಈ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ದೇಶದ ಜನ ಮುಂದೆ ಅರ್ಥ ಮಾಡಿ ಕೊಳ್ಳುತ್ತಾರೆ. ಎಷ್ಟು ಅರ್ಜೆಂಟ್ ಆಗಿ ಈ ಮಾತನ್ನು ನಿಲ್ಲಿಸುತ್ತೀರಿ ಅಷ್ಟು ಒಳ್ಳೆಯದು. ಹಿಡಿದುಕೊಳ್ಳುತ್ತೇವೆ ಎಂದರೆ ಹಿಡಿದುಕೊಳ್ಳಿ. ಇದರಿಂದ ಈಗಾಗಲೇ ಪೆಟ್ಟು ತಿಂದಿದ್ದೀರಿ, ಮತ್ತೆ ತಿಂದುಕೊಂಡು ಓಡಿ ಹೋಗುತ್ತೀರಿ. ನಮಗೇನೂ ಚಿಂತೆ ಇಲ್ಲ.

ಅಂತಿಮವಾಗಿ ನನ್ನ ಮಾತನ್ನು ಮುಗಿಸುವ ಹೊತ್ತಿಗೆ ನಾನು ಹೇಳತಕ್ಕ ಮಾತು ಇಷ್ಟೇ. ಇವತ್ತು ಅವರು ಯೋಜನಾ ಆಯೋಗದವರ ಉಪಾಧ್ಯಕ್ಷರಾಗಿದ್ದಾರೆ. ಅದರ ವ್ಯಾಪ್ತಿ ಬೇರೆ. ಈ ಸದನದ ಗೌರವಾನ್ವಿತ ಸದಸ್ಯರೂ ಆಗಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ಇಲ್ಲಿ ಇದ್ದಾರೆ ಬಹಳ ಸಂತೋಷ. ಆದರೆ ಸುಮಾರಾಗಿ ಇಂತಹವರ ಚರಿತ್ರೆ ರಾಜ್ಯದ ರಾಷ್ಟ್ರದ ಜನತೆಗೆ ಗೊತ್ತಾದ ಮೇಲೆ ಕೇಂದ್ರ ಸರಕಾರದವರೂ ಕೂಡಾ ವಿಚಾರ ಮಾಡಬೇಕಾಗಿತ್ತು. ಇಂತಹವರನ್ನು ಕೂಡಿಸಿದರೆ ಯೋಜನೆಯ ಗತಿ, ರಾಷ್ಟ್ರದ ಗತಿ, ಏನಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕಾಗಿತ್ತು. ಇಂತಹವರನ್ನು ಅಲ್ಲಿ ಕೂರಿಸಿದ ಮೇಲೆ ಬೇರೆ ಯೋಜನೆಗಳು ಅಲ್ಲಿ ಸ್ಟಾರ್ಟ್ ಆಗುತ್ತವೆ.

SRI D B. CHANDRE GOWDA.— This is casting aspersions on the Member.

SRI S. BANGARAPPA.— No.

(ಭಾರೀ ಗೊಂದಲ)

(ಮಾನ್ಯ ಸಭಾಧ್ಯಕ್ಷರು ಎದ್ದು ನಿಂತರು)

MR. SPEAKER.— Give me a chance. I am asking you to give me a chance.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ...

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ...

(ಗೊಂದಲ)

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ತಾವು...

ಶ್ರೀ ಎಸ್. ಬಂಗಾರಪ್ಪ.— ಎರಡು ಸೆಂಟೆನ್ಸ್ ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು.— ನಾನು ದಯವಿಟ್ಟು ತಮ್ಮಲ್ಲಿ ಪ್ರಾರ್ಥನೆ ಮಾಡತಕ್ಕದ್ದು ಏನು ಎಂದರೆ ತಾವು ಏನು ಯೋಜನಾ ಮಂಡಲಿಯ ಬಗ್ಗೆ ಹೇಳಿದ್ದೀರಿ, ಅದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.— ಏತಕ್ಕೆ, ಕ್ಷಮಿಸಬೇಕು, ಏತಕ್ಕೆ ವಾಪಸ್ ತೆಗೆದುಕೊಳ್ಳಬೇಕು ನಾನು ವಾಪಸ್ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

MR. SPEAKER.— Mr. Bangarappa, ಮಾನ್ಯ ಸದಸ್ಯರೊಬ್ಬರ ವಿಚಾರದಲ್ಲಿ, ನೀವು, ಅವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವುದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತಿದ್ದೀರಿ. ಆದರೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡತಕ್ಕದ್ದು ತಾವು ೨೩ ವರ್ಷದಿಂದ ಈ ಸದನದಲ್ಲಿರುವ ಅತ್ಯಂತ ಹಿರಿಯ ಸದಸ್ಯರಿಂದ್ದೀರಿ. ಆದುದರಿಂದ ಇನ್ನೊಬ್ಬರ ಮನಸ್ಸನ್ನು ನೋಯಿಸತಕ್ಕಂಥ ಮಾತುಗಳನ್ನು ಆಡಬಾರದು.

(ಗೊಂದಲ)

ಅಧ್ಯಕ್ಷರು.— ನಾನು ಬಂಗಾರಪ್ಪನವರ ಜೊತೆಯಲ್ಲಿ ಪ್ಲೀಡ್ ಮಾಡುತ್ತಿದ್ದೇನೆ. ಆದುದರಿಂದ ತಾವು ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ. ತಾವು ಯೋಚನೆ ಮಾಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ತಾವು ಮಾತನಾಡುವಾಗ ಆ ಪದ ನಮಗೆ ಪ್ರಯೋಗ ಮಾಡಬಾರದಾಗಿತ್ತು, ಆದರೂ ತಾವು ಆದೇಶ ಕೊಡತಕ್ಕಂಥ ಜಾಗದಲ್ಲಿ ಇರುವುದರಿಂದ ಅದನ್ನು ನಾವು ಪಾಲನೆ ಮಾಡುತ್ತೇವೆ. ಅದರಲ್ಲಿ ಏನೂ ಇಲ್ಲ...

ಅಧ್ಯಕ್ಷರು.— ಅದು ಆದೇಶ ಎಂದು ನಾನು ಹೇಳಲಿಲ್ಲ. ವಿನಂತಿ ಮಾಡಿಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ನನಗೆ ಗೊತ್ತು. ಹಾಗೆ ಅದರ ಜೊತೆಗೆ ತಮ್ಮಲ್ಲಿ ನನ್ನ ಒಂದು ವಿನಂತಿ. ಹೇಗೆ ನಮ್ಮ ಹಕ್ಕು ಬಾಧ್ಯತೆಗಳನ್ನು ಹರಣ ಮಾಡಿ ದಾರ್ಬಿನು ಹಾಕಿಕೊಂಡು ನೋಡಿ ನಮಗೆ ಎಷ್ಟು ತೊಂದರೆ ಕೊಟ್ಟರು; ನಿಮಗೇನು ಅನಿಸುತ್ತದೆ? ನೀವು ಇದನ್ನು ಮಾಡಿದ್ದು ತಪ್ಪು ಎನ್ನತಕ್ಕಂಥಾದ್ದನ್ನು ಹೇಳಿ ಅದಕ್ಕಾಗಿ ಕ್ಷಮೆ ಕೇಳಿ ಎಂದು ಒಂದು ಮಾತು ಅವರಿಗೆ ಒಂದು ಸಾರಿ ಅಂದು ಬಿಟ್ಟಿದ್ದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ—

(ಗೊಂದಲ)

ಶ್ರೀ ಡಿ ಬಿ. ಚಂದ್ರೇಗೌಡ.— ತಪ್ಪು ಮಾಡಿದ್ದಾರೆ ಎನ್ನುವ ನಿರ್ಧಾರಕ್ಕೆ ಬಂದಿದ್ದೀರಾ ನೀವು?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಆದರೂ ಕೂಡ ತಾವು ಹೇಳಿದ್ದೀರಿ. ನಿಜವಾಗಿ ಹೇಳಬೇಕೆಂದರೆ ಇದು ಕಾನೂನಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ತಾವು ಪ್ರಾರ್ಥನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ ತಾವು ಕೇಳತಕ್ಕಂಥ ಅವಶ್ಯಕತೆ ಇಲ್ಲ. ಆದರೆ ತಾವು ಒಂದು ಸಾರಿ ಹೇಳಿದ್ದನ್ನು ನಾವು ಅದಕ್ಕೆ ಗೌರವ ಕೊಟ್ಟು ಆ ಮಾತನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.— ಥ್ಯಾಂಕ್ಯೂ ವೆರಿ ಮಚ್.

ಶ್ರೀ ಎಸ್. ಬಂಗಾರಪ್ಪ.— ಈ ಸಂದರ್ಭದಲ್ಲಿ ನಾನು ಮಾತನಾಡತಕ್ಕಂಥ ವಿಚಾರ ಇಷ್ಟೇ. ಅಂತಹ ವ್ಯಕ್ತಿಗಳು ದೊಡ್ಡ ದೊಡ್ಡ ಸ್ಥಾನದಲ್ಲಿ ಇರಬಾರದು. ಅದು ದೇಶಕ್ಕೆ ಸಮಾಜಕ್ಕೆ ಒಳ್ಳೆಯದು ಅಲ್ಲ. ಯಾವುದೇ ಇರಬಹುದು. ಹಾಗೆ ಹೇಳಬೇಕು...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.— ಯಾರ್ಯಾರಿಗೆ ಏನೇನು ಸರ್ಟಿಫಿಕೇಟ್ ಬೇಕೋ ಅದು ಇವರಿಂದ ಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಚಂದ್ರೇಗೌಡರೇ ದಯಮಾಡಿ, ಸ್ವಲ್ಪ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾವು ಕೂಡ ಹಿರಿಯ ಸದಸ್ಯರು ಇದ್ದೀರಿ, ಅನುಭವಿ ಸದಸ್ಯರು ಇದ್ದೀರಿ. ನಾನು ಇವತ್ತು ನಿಮ್ಮ ಪಕ್ಷದವರಾದ ದೇವಿಲಾಲ್‌ರವರು ರಾಜೀನಾಮೆ ಕೊಡಿ ಎಂದು ಕೇಳಿದಹಾಗೆ ಶ್ರೀಮಾನ್ ಚೌಟಾಲರವರು ರಾಜೀನಾಮೆ ಕೊಡಿ ಎಂದು ಕೇಳಿದ ಹಾಗೆ ಮತ್ತು ಜನತಾ ದಳದ ಒಬ್ಬ ಜನರಲ್ ಸೆಕ್ರೆಟರಿ ರಾಜೀನಾಮೆ ಕೊಡಿ ಎಂದು ಕೇಳಿದಹಾಗೆ ರಾಜೀನಾಮೆ ಕೊಡಿ ಎನ್ನುವ ಮಾತನ್ನು ನಾನು ಆಡುವುದಿಲ್ಲ. ಅವರು ಬೇಕಾದರೆ ಕೇಳಿಕೊಳ್ಳಲಿ. ಅವರು ಕೇಳಿಕೊಂಡಿದ್ದಾರೆ ಅವರು ಏನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ನಾನು ಏತಕ್ಕೆ ಕೇಳುವುದಕ್ಕೆ ಹೋಗಲಿ ಇನ್ನು ಅನೇಕ ವಿಚಾರಗಳು ಇವೆ. ಆ ವಿಚಾರಗಳನ್ನು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಇಷ್ಟು ಹೇಳಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುವ ಮೊದಲು ಒಂದು ವಿನಂತಿಯನ್ನು ತಮ್ಮ ಮುಖಾಂತರ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಹಾಗೂ ಈ ಸದನದ ಮಾನ್ಯ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಅಧಿಕಾರಕ್ಕೆ ಏನಾದರೂ ರಾಷ್ಟ್ರದ ಜನತೆಯ ಆಶೀರ್ವಾದದಿಂದ ಬಹುಮತ ರೂಪದಲ್ಲಿ ನಿಮ್ಮ ಪಕ್ಷಕ್ಕೆ ಏನಾದರೂ ಬಂದರೆ ಮತ್ತೊಂದು ಸಾರಿ ನೀವು ಅಧಿಕಾರಕ್ಕೆ ಏನಾದರೂ ಹೋದರೆ, ದಯಮಾಡಿ ಇಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ ಎಂದು ವಿನಂತಿ ಮಾಡಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಬಹುಶಃ ಈ ಟೆಲಿಫೋನ್ ಕದ್ದಾಲಿಕೆಯ ಈ ಚರ್ಚೆಯಲ್ಲಿ ನನ್ನ ದೃಷ್ಟಿಯಲ್ಲಿ ನಿನ್ನೆ ಪತ್ರಿಕೆಗಳಲ್ಲಿ ಬಂದಂತಹ ವರದಿ ಹಾಗೂ ಈಗಿನ ಚರ್ಚೆ ನೋಡಿದಾಗ ಯಾವುದೋ ಒಂದು ಸತ್ಯಾಂಶ ಇದರಿಂದ ಹೊರಗಡೆ ಬರುತ್ತಿದೆ ಎಂದು ನನಗನಿಸುತ್ತವೆ. ಅದಕ್ಕಾಗಿ ನಾನು ಪ್ರಾರಂಭದಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡೆ, ಯಾವುದೋ ಒಬ್ಬ ವ್ಯಕ್ತಿಯ ತೇಜೋವಧೆ ಮಾಡತಕ್ಕಂಥ ಒಂದು ಪ್ರಯತ್ನ ಈ ಸಂದರ್ಭದಲ್ಲಿ ಮಾಡುವುದಕ್ಕೆ ನಾನು ಇಚ್ಛೆಪಡದೆ ಒಂದೇ ಒಂದು ವಿಷಯವನ್ನು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಜವಾಗಿಯೂ ಈ ಚರ್ಚೆಯಿಂದ ಸತ್ಯ ಹೊರಗಡೆ ಬರಬೇಕು, ಕಾನೂನು ಬಾಹಿರವಾಗಿ ಅವತ್ತು ಸರ್ಕಾರದಲ್ಲಿ ಇದ್ದಂಥ ಕ್ಯಾಬಿನೆಟ್ ಸಚಿವರ ಮಾತುಕತೆಗಳನ್ನು ಕದ್ದು ಕೇಳುವಂತಹ ಪ್ರಸಂಗ ಬಂದಂತಹ ಸಂದರ್ಭದಲ್ಲಿ ಯಾವುದೇ ಒಬ್ಬ ಉನ್ನತ ಅಧಿಕಾರಿ ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಗಳ ಆದೇಶ ಇಲ್ಲದೆ ಅಥವಾ ಬೇರೆ ಒಂದು ನಿಶ್ಚಿತವಾದ ಒಂದು ಆದೇಶ ಇಲ್ಲದೆ ಈ ರೀತಿ ಟೆಲಿಫೋನ್ ಟ್ಯಾಪಿಂಗ್ ಮಾಡಲು ಸಾಧ್ಯ ಇಲ್ಲ ಎನ್ನುವ ಒಂದು ನಂಬಿಕೆ ಇಟ್ಟುಕೊಂಡಿರತಕ್ಕಂಥ ವ್ಯಕ್ತಿ ನಾನು. ಈ ಚರ್ಚೆಯಿಂದ ಸತ್ಯಾಂಶ ಹೊರಗಡೆ ಬರಬೇಕು ಅಂದರೆ ನಾನು ಪ್ರಾರಂಭದಲ್ಲಿ ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಂಡೆ ಏನೆಂದರೆ ಅನೇಕ ಜನ ಮಾನ್ಯ ಸದಸ್ಯರು ಆ ಕಡೆ ಈ ಕಡೆ ಎಲ್ಲಾ ಸದಸ್ಯರು ಒತ್ತಾಯ ಮಾಡಿದ ರೂಪದಲ್ಲಿ ಯಾವ ವಿಷಯದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ, ಇದರ ಒಂದು ಸತ್ಯಾಂಶ ಹೊರಗಡೆ ಬರಬೇಕೆಂದು ಇದ್ದರೆ ಈ ಸದನದಲ್ಲಿ ಇದರ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಿ. ಅದು ಸಾಧ್ಯವಿಲ್ಲದಿದ್ದರೆ ಕೊನೆಯ ಪಕ್ಷ ಮಾನ್ಯ ಅಧ್ಯಕ್ಷರೇ ತಮ್ಮ ಕೊಠಡಿಯಲ್ಲಿ ಆ ಎಲ್ಲಾ ದಾಖಲೆಗಳನ್ನು ಇಟ್ಟು, ಎಲ್ಲಾ ಪ್ರಮುಖ ನಾಯಕರನ್ನು ಕರೆಸಿ ಅದನ್ನು ನೋಡಿದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಮಾತ್ರ ಸತ್ಯಾಂಶ ಹೊರಗೆ ಬರುತ್ತದೆ. ಇಲ್ಲದಿದ್ದರೆ ಸತ್ಯಾಂಶ ಹೊರಗೆ ಬರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಬಹುಶಃ ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಏನಾದರೂ ಸತ್ಯಾಂಶದ ಘಟನೆಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೊರ ಚೆಲ್ಲುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅವರು ಅದನ್ನು ಮಾಡಿದ ಮೇಲೆ ಏನಾದರೂ ಕ್ಲಾರಿಫಿಕೇಶನ್ಸ್ ಕೇಳಲು ನಾನು ಪ್ರಯತ್ನ ಮಾಡುತ್ತೇನೆ. ಈಗ ಇದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಈಗಲೂ ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಕಳೆದ ಒಂದೂವರೆ ದಿವಸದ ಚರ್ಚೆಯ ಒಂದು ಫಲಿತಾಂಶ ಈ ರಾಜ್ಯದಲ್ಲಿ ಏನು ನಡೆದಿದೆ ಎನ್ನುವುದನ್ನು ಜನತೆಗೆ ನಾವು ತಿಳಿಸಬಹುದು ಮತ್ತು ಇಡೀ ದೇಶದಲ್ಲಿ ಇವತ್ತು ಇದನ್ನು ಬಹಳ ಕುತೂಹಲಭರಿತವಾಗಿರತಕ್ಕಂಥ ಸಂದರ್ಭದಲ್ಲಿ ತಮಗೆ ಆ ಒಂದು ಅಧಿಕಾರ ಇದೆ. ಮಾನ್ಯ ಅಧ್ಯಕ್ಷರೇ ಹಿಂದೆ ಅನೇಕ ಸಂದರ್ಭಗಳಲ್ಲಿ ಅಧ್ಯಕ್ಷರ ಕೊಠಡಿಯಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ತರಿಸಿ ನೋಡಿದಂತಹ ಪ್ರಕರಣಗಳು ಇವೆ. ಆ ರೀತಿಯಲ್ಲಿ ಮಾಡತಕ್ಕಂಥಾದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಈ ಸದನದಲ್ಲಿ ನಿಯಮ ೬೮ರ ಅಡಿಯಲ್ಲಿ ಈ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ. ಮಾನ್ಯ ಸದಸ್ಯರುಗಳು ತಮ್ಮ ಅನುಭವದಿಂದ ಅನೇಕ ವಿಚಾರಗಳನ್ನು ಈ ಬಗ್ಗೆ ಮಾತನಾಡಿದ್ದಾರೆ. ಮತ್ತೆ ಮುಖ್ಯವಾಗಿ ಕೊನೆಯಲ್ಲಿ ಬರತಕ್ಕಂಥಾದ್ದು ಟೆಲಿಗ್ರಾಫ್ ಆಕ್ಟನ್ನು ಇನ್ನು ಮುಂದೆ ಅಮೆಂಡ್ ಮಾಡಬೇಕಾಗುತ್ತದೆ. ಇದರ ಬಗ್ಗೆ ರೂಲ್ಸನ್ನು ಫ್ರೇಮ್ ಮಾಡಬೇಕಾಗುತ್ತದೆ. ಈ ಟೆಲಿಫೋನ್ ಟ್ಯಾಪಿಂಗನ್ನು ಯಾರ ಮೇಲೆ ಮಾಡಬೇಕು, ಯಾರ ಮೇಲೆ ಮಾಡಬಾರದು ಎನ್ನುವ ಬಗ್ಗೆ ಕೂಡಾ ಚರ್ಚೆಯಾಗಿದೆ. ಟೆಲಿಗ್ರಾಫ್ ಆ್ಯಕ್ಟನ್ನು ಅಮೆಂಡ್ ಮಾಡುವುದಕ್ಕೆ ಈ ಸದನಕ್ಕೆ ಯಾವ ರೀತಿಯ ಅವಕಾಶ ಇಲ್ಲದಿದ್ದರೂ ಸಹಿತ ಅದನ್ನು ಅಮೆಂಡ್ ಮಾಡಬೇಕು ಎನ್ನುವುದರ ಬಗ್ಗೆ ಮಾತನಾಡಲಾಗಿದೆ. ಇವತ್ತು ನಾವು ಪ್ರಜಾಪ್ರಭುತ್ವ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ ಪ್ರಜಾಪ್ರಭುತ್ವ ಬಂದು ನಮಗೆ ೧೬೫ ವರ್ಷಗಳೇನೂ ಆಗಿಲ್ಲ, ಕೇವಲ ೪೩ ವರ್ಷ

ಗಳು ಮಾತ್ರ ಆಗಿದೆ. ಈ ದೃಷ್ಟಿಯಿಂದ ನಾವು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿ ಮಾನ್ಯ ಚುನಾಯಿತ ಸದಸ್ಯರುಗಳೆಲ್ಲಾ ಇವರ ಬಗ್ಗೆ ಮಾತನಾಡಿ ಜನ ಪ್ರತಿನಿಧಿಗಳಾದ ನಮಗೆ ಯಾವ ರೀತಿ ವ್ಯವಸ್ಥೆ ಇರಬೇಕೆಂದು ಚರ್ಚೆ ಮಾಡುವುದು ಸ್ವಾಗತಾರ್ಹವಾದುದು. ತಾವು ಸಂಸದೀಯ ವ್ಯವಹಾರಗಳನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿರತಕ್ಕವರು, ಅನುಭವಿ ರಾಜಕಾರಣಿಗಳು, ಈ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಒದಗಿಸಿಕೊಟ್ಟಿದ್ದೀರಿ. ಆದರೆ ಇವರ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡತಕ್ಕಂಥಾ ಸಂದರ್ಭದಲ್ಲಿ ಟೆಲಿಫೋನ್ ಟ್ಯಾಪಿಂಗ್. ಎಲ್ಲಾಗಿದೆ? ಏನಾಗಿದೆ? ಈ ಕಾನೂನಿನ ವ್ಯಾಪ್ತಿ ಬಿಟ್ಟು ಇದರ ಬಗ್ಗೆ ಯಾರೋ ಒಬ್ಬರು ಬಹಳ ದೊಡ್ಡ ತಪ್ಪು ಮಾಡಿದ್ದಾರೆ. ಅವರೂ ಈ ಸದನದ ಸದಸ್ಯರಾಗಿದ್ದಾರೆ ಅನ್ನುವ ಒಂದು ಪೂರ್ವಾಗ್ರಹಪೀಡಿತರಾಗಿ ನಿರ್ಧಾರಕ್ಕೆ ಬಂದು ಮಾತನಾಡಿದ ಹಾಗೆ ಕಾಣುತ್ತದೆ ನನಗೆ ಇದು ಬಹಳ ನೋವಾಗತಕ್ಕಂಥ ಮಾತು. ಯಾರು. ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಎರಡು ವರ್ಷದ ಹಿಂದೆ ಈ ದೇಶಕ್ಕೆ ನಾಯಕತ್ವವನ್ನು ನೀಡುವಂತ ಯೋಗ್ಯತೆ ಇರತಕ್ಕ ಮನುಷ್ಯ, ಈ ದೇಶದ ಮಹಾನಾಯಕರುಗಳಲ್ಲಿ ಒಬ್ಬರು ಎಂದು ಬೀದಿ ಭಾಷಣವನ್ನು ಮಾಡಿಕೊಂಡು ಬಂದಿದ್ದರೋ ಅವರೂ ಈ ಪಿತೂರಿಗೆ ಕಾರಣರಾಗಿದ್ದಾರೆ, ಅವರ ಹೆಸರನ್ನು ನಾನು ಹೇಳುವುದಿಲ್ಲ. ಅವರು ಈಗ ಈ ಸದನದ ಸದಸ್ಯರೂ ಅಲ್ಲ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇವತ್ತು ಬಹಳಷ್ಟು ಜನ ಸ್ವಾತಂತ್ರ್ಯದ ಮೌಲ್ಯಗಳ ಬಗ್ಗೆ ಮಾತನಾಡಿದರು, ಸ್ವಾತಂತ್ರ್ಯದ ಮೌಲ್ಯಗಳ ಅಪಹರಣ ಮಾಡಿದರು. ಮಾನಾಪಹರಣ ಮಾಡಿದರು, ನಮಗೆ ಸ್ವಾತಂತ್ರ್ಯವೇ ಇಲ್ಲ. ಸಂವಿಧಾನದ ಹಕ್ಕುಗಳನ್ನೇ ಇವರು ಮೊಟಕು ಮಾಡಿದ್ದಾರೆ ಎನ್ನುವ ಮಾತುಗಳನ್ನು ಹೇಳಿದರು, ಆದರೆ ನಾವು ಏನು ತಪ್ಪು ಮಾಡಿದ್ದೆವು? ೧೮ ತಿಂಗಳ ಕಾಲ ಯಾವುದೇ ತಪ್ಪನ್ನು ನಾವು ಮಾಡದೇ ಇದ್ದರೂ ನಮ್ಮನ್ನು ಜೈಲಿಗೆ ಹಾಕಿಸಿದರು. ನಾವು ಕಂಬಿಗಳನ್ನು ಎಣಿಸುವ ಹಾಗೆ ಮಾಡಿದರು. ಅದು ಯಾವ ತಪ್ಪಿಗೋಸ್ಕರ ನಮ್ಮನ್ನು ಜೈಲಿಗೆ ಕಳುಹಿಸಿದರು. ಯಾರು ಸ್ವಾತಂತ್ರ್ಯದ ಬಗ್ಗೆ ಅದರ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದಾರೋ ಆ ಜನ ಅವತ್ತು ಬಾಯನ್ನೇ ಬಿಟ್ಟಿರಲಿಲ್ಲ. ನಾನು ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ಈ ಮಾತನ್ನು ಹೇಳುವುದಿಲ್ಲ. ಏಕೆಂದರೆ, ಅವರು ಆ ಪಕ್ಷಕ್ಕೆ ಹೋಗಿ ಮುಖ್ಯಮಂತ್ರಿಗಳಾಗಿದ್ದಾರೆಂದು ಅವರ ಬಗ್ಗೆ ನಾನು ಚುಚ್ಚು ಮಾತಿನಿಂದ ಹೇಳುವುದಿಲ್ಲ, ಅವರ ಬಗ್ಗೆ ಅಪಾರವಾದ ಗೌರವ ಇದೆ. ಆದರೆ ಅವರು ಈ ಮೌಲ್ಯಗಳ ಬಗ್ಗೆ ಹೋರಾಟ ಮಾಡಿದರು. ಆದರೆ ಯಾರು ನಮ್ಮನ್ನು ಜೈಲಿಗೆ ಹಾಕಿಸಿ ಬೂಡ್ಸ್ ಕಾಲಿನಿಂದ ಒದೆಸಿದರು, ಅವರು ಇವತ್ತು ಸಹ ಮೌಲ್ಯಗಳ ಬಗ್ಗೆ ಮಾತನಾಡಲಿಕ್ಕೆ ಹೋಗಿದ್ದಾರೆ. ಅದು ಬಹಳದುಃಖವನ್ನು ನೋವನ್ನು ಮಾಡತಕ್ಕಂಥ ಪ್ರಶ್ನೆಯಾಗಿದೆ ಆ ಸಮಯದಲ್ಲಿ ಅನೇಕ ಜನ ಸತ್ತಿದ್ದಾರೆ. ಇವತ್ತು ಸ್ವಾತಂತ್ರ್ಯದ ಹೋರಾಟದ ಬಗ್ಗೆ ಮಾತನಾಡತಕ್ಕಂಥ ಜನ ಅವತ್ತು ಎಲ್ಲಿ ಇದ್ದರು?

ಶ್ರೀ ಬಿ. ಎಂ. ಇದಿನಬ್ಬ.—ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಮಾತನಾಡದೆ ಬೇರೆ ಮೌಲ್ಯದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ. ಆ ಸಮಯದಲ್ಲಿ ನೋವು ಮತ್ತು ಕಷ್ಟವನ್ನು ನಾನು ಅನುಭವಿಸಿದ್ದೇನೆ. ನನ್ನ ಸಂಸಾರದಿಂದ 18 ತಿಂಗಳ ಕಾಲ ಹೊರಗೆ ಇಟ್ಟಿದ್ದರು. ನಾಳೆ ಏನಾಗುತ್ತದೆಂದು ನಮಗೆ ಗೊತ್ತಾಗುತ್ತಿರಲಿಲ್ಲ, 14 ವರ್ಷ ವನವಾಸ ಮಾಡಬಹುದು ಆದರೆ ಇವರು ಕೊಟ್ಟಿರುವ ಕಷ್ಟವನ್ನು ಅನುಭವಿಸುವುದಕ್ಕಾಗಲಿಲ್ಲ. ನಾವು ಜೈಲಿನಲ್ಲಿದ್ದಾಗ ೪ ತಿಂಗಳಿಗೆ ಒಂದು ಸಲ ಗೃಹ ಕಾರ್ಯದರ್ಶಿಯವರು ಕಾಗದ ಕಳುಹಿಸುತ್ತಿದ್ದರು. ನಿಮ್ಮ ಡಿಟೆನ್‌ಷನ್‌ನ್ನು ರಿನ್ಯೂ ಮಾಡಲಾಗಿದೆಯೆಂದು ಇವೊತ್ತು ಯಾರು ಅಧಿಕಾರಿಗಳಾಗಿ ಸಲಾಮ್ ಹೊಡೆಯುತ್ತಾರೆ, ಅವರುಗಳು ನಮ್ಮನ್ನು ಬೂಟ್ಸ್ ಕಾಲಿನಲ್ಲಿ ಒದ್ದಿದ್ದಾರೆ. 48 ಗಂಟೆಗಳ ಕಾಲ ನಮಗೆ ಅನ್ನ ಆಹಾರ ಕೊಟ್ಟಿರಲಿಲ್ಲ.

ಇಂಥ ಕೃತ್ಯಗಳೆಲ್ಲಾ ನಮ್ಮ ದೇಶದಲ್ಲಿ ನಡೆದಿದೆ. ಅದಕ್ಕೋಸ್ಕರವಾಗಿ ಬಹಳ ನೋವಿನಿಂದ ಆ ಮಾತುಗಳನ್ನು ಇಲ್ಲಿ ತಮ್ಮ ಮುಂದೆ ಪ್ರಸ್ತಾಪ ಮಾಡುತ್ತಾ ಇದ್ದೇನೆಯೇ ಹೊರತು ಈ ಸದನದ ಅಮೂಲ್ಯ ವೇಳೆಯನ್ನು ಕಾಲಹರಣ ಮಾಡಬೇಕೆಂಬ ಉದ್ದೇಶದಿಂದ ಅಲ್ಲ. ಏತಕ್ಕಾಗಿ ನಾವು ಇಲ್ಲಿ ಟೆಲಿಫೋನ್ ಪ್ರಕರಣದ ಬಗ್ಗೆ ಚರ್ಚೆ ಮಾಡುತ್ತಿರುವುದು? ಈ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಹ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸ ಬೇಕು. ಅವನ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆ ಬರಬಾರದು ಎನ್ನುವ ದೃಷ್ಟಿಯಿಂದ ಚರ್ಚೆ ಮಾಡಲು ತಾವುಗಳು ಇಲ್ಲಿ ಅವಕಾಶ ಮಾಡಿ ಕೊಟ್ಟಿದ್ದೀರಿ. ಆದುದರಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಜೈಲಿನ ಕಂಬಿಗಳನ್ನು ನಾವು ಎಣಿಸಿದ್ದು, ಅದರ ಕಷ್ಟ ಮತ್ತು ನಮ್ಮ ಕಣ್ಣಲ್ಲಿ ರಕ್ತ ಸುರಿಸಿದ ನೋವನ್ನು ನಾನು ಇಲ್ಲಿ ಹೇಳ ಬೇಕಾಗಿದೆ. ಅದರ ಹಿಂದಿನ ಅರ್ಥ ಮತ್ತು ನೋವು ಕೆಲವರಿಗೆ ಅರ್ಥವಾಗಲಿಕ್ಕಿಲ್ಲ.

ಇವೊತ್ತು ಯಾರೂ ಕೂಡ ಟೆಲಿಫೋನ್ ಟ್ಯಾಪಿಂಗ್ ಆಗಿಲ್ಲ ಎಂದು ಹೇಳುವುದಿಲ್ಲ. ಹಾಗೆಂದು ಹೆಗ್ಡೆಯವರು ಹೇಳಿದ್ದಾರಾ? ಈಗ ಗುರುತರವಾದ ಆಪಾದನೆಗಳನ್ನು ಮಾಡುವುದಕ್ಕೆ ನೀವು ಸ್ವತಂತ್ರರು. ನಿಮ್ಮನ್ನು ಜನರು ಆಯ್ಕೆ ಮಾಡಿ ಕಳುಹಿಸಿದ್ದಾರೆ. ನೀವು ಆಡಳಿತ ನಡೆಸುತ್ತಿರುವವರು. ನಿಮ್ಮ ಮೇಲೆ ನನಗೆ ಸಿಟ್ಟಿಲ್ಲ. ನೀವು ಜನರ ಮುಂದಿಟ್ಟು ಪಕ್ಷದ ಪ್ರಣಾಳಿಕೆಯ ಪ್ರಕಾರ ಜನರು ನಿಮ್ಮನ್ನು ಆಯ್ಕೆ ಮಾಡಿದ್ದಾರೆ. ನೀವು ಮಾತನಾಡಬಹುದು ಆದರೆ ಯಾರು ಹೆಗ್ಡೆಯವರಿಂದ ತಿಂದು, ಉಂಡು, ಚೂರಿಯನ್ನು ಹಾಕಿದರು, ಯಾವ ಜನರು ರಾಷ್ಟ್ರಮಟ್ಟದಲ್ಲಿ ಪಿತೂರಿಯನ್ನು ಮಾಡಿದ್ದಾರೆ, ಅಂಥವರ ಬಗ್ಗೆ ನಮ್ಮ ನೋವು ......

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ನನಗೂ ಶ್ರೀ ಶಿವರಾಮೇಗೌಡರಿಗೂ ಆತ್ಮೀಯ ಸಂಬಂಧ ಇದೆ. ಅವರು ನನಗೆ ಬೇಕಾಗಿರತಕ್ಕಂಥ ಸ್ನೇಹಿತರ ಸಂಬಂಧಿ, ಅವರಿಗೆ ಹಿಂದೆ ಮತ್ತು ಮುಂದೆ ಏನೆಂಬುದು ಈ ವಿಚಾರದಲಿ ಗೊತ್ತಿಲ್ಲ. ಸುಮ್ಮನೆ ಮಾತನಾಡಬೇಕೆಂದು ಪ್ರಚಾರಕ್ಕೋಸ್ಕರವಾಗಿ ಮಾತನಾಡುತ್ತಾ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ತಾವುಗಳು ಶಿವರಾಮೇಗೌಡರ ಬಾಯಿಗೂ ನಿಮಗೂ ಸಂಬಂಧ ಇಟ್ಟುಕೊಳ್ಳ ಬೇಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವುಗಳು ತಪ್ಪುಗಳನ್ನೇನಾದರೂ ಮಾಡಿದರೆ ನಮ್ಮನ್ನು ಗಲ್ಲಿಗೆ ಹಾಕಿ. ನಿಮಗೆ ಜನರು ಅಧಿಕಾರವನ್ನು ಕೊಟ್ಟಿದ್ದಾರೆ. ಇಲ್ಲ ಎಂದು ನಾವು ಹೇಳುವುದಿಲ್ಲ. ನಾವುಗಳು ತಪ್ಪುಗಳನ್ನು ಮಾಡಿದ್ದಾದರೆ. ವಿಧಾನ ಸೌಧದ ಎದುರು ಇಲ್ಲವೇ ಹೈಕೋರ್ಟ್‌ನ ಎದುರು ನಮ್ಮನ್ನು ಹೆಗಡೆಯವರನ್ನು ಗಲ್ಲಿಗೆ ಹಾಕಿಬಿಡಿ? ಬೇಡ ಎಂದು ಹೇಳುತ್ತೇವೆಯೇ? ಆದರೆ ಅದನ್ನು ಮಾಡುವುದಿದ್ದರೆ ಕಾನೂನು ಪ್ರಕಾರವಾಗಿ ಮಾಡಿ ಸಂವಿಧಾನದ ಪ್ರಕಾರವಾಗಿ ಮಾಡಿ. ಕಾನೂನು ಪ್ರಕಾರ ಬೇಕಾದರೆ ಜೈಲಿಗೆ ಹಾಕಿ ಎಂದು ಹೇಳುತ್ತಾ ಇದ್ದೇವೆ. ಆದರೆ ನಾವು ಯಾರ ಆಸ್ತಿಯನ್ನೂ ಹೊಡೆಯುವುದಕ್ಕೆ ಖಂಡಿತಾ ಹೋಗಿಲ್ಲ. ಆದರೆ ಮಾನ್ಯ ಹೆಗಡೆಯವರಿಂದ ಸಂಪೂರ್ಣವಾಗಿ ರಾಜಕೀಯವಾಗಿ ಲಾಭವನ್ನು ಪಡೆದುಕೊಂಡಂತಹ ಆ ಜನರು ಇವೊತ್ತು ದೇಶದ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದಾರೆ. ಅನೇಕ ಸಲ ಹೆಗ್ಡೆಯವರು ಏನಾದರೂ ಈ ರಾಜ್ಯದಲ್ಲೇ ಇದ್ದು ರಾಜ್ಯಭಾರ ಮಾಡುತ್ತೇನೆ ಎಂದು ಹೇಳಿದ್ದಿದ್ದರೆ... ಈ ಹಂತದಲ್ಲಿ ನಾನು ಸಣ್ಣವನ್ನು ಹಿರಿಯರಿಗೆ ಹಿತನುಡಿಯಲಿಕ್ಕೆ ಮತ್ತು ಆ ಒಂದು ಸ್ಥಿತಿಯು ಬರುತ್ತಾ ಇರಲ್ಲಿಲ್ಲ. ಒಟ್ಟಿನಲ್ಲಿ ಇದು ದಕ್ಷಿಣ ಭಾರತದಿಂದ ಹೋಗ ತಕ್ಕಂಥ ಒಬ್ಬ ನಾಯಕನ ಮೇಲೆ ಆಗುತ್ತಿರುವ ಒಂದು ಪಿತೂರಿಯಾಗಿದೆ. ಇದೇ ರೀತಿಯ ಮಾನ್ಯ ಕಾಮರಾಜ್‌ರವರಿಗೂ ಆಯಿತು. ನಿಜಲಿಂಗಪ್ಪನವರಿಗೂ ಆಯಿತು. ದೇವರಾಜ್ ಅರಸ್‌ರವರಿಗೂ ಆಯಿತು. ಆ ಜನರು ನಮ್ಮವರಿಗೆ ಗೂಬೆ ಕೂರಿಸುವ ಕೆಲಸವನ್ನೂ ಮಾಡಿದರು. ದೆಹಲಿಯ ದರ್ಬಾರು ಯಾವ ರೀತಿಯಲ್ಲಿ ನಡೆಯುತ್ತದೆ ಎಂದು ಹೇಳಲು ನನಗೆ ಹೊಟ್ಟೆ ಉರಿಯುತ್ತದೆ. ಒಬ್ಬ ಅಧಿಕಾರಿಗೂ ಕೂಡ ಒಂದು ಸರಿಯಾದ ಹುದ್ದೆ ಅಲ್ಲಿ ದೊರಕುವುದಿಲ್ಲ. ದೆಹಲಿಗೆ ಹೋಗಿಬಂದ ತಮಗೆಲ್ಲರಿಗೂ ಆ ವಿಚಾರ ಗೊತ್ತೇ ಇದೆ. ತುಂಬಾ ನೋವಿನಿಂದ ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ಇವೊತ್ತು ಇಡೀ ದೇಶದಲ್ಲಿ ಈ ಟೆಲಿಫೋನ್ ಟ್ಯಾಪಿಂಗ್ ಪ್ರಕರಣದಿಂದಾಗಿ ಹೆಗ್ಡೆಯವರು ಏನೋ ಮಾಡಬಾರದ ತಪ್ಪನ್ನು ಮಾಡಿದ್ದಾರೆ, ಯಾರದ್ದೋ ಟೆಲಿಫೋನ್ ಕದ್ದು ಕೇಳಿದ್ದಾರೆ ಎಂಬ ರೀತಿಯಲ್ಲಿ ಪ್ರಚಾರ ಮಾಡಿ ಹೆಗ್ಡೆಯವರ ವ್ಯಕ್ತಿತ್ವಕ್ಕೆ ಮಸಿ ಬಳಿಯತಕ್ಕಂಥ, ಗೂಬೆ ಕೂರಿಸತಕ್ಕಂಥ ಒಂದು ತೀವ್ರ ಪ್ರಯತ್ನ ಈ ದೇಶದಲ್ಲಿ ನಡೆಯುತ್ತಾ ಇದೆ. ಅವರ ಚಾರಿತ್ರ್ಯವಧೆಗಾಗಿ ಪ್ರಯತ್ನ ನಡೆಯುತ್ತಿದೆ. ಆದರೆ ಹೆಗ್ಡೆಯವರು ಅಂಥ ಮಹಾ ಅಪರಾಧವೇನನ್ನೂ ಮಾಡಿಲ್ಲ.

೧೨—೧೦ ಪಿ. ಎಂ.

ಕಾನೂನನ್ನು ಅಷ್ಟೊಂದು ಚೆನ್ನಾಗಿ ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ಆದರೆ ನನಗೆ ಗೊತ್ತಿರುವ ಹಾಗೆ ಈ ಸಮಿತಿಯ ವರದಿಯನ್ನು ನಾವು ಚರ್ಚೆ ಮಾಡಬಾರದು? ಹಾಗೆಂದು ಕಾನೂನನ್ನು ಏಕೆ ಮಾಡಿದ್ದಾರೋ ಅರ್ಥವಾಗುತ್ತಿಲ್ಲ. ಏತಕ್ಕೆ ಚರ್ಚೆ ಮಾಡಬಾರದು? ಮಾಡಿದರೆ ತಪ್ಪೇನು? ಮನುಷ್ಯನ ಮನಸ್ಸು ಯಾವರೀತಿ ಇರುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಒಂದೇ ಒಂದು ತಿಂಗಳಿನಲ್ಲಿ ಮಾನ್ಯ ಹೆಗಡೆಯವರನ್ನು ಹಾಡಿಹೊಗಳಿದಂತಹ ಜನ ಇವತ್ತು ವೀರಪ್ಪನ್ ಮಟ್ಟದ ವ್ಯಕ್ತಿ ಎಂದು ಕರೆದಂತಹ ಉದಾಹರಣೆಗಳು ನಮ್ಮ ರಾಜ್ಯದಲ್ಲಿವೆ. ಆ ಸಮಿತಿಯ ವರದಿಯ ಮೆರಿಟ್ಸ್ ಮತ್ತು ಡೀ ಮೆರಿಟ್ಸ್ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ಆದರೆ ಆ ಸಮಿತಿ ಸದಸ್ಯರ ಪೂರ್ವೇತಿಹಾಸ ಏನಿದೆ ಎಂದು ನಾವು ತಿಳಿದುಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ಈ ಭಾಷಣವನ್ನು ನಿಮ್ಮ ಜನತಾದಳ ವರ್ಕರ್ಸ್ ಮುಂದೆ ಮಾಡಿದರೆ ಚೆನ್ನಾಗಿರುತ್ತದೆ. ಅವರು ಒಪ್ಪಿಕೊಳ್ಳುತ್ತಾರೆ, ಆದರೆ ಆ ಸಮಿತಿ ಸದಸ್ಯರ ಬಗ್ಗೆ ಮಾತನಾಡಲು ನಮಗೆ ಮತ್ತು ನಿಮಗೆ ಯಾವ ಅಧಿಕಾರವೂ ಇಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ನಾನು ೧೮ ತಿಂಗಳ ಕಾಲ ಜೈಲು ವಾಸವನ್ನು ಅನುಭವಿಸಿದ್ದರೂ ನಮ್ಮ ದೇಶದ ಸಂವಿಧಾನದ ಬಗ್ಗೆ ಪಾರ್ಲಿಮೆಂಟ್ ಬಗ್ಗೆ ರಾಜ್ಯಸಭೆ ಮತ್ತು ಅಸೆಂಬ್ಲಿ ಬಗ್ಗೆ ತಮ್ಮ ಬಗ್ಗೆ ಮುಂಬೈನಲ್ಲಿ ಆದ ವ್ಯವಹಾರಗಳನ್ನು ನೋಡಿದ ಮೇಲೂ ಸಹ ನ್ಯಾಯಾಂಗದ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ಆದರೆ ಏನಾಗುತ್ತದೆ ಎಂದರೆ ಇದರ ಹಿಂದೆ ಯಾವುದೋ ಕೈವಾಡ ಇದೆ ಎನಿಸುತ್ತದೆ. ಏಕೆಂದರೆ ಆ ಜನ ಡೆಲ್ಲಿಯಿಂದ ಬೆಂಗಳೂರಿಗೆ ಬರುತ್ತಾರೆ. ಈ ವಿಷಯ ಚರ್ಚೆಯಾಗುವಾಗ ಅವರು ವಿಧಾನ ಸೌಧದಲ್ಲಿಯೇ ಇರುತ್ತಾರೆ.

(ಗೊಂದಲ)

ಅಧ್ಯಕ್ಷರು.—ವರದಿ ಬಗ್ಗೆ ತಾವು ಪ್ರಸ್ತಾಪ ಮಾಡುತ್ತಾ ಇದರ ಹಿಂದೆ ಕೈವಾಡ ಇದೆ ಎಂದು ಹೇಳಿದ್ದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ವರದಿ ಅಲ್ಲ, ಈ ಪ್ರಕರಣದ ಹಿಂದೆ ಯಾವುದೋ ಒಂದು ಶಕ್ತಿಯಿದೆ ಎಂದು ನನಗಾದರೂ ಭಾಸವಾಗುತ್ತಿದೆ ಇಷ್ಟೆಲ್ಲ ಚರ್ಚೆಯಾಗಬೇಕಾದರೆ, ಇಷ್ಟೆಲ್ಲ ವರದಿ ಬರಬೇಕಾದರೆ, ಈಗ ಮಾನ್ಯ ಕಾನಡೆಯವರು ಈಗ ಇಲ್ಲ. ಅವರು ಯಾವುದೇ ವಿಚಾರ ಪ್ರಸ್ತಾಪ ಮಾಡಿದರು.

ಅಧ್ಯಕ್ಷರು.—ಕಾನಡೆಯವರು ಮಾತನಾಡಿದ್ದು ಕಡತಕ್ಕೆ ಹೋಗೇ ಇಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯಾ.—ನೀವು ಬೇಡ ಅಂದರೆ ನಾನು ಅದನ್ನು ಅಲ್ಲಿಗೇ ಬಿಟ್ಟುಬಿಡುತ್ತೇನೆ.

ಅಧ್ಯಕ್ಷರು.—ಅದು ಕಡತಕ್ಕೆ ಹೋಗಿಲ್ಲ. ಇನ್ನು ಬೇಡ ಅನ್ನುವ ಪ್ರಶ್ನೆ ಎಲ್ಲಿ ಬಂತು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಾನು ಈ ಚರ್ಚೆಯಿಂದ ತಿಳಿಯಬಯಸುವುದೇನೆಂದರೆ ಈ ಚರ್ಚೆಯಿಂದ ಏನೂ ಹೊರಗಡೆ ಬರುವುದಿಲ್ಲ. ಇದನ್ನು ಮತಕ್ಕೆ ಹಾಕುವುದಕ್ಕೆ ಬರುವುದಿಲ್ಲ ಹಾಗೂ ಇದರ ಬಗ್ಗೆ ಮೋಷನ್ ಯಾವುದೂ ಇಲ್ಲವೆಂದು ಹೇಳಿದ್ದೀರಿ; ಆದ್ದರಿಂದ ನನಗೂ ಸ್ವಲ್ಪ ಜ್ಞಾನೋದಯವಾದರೆ, ಹೂವಿನ ಜೊತೆ ನಾರು ಸೇರಿದರೆ ಸ್ವರ್ಗ ಎಂದು ಹೇಳುವ ಹಾಗೆ ನಾನೂ ಇದರ ಬಗ್ಗೆ ಸ್ವಲ್ಪ ತಿಳಿದುಕೊಂಡರೆ ಬಹಳ ಅನುಕೂಲವಾಗುತ್ತದೆ. ಅಧ್ಯಕ್ಷರೇ ತಾವೂ ಆ ಕಡೆ ಕೂತು ಕೆಲಸ ಮಾಡಿದ್ದೀರಿ. ೧೯೮೦ನೇ ಇಸವಿಯಿಂದ ಟೆಲಿಫೋನ್ ಟ್ಯಾಪ್ ಆಗುತ್ತಾ ಬಂದಿದೆ. ಅದೆಲ್ಲ ವರದಿಯಲ್ಲಿ ಇದೆ ಎಂದು ನಾನು ಹೇಳುತ್ತಿಲ್ಲ. ವರದಿ ಬಗ್ಗೆ ಚರ್ಚೆ ಮಾಡಲು ಹೋದರೆ ನನ್ನನ್ನು ರಾಜ್ಯ ಸಭೆಗೆ ಕರೆಸಬಹುದು, ಇದನ್ನು ಮಾನ್ಯ ಕಾನೂನು ಸಚಿವರೇ ಹೇಳಬೇಕು. ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆ ಎಂದು ನನ್ನನ್ನು ಮಾತ್ರ ಕರೆಸುವುದು. ಬೇರೆ ಯಾರೊಬ್ಬರನ್ನೂ ಕರೆಸುವುದಿಲ್ಲ ಇದರ ಹಿಂದೆ ಒಂದು ಪಿತೂರಿ ಇದೆ. ಒಂದು ಪ್ರಯತ್ನ ನಡೆಯುತ್ತಿದೆ. ಯಾವುದೋ ಕೆಲವು ಶಕ್ತಿಗಳು ಕೆಲಸ ಮಾಡುತ್ತಿದೆ. ಚೈನಾಕ್ಕೆ ಇವರು ಹೋಗುತ್ತಾರೆ ಎಂದರೆ ಅವರ ಹಿಂದೆಯೇ ಒಂದು ಭೂತ ಹೋಗುತ್ತದೆ. ಅವರು ಚೈನಾದಿಂದ ಬಂದ ತಕ್ಷಣವೇ ಇನ್ನೊಂದು ಭೂತ ಅಲ್ಲಿರುತ್ತದೆ. ಈ ಭೂತಗಳೆಲ್ಲಾ ಕಾದಿರುತ್ತವೆ. ಇಲ್ಲಿ ಯಾವ ಯಾವ ಸಂದರ್ಭದಲ್ಲಿ ಏನೇನು ಆಗಬೇಕು, ಈ ಸದನದ ಹೊರಗಡೆ ಕೆಲವು ಶಕ್ತಿಗಳು ಇವೆ. ಅವುಗಳು ಬಂದು ಕೆಲಸವನ್ನು ಮಾಡುತ್ತಿವೆ. ಇದು ಬಹಳ ದುಃಖದ ಸಂಗತಿ. ಪ್ರಜಾಪ್ರಭುತ್ವದ ದೃಷ್ಟಿಯಿಂದಾಗಿ ಇದು ಬಹಳ ದುಃಖದ ಸಂಗತಿ. ನನಗೆ ಗೊತ್ತಿರುವ ಹಾಗೆ ರಾಮಕೃಷ್ಣ ಹೆಗಡೆಯವರು ಅವರು ಯಾರ ಮೇಲೂ ವೈಯಕ್ತಿಕವಾದ ದ್ವೇಷವನ್ನು ಇಟ್ಟುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

(ಗೊಂದಲ)

ಶ್ರೀ ರಮಾನಾಥ ರೈ.—ಯಾರು ನಿಮ್ಮ ಪಕ್ಷದಲ್ಲಿರುವ ಭೂತಗಳೇ ? ಯಾರು ಎಂದು ಹೇಳಿಬಿಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಛೆ ಛೆ ಮಂಗಳೂರು ಭೂತಗಳಲ್ಲ.

ಒಬ್ಬ ಮಾನ್ಯ ಸದಸ್ಯರು.—ದೇವಿಲಾಲರ ಭೂತ ಇರಬಹುದ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಭೂತಕ್ಕೆ ಪಕ್ಷಗಳು ಇಲ್ಲ, ನಾನು ಏನು ಮಾಡಲಿ ?

ಶ್ರೀ ಎಂ. ವೀರಪ್ಪಮೊಯಿಲಿ.—ಆ ಭೂತ ಎಷ್ಟು ಗಾತ್ರದ್ದು ? ಎಷ್ಟು ತೂಕದ್ದು ಯಾವ ದಿಕ್ಕಿನಿಂದ ಭೂತಗಳು ಬಂದಿವೆ ? ಎಷ್ಟು ಎತ್ತರ ಇವೆಲ್ಲಾ ಭೂತದ ಬಗ್ಗೆ ಹೇಳಬೇಕು. ಇಷ್ಟೇ ಅಲ್ಲದೇ ಭೂತ ಇಲ್ಲಿಗೆ ಏತಕ್ಕೆ ಬಂದಿದೆ ಎಂದು ಗೊತ್ತಾಗಬೇಕು ? ಎಷ್ಟು ಅಗಲದ ಭೂತ ಇವೆಲ್ಲಾ ಗೊತ್ತಾಗಬೇಕು.

ಶ್ರೀ ಕೆ. ಲಕ್ಕಪ್ಪ.—ಭೂತ ಹರಿಯಾಣದ ಕಡೆಯಿಂದ ಬಂದಿರಬೇಕು.

ಅಧ್ಯಕ್ಷರು.—ಈ ಸಭೆಯಲ್ಲಿ ಯಾವುದು ಭೂತಗಳು ಇಲ್ಲ. ಸದಸ್ಯರನ್ನು ಬಿಟ್ಟು ನಮ್ಮ ಮಾರ್ಷಲ್‌ರವರೂ ಬೇರೆ ಭೂತಗಳನ್ನು ಆಚೆ ಇಟ್ಟಿರುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾರ್ಷಲ್ ಬಹಳ ಒಳ್ಳೆಯ ಜನ. ಅವರಿಗೆ ಭೂತಗಳನ್ನು ತಡೆಯುವ ಶಕ್ತಿ ಇಲ್ಲ. ಭೂತದ ಬಗ್ಗೆ ನಮ್ಮ ಮೊಯಿಲಿಯವರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಪಾಟೀಲ್ ನಾಗರಾಜ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತದ ಬಗ್ಗೆ ಬಹಳ ಪ್ರಾಮುಖ್ಯತೆ ಇದೆ. ಅಲ್ಲಿಂದ ಏನಾದರೂ ಬಂದಿರಬೇಕು.

ಅಧ್ಯಕ್ಷರು.—ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮ ಕಡೆಯಿಂದ ಅದನ್ನು ಸ್ವಲ್ಪ ಬೈಂದೂರಿನ ಕಡೆಗೆ ತಿರುಗಿಸಿಬಿಟ್ಟಿದ್ದೇವೆ. ಉತ್ತರ ಕನ್ನಡ ಜಿಲ್ಲೆಗೆ ರಾಣೆಯವರ ಊರಿಗೆ ಹೋಗಲಿ ಎಂದು ಕಳುಹಿಸಿದ್ದೇವೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ದಕ್ಷಿಣ ಕನ್ನಡ ಜಿಲ್ಲೆಯ ಭೂತಗಳ ಬಗ್ಗೆ ನಾನು ಈಗ ಪ್ರಸ್ತಾಪ ಮಾಡಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಶ್ರೀ ಕಾನಡೆಯವರು ಮಾತನಾಡಿದ ಮೇಲೆ ಭೂತಗಳೆಲ್ಲಾ ಆ ಕಡೆ ಹೋಗಿವೆ ಎಂದು ಗೊತ್ತಾದ ಹಾಗೆ ಆಯಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಭೂತಗಳು...

ಅಧ್ಯಕ್ಷರು.—ಭೂತಗಳ ಬಗ್ಗೆ ಮುಗಿಯಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಭೂತಗಳ ಕೆಲಸದ ಬಗ್ಗೆ ಇನ್ನೂ ಮುಗಿಯಲಿಲ್ಲ. ಇಲ್ಲಿ ಒಂದು ಶಕ್ತಿ ಇದೆ. ನಾನು ಕೆಲವು ವಿಷಯಗಳ ಬಗ್ಗೆ ಮಾತನಾಡತಕ್ಕಂಥದ್ದು ಇದೆ. ನಾನು ಸಹಿತ ರೂಲ್ ೬೯ರ ಕೆಳಗಡೆ ಒಂದು ನೋಟೀಸ್ ಕಳುಹಿಸುತ್ತೇನೆ. ದೇಶದಲ್ಲಿ ಸ್ವಾತಂತ್ರ್ಯ ಅಪಹರಣದ ಬಗ್ಗೆ ಮಾತನಾಡುತ್ತೇನೆ. ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ತಾವು ಕೂಡಾ ಒಪ್ಪಿದ್ದೀರಿ. ಆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ. ಅದನ್ನು ಬರೆದು ಕಳುಹಿಸುತ್ತೇನೆ.

ಅಧ್ಯಕ್ಷರು.—ನೋಟೀಸನ್ನು ಕಳುಹಿಸಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ಮುಖ್ಯವಾಗಿ ನನಗೆ ಬೇಕಾಗಿರತಕ್ಕಂಥ ವಿವರಣೆ ಏನೆಂದರೆ ಈ ಟೆಲಿಫೋನ್ ಟ್ಯಾಪಿಂಗ್ ೭೦ನೇ ಇಸವಿಯಿಂದಲೂ ನಡೆದುಕೊಂಡು ಬಂದಿದೆ. ನಾನೂ ಏನೋ ಅಪ್ಪಿತಪ್ಪಿ ೭೫ರಲ್ಲಿ ನಡೆದಿದೆ ಎಂದು ಅಂದುಕೊಂಡಿದ್ದೆ. ಆಗ ಎಮರ್ಜೆನ್ಸಿ ಇತ್ತು. ಆಗ ಅವರು ಕೇಳುವುದಕ್ಕೆ ಆಗುತ್ತಿರಲಿಲ್ಲ, ಏನೂ ಸಹ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆದರೆ ಇದು ೭೦ ರಿಂದಲೂ ನಡೆದಿದೆ. ಅದರ ಮೇಲೆ ಇದುವರೆಗೆ ಸತತವಾಗಿ ನಡೆದುಕೊಂಡು ಬಂದಿದೆ. ಅದರ ಹಿಂದೆ ಸಹಿತ ಆಗಿರತಕ್ಕಂಥದ್ದು. ಈ ಟ್ಯಾಪಿಂಗ್ ಆಗಿಲ್ಲ ಎನ್ನತಕ್ಕಂಥ ಪ್ರಶ್ನೆ ಏನೂ ಇಲ್ಲ. ಯಾರೆದು ಆಗಿದೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಈಗ ಪ್ರಶ್ನೆ ಏನಾಗಿದೆ ಎಂದು ಹೇಳಿದರೆ ಹೆಗಡೆಯವರು ನಾನೂ ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಅದಕ್ಕೋಸ್ಕರವಾಗಿ ನಾನು ಇದರ ಮಾರಲ್ ರೆಸ್ಪಾನ್ಸಿಬಿಲಿಟಿಯನ್ನು ತೆಗೆದುಕೊಂಡು ರಾಜೀನಾಮೆಯನ್ನು ಕೊಟ್ಟು ಹೋಗಿದ್ದೇನೆ ಎಂದು ಹೇಳಿದ್ದೇನೆ ದೊಡ್ಡ ತಪ್ಪಾಗಿದೆ. ಬಹುಶಃ ಅವರು ಆ ಸ್ಥಾನದಲ್ಲಿ ಯಾರು ಏನು ಹೇಳಿದರೂ ಸರಿ. ನಾನೂ ಅಲ್ಲಿಯೇ ಕುಳಿತುಕೊಳ್ಳುತ್ತೇನೆ ಎಂದು ಹೇಳಿ ತೀರ್ಮಾನವನ್ನು ಮಾಡಿದ್ದರೆ ನಮಗೆ ಈಸ್ಥಿತಿ ಬರುತ್ತಿರಲಿಲ್ಲ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ನಮಗೆ ಈ ಸ್ಥಿತಿ ಬರುತ್ತಿರಲಿಲ್ಲವೆಂದರೆ ಅವರಿಗೆ ಆ ಸ್ಥಿತಿ ಸಹ ಬರುತ್ತಿರಲಿಲ್ಲ. ಇದು ಆಗುತ್ತಿರಲಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಷೇಮ್,

ಶ್ರೀ ಪಿ. ಜಿ. ಆರ್ ಸಿಂಧ್ಯ.— ಇದರಲ್ಲಿ ಷೇಮ್ ಏನು ಇದೆ ? You must be happy about it. ಹಿಂದೆ ನಿಮ್ಮ ಸರ್ಕಾರ ಹಿಂದೆ ೬೨ ರಲ್ಲಿ ಏನು ಅಧಿಕಾರದಲ್ಲಿ ಇತ್ತು. ಆಗ ಪತ್ರಿಕೆಗಳ ಇಂಟರ್ ಸಪ್ಷನ್ ಇರಲಿ. ಟೆಲಿಫೋನ್ ಟ್ಯಾಪಿಂಗ್ ಇರಲಿ, ಇಂಟೆಲಿಜನ್ಸ್ ಡಿಪಾರ್ಟ್‌ಮೆಂಟ್ ಇರಲಿ ನನಗೆ ವಿವರಣೆ ಬೇಕಾಗಿರತಕ್ಕಂಥದ್ದು ಏನು ಎಂದರೆ ನಮ್ಮ ಸರ್ಕಾರದಿಂದ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟನ್ನು ನಾವು ಏತಕ್ಕೆ ಇಟ್ಟುಕೊಂಡಿದ್ದೇವೆ? ಇಂಟೆಲಿಜನ್ಸ್ ಡಿಪಾರ್ಟ್‌ಮೆಂಟ್‌ನವರು ಎಂದು ನಾನು ಹೇಳಿದ್ದನ್ನೆಲ್ಲಾ ಬರೆದುಕೊಂಡು ಬರುತ್ತಾರಾ? ಅವರೂ ಸಹ ಕದ್ದು ತಾನೇ ಮಾಡತಕ್ಕದ್ದು? ಹಿಂದಿನಿಂದ ಇದು ನಡೆದುಕೊಂಡು ಬಂದಿರತಕ್ಕದ್ದು. ಇವರು ಹೇಳಿದ್ದೆ ಇವೊತ್ತು ಮಹಾ ಅಪರಾಧ ಆಗಿದೆ ಯಾಕೆ? ಹೇಳಿದರಲ್ಲ. ಅವರಿಗೆ ಇರುವಷ್ಟು ರಾಜಕೀಯ ಸೇಡು. ದ್ವೇಷ ಯಾರಿಗೂ ಈ ಮನೆಯಲ್ಲಿ ಇಲ್ಲ. ಅದಕ್ಕೋಸ್ಕರವೇ ಅವರು ಹೇಳಿದ್ದು ಯೋಜನಾ ಆಯೋಗದ ಸ್ಥಾನದಿಂದ ಸಹ ಯೋಗ್ಯರು ಅಥವಾ ಅಯೋಗ್ಯರು ಎನ್ನುವುದು ಅವರು ಯಾರು ತೀರ್ಮಾನ ಮಾಡುವುದಕ್ಕೆ ತೀರ್ಮಾನ ಮಾಡತಕ್ಕದ್ದು ನಾವು ಎಂದು. ಆದ್ದರಿಂದ ಮಹಾ ಅಪರಾಧವನ್ನು ಮಾನ್ಯ ಹೆಗಡೆಯವರು.

(ಗೊಂದಲ)

ಶ್ರೀ ಪಿ, ಜಿ. ಆರ್ ಸಿಂಧ್ಯ.— ಇವರೆಲ್ಲಾ ಟೆಲಿಗ್ರಾಫ್ ಆಕ್ಟ್ ತೆಗೆದುಕೊಂಡು ಬಹಳ ವಿವರಣೆಯನ್ನು ಕೊಟ್ಟು ಎಕನಾಮಿಕ್ ಅಫೆಂಡರ್ಸ್ ನ್ಯಾಷನಲ್ ಇಂಟೆಗ್ರಿಟಿಗೆ ಥ್ರೆಟ್ ಆಗಿರತಕ್ಕ ಜನರನ್ನು ಮಾತ್ರ ಟ್ಯಾಪ್ ಮಾಡಬೇಕು ಎಂದು ಹೇಳಿದರು, ಈ ಟೆಲಿಗ್ರಾಂ ಕಾನೂನಿನಲ್ಲಿ ಮತ್ತೊಂದು ಪ್ರಾವಿಷನ್ ಏನು ಇದೆ ಅಂದರೆ. ಮತ್ತೊಂದು ಕಾಲಮ್ ಇದೆ ಮೂರು ತಿಂಗಳಿಗೆ ಒಂದು ಸಾರಿ ಕೇಂದ್ರ ಸರ್ಕಾರದವರು ರಿಪೋರ್ಟ್ ಅನ್ನು ತರಿಸಿಕೊಂಡು ಯಾರ್‍ಯಾರ ಟೆಲಿಫೋನ್ ಅನ್ನು ಟ್ಯಾಪ್ ಮಾಡುತ್ತಿದ್ದಾರೆ ಎಂದು ನೋಡುತ್ತಾರೆ. ಪಾಪ ಶ್ರೀ ವೀರ್ ಬಹದ್ದೂರ್ ಸಿಂಗ್ ಅವರು ಇದರ ಮೇಲೆ ಯಾಕೆ ಸದನದಲ್ಲಿ ತಿಳಿಸಿದರು ಎಂಬುದು ನನ್ನ ಪ್ರಶ್ನೆ. ಇದು ಆದ ಮೇಲೆ, ನನಗೆ ಅರ್ಥ ಆಗದೇ ಇರತಕ್ಕದ್ದು ಎಂದರೆ. ಯಾವ ರೀತಿ ಎಕನಾಮಿಕ್ ಅಫೆಂಡರ್ಸ್. ಯಾವ ರೀತಿ ನ್ಯಾಷನಲ್ ಇಂಟೆಗ್ರಿಟಿಗೆ ಥ್ರೆಟ್ ಕೊಡತಕ್ಕ ಜನಗಳ ಕಾಲಮ್ ಇದೆ ಅದೇ ರೀತಿ ಪೊಲಿಟಿಕಲ್ ಪಾರ್ಟಿ ಲೀಡರ್ಸ್‌ದ್ದೂ ಒಂದು ಕಾಲಮ್ ಇದೆ ಅದು ಯಾಕೆ ಬಂತು ? ಅದನ್ನು ಮಾನ್ಯ ಹೆಗಡೆಯವರು ಮಾಡಿದ್ದಾರಾ? ನಾವು ಮಾಡಿದ್ದೇವಾ? ಇದರ ಬಗ್ಗೆ ತಾವು ಬೆಳಕನ್ನು ಚೆಲ್ಲಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಬಹಳಷ್ಟು ಸ್ವಾತಂತ್ರ್ಯದ ಹಗರಣದ ಬಗ್ಗೆ ಮೌಲ್ಯಗಳ ಬಗ್ಗೆ, ಮಾತನಾಡುವುದಿದ್ದರೂ ಸಹ. ೭೮ ರ ನಿಯಮಾವಳಿ ಮೇರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದರಿಂದ ನನ್ನ ಮಾತನ್ನು ನಿಲ್ಲಿಸುತ್ತೇನೆ, ಕೊನೆಯದಾಗಿ ಮಾನ್ಯ ಹೆಗಡೆಯವರ ಒಂದು ವ್ಯಕ್ತಿತ್ವವನ್ನು ಹಾಳು ಮಾಡಲಿಕ್ಕೆ ಅವರ ಮೇಲೆ ಗೂಬೆಯನ್ನು ಕೂರಿಸಲಿಕ್ಕೆ ಏನು ಒಂದು ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನ ಬಹಳ ದಿನ ನಡೆಯುವುದಿಲ್ಲ, ಜನ ಅರ್ಥ ಮಾಡಿಕೊಳ್ಳುತ್ತಾರೆ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ರಾಮಕೃಷ್ಣ ಹೆಗಡೆ (ಬಸವನಗುಡಿ).— ಸನ್ಮಾನ್ಯ ಸಭಾಧ್ಯಕ್ಷರೇ. ನಿನ್ನೆಯಿಂದ ಇಂದು ಇಷ್ಟು ಹೊತ್ತಿನವರೆಗೆ ನಡೆದಂತಹ ಚರ್ಚೆಯಲ್ಲಿ ನಾನು ತುಂಬಾ ಹೆಚ್ಚು ಕಡಿಮೆ ಮೂಕನಾಗಿ ಮಾನ್ಯ ಸದಸ್ಯರುಗಳು ಮಾಡಿದಂತಹ ಭಾಷಣಗಳನ್ನು ಲಕ್ಷ್ಯಗೊಟ್ಟು ಕೇಳಿದ್ದೇನೆ. ಕೆಲವು ದಿವಸಗಳ ಹಿಂದೆ ಪತ್ರಿಕಾ ಕರ್ತರು ನನ್ನನ್ನು ಭೇಟಿ ಆದಾಗ ನಾನು ಒಂದು ಮಾತು ಹೇಳಿದ್ದು ನಿಜ. ಅದು ಏನೆಂದರೆ ಈ ಟೆಲಿಫೋನ್ ಹಗರಣದ ವಿಚಾರ ಪುನಃ ಎರಡೂ ಸದನಗಳಲ್ಲಿ ಚರ್ಚೆಗೆ ಬರಲಿದೆ ಎಂದು ಕೇಳಿದ ಮೇಲೆ ನಾನು ಆಶ್ಚರ್ಯವನ್ನು ವ್ಯಕ್ತಪಡಿಸಿದೆ. ೧೯೮೮ನೇ ಅಕ್ಟೋಬರ್ ತಿಂಗಳಲ್ಲಿ ಅಂದರೆ ಒಂದು ವರ್ಷ ಆರು ತಿಂಗಳ ಹಿಂದೆ ಇದೇ ವಿಚಾರದಲ್ಲಿ ಎರಡೂ ಸದನಗಳಲ್ಲಿ ಸಾಕಷ್ಟು ಚರ್ಚೆ ಆಗಿತ್ತು. ಇದು ಒಂದು ವಿಚಾರದಲ್ಲಿ ಸದನದ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿ ಮುಗಿಸಿದ ಮೇಲೆ ಪುನಃ ಅದೇ ವಿಚಾರದಲ್ಲಿ ಸದನದಲ್ಲಿ ಚರ್ಚೆ ಆಗತಕ್ಕಂಥಾದ್ದು ಅರ್ಥ ನನಗೆ ನಿಜಕ್ಕೂ ಆಗಲಿಲ್ಲ. ನಾನು ಹೇಳಿದೆ, ನಾನು ಏನಾದರೂ ಹೊಸ ಅಪರಾಧ ಮಾಡಿದ್ದರೆ...

(ಗೊಂದಲ)

MR. SPEAKER.—I think he is entitled to a patient hearing I seek your co-operation.

ಪುನಃ ಪುನಃ ಇಂಟರಪ್ಷನ್ ಮಾಡುವುದಿಲ್ಲ, ಅಷ್ಟರಮಟ್ಟಿಗಾದರೂ ನನಗೆ ಒಂದು ಕರ್ಟಸಿ ಎಕ್ಸ್‌ಟೆಂಡ್ ಮಾಡುತ್ತಾರೆ ಎಂದು ನಾನು ನಿರೀಕ್ಷೆ ಮಾಡುತ್ತೇನೆ. ಆ ರೀತಿ ಇಂಟರಪ್ಷನ್ ಮಾಡಿದರೆ ನೀವು ಕೇವಲ ಒಂದು ಭಾಗವನ್ನು ನಿಮಗೆ ಗೊತ್ತಿರತಕ್ಕದ್ದನ್ನು ನೀವು ಹೇಳಿ, ಈ ಚರ್ಚೆ

ಯನ್ನು ಮುಕ್ತಾಯ ಮಾಡಿದ ಹಾಗೆ ಆಗುತ್ತದೆ ಅಷ್ಟೆ ಅದು ನ್ಯಾಯವೋ ಈ ಸದನದ ಸದಸ್ಯರಿಗೆ ಧರ್ಮವೋ ಎನ್ನುವುದನ್ನು ನಿಮಗೇ ಬಿಡುತ್ತೇನೆ.

(ಗೊಂದಲ)

MR. SPEAKER.—Order, Order. Order please.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದೆ. ನನ್ನಿಂದ ಏನಾದರೂ ಹೊಸ ಅಪರಾಧವೋ ತಪ್ಪೋ ಆಗಿದ್ದರೆ ನನಗೆ ತಿಳಿಸಬೇಕಾಗಿತ್ತು ಎಂದು. ಈಗ ಬ್ರೀಚ್ ಆಫ್ ಪ್ರಿವಿಲೇಜ್ ಆಯಿತು ಎಂದು ಇಟ್ಟುಕೊಳ್ಳೋಣ. ಅದನ್ನು ಪ್ರಿವಿಲೇಜ್ ಕಮಿಟಿಗೆ ಕಳಿಸುತ್ತಾರೆ. ಪ್ರಿವಿಲೇಜ್ ಕಮಿಟಿಯವರು ನನಗೆ ನೋಟೀಸ್ ಕೊಡಬೇಕು. ಸಮನ್ಸ್ ಮಾಡಬೇಕು. ನನಗೆ ಆ ತರಹ ಏನೂ ಸಮನ್ಸ್ ಬಂದಿಲ್ಲ. ಅದಕ್ಕೆ ನಾನು ಹೇಳಿದೆ. ನನ್ನ ಹಾಜರಿ ಅಗತ್ಯವಾಗಿ ಇದ್ದರೆ ಮಾನ್ಯ ಅಧ್ಯಕ್ಷರು ನನಗೆ ಪ್ರತ್ಯೇಕವಾಗಿ ತಿಳಿಸುತ್ತಿದ್ದರು. ಸದಸ್ಯನಾಗಿ ನಾನು ಯಾವಾಗಲೂ ಇಲ್ಲಿ ಇರಬಲ್ಲೆ. ಇರತಕ್ಕದ್ದು ನನ್ನ ಕರ್ತವ್ಯ. ಅದು ನನಗೆ ಗೊತ್ತುಂಟು. ಆದರೆ ಬೇರೆ ಜವಾಬ್ದಾರಿಯ ಒತ್ತಡದಿಂದ ನಾನು ಈ ಸಲ ಸದನದ ಅಧಿವೇಶನದಲ್ಲಿ ಭಾಗವಹಿಸುವುದು ಸಾಧ್ಯವಾಗಿರಲಿಲ್ಲ. ಅದು ಸದನಕ್ಕೆ ಅಗೌರದ ದೃಷ್ಟಿಯಿಂದ ಹೇಳುವಂಥ ಮಾತಲ್ಲ. ಇಷ್ಟು ಹೊತ್ತು ಚರ್ಚೆ ಕೇಳಿದ ಮೇಲೂ ದಯವಿಟ್ಟು ನನ್ನ ಅಜ್ಞಾನವನ್ನು ತಾವು ಕ್ಷಮಿಸಬೇಕು. ನನಗೆ ಇನ್ನೂ ಅರ್ಥವಾಗಲಿಲ್ಲ ಈ ಚರ್ಚೆಗೆ ಉದ್ದೇಶ ಏನು ಎಂದು. ಈ ಚರ್ಚೆಗೆ ಉದ್ದೇಶ ನನ್ನನ್ನು ಇಲ್ಲಿ ಕರೆಸಿ ನನ್ನ ಹಾಜರಿಯಲ್ಲಿ ನನ್ನನ್ನು ಬೈಯಬೇಕು ಎಂದು ಹೇಳುವಂಥಾದ್ದು ಇದ್ದರೆ ಆ ಮಾತು ಬೇರೆ. ಈ ಚರ್ಚೆಯ ಉದ್ದೇಶ ನನ್ನ ರಾಜಕೀಯ ನಿವೃತ್ತಿಯನ್ನು ಹೇಗಾದರೂ ಮಾಡಿ ಪಡೆಯಬೇಕು ಅಥವಾ ನನ್ನ ರಾಜೀನಾಮೆಯನ್ನು ಪಡೆದು ಕೊಳ್ಳಬೇಕು ಎಂದು ಹೇಳಿದ್ದರೆ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಹೀಗಾದರೆ ನಾನು ಮಾತನಾಡುವುದಿಲ್ಲ.

MR. SPEAKER.—He is making out a point. He does't need your response for that. He is posing himself a question and trying to answer himself. Don t you want to extend him that basic minimum courtesy ? I request you kindly to bear with me.

(Interruption)

MR. SPEAKER.—The Leader of the House has got something to say.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಇವತ್ತು ನಡೆದ ಚರ್ಚೆಯ ಬಗ್ಗೆ ಪ್ರಕರಣದ ಬಗ್ಗೆ ಮಾಜಿ ಮುಖ್ಯಮಂತ್ರಿಗಳು ಮತ್ತು ಈ ಸದನದ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ತಮ್ಮ ನಿಲುವು, ತಮ್ಮ ಸ್ಟ್ಯಾಂಡ್ ಏನಿದೆ ಎಂದು ಇವತ್ತು ಈ ಸದನದ ಮುಖಾಂತರ ಕರ್ನಾಟಕದ ಜನತೆಗೆ ಮತ್ತು ಈ ರಾಷ್ಟ್ರದ ಜನತೆಗೆ ಹೇಳುತ್ತಾ ಇದ್ದಾರೆ. ಇದು ಗಂಭೀರವಾದ ವಿಚಾರ ಮತ್ತು ಅವರು ಹೇಳುವಂಥ ಎಲ್ಲ ವಿಚಾರಗಳನ್ನು ಸಮಾಧಾನದಿಂದ ಕೇಳಬೇಕಾದ್ದು ಅವಶ್ಯ. ಅದಕ್ಕಾಗಿ ನಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು ಎನ್ನುವಂಥ ಉದ್ದೇಶವಿಲ್ಲ. ಅದನ್ನು ನನ್ನ ಈ ಭಾಗದ ಸದಸ್ಯರಲ್ಲಿ ನಮ್ರತೆಯಿಂದ ವಿನಂತಿ ಮಾಡಿ ಕೊಳ್ಳುತ್ತೇನೆ. ಅವರು ಏನು ಹೇಳುತ್ತಾರೆ ಅವನ್ನು ನಾವು ಕೇಳೋಣ. ಮತ್ತೆ ನಾನು ಏನು ಹೇಳಬೇಕಾಗಿದೆ ಸರ್ಕಾರದಿಂದ ಮುಖ್ಯಮಂತ್ರಿಯಾಗಿ ಅದನ್ನು ನಾನು ಹೇಳುತ್ತೇನೆ. ಅದನ್ನೂ ಸಹ ಎಲ್ಲರೂ ಸಮಾಧಾನದಿಂದ ಕೇಳುತ್ತಾರೆ ಎಂದು ನಾನು ಭರವಸೆ ಮಾಡುತ್ತೇನೆ. ಆದರೆ ಒಂದು ಮಾತು ಶ್ರೀಮಾನ್ ಹೆಗಡೆಯವರು ಹೇಳಿದ್ದು ನಿಜಾಂಶವಲ್ಲ. ಸತ್ಯಾಂಶವಲ್ಲ. ನನ್ನನ್ನು ಈ ಮನೆಗೆ ಕರೆಸಿ ನನಗೆ ಬೈಯಬೇಕೆಂದು ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದಾರೆ. ಇಲ್ಲದಿದ್ದರೆ ಈ ಚರ್ಚೆಯ ಉದ್ದೇಶ ಏನು ಎನ್ನುವ ಮಾತನ್ನು ಅವರು ಹೇಳಿದರು. ನಾವು ಈ ಮನೆಗೆ ಬರಬೇಕೆಂದು ಒತ್ತಾಯ ಮಾಡಲಿಲ್ಲ. ಮಾನ್ಯ ಸಭಾಧ್ಯಕ್ಷರೆ, ತಾವು ಕೂಡ ಒತ್ತಾಯ ಮಾಡಿದ್ದೀರಿ ಎಂದು ನನಗನ್ನಿಸುವುದಿಲ್ಲ. ಈ ಮನೆಗೆ ತಾವು ಬರಲೇಬೇಕು. ಈ ಚರ್ಚೆಯಲ್ಲಿ ಭಾಗವಹಿಸಲೇಬೇಕೆಂಬ ಒತ್ತಾಯ ನಮ್ಮದಿಲ್ಲ. ಬಹುಶಃ ಅವರ ಪಕ್ಷದ ಒಳಗಡೆ ಒತ್ತಾಯವಾಗಿದೆ. ಚರ್ಚೆ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವರು ತಾವು ಇಲ್ಲಿಗೆ ಬರಬೇಕಾದ ಅವಶ್ಯಕತೆ ಇಲ್ಲ ಎಂದು ಚರ್ಚೆ

ಮಾಡಿದ್ದಾರೆ. ಕೊನೆಗೆ ಅಂತಿಮವಾಗಿ ಇಲ್ಲಿ ಅವರು ಬರಲೇಬೇಕು. ಅವರು ಇದರ ಬಗ್ಗೆ ಮಾತನಾಡ ಬೇಕು ಎನ್ನುವ ನಿರ್ಣಯವನ್ನು ಅವರು ಮಾಡಿಕೊಂಡು ಅದರ ಪ್ರಕಾರ ಅವರು ಇಲ್ಲಿದ್ದಾಗ ಹೊರತು ಆ ದೋಷಕ್ಕೆ ನಮ್ಮನ್ನು ಏತಕ್ಕೆ ಗುರಿ ಮಾಡುತ್ತೀರಿ ? ತಾವು ಮಾತ್ರ ಬರಲೇಬೇಕೆಂದು ನಾವು ಒತ್ತಾಯ ಮಾಡಿಲ್ಲ. ಇವತ್ತು ತಮ್ಮ ಮುಂದೆ ಹೇಳಬೇಕಾದರೆ ನಿಮ್ಮ ವಿಚಾರಗಳನ್ನು ವ್ಯಕ್ತ ಮಾಡಿ ಎನ್ನುವ ಒತ್ತಾಯವು ಇಲ್ಲ. ಅದು ತಮಗೆ ಬಿಟ್ಟಿದ್ದು ತಾವು ಈಗಲೂ ಹೇಳಿ ಈಗಾಗಲೇ ಹೇಳಿದ್ದಾಗಿದೆ. ಮತ್ತೆ ಹೇಳುವುದು ಏನೂ ಇಲ್ಲವೆಂದು, ನಾವು ಯಾರೂ ಒತ್ತಾಯ ಮಾಡುವಂತಿಲ್ಲ. ಮಾನ್ಯ ಸಭಾಧ್ಯಕ್ಷರು ಸಹ ಒತ್ತಾಯ ಮಾಡುವಂತಿಲ್ಲ. ತಾವು ನಿಂತು ಸಭಾಧ್ಯಕ್ಷರನ್ನು ಅನುಮತಿ ಕೇಳಿದಿರಿ. ಅವರು ಅನುಮತಿ ಕೊಟ್ಟಿದ್ದಾರೆ. ನಾವು ತಾವು ಹೇಳತಕ್ಕ ಎಲ್ಲಾ ವಿಚಾರಗಳನ್ನು ಸಮಾಧಾನದಿಂದ ಕೇಳುವುದಕ್ಕೆ ನಾವು ತಯಾರಾಗಿದ್ದೇವೆ. ನಿಮ್ಮನ್ನು ಕರೆಸಿ ಬೈಯಬೇಕೆನ್ನುವಂಥ ಉದ್ದೇಶದಿಂದ ಈ ಚರ್ಚೆ ಮಾಡುತ್ತಿದ್ದೇವೆನ್ನುವ ದೋಷಕ್ಕೆ ದಯಮಾಡಿ ನಮ್ಮನ್ನು ಗುರಿ ಮಾಡ ಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಹೆಗಡೆಯವರನ್ನು ಕರೆಯಬೇಕೇ ಬಿಡಬೇಕೇ ಎನ್ನುವ ಪ್ರಶ್ನೆ ಇಲ್ಲಿ ಬರಲಿಲ್ಲ. ಈ ಸದನದ ಸದಸ್ಯರಾಗಿ ಅವರು ಯಾವಾಗಬೇಕಾದರೂ ಸಭೆಗೆ ಬರಬಹುದು ಹೋಗ ಬಹುದು. ಏತಕ್ಕೆ ಈ ಪ್ರಶ್ನೆ ಬಂತು ಅಂದರೆ, ಅವರು ಕಾರ್ಯ ಗೌರವದಿಂದ ಸಭೆಯಲ್ಲಿ ಈ ಹಾಜರಿರುವುದಕ್ಕೆ ಸಾಧ್ಯವಿಲ್ಲ. ನನಗೆ ರಜೆ ಕೊಡಬೇಕೆಂದು ಸಭಾಧ್ಯಕ್ಷರಿಗೆ ಕಾಗದ ಬರೆದು "ಲೀವ್ ಆಫ್ ಆಬ್ಸೆನ್ಸ್ ಅನ್ನು ಈ ಸಭೆ ಗ್ರ್ಯಾಂಟ್ ಮಾಡಿದ ಮೇಲೆ ಅವರು ಬರಬೇಕಾದ್ದು ಇರಲಿಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನೀವೂ ಅರ್ಥ ಮಾಡಿಕೊಳ್ಳಬೇಕು. ಲೀವ್ ಆಫ್ ಆಬ್ಸೆನ್ಸ್, ಈ ಸದನ ಗ್ರ್ಯಾಂಟ್ ಮಾಡಿದ ಮೇಲೆ" ಈ ಚರ್ಚೆಯನ್ನು ಎತ್ತಿಕೊಂಡಿದ್ದರಿಂದ ಸಭೆಗೆ ಕರೆಯಬೇಕೇ ಬಿಡಬೇಕೇ ಎನ್ನುವ ಪ್ರಶ್ನೆ ಬರುತ್ತೆ. Otherwise, he as a member of this House, has every right and entitled to participate and he is participating. Only because the House permitted him to be away from this session he is questioning. ತಾವು ಹೇಳಿದ್ದನ್ನು ತಪ್ಪು ಎಂದು ನಾನು ಹೇಳಲಿಲ್ಲ. ನೀವೇ ಆಯ್ಕೆ ಮಾಡಿಕೊಂಡಿದ್ದೀರಿ, ನೀವೇ ಸಭೆಗೆ ಬಂದಿದ್ದೀರಿ. ಇವೆಲ್ಲವನ್ನು ಒಪ್ಪುತ್ತೇನೆ. ಆದರೆ ಒಂದು ಮಾತು ತಾವು ಏನು ಹೇಳಿದಿರಿ. ಅವರ ಪಕ್ಷದಲ್ಲಿ ಏನು ಚರ್ಚೆ ಯಾಗಿದೆ ಬಿಟ್ಟಿದೆಯೋ ಅದು ನಮ್ಮ ಆಂತರಿಕ ವಿಚಾರ. ಸದನಕ್ಕೆ ಸಂಬಂಧಪಟ್ಟಂತಹ ವಿಚಾರ ಏನು? ಲೀವ್ ಆಫ್ ಆಬ್ಸೆನ್ಸ್ ಕೊಟ್ಟಿದ್ದರಿಂದ ಈ ಪ್ರಶ್ನೆ ಬಂತೆ ಏನಹ, ಬೇರೆ ಇಲ್ಲದೆ ಇದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಆಂತರಿಕ ವಿಚಾರ ಎನ್ನುವಂಥ ಮಾತನ್ನು ಹೇಳಿದ್ದಾರೆ, ಅನಂತರ ಲೀವ್ ಆಫ್ ಆಬ್ಸೆನ್ಸ್ ಬಗ್ಗೆ ಸಭಾಧ್ಯಕ್ಷರಿಗೆ ಪತ್ರ ಬರೆದ ಮೇಲೆ ನಿಯಮಾವಳಿಯ ಪ್ರಕಾರ ಸದನದ ಒಪ್ಪಿಗೆ ಕೇಳಬೇಕಾಗುತ್ತದೆ. ಇದೆಲ್ಲಾ ಆದ ಮೇಲೆ ಕೂಡ ಅವರು ಬರಬೇಕು, ಬರಬಾರದು ಎನ್ನುವುದು ಮಾನ್ಯ ಸದಸ್ಯರಿಗೆ ಬಿಟ್ಟಿರತಕ್ಕ ವಿಚಾರ. ನಾವು ಒತ್ತಾಯ ಮಾಡಿಲ್ಲ. ಕರೆಯುವುದಕ್ಕೂ ಹೋಗಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷರೇ, ಈಗತಾನೇ ಹೇಳಿದರು, ಹೆಗಡೆ ಯವರನ್ನು ಯಾರೂ ಕರೆದಿಲ್ಲವೆಂದು. ಆದರೆ ಕಾನೂನು ಸಚಿವರು ಸದನದಲ್ಲಿ ಹೇಳಿದ್ದಾರೆ. ಏನೆಂದರೆ, ಮಾನ್ಯ ಸದಸ್ಯರಾದ ಹೆಗಡೆಯವರನ್ನು ಕರೆಸಿದರೆ ಒಳ್ಳೆಯದೆಂದು ಹೇಳಿದ್ದು ರೆಕಾರ್ಡ್ ನಲ್ಲಿದೆ, ತಾವು ನೋಡಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ರೆಕಾರ್ಡ್‌ನಲ್ಲಿ ಇಲ್ಲ ಅಂದರೆ. ಬೇರೆ ಮಾತು. ಅದಕ್ಕೆ ನಾನು ಹೇಳಿದ್ದು, ಆಂತರ್ಯವಾಗಿ ನಡೆದ ಚರ್ಚೆಯ ವಿವರಗಳನ್ನೆಲ್ಲಾ ಇಲ್ಲಿ ಹೇಳಲು ಇಷ್ಟಪಡುವುದಿಲ್ಲ ಎಂದು.

MR. SPEAKER.—We are not interested whatever has happened internally between political parties. ಇಲ್ಲಿ ಎರಡು ವಿಚಾರಗಳು ಇವೆ. ಒಂದು ಮಾನ್ಯ ಸದಸ್ಯರಾದಂಥ ರಾಮಕೃಷ್ಣ ಹೆಗಡೆಯವರು ಈ ಸದನ ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ಕಾಗದ ಬರೆದು ನಾನು ೪ನೇ ತಾರೀಖಿನಿಂದ ೧೬-೬-೧೯೮೦ರವರೆಗೆ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಚೀನಾ ದೇಶಕ್ಕೆ ಒಂದು ಡೆಲಿಗೇಷನ್ ನಾಯಕತ್ವವನ್ನು ವಹಿಸಿಕೊಂಡು ಹೋಗುತ್ತಿದ್ದೇನೆ. ಅದಕ್ಕೆ ಸದನದ ಅನುಮತಿ ಕೇಳಿ ನನಗೆ ಪತ್ರ ಬರೆದಿದ್ದರು.

೪ನೇ ತಾರೀಖು ನಾನು ಆ ಪತ್ರವನ್ನು ಸಭೆಯ ಮುಂದೆ ಇಟ್ಟು ಸಭೆ ಅವರ ಲೀವ್ ಆಫ್ ಅಬ್ಸೆನ್ಸ್‌ಗೆ ಒಪ್ಪಿಗೆ ಕೊಡಬೇಕೆಂದು ಸೂಚಿಸಿದೆ, ಒಪ್ಪಿಗೆಯನ್ನು ಸದನ ದೊರಕಿಸಿಕೊಟ್ಟಿದೆ,

ಆದ್ದರಿಂದ ೪-೬-೧೯೯೦ ರಿಂದ ೧೪-೬-೧೯೯೦ ರವರೆಗೆ ಮಾತ್ರ ಅವರಿಗೆ ಲೀವ್ ಆಫ್ ಅಬ್ಸೆನ್ಸ್ ಕೊಟ್ಟಿತ್ತು ಒಂದು. ಇನ್ನು ಎರಡನೆಯದು ಅಂದರೆ ಎಲ್ಲ ಸದಸ್ಯರಿಗೂ ಸಮನ್ಸ್ ಕಳುಹಿಸಿದ ರೀತಿಯಲ್ಲಿ ೨೨೪ ಜನ ಮಾನ್ಯ ಸದಸ್ಯರುಗಳಿಗೂ ಸಮನ್ಸ್ ಕಳುಹಿಸಿದ್ದೆವು. ಅದೇ ರೀತಿ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಆ ಸಮನ್ಸ್ ಹೋಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಚರ್ಚೆ ಕಾಲದಲ್ಲಿ ನಾನು ಹಾಜರಿ ಇರಲೇಬೇಕು ಎನ್ನತಕ್ಕಂಥ ನಿರ್ಬಂಧ ಯಾರಾದರೂ ಹಾಕಿದರು ಎಂದು ನಾನು ಹೇಳಲಿಲ್ಲ. ಇಲ್ಲಿ ಹಾಜರಿದ್ದರೆ ಅದಕ್ಕೆ ನನ್ನ ಪ್ರಿಯ ಸ್ನೇಹಿತರಾದ ಮಾನ್ಯ ಮೊಯಿಲಿಯವರ ಆಮಂತ್ರಣ, ವಿಶೇಷವಾದಂಥ ಆಮಂತ್ರಣ ಕಾರಣ, ಅವರು ಹೇಳಿದರು, ಹೆಗಡೆಯವರು ಈ ಸಭೆಯಲ್ಲಿ ಹಾಜರಿರಬೇಕು ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಸೌಜನ್ಯದ್ದು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ನಿಮಗೆ ಧನ್ಯವಾದಗಳು, ಜೊತೆಗೆ ನೀವು ಒಂದು ಒಳ್ಳೆಯ ಸೂಚನೆಯನ್ನು ಕೊಟ್ಟಿರಿ. ಅದಕ್ಕೆ ನಾನು ಕೃತಜ್ಞನಾಗಿದ್ದೇನೆ ಎಂದು ಹೇಳುತ್ತಿದ್ದೇನೆ. ಅಧ್ಯಕ್ಷರೆ, ಹಿಂದಿನ ಸಾರಿ ಚರ್ಚೆ ಆದಾಗ ನಾನು ಇರಲಿಲ್ಲ. ನಾನು ಹೇಳುತ್ತಾ ಇದ್ದೆ, ಅದರ ಮಧ್ಯದಲ್ಲಿ ಬೇರೆ ಯಾರೋ ಅಡ್ಡ ಬಂದರು. ನನ್ನ ರಾಜೀನಾಮೆ, ಅಥವಾ ರಾಜಕೀಯ ನಿವೃತ್ತಿ ಅವನ್ನು ಪಡೆಯಬೇಕೆಂದು ಹೇಳಿದರು. ಅದಕ್ಕೆ ಏನೂ ಕಷ್ಟ ಇಲ್ಲ ಅದರ ಮೇಲೆ ಎರಡು ದಿವಸಗಳಿಂದ ಮತ್ತು ಇವೊತ್ತು ಚರ್ಚೆಯಾಗಬೇಕಾದ ಪ್ರಮೇಯ ಕೂಡ ಇಲ್ಲ. ನಾನು ಯಾವ ಒಂದು ನಿಲುವನ್ನು ತೆಗೆದು ಕೊಂಡಿದ್ದೇನೆ ಎಂದು ಹೇಳತಕ್ಕದು. ಇಡೀ ಪ್ರಪಂಚಕ್ಕೆ ಗೊತ್ತುಂಟು. ಅದು ಕೇವಲ ಕರ್ನಾಟಕದ ಜನತೆಗೆ ಅಲ್ಲ. ಮತ್ತು ಆ ಒಂದು ನಿಲುವಿನಿಂದ ಒಂದು ಸಣ್ಣ ಅಂಗುಲ ಅಂದರೆ ಒಂದು ಅಂಗುಲದಲ್ಲಿ ಪ್ರತಿಶತ ಕೂಡ ನಾನು ಹಿಂದೆ ಹೋಗಿಲ್ಲ. ಅಲ್ಲಿಂದ ವಿಚಲಿತನಾಗಿಲ್ಲ. ನಾನು ಏನು ಹೇಳಿದ್ದೇನೆ ಅಂದರೆ, ಈ ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ನಾನೇನಾದರೂ ಆರ್ಡರ್ ಮಾಡಿದ್ದರೆ, ಅಥವಾ ನನ್ನ ಅಪ್ರೂವಲ್ ತೆಗೆದುಕೊಂಡು ಮಾಡಿದ್ದರೆ, ನಾನು ರಾಜಕೀಯದಿಂದ ನಿವೃತ್ತನಾಗುತ್ತೇನೆಂದು ಹೇಳಿದ್ದೆ. ಮೊನ್ನೆ ಕೂಡ ಹೇಳಿದ್ದೇನೆ. ಇವೊತ್ತು ಕೂಡ ಹೇಳುತ್ತೇನೆ. ಆದ್ದರಿಂದ, ನನ್ನ ರಾಜಕೀಯ ನಿವೃತ್ತಿಗೆ ನಮ್ಮ ಕರ್ನಾಟಕ ಹಣವನ್ನು ಇಂತಹ ಚರ್ಚೆ ಮಾಡಲಿಕ್ಕೆ ಖರ್ಚು ಮಾಡತಕ್ಕದು ಅನಗತ್ಯವಾಗಿತ್ತು ಎಂದು ನನ್ನ ನಮ್ರವಾದಂಥ ಅಭಿಪ್ರಾಯ. ಇದು ಬಹಳ ಸುಲಭ, ಮಾನ್ಯ ಮುಖ್ಯ ಮಂತ್ರಿಗಳು ನೋಡಿ, ಈ ಆರ್ಡರ್ ಹೊರಟಿದೆ ಇದಕ್ಕೆ ನಿಮ್ಮ ಒಪ್ಪಿಗೆ ಇತ್ತು ಅಂದರೆ ಅದು ಅಲ್ಲಿಗೆ ಮುಗಿದು ಹೋಯಿತು. ಈ ಟೆಲಿಫೋನ್ ಟ್ಯಾಪಿಂಗ್ ವಿಚಾರ ಇವೊತ್ತು. ನೆನ್ನೆಯದು ಅಲ್ಲ. ಅದು ಎಲ್ಲರಿಗೂ ಗೊತ್ತುಂಟು. ಇವೊತ್ತು ಯಾರು ವಿರೋಧ ಮಾಡುತ್ತಿದ್ದಾರೋ ಅವರಿಗೂ ಗೊತ್ತುಂಟು. ಯಾರು ಇದನ್ನು ಸೃಷ್ಟಿ ಮಾಡಿದ್ದಾರೋ ಅವರಿಗೂ ಗೊತ್ತುಂಟು ಯಾರು ಮೊದಲು ಅಧಿಕಾರದಲ್ಲಿದ್ದರು ಅವರಿಗೂ ಗೊತ್ತುಂಟು. ಹಿಂದೆ ಯಾರು ವಿರೋಧ ಪಕ್ಷದಲ್ಲಿದ್ದರೋ ಅವರಿಗೂ ಗೊತ್ತುಂಟು ಇದರ ಬಗ್ಗೆ ಅನೇಕ ಸಾರಿ ಚರ್ಚೆಯಾಗಿದೆ. ಪ್ರಸ್ತಾವಕ್ಕೆ ಬಂದಿದೆ. ಪಾರ್ಲಿಮೆಂಟಿನಲ್ಲಿ ಬಂದಿದೆ. ನಮ್ಮ ರಾಜ್ಯದ ವಿಧಾನಮಂಡಲದಲ್ಲಿ ಬಂದಿದೆ ಬಹಳ ದುಃಖದಿಂದ ಎಮರ್ಜೆನ್ಸಿ ವಿಚಾರ ಇಲ್ಲಿ ಪ್ರಸ್ತಾಪ ಮಾಡಿದರು. ಏಕೆಂದರೆ, ಮಾನ್ಯ ಸಿಂಧ್ಯ ಅವರು ಒಬ್ಬ ವಿಕ್ಟಿಮ್ ಆ ಕಾಲದಲ್ಲಿ ನನಗೆ ಏನಾದರೂ ಪತ್ರ ಬರುತ್ತಿತ್ತಾ ? ಎಲ್ಲಾದರೂ ಹೆಂಡತಿಯಿಂದ ಪತ್ರ ಬಂದರೆ, ಅದನ್ನು ಒಡೆದು ನೋಡುತ್ತಾ ಇರಲಿಲ್ಲವಾ, ನಾವೇನು ದೇಶದ್ರೋಹಿಗಳಾಗಿದ್ದೇವೇನು. ಇದು ಎಂತಹ ಐರನಿ ಎಂದು ನನಗೆ ಗೊತ್ತಾಗುವುದಿಲ್ಲ.

(ಗೊಂದಲ)

೧೨-೪೦ ಪಿ. ಎಂ.

ಅದಕ್ಕೆ ನಾನು ಬರುತ್ತೇನೆ. ಏಕೆಂದರೆ, ನೀವೂ ಹಾಗೂ ರಾಜೀನಾಮೆ ಕೊಟ್ಟಿದ್ದೀರಲ್ಲಿ. ನಾನು ಅದಕ್ಕೆ ಬರುತ್ತೇನೆ ಎಂತಹ ಐರನಿ ಅಂದರೆ, ಇಂದು ಪುನಃ ಪುನಃ ಪ್ರಜಾತಂತ್ರ ವ್ಯಕ್ತಿ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಎಂದು ಇಲ್ಲ ದೊಡ್ಡ ದೊಡ್ಡ ಆರ್ಭಟದ ಮಾತನ್ನು ಆಡುತ್ತಿದ್ದರಲ್ಲಾ ಅವರಿಗೆ ಹಿಂದೆ ನಡೆದು ಹೋಗಿರುವುದು ಸ್ವಲ್ಪವೂ ನೆನಪು ಇಲ್ಲವೇ ? ಅದರ ಬಗ್ಗೆ ನಾನು ಹೆಚ್ಚು ಹೇಳತಕ್ಕಂಥಾದ್ದು

ಅಗತ್ಯ ಇಲ್ಲ, ಆದರೆ ಕರ್ನಾಟಕದಲ್ಲಿ ತೆಗೆದುಕೊಳ್ಳಿ ೭೨ನೇ ಇಸವಿಯಿಂದ ಅಂದರ ದಾಖಲೆ ಇದ್ದ ಮಟ್ಟಿಗೆ ೨೦-೩೦-೪೦ ವರ್ಷ ಇರಲಿಕ್ಕೆ ಇಲ್ಲ. ಆದರೆ ಮುಖ್ಯಮಂತ್ರಿಗಳ ಒಂದು ಹೇಳಿಕೆಯ ಪ್ರಕಾರವೇ ೭೨ನೇ ಇಸವಿಯಿಂದ ಇಂತಿಂತಹ ಅಧಿಕಾರಿಗೆ ಇಂತಿಂತಹ ಇಸವಿಯಲ್ಲಿ ಆಥರೈಸ್ ಮಾಡಲಾಗಿದೆ ಎಂದು ಹೇಳತಕ್ಕಂಥಾದನ್ನು ಹೇಳಿದ್ದಾರೆ ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳ ಅದರ ಪತ್ರದ ಒಂದು ನಕಲನ್ನು ಈ ಸದನದ ಮೇಜಿನ ಮೇಲೆ ಇಟ್ಟಿದ್ದಾರೆ. ನಮ್ಮ ಜನತಾ ಪಕ್ಷದ ಸರಕಾರ ೮೩ ನೇ ಇಸವಿ ಜನವರಿ ೧೦ ನೇ ತಾರೀಖಿಗೆ ಅಧಿಕಾರ ವಹಿಸಿಕೊಂಡಿತು. ೮೪ ನೇ ಇಸವಿ ಫೆಬ್ರವರಿಯಲ್ಲಿ ಕೇಂದ್ರ ಸರಕಾರದ ಅಧಿಕಾರಿ ಬೆಂಗಳೂರು ಟೆಲಿಫೋನ್ಸ್ ಜನರಲ್ ಮ್ಯಾನೇಜರ್ ಅದರಿಂದ ಒಂದು ಪತ್ರ ಬರುತ್ತದೆ. ಅಲ್ಲಿಯವರೆಗೆ ಈ ವಿಚಾರ ಏನೂ ಇರಲಿಲ್ಲ. ಈ ಸರಕಾರ ಟೆಲಿಫೋನ್ ಅನ್ನು ಕದ್ದು ಕೇಳತಕ್ಕಂತಹ ಆಜ್ಞೆಯನ್ನು ಮಾಡಿರಲಿಲ್ಲ. ಮೊಟ್ಟಮೊದಲಿಗೆ ಅಂದರೆ ಜನತಾ ಸರಕಾರ ೮೩ ನೇ ಇಸವಿಯಲ್ಲಿ ಅಧಿಕಾರ ವಹಿಸಿಕೊಂಡ ಮೇಲೆ ಬೆಂಗಳೂರು ಟೆಲಿಫೋನ್ಸ್ ಜನರಲ್ ಮ್ಯಾನೇಜರ್ ಒಂದು ಪತ್ರ ಬರೆದರು ಏನೆಂದರೆ,

> "The order in respect of telephone tapping is old and therefore authorisation by the present Government is necessary for extending the facility beyond 31st March 1984". ಎಂದು

ಕನಿಷ್ಟ ಪಕ್ಷ ಮಾನ್ಯ ಸದಸ್ಯರು ಇದನ್ನಾದರೂ ಒಪ್ಪಿಕೊಳ್ಳುತ್ತಾರೆಯೋ ? ಏನೆಂದರೆ ೮೪ ನೇ ಇಸವಿ ಮಾರ್ಚ್ ಕೊನೆಯವರೆಗೆ ಹಿಂದಿನ ಆರ್ಡರ್ ಜಾರಿಯಲ್ಲಿತ್ತು ಎಂದು ಆ ಆರ್ಡರ್ ಹೊರಡಿಸಿದರು ನಾನಾ ಇದರ ಸಂಬಂಧವನು ತಿಳಿದುಕೊಳ್ಳಿ. ತಿಳಿದುಕೊಳ್ಳದೆ ಕೆಲವು ಸಲ ಮಾತನಾಡುತ್ತೀರಿ ಲಿಸ್ಟ್ ಬಗ್ಗೆ ಮಾತನಾಡುತ್ತೀರಿ ಆದರೆ ಇದು ಲಿಸ್ಟ್‌ಗೆ ಸಂಬಂಧವಿಲ್ಲ.

ನಮ್ಮ ಸರಕಾರ ಇದರ ಬಗ್ಗೆ ಆಷ್ಟೊಂದು ಆಸ್ಥೆಯನ್ನು ತೋರಿಸಲಿಲ್ಲ. ಅದನ್ನು ರಿನೋ ಮಾಡಲಿಕ್ಕೆ ಇಷ್ಟವೇ ರೀ ವಾಲಿಡೇಟ್ ಮಾಡಲಿಕ್ಕೆ ಆಧಾದ ಮೇಲೆ ಮತ್ತೊಂದು ರಿಮೈಂಡರ್ ಅನ್ನು ದೊರೆಯುತ್ತಾರೆ, ಆ ರಿಮೈಂಡರ್ ಸುಮಾರು ೮ ತಿಂಗಳ ನಂತರ ಬರುತ್ತದೆ.

> "The matter was examined by the Government and it is felt that there is no need for another Government Order on the subject. It is hereby confirmed that the above order holds. good even now until further orders".

ಅದಾದ ಮೇಲೆ ೮೭ ನೇ ಇಸವಿಯಲ್ಲಿ ಕೇಂದ್ರ ಸರಕಾರದಿಂದ ಒಂದು ಪತ್ರ ಬಂತು.

> "The above legal position is brought to the notice of the State Government..."

ಕರ್ನಾಟಕ ಸರಕಾರವೆಂದು ಹೇಳಿಲ್ಲ. ಅದರ ಅರ್ಥ ಮತ್ತೊಂದು ಏನಾಗುತ್ತದೆ ಎಂದರೆ ಎಲ್ಲಾ ಸರಕಾರಗಳು ಇದನ್ನೇ ಮಾಡುತ್ತಿತ್ತು ಎಂಬುದು ಇದರಿಂದಲ್ಲೇ ಗೊತ್ತಾಗುತ್ತದೆ.

> "The above legal position is brought to the notice of the State Governments so that in case of authorisation made earlier under Section 5 (1) (B) is required. to be re-validated. They may like to issue a fresh authorisation under Section 5. (2)".

Now the most crucial point comes in the whole issue.

೧೯೮೭ ಜೂನ್ ೨೦ ನೇ ತಾರೀಖು. ಆ ದಿವಸ ಅಂದಿನ ಕಾರ್ಯದರ್ಶಿಯಾಗಿದ್ದವರು ಒಂದು ಆರ್ಡರನ್ನು ಹೊರಡಿಸಿದ್ದಾರೆ.

> "In exercise of powers conferred under Sub-Section 2 of Section 5 of the India Telegraph Act, 1985 the Government of Karnataka hereby specially authorise the D I. G. Intetligence to exerise all the power under said sub-section in the interest of public safety".

ಈಗ ನಾನು ಮತ್ತೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುವುದಿಷ್ಟೆ, ಈಗ ಏನು ಆರ್ಡರನ್ನು ಹೊರಡಿಸಿದ್ದಾರೆ ಆ ಫೈಲನ್ನು ದಯವಿಟ್ಟು ತರಿಸಿ, ಅದನ್ನು ನಮ್ಮ ಎದುರಿಗೆ ಇರಿಸಬೇಕು. ಇದು ಮೊದಲನೇ ಆರ್ಡರ್ ತಾನೆ, ನಮ್ಮ ಸರ್ಕಾರ ಬಂದ ಮೇಲೆ ಹೊರಡಿಸಿದ್ದು. ಇದರ ಹಿಂದಿನ ಆರ್ಡರ್‌ಗೂ ನಮಗೂ ಯಾವುದೇ ಸಂಬಂಧವಿಲ್ಲ. ಈಗ ಏನು ಈ ಮೊದಲನೇ ಆರ್ಡರ್ ಹೊರಟಿತು, ಅದು ಯಾರ ಒಪ್ಪಿಗೆಯಿಂದ ಹೊರಟಿದೆ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಒಪ್ಪಿಗೆ ಇದೆಯೋ? ಅಥವಾ ಮಾನ್ಯ ಮುಖ್ಯ ಮಂತ್ರಿಗಳ ಸಹಿ ಇದೆಯೋ? ಅಥವಾ ಮುಖ್ಯ ಮಂತ್ರಿಗಳು ಅದನ್ನು ನೋಡಿದ್ದಾರೆಯೋ? ಅದು ಆ ಫೈಲಿನಿಂದ ಗೊತ್ತಾಗಬೇಕು. ನಾನೇನಾದರೂ ಈ ಆರ್ಡರನ್ನು ಹೊರಡಿಸುವುದಕ್ಕಿಂದ ಮೊದಲು ನಾನು ಅದನ್ನು ನೋಡಿ ಅದನ್ನು ಅಪ್ರೂವ್ ಮಾಡಿದ್ದರೆ ನಾನು ತಮಗೆ ಇವತ್ತೂ ಕೂಡ ಹೇಳುತ್ತೇನೆ, ಆ ಫೈಲು ನನಗೆ ಗೊತ್ತಿದ್ದರೆ, ಅದಕ್ಕೆ ನನ್ನ ಅಪ್ರೂವಲ್ ಆಗಿದ್ದರೆ ಅಥವಾ ಆ ಫೈಲ್‌ನ ಮೇಲೆ ಯಾವುದೇ ನಿಷಾನ್ ಇದ್ದರೆ, ನನಗೆ ಅದನ್ನು ತೋರಿಸಿದ್ದಾರೆ ಏನ್ನತಕ್ಕದು ಇದ್ದರೆ ನಾನು ಇವತ್ತೇ ಈ ನನ್ನ ರಾಜಕೀಯದಿಂದ ನಿವೃತ್ತನಾಗುತ್ತೇನೆ. ಆದ್ದರಿಂದ ತಾವು ದಯವಿಟ್ಟು ಆ ಫೈಲನ್ನು ತರಿಸಿ. ಮತ್ತೆ ಇನ್ನೇನೂ ನಮಗೆ ಬೇಕಾಗಿಲ್ಲ, ನಾನು ರಾಜಿನಾಮೆಯನ್ನು ಕೊಟ್ಟೆ. ಏತಕ್ಕೆ ಕೊಡಬೇಕಾಗಿತ್ತು? ಇದೇನು ಇಲ್ಲಿಗಲ್ ಇತ್ತೇ? ಆದರೂ ಏತಕ್ಕೆ ಕೊಟ್ಟೆ ಗೊತ್ತೆ? ನಮ್ಮ ಪಕ್ಷದ ಮತ್ತು ವೈಯುಕ್ತಿಕವಾದ ನಮ್ಮ ಸಿದ್ಧಾಂತ ಬೇರೆ ಇತ್ತು. ನಾನು ಈ ಸಂದರ್ಭದಲ್ಲಿ ರಾಜೀನಾಮೆಯನ್ನು ಕೊಟ್ಟಾಗ ಒಂದು ಪತ್ರವನ್ನು ಬರೆದಿದ್ದೇನೆ. ಅದನ್ನು ಇಲ್ಲಿ ಓದಿಹೇಳುತ್ತೇನೆ. ಅದು ಇಲ್ಲಿ ಸ್ವಲ್ಪ ಮಟ್ಟಿಗೆ ಬೆಳಕನ್ನು ಚೆಲ್ಲಬಹುದು. ೧೯೮೮ರ ಆಗಸ್ಟ್ ೯ನೇ ತಾರೀಖು ನಾನು ದೆಹಲಿಗೆ ಹೋದೆ, ಅದೇ ದಿವಸ ಈ ವಿಚಾರ ಪತ್ರಿಕೆಯಲ್ಲಿ ಬಂತು, ಮತ್ತು ಪಾರ್ಲಿಮೆಂಟ್‌ನಲ್ಲೂ ಈ ವಿಚಾರವನ್ನು ಎತ್ತಿದರು. ಆಗ ಲೋಕಸಭೆಯಲ್ಲಿ ನಮ್ಮ ಪಕ್ಷದ ಮುಖಂಡರಾದ ಮಾನ್ಯ ಮಧು ದಂಡವತೆಯವರಿಗೆ ನಾನು ಒಂದು ಪತ್ರವನ್ನು ಬರೆದೆ. ಅದು ಈ ರೀತಿ ಇದೆ.

"My Dear Madhu,

"The telephone tapping incident which figured in both the Houses of Parliament yesterday has caused great anguish to me and also is causing embarrasment to our party. When I saw the Times of India report yesterday, I immediately demanded that the Union Government should institute a judicial inquiry so that the people should know the truth. Yesterday, in the Lok Sabha when you also demanded that a judicical inquiry should be held, the Prime Minister rejected the demand. But he categorically stated that the Karnataka Government was responsible. I have ascertained that intercepting the telephone conversation under the Indian Telegraph Act has been going on for many years. I am also told that it is resorted to by Intelligence both Central as well as the State as a routine matter of collecting information. In Karnataka itself during the time of Shri Veerendra Patel, Shri Devaraj Urs and Shri Gundu Rao the State Intelligence was intercepting telephones of several political leaders apart from others. Even now my telephone is being tapped by the Central Government Intelligence. Our Party and also I am opposed to the practice of interception of telephone and censoring of letters. This was the stand we had taken when the Union Government brought an amending Bill to the India Postal Act".

"Even though I had nothing to do with this undesirable Practice of telephone tapping, I have to assume the moral responsibility for it. Since a judicial inquiry has been rejected, there is no way to dispel the wrong impressions deliberately created by the Prime Minister. Therefore, in keeping with highest tradition in maintaining democrtic values, I have decided to tender my resignation. I have convened a meeting of the Karnataka Legislature party to elect a new leaber on 12-8-1988".

ಮಾನ್ಯ ಅಧ್ಯಕ್ಷರೇ, ಇದು ಆದದ್ದು ಆಗಸ್ಟ್‌ನಲ್ಲಿ. ಕೇವಲ ಒಂದು ತಿಂಗಳಿಗಿಂತಲೂ ಕಡಿಮೆ ಅವಧಿಯ ಹಿಂದೆ ಟೆಲಿಫೋನ್ ಇಂಟರ್‌ಸೆಪ್‌ಷನ್ ಮತ್ತು ಪೋಸ್ಟಲ್ ಇಂಟರ್‌ಸೆಪ್‌ಷನ್ ವಿಚಾರ ರಾಜ್ಯ ಸಭೆಯಲ್ಲಿ ಬಂತು. ಆ ವಿಚಾರದ ಬಗ್ಗೆ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ತಂದಾಗ Sri Gopalaswamy, Member of the Rajya Sabha from Tamil Nadu Proposed certain amendments to the bill under discussion ಅದನ್ನು ರಿಜೆಕ್ಟ್ ಮಾಡಿದರು. ಆ ಸಂದರ್ಭದಲ್ಲಿ ಅಂದರೆ ಜುಲೈ ೨೯ನೇ ತಾರೀಖು ಅಂದಿನ ಕೇಂದ್ರದ ಸಂಪರ್ಕ ಖಾತೆಯ ರಾಜ್ಯ ಸಚಿವರಾದ ಶ್ರೀ ಗಿರಿಧರ್ ಗೊಮಾಂಗೊ ಅವರು ಈ ಇಂಡಿಯನ್ ಟೆಲಿಗ್ರಾಫಿಕ್ ಆಕ್ಟ್ ಅನ್ನು ಕೊಂಡಾಡಿದವರು ಅವರು ಹೇಳಿದರು—

"Section 5(2) of the Telegraph Act was praised by Sri Gopalswamy I quote:

"The provisions of law which stood the test of time for 9 decades cannot but have some merit. It is necessary for the Government to have it and the present climate does-not permit me to remove these provisions from the statute book as Proposed by Mr. Gopalswamy."

Sri Gopalaswamy had complained to the Central Government that the Chief Secretary or Tamil Nadu had ordered for interception of his telephone and his letters. You know what was the result? A case was instituted against Sri Gopalswamy. He was about to be prosecuted for violating the provisions of the Official Secrect Act ಇದನ್ನು ಐರೋನಿ ಎಂದು ಕರೆಯದೇ ಇನ್ನೇನೆಂದು ಕರೆಯಬೇಕು ಇವತ್ತು ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಬಹಳ ದೊಡ್ಡದಾಗಿ ಚರ್ಚೆ ನಡೆಯುತ್ತಿದೆ. ನಾನು ರಾಜೀನಾಮೆ ಕೊಟ್ಟಮೇಲೆ ಇವತ್ತು ಇಲ್ಲಿ ದೊಡ್ಡದಾಗಿ ಚರ್ಚೆ ನಡೆಯುತ್ತಿದೆ ಈಗ ನಾನು ಮುಖ್ಯಮಂತ್ರಿ ಆಗಿಲ್ಲ. ನಾನು ರಾಜೀನಾಮೆಯನ್ನು ನಾನಾಗಿಯೇ ಕೊಟ್ಟೆ, ಯಾರ ಒತ್ತಾಯವು ಬರದೇ ನಾನಾಗಿಯೇ ಕೊಟ್ಟಮೇಲೆ ಇಂದು ಎರಡು ವರ್ಷಗಳ ನಂತರ ಪುನ ನನ್ನನ್ನು ಹಿಡಿದು ಜಗ್ಗುತ್ತೀರಾ? ಅದ್ದರಿಂದ ಬಹಳ ಸ್ವಾದ ಅಥವಾ ರುಚಿ ಬಂದರೆ ಮಾಡಿಕೊಳ್ಳಿ. ನನಗೇನಂತೆ ಶ್ರೀ ಮಾನ್ ಗುಂಡೂರಾಯರು ಏನು ಹೇಳಿದ್ದಾರೆ ಎಂಬುದನ್ನು ಹೇಳುತ್ತೇನೆ ಜೂನ್ ೨೫ನೇ ಮತ್ತು ಸೆಪ್ಟೆಂಬರ್ ೮೮ರಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಮತ್ತು ಎಲ್.ಕೆ.ಅಡ್ವಾನಿಯವರು ಪಾರ್ಲಿಮೆಂಟ್‌ನಲ್ಲಿ ಈ ವಿಚಾರವನ್ನು ಎತ್ತಿದರು ಅವರು ಹೇಳಿದರು ನಮ್ಮ ಹಾಗೂ ಇನ್ನೂ ಇತರ ರಾಜಕೀಯ ಮುಖಂಡರುಗಳ ಟೆಲಿಫೋನ್‌ಗಳು ರೆಗ್ಯುಲರ್ ಹಾಗಿ ಟ್ಯಾಪ್ ಆಗುತ್ತಿದೆ. ನೀವು ಇದರ ಬಗ್ಗೆ ನಮಗೆ ರಕ್ಷಣೆ ಕೊಡಬೇಕು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ಕೇಳಿದರು ಅವರು ಅಲ್ಲಿ ಏನು ಮಾತನಾಡಿದರು ಅದನ್ನು ನಾನು ಇಲ್ಲಿ ಕೋಟ್ ಮಾಡುತ್ತಿದ್ದೇನೆ.

"I was surprised to discover that the recorded telephone conversation included not only those of Opposition political leaders like A. B. Vajapaee. Chowdhary Charan Singh, Babu Jagajivan Ram, Chandrashekar and myself prominent

journalists like G.K. Reddy, Arun Shourie, Kuldhip Nayyar, Daulith Singa but also such eminent dignitaries as the then president Giani Jail Singh and Chief Justice of Supreme Court, Y. V. Chandrachud.''

ನಾನು ಇಲ್ಲಿ ಬೇರೆಯವರ ಟೆಲಿಫೋನ್ ಟ್ಯಾಪಿಂಗ್ ಮಾಡಿದೆ ಎಂದು ಯಾವ ಬಾಯಲ್ಲಿ ಹೇಳುತ್ತೀರಿ ನೀವು ? ಈ ದೇಶದಲ್ಲಿ ರಾಷ್ಟ್ರಪತಿಗಳ ಟೆಲಿಫೋನ್‌ನನ್ನು ಟ್ಯಾಪ್ ಮಾಡಲಿಕ್ಕೆ ಹಿಂದೆ ಮುಂದೆ ನೋಡದಂತಹ ಜನ ನಾನು ರಾಜೀನಾಮೆ ಕೊಟ್ಟು. ಮಾರಲ್‌ರೆಸ್‌ಫಾನ್ಸಿಬಿಲಿಟಿ ತೆಗೆದುಕೊಂಡು ರಾಜೀನಾಮೆ ಕೊಟ್ಟಮೇಲೆ ಇವತ್ತು ನೀವು ಇದರ ಬಗ್ಗೆ ಚರ್ಚೆ ಮಾಡಬೇಕೆಂದಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಬಗ್ಗೆ ನೀವು ಸಮರ್ಥನೆ ಮಾಡಿಕೊಳ್ಳಿ, ಇನ್ನೊಬ್ಬರು ಮರ್‌ಡರ್ ಮಾಡಿದ್ದಾರೆ, ನಾನೂ ಮರ್ಡರ್ ಮಾಡಿದ್ದೇನೆಂದರೆ ಏನು ಅರ್ಥ ? You justify your action. Don't tell about others.

(INTERRUPTION)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಕಾನೂನು ಉಲ್ಲಂಘನೆ ಮಾಡಿದ್ದೀರಿ. ಅದಕ್ಕೆ ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ನಾನು ಕ್ರಿಯಾಲೋಪ ಎತ್ತುತ್ತೇನೆ. ಈ ಏನು ಮಾನ್ಯ ಸದಸ್ಯರು ಎದ್ದುನಿಂತು ಉತ್ತರ ಕೊಡುತ್ತಿದ್ದಾರೆ, ಅದನ್ನು ತಡೆ ಹಿಡಿದು ನಿಲ್ಲಿಸಬೇಕೆಂದು ನನ್ನ ಉದ್ದೇಶ ಅಲ್ಲ. ಅವರು ಚರ್ಚೆ ಮಾಡಬಹುದು. ಉತ್ತರ ಕೊಡಬಹುದು. ಆದರೆ ಇವತ್ತು ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಪಾರ್ಲಿಮೆಂಟಿನಲ್ಲಿ ನಡೆದಂತಹ ಸದನದ ಚರ್ಚೆಯ ಅಂಶವನ್ನು. ಒಬ್ಬ ಸದಸ್ಯರು ಹೇಳಿದಂತಹ ಹೇಳಿಕೆಯನ್ನು ದಾಖಲೆಯ ಸ್ವರೂಪವನ್ನು ನಂಬಲೇಬೇಕೆಂದು ಏನು ನಮ್ಮ ಮುಂದಿಟ್ಟಿದ್ದಾರೆ. It is only–hearsay asfar as this House is concerned ಏನಾದರು ಡಾಕ್ಯುಮೆಂಟ್‌ನಿಂದ ಅಥವಾ ಜುಡಿಶಿಯಲ್ ಎನ್‌ಕ್ವೈರಿ ರಿಪೋರ್ಟ್‌ನಿಂದ ಅಥವಾ ಯಾವುದೇ ಪಾರ್ಲಿಮೆಂಟ್ ಕಮಿಟಿ ರಿಪೋರ್ಟ್‌ನಿಂದ ಒಂದು ಸ್ಥಿರೀಕರಣಗೊಂಡ ಯಾವುದೇ ಒಂದು ವರದಿಯನ್ನು ಇಲ್ಲಿ ಉಲ್ಲೇಖ ಮಾಡುವುದು ಇದ್ದರೆ. ಅದರ ಸಹಾಯ ತೆಗೆದುಕೊಳ್ಳುವುದು ಇದ್ದರೆ I have no objection but quoting a statement which is given by the Oppostion leader who belongs to his party stating that is provee evidence, I don't think it should go on record and he wants us to believe this proof. It is only the statement of Madhu Dandavathe and it can be taken as only a statement, as good as your statement. ಅದಕ್ಕೆ ಹೆಚ್ಚಿನ ಮಹತ್ವವನ್ನು ಈ ದೇಶದ ಜನ ಕೊಡುತ್ತಾರೆಂದು ತಾವು ತಿಳಿದುಕೊಂಡಿರಬಹುದು ತಾವು ಮಾತನಾಡಿದ್ದೆಲ್ಲಾ ರೆಕಾರ್ಡ್ ಎಂದು ಹೇಳಿದರೆ, I don't think that can be given any credence or any Credibility is there and that can be only taken as good as your statement.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಹೇಳಿದ್ದಕ್ಕೆ ನಾನು ಹೇಳಬೇಕೇ ಹೊರತು ನೀವು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕೆ ಸ್ವಲ್ಪ ಸೇರಿಸಿ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ಬಹಳ ವಿಚಿತ್ರವಾದ ವಾದ ಈ ಮನೆಯ ದಾಖಲೆಯನ್ನು ಒದಗಿಸಿದರೆ ಅದು ಸರಿಯಾಗಿ ದಾಖಲಾಗಿಲ್ಲವೆಂದು ಹೇಳುತ್ತಾರೆ. ಸಂಸತ್ತಿನ ದಾಖಲೆಯನ್ನು ಒದಗಿಸಿದರೆ ಆ ದಾಖಲೆಯನ್ನು ನಂಬುವುದು ಹೇಗೆ ಎಂದು ಕೇಳುತ್ತಾರೆ. ಹೀಗಾದರೆ ನಾವು ಹೇಗೆ ಕೆಲಸ ಮಾಡಬೇಕು ಎಂದು ತಾವೇ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನಾನು ಇಷ್ಟು ಮಾತ್ರ ಹೇಳುತ್ತೇನೆ. ಪಾರ್ಲಿಮೆಂಟ್ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ವರದಿಯನ್ನು ಉದ್ಧರಿಸಿ ಹೇಳತಕ್ಕ ಸಂದರ್ಭದಲ್ಲಿ ಆ ವರದಿ ಇಲ್ಲಿ ಚರ್ಚೆಗೆ ಬರುವುದಿಲ್ಲ. ಆದರೆ ಎಲ್ಲೋ ಒಂದು ವಿಚಾರ ಪ್ರಸ್ತಾಪ ಮಾಡಬಹುದೇ ಹೊರತು ಎಲ್ಲವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ತಾವು ಅಪ್ಪಣೆ ಕೊಡಿಸಿದ್ದೀರಿ ಆ ಪ್ರಕಾರ ತಮ್ಮ ರೂಲಿಂಗ್ ಬಂದ ಮೇಲೆ ನಾವು ಯಾರೂ ಕೂಡ ಪಾರ್ಲಿಮೆಂಟಿನ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ವಿವರಗಳಿಗೆ ಹೋಗುವುದಕ್ಕೆ ನಮಗೆ ಸಾಧ್ಯವಾಗಿಲ್ಲ.

ಏಕೆಂದರೆ We have got our own limitations to discuss that matter. ಇವತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಮಾನ್ಯ ಸದಸ್ಯರು ಏನು ಮಾಡುತ್ತಿದ್ದಾರೆ he is quoting......

SRI D. B. CHANDRE GOWDA.—We is quoting the proceeding of the House.

ಶ್ರೀ ಎಸ್. ಬಂಗಾರಪ್ಪ.—ಸ್ವಲ್ಪ ಕೇಳಿ. ತಮಗೆ ಗೊತ್ತಿರಬೇಕು. ನಾನು ಕಾನೂನು ವಿಚಾರವನ್ನು ಮಾತನಾಡುತ್ತಿದ್ದೇನೆ. Proceedings of the committees constituted by this August House or Parliament, they become the proceedings of the House; Don't forget that besic principle. ನಾವು ಇಲ್ಲಿ ಕುರಿತು ಚರ್ಚೆ ಮಾಡಬೇಕಾದರೆ ಈ ಸದನದ ಕಾರ್ಯಕಲಾಪದ ಪ್ರೊಸೀಡಿಂಗ್ಸ್‌ಗೆ ಎಷ್ಟು ಗೌರವ ಇದೆಯೋ, ಅಷ್ಟೇ ಗೌರವ ಈ ಸದನವೇ ಕ್ರಿಯೇಟ್ ಮಾಡಿರತಕ್ಕ ಕಮಿಟಿಗಳ ಪ್ರೊಸೀಡಿಂಗ್ಸ್‌ಗೂ ಇದೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇರಬಹುದು. ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಇರಬಹುದು. ಎಸ್ಟಿಮೇಟ್ ಕಮಿಟಿ ಪ್ರೊಸೀಡಿಂಗ್ಸ್ ಇರಬಹುದು ಮಾತ್ರೊಂದಿರಬಹುದು. ಆ ಪ್ರೊಸೀಡಿಂಗ್ಸ್‌ಗೂ ಇದೇ ಸದನದ ಪ್ರೊಸೀಡಿಂಗ್ಸ್‌ನಷ್ಟೇ ಗೌರವ ಇದೆ. ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ವಿಚಾರದಲ್ಲಿ ಚರ್ಚೆ ಮಾಡಬಾರದು ಎಂದಾಗ ಪಾರ್ಲಿಮೆಂಟ್‌ನ ನಡವಳಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೀರಾ ? ಆದರೂ ಕೂಡ ಮಾನ್ಯ ಸಭಾಧ್ಯಕ್ಷರೇ ಈ ಚರ್ಚೆಯನ್ನು ಬ್ಲಾಕ್ ಮಾಡಬೇಕು ಎಂದು ಈ ಮಾತನ್ನು ಹೇಳುತ್ತಿಲ್ಲ. ಕಾನೂನು ವಿಚಾರ ಇದು. ಆದರೆ ಒಂದು ಅಲ್ಲಿ ಎತ್ತಿರತಕ್ಕ ವಿಚಾರ ಶ್ರೀಮಾನ್ ವಾಜಪೇಯಿ ಅವರು ಡಾ ಶ್ರೀಮಾನ್ ಅಡ್ವಾನಿ ಅವರು ಶ್ರೀಮಾನ್ ಗೋಪಾಲ ಸ್ವಾಮಿ ಅವರು ಅಲ್ಲಿರತಕ್ಕ ಮಾನ್ಯ ಸದಸ್ಯರು ಈ ವಿಚಾರ ಎತ್ತಿದರೆ. ಅದಕ್ಕೆ ಉತ್ತರ ಏನು ಬಂತು ವಿವರಗಳು ಏನು ಬಂತು ಆ ವಿಚಾರ ಚರ್ಚೆ ಮಾಡುವುದಕ್ಕೆ ಇಲ್ಲಿ ಸಾಧ್ಯವೇ ಇಲ್ಲ. ಅವರೇ ಹೇಳಿದರಲ್ಲ ನಾವು ಒಂದು ಮುಖದ ಚರ್ಚೆ ಮಾತ್ರ ಮಾಡಿ ಬೇರೆ ವಿಚಾರವನ್ನು ಮುಚ್ಚಿ ಹಾಕಿದಿರಿ ಎಂದು. ಒಂದು ವೇಳೆ ಅದು ನಿಜ ಆದರೆ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರು ಸಹ ಅದೇ ಕೆಲಸ ಮಾಡಿದಂತಾಗುತ್ತದೆ. ದಯಮಾಡಿ ತಾವು ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ವೀರೇಂದ್ರ ಪಾಟೀಲ್.—ಈಗ ಒಂದು ವಿಚಾರ ಚರ್ಚೆ ನಡೆಯುತ್ತಿದೆ. ಬಹುಶ: ಮಾನ್ಯ ಸದಸ್ಯರು ಪಾರ್ಲಿಮೆಂಟಿನಲ್ಲಿ ಯಾವ ಯಾವ ಪಕ್ಷದ ನಾಯಕರು ಏನೇನು ಹೇಳಿದ್ದಾರೆ. ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಎಂದು ಪ್ರಸ್ತಾಪ ಮಾಡಬಹುದುದು ನಾನೂ ಪಾರ್ಲಿಮೆಂಟಿನಲ್ಲಿದ್ದೆ. ಇವತ್ತೂ ಕೂಡ ಪಾರ್ಲಿಮೆಂಟಿನಲ್ಲಿ ನಮ್ಮ ನಮ್ಮ ಟೆಲಿಫೋನ್ ಟ್ಯಾಪಿಂಗ್ ಆಗುತ್ತದೆಂದು ಹೇಳುತ್ತಲೇ ಇದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ ಅಟಲ್ ಬಿಹಾರಿ ವಾಜಪೇಯಿಯವರು ನನ್ನ ಟೆಲಿಫೋನ್ ಟ್ಯಾಪಿಂಗ್ ಆಗುತ್ತಿದೆ ಎಂದು ಹೇಳಿದ್ದಾರೆ. ಚಂದ್ರಶೇಖರ್ ಅವರು ಟೆಲಿಫೋನ್ ಟ್ಯಾಪಿಂಗ್ ಆಗುತ್ತಿದೆ ಎಂದು ಹೇಳಿದ್ದಾರೆ ಪ್ರೆಸಿಡೆಂಟ್ ಆಫ್ ಇಂಡಿಯಾ ಟೆಲಿಫೋನ್ ಕೂಡ ಟ್ಯಾಪಿಂಗ್ ಆಗುತ್ತಿದೆ ಎಂದು ಹೇಳಿದ್ದಾರೆ ಪ್ರಶ್ನೆ ಏನೆಂದರೆ ಅವರು ಹೇಳುವ ಸ್ಟೇಟ್‌ಮೆಂಟೇ ಕನಕ್ಲೂಸೀವ್ ಪ್ರೂಫಾ ಅದು ಪ್ರಶ್ನೆ. ಇವೊತ್ತು ನಾವು ವಿಚಾರ ಮಾಡುತ್ತಿದ್ದೇವೆ. ಟ್ಯಾಪಿಂಗ್ ಬಗ್ಗೆ ಪ್ರೂಫ್ ಬೇಕಾಗಿಲ್ಲ. it is established. ಒಂದು ವೇಳೆ ಅವರದ್ದೇ ಒಪ್ಪಿಕೊಳ್ಳುವುದಾದರೆ ಏಕೆಂದರೆ ಅವರು ಮಹಾ ದೊಡ್ಡ ನಾಯಕರಿದ್ದಾರೆ. ಅದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. It is as good as establised. It is a conclusive proof. ಅವರ ನೆನಪಿಗೆ ತರುತ್ತೇನೆ ಮೊನ್ನೆ ಚಂದ್ರಶೇಖರ್ ಅವರು ಅವರ ಪಕ್ಷದ ನಾಯಕರ ಪಾರ್ಲಿಮೆಂಟ್ ಒಳಗೆ ಮತ್ತು ಹೊರಗೆ ದಿನಾ ನನ್ನ ಟೆಲಿಫೋನ್ ಟ್ಯಾಪ್ ಆಗುತ್ತಿದೆ ಎಂದು ಹೇಳಿದ್ದಾರೆ. ಅದು ದೊಡ್ಡ ಕಾಂಟ್ರವರ್ಸಿ ಆಯಿತು. ಕೊನೆಗೆ ಪ್ರಧಾನಮಂತ್ರಿಗಳು ಸಿ. ಬಿ. ಐ. ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದಾರೆ. ಒಂದು ವೇಳೆ ಚಂದ್ರಶೇಖರ್ ಟೆಲಿಫೋನ್ ಟ್ಯಾಪ್ ಆಗಿದೆ ಎಂದು ಹೇಳಿದ್ದಾರೆಂದರೆ ನಾವು ನೀವು ವಾದ ಮಾಡಬಹುದು. ಅವರು ಹೇಳಿರುವುದು ನಿಜ ಇರ ಬಹುದು. ಅದು ನಿಜ ಇದ್ದರೆ ಸಿ. ಬಿ. ಐ. ಎನ್‌ಕ್ವೈರಿ ಏತಕ್ಕೆ ಬೇಕು ? ಇವತ್ತು ಅವರ ಪಕ್ಷದ ನಾಯಕರೇ ಹೇಳುತ್ತಿದ್ದಾರೆ ನನ್ನ ಟೆಲಿಫೋನ್ ಟ್ಯಾಪ್ ಆಗುತ್ತಾ ಇದೆ ಎಂದು, ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಕೇವಲ ಸ್ಟೇಟ್‌ಮೆಂಟ್‌ನಿಂದ it cannot be a conclusive proof. ಟೆಲಿಫೋನ್ ಟ್ಯಾಪ್ ಆಗುತ್ತಿದ್ದೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ನೀವು ಡಿಮ್ಯಾಂಡ್ ಮಾಡಬಹುದು. ಅಟಲ್ ಬಿಹಾರಿ ವಾಜಪೇಯಿ ಹೇಳಿದ್ದಾರೆ, ಅದಕ್ಕೆ ಅದು ವೇದವಾಕ್ಯ ಆಯಿತು and no further proof is necessary ಎಂಬ ರೀತಿಯಿಂದ ಮಾತನಾಡಿದರೆ ಬಹುಶಃ ಆ ತರಹದ ಚರ್ಚೆಗೆ ಅವಕಾಶ ಇಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮುಖ್ಯಮಂತ್ರಿಗಳು ನಾನು ಏನು ಹೇಳಿದೆ ಎಂಬುದನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

(ಹಲವಾರು ಕಾಂಗ್ರೆಸ್ ಸದಸ್ಯರು ಒಟ್ಟಿಗೆ ಎದ್ದು ಮಾತನಾಡತೊಡಗಿದರು. ಗೊಂದಲಮಯ ವಾತಾವರಣ ಇತ್ತು)

ಶ್ರೀ ರಾಮಕೃಷ್ಣ ಹೆಗಡೆ.—ವ್ಯತ್ಯಾಸ ಹೇಳುತ್ತೇನೆ ಕೇಳಿ. ನಿಮಗೆ ಗೊತ್ತಿಲ್ಲದಿದ್ದರೆ ತಿಳಿದು ಕೊಳ್ಳಿ : ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಮತ್ತು ಮಾನ್ಯ ಅದ್ವಾನಿ ಅವರು ಕೇವಲ ಸಣ್ಣ ಸ್ಟೇಟ್‌ಮೆಂಟ್ ಮಾಡಿ ಕುಳಿತುಕೊಳ್ಳಲಿಲ್ಲ. ಎನ್‌ಕ್ವೈರಿ ಮಾಡಬೇಕು ಎಂದು ಡಿಮ್ಯಾಂಡ್ ಮಾಡಿದರು. ಎನ್‌ಕ್ವೈರಿ ಮಾಡಲಿಲ್ಲ ಎನ್‌ಕ್ವೈರಿ ಮಾಡದೇ ಇದ್ದದ್ದೇ ಅದರಲ್ಲಿ ಸತ್ಯ ಇದೆ ಎಂಬುದಕ್ಕೆ ಕನ್‌ಕ್ಲೂಸೀವ್ ಪ್ರೂಫ್ ಎಂದು ಹೇಳುವುದಿಲ್ಲ. ಕೋರ್ಟಿಗೆ ಹೋದರೆ ಕನ್‌ಕ್ಲೂಸೀವ್ ಪ್ರೂಫ್ ಆಗುವುದಿಲ್ಲ, ಇಂಥ ಪ್ರಾಮಿನೆಂಟ್ ಲೀಡರ್ಸ್ ಹೇಳಿದಾಗ ಮಾಡಬೇಕಾಗುತ್ತದೆ, ಶ್ರೀಮಾನ್ ಚಂದ್ರಶೇಖರ್ ಅವರು ಸದನದ ಒಳಗಡೆ ಸದನದ ಹೊರಗಡೆ ಹೇಳಿದರು.

ಆಗ ಕೇಂದ್ರ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಲಿಲ್ಲವೆ ? ಕೂಡಲೇ ಪ್ರಿವಿಲೇಜ್ ಕಮಿಟಿಗೆ ಇದನ್ನು ರೆಫರ್ ಮಾಡಿದರು. ಮತ್ತು ಸಿ.ಬಿ.ಐ. ತನಿಖೆಗೂ ಆರ್ಡರ್ ಮಾಡಿದರು,

ಶ್ರೀ ಕೆ. ಲಕ್ಕಪ್ಪ.—ನೀವು ಏಕೆ ಆಗ ಆ ರೀತಿ ಮಾಡಲಿಲ್ಲ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಲಕ್ಕಪ್ಪನವರೇ, ಇದನ್ನು ಈಗಲಾದರೂ ಒಪ್ಪಿಕೊಳ್ಳಿ. ಆಗ ರಾಜೀನಾಮೆ ಕೊಡತಕ್ಕಂತಹ ಅಗತ್ಯ ಇರಲಿಲ್ಲ. ಸಿ.ಬಿ.ಐ. ವಿಚಾರಣೆ ಅಥವಾ ಪ್ರಿವಿಲೇಜ್ ಕಮಿಟಿ ಮೂಲಕ ವಿಚಾರಣೆ ಮಾಡಿಸಿದ್ದರೆ ಸಾಕಾಗುತ್ತಿತ್ತು ಅಂತ ಇವತ್ತಾದರೂ ಒಪ್ಪಿಕೊಳ್ಳಿ, ೧೯೮೧ನೇ ಇಸವಿ...

MR. SPEAKER.— You need some more time ? If you need some more time then we will adjourn and we will resume after lunch. Would it be alright to you ?

ಶ್ರೀ ರಾಮಕೃಷ್ಣ ಹೆಗಡೆ,—ಆಗಬಹುದು.

ಅಧ್ಯಕ್ಷರು.—ಈಗ ಸಭೆಯು ಮುಂದೂಡಿ ಪುನಃ ೨-೦೫ಕ್ಕೆ ಸಮಾವೇಶಗೊಳ್ಳುತ್ತದೆ,

(ಸದನವನ್ನು ೧-೦೫ಕ್ಕೆ ಮುಂದೂಡಲಾಯಿತು)

(ಸದನವು ಮತ್ತೆ ೨-೧೦ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಈಗ ಶ್ರೀ ಹೆಗಡೆಯವರು ತಮ್ಮ ಭಾಷಣವನ್ನು ಮುಂದುವರೆಸಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಾನು ಟೆಲಿಫೋನ್ ಟ್ಯಾಪಿಂಗ್ ಎಷ್ಟು ದಿವಸ ದಿಂದ ನಡೆಯುತ್ತಿದೆ, ಎಷ್ಟು ವರ್ಷಗಳಿಂದ ನಡೆಯುತ್ತಿದೆ ಯಾರು ಯಾರದ್ದು ನಡೆಯುತ್ತಿದೆ ಎನ್ನುವುದನ್ನು ಪ್ರಸ್ತಾಪ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಪರ ಹೊರಡಿಸಿರುವ ಒಂದು ಸರ್ಕ್ಯುಲರ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಟೆಲಿಫೋನ್ ಟ್ಯಾಪಿಂಗ್ ವಿಚಾರ ೩ ತಿಂಗಳಿಗೊಂದು ಸಲ, ರಾಜ್ಯ ಸರ್ಕಾರ ಒಂದು ಪ್ರೊಫಾರ್ಮಾ ಅನ್ನು ತುಂಬಿ ಕಳುಹಿಸ ಬೇಕಾಗುತ್ತದೆ, ಈ ಪ್ರೊಫಾರ್ಮಾ ಕೇಂದ್ರ ಸರ್ಕಾರ ತಯಾರು ಮಾಡಿದ್ದು. ಈ ಪ್ರೊಫಾರ್ಮಾದಲ್ಲಿ information collected through telephones tapping from Trade Unionists' Student Leadres, other activities like suspected Terrorists' suspected smugglers and politicians. ಎಂದು ಇದೆ, ರಾಜ್ಯ ಸರ್ಕಾರ ಅದನ್ನು ೩ ತಿಂಗಳಿಗೊಂದು ಸಲ ತುಂಬಿ ಕಳುಹಿಸತಕ್ಕ ಪದ್ಧತಿ ಮೊದಲಿನಿಂದಲೂ ಬಂದಿದೆ. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಹೇಳಲಾರೆ, ಈ ವಿಚಾರ ನನಗೆ ಗೊತ್ತಾಗಿದ್ದು ಈಗ. ನಾನು ಮುಖ್ಯಮಂತ್ರಿಯಾಗಿದ್ದಾಗ ಈ ರೀತಿ ಮೂರು ತಿಂಗಳಿಗೊಂದು ಸಾರಿ ಕಳಿಸಬೇಕೆನ್ನುವುದು ನನಗೆ ಗೊತ್ತಿರಲಿಲ್ಲ. ಬಹುಶಃ ಇದು ಹೋಂ ಡಿಪಾರ್ಟ್‌ಮೆಂಟ್‌ನ ಕರ್ತವ್ಯ ಅಥವಾ ಹೋಂ ಡಿಪಾರ್ಟ್‌ಮೆಂಟ್‌ನಿಂದ ಕೇಂದ್ರ ಸರ್ಕಾರದವರು ಅಗತ್ಯವಾಗಿ ಪಡೆಯಬೇಕಾದ ಮಾಹಿತಿ.

ನಾನು ೧೯೮೧ನೇ ಇಸವಿ ಏಪ್ರಿಲ್ ೮ನೇ ತಾರೀಖು ಒಂದು ಜಿ. ಓ. ಹೊರಟಿತು. and that was issued in the name of then DIG (Inseligence) Mr. Karthikeyan... ಇದರ ಬಗ್ಗೆ ಒಂದು ರಿಟ್ ಪಿಟಿಷನ್ ಕೂಡ ಹಾಕಿದರು. ಈ ಜಿ. ಓ.ನಲ್ಲಿ ಇಂದು ಈ ಮನೆಯ ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪ, ಆಮೇಲೆ ಇಂದು ಮೇಲ್ಮನೆಯ ಸದಸ್ಯರಾಗಿರ ತಕ್ಕಂಥ ಶ್ರೀ ಶಂಕರಮೂರ್ತಿ ಮತ್ತು ಅನೇಕ ಇನ್ನಿತರ ರಾಜಕೀಯ ಧುರೀಣರು ಮತ್ತು ರೆಸ್‌ಪೆಕ್ಟಬಲ್ ಲೀಡರ್ಸ್‌ಗಳ ಹೆಸರುಗಳು ಆ ಲಿಸ್ಟ್‌ನಲ್ಲಿ ಹೆಸರಿತ್ತು. ಟ್ಯಾಪ್ ಮಾಡತಕ್ಕ ಲಿಸ್ಟ್‌ನಲ್ಲಿತ್ತು. ಅದರ ಹೊರತಾಗಿ ಇಂಪಾರ್‌ಟೆಂಟ್ ಲೀಡಿಂಗ್ ಅಡ್ವೊಕೇಟ್ಸ್, ಬಿಸಿನೆಸ್‌ಮ್ಯಾನ್ ಅವರ ಹೆಸರು ಕೂಡ ಆ ಲಿಸ್ಟ್‌ನಲ್ಲಿತ್ತು. ನನಗೆ ಗೊತ್ತಿಲ್ಲ, ಇವರೆಲ್ಲರೂ ರಾಷ್ಟ್ರದ್ರೋಹಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದರೋ ಅಥವಾ ಟೆರರಿಸ್ಟ್ ಆ್ಯಕ್ಟಿವಿಟೀಸ್‌ನಲ್ಲಿ ಇವರ ಕೈವಾಡ ಇತ್ತೋ ಅಥವಾ ಸ್ಮಗಲಿಂಗ್ ಅಥವಾ ಇನ್ನಿತರ ಆರ್ಥಿಕ ಅಪರಾಧ ಅಥವಾ ಸಾಮಾಜಿಕ ಅಪರಾಧದಲ್ಲಿ ಏನಾದರೂ ಪಾತ್ರ ಇತ್ತೋ ಏನೋ ನನಗೆ ಗೊತ್ತಿಲ್ಲ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಆ ಕಡತ ತರಿಸಿ ನೋಡಿದರೆ ಗೊತ್ತಾಗಬಹುದು, ಆ ಸಂದರ್ಭದಲ್ಲಿ ಶ್ರೀಮಾನ್ ಆಮರ್ಗಂರವರು ಈ ವಿಚಾರವನ್ನು ಎತ್ತಿದಾಗ, ಮಾನ್ಯ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್ ಅವರು ಒಂದು ಹೇಳಿಕೆಯನ್ನು ಇದೇ ಮನೆಯಲ್ಲಿ ಕೊಟ್ಟರು ಅವರ ಮಂತ್ರಿ ಮಂಡಲದಲ್ಲಿ ನನಗೆ ನೆನಪಿದ್ದ ಮಟ್ಟಿಗೆ ಇಲ್ಲಿ ನನ್ನ ಎದುರಿಗೆ ಇರತಕ್ಕಂಥ ಈ ಸಾಲಿನಲ್ಲಿ ಕುಳಿತಿರುವಂಥ ಅನೇಕ ಮಂತ್ರಿಗಳು ಆ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದರು. ಶ್ರೀಮಾನ್ ಮೊಯಿಲಿಯವರು ಅವರಲ್ಲಿ ಒಬ್ಬರು ಶ್ರೀಮಾನ್ ಖಾರ್ಗೆಯವರು ಇವತ್ತು ಈ ವಿಚಾರವನ್ನು ಇಲ್ಲಿ ಎತ್ತಿ ಅತ್ಯಂತ ಆಗ್ರಹದಿಂದ ನನಗೆ ಶಿಕ್ಷೆ ಮಾಡಬೇಕು ಎಂದು ಅವರು ಹೇಳಿದ್ದಾರೆ,

SRI M. MALLIKARJUNA KHARGE.—Still I bold that...

SRI RAMAKRIRHNA HEGDE.—Hoh'ble Members would note that the interception of postal articles in the interest of public safety and tranquility specifically provided for by the Law under Section so and so of ndian Post Offices Act It p ovides for any issue arising as to whether the action done under Section 26 in the interest of public safety or tranquility a certificate by the State Government shall be conclusive proof on that point. If the State Government certify that in the interest of public the officers certifies and that is conclusive. It cannot be questioned. The Hon'ble Member therefore appreciate that once the State Government has certified that there is need for excercise of that power under Section... there can be no question of examination of the same by any other authority. Section 26 of the I. P. Act quotes.

> "For the delegation of Power to any official specifically authorsed in this behalf",

I wonld like to draw the attention of the hon. members to the fact that the powers under section 26 were delegated to DIG (intelligence) by the State Government through the Notification almost 20 years age Even in 1962 the exercise of these powers by the State Government was there authorised officer was there and therefore, it is not a new feature. The publication of a secret communication of this nature which are meant for the purpose of maintaining public safety and tranquility by the newspapers can be regarded as an infrighment of the Official Secrets Act. ಅಂದಿನ ಮುಖ್ಯ ಮಂತ್ರಿಗಳು ಒಂದು ಹೆಜ್ಜೆ ಮುಂದೆ ಹೋಗಿ ಇದರ ಬಗ್ಗೆ ಯಾವುದಾದರೂ ಗುಟ್ಟನ್ನು ಹೊರಗಡೆ

ಹಾಕಿದರೆ, they will be liable to be prosecuted under the Official Secret Act..., ಅಂತ ಕೂಡ ಹೇಳಿದ್ದಾರೆ. ನಿನ್ನೆ ಮತ್ತು ಇವತ್ತಿನ ಚರ್ಚೆ ಏನು ಆಗಿದೆ ಇದರ ಬಗ್ಗೆ ಸಾಮಾನ್ಯವಾದಂತಹ ಒಂದು ಅಭಿಪ್ರಾಯ ಏನು ಇದೆ ಎಂದರೆ ಸಬಾರ್ಡಿನೇಟ್ ಲೆಜಿಸ್ಲೇಷನ್ ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಇಲ್ಲಿಯ ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ಗುರುತರವಾದಂತಹ ಸ್ಟ್ರಿಕ್ಚರ್ ಅನ್ನು ಪಾಸ್‌ಮಾಡಿದ್ದಾರೆಂದು ಹೇಳತಕ್ಕಂತಹ ಒಂದು ಸಾಮಾನ್ಯವಾದ ಇಂಪ್ರೇಷನ್ ಕ್ರಿಯೇಟ್ ಆಗಿವೆ, that has been created by the media I have seen several scressing headlines in the news papers both daitis and periodicals that Hegde indicated. ನಾನು ಇದನ್ನು ಓದಿದಾಗ ನಾನು ಸ್ವಲ್ಪ ಗೊಂದಲಕ್ಕೆ ನನ್ನ ಮನಸ್ಸು ಈಡಾಯಿತು. ಸಬಾರ್ಡಿನೇಟ್ ಲೆಜಿಸ್ಲೇಷನ್ ಸಮಿತಿಯು ಈ ವಿಚಾರದಲ್ಲಿ ನನ್ನನ್ನು ತಪ್ಪಿತಸ್ಥರೆಂದು ಅಥವಾ ಆರೋಪಿ ಎಂದು ಗುರಿ ಮಾಡಲಿಕ್ಕೆ ಕಾರಣ ಏನು ಇದೆ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ಮುಖ್ಯವಾದಂತಹ ಕೆಲಸ ಏನು ಎಂದರೆ ಪಾರ್ಲಿಮೆಂಟ್ ಅಥವಾ ವಿಧಾನ ಮಂಡಲ ಆಗಾಗ್ಗೆ ಪಾಸ್ ಮಾಡತಕ್ಕಂತಹ ಕಾನೂನುಗಳ ಕೆಳಗಡೆ ರೂಲ್ಸ್‌ಗಳನ್ನು ನಿಯಮಗಳನ್ನು ಸರಕಾರ ತಯಾರು ಮಾಡಿದೆಯೋ ಇಲ್ಲವೊ ಒಂದು ವೇಳೆ ತಯಾರು ಮಾಡಿದ್ದರೆ ಆ ರೂಲ್ಸ್‌ಗಳಲ್ಲಿ ಏನಾದರೂ ನ್ಯೂನತೆ ಇದೆಯೇ ಎಂಬುದನ್ನು ನೋಡತಕ್ಕಂತಹದ್ದು ಅತಿ ಮುಖ್ಯವಾದಂತಹ ಕೆಲಸ. ಜನರಿಂದ ಏನಾದರೂ ದೂರು ಬಂದಿದ್ದರೆ ಸರಕಾರ ತಯಾರು ಮಾಡಿದಂತಹ ನಿಯಮ ಆ್ಯಕ್ಟ್‌ನ್ನು ಸ್ಪಿರಿಟ್ ಏನು ಇದೆ ಅದಕ್ಕನುಗುಣವಾಗಿ ಇಲ್ಲ, ಆಗ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯವರು ಅದನ್ನು ತನಿಖೆಮಾಡಿ ಅದು ಆಕ್ಟ್‌ನ ಸ್ಪಿರಿಟ್ ಮತ್ತು ಆ್ಯಕ್ಟ್‌ನ ಕಲಂಗಳಿವೆ, ಅದಕ್ಕೆ ಬದ್ಧವಾಗಿ ಇದೆಯೇ ಇಲ್ಲವೇ ಎಂದು ನೋಡುತ್ತಾರೆ ಮತ್ತು ಪಾರ್ಲಿಮೆಂಟ್‌ಗೆ ತಮ್ಮ ವರದಿಯನ್ನು ಕೊಡುತ್ತಾರೆ.

ಈಗ ಈ ಕಮಿಟಿಯವರು ಏನು ಮಾಡಿದ್ದಾರೆಂಬುದನ್ನು ತಮಗೆ ಹೇಳುತ್ತೇನೆ. ಕಳೆದ ಸುಮಾರು ೧೦–೧೨ ವರ್ಷಗಳಿಂದ ಪಾರ್ಲಿಮೆಂಟ್‌ನಲ್ಲಿ ನೂರಾರು ಕಾಯಿದೆಗಳು ಪಾಸ್ ಆಗಿವೆ. ಅವೆಲ್ಲವನ್ನೂ ಬಿಟ್ಟು ಈ ಕಮಿಟಿಯವರು ಒಂದು ರಿಪೋರ್ಟನ್ನು ಸಿದ್ಧಪಡಿಸುವಾಗ ಈ ಒಂದೇ ಒಂದು ಕಾಯಿದೆಯನ್ನು ತೆಗೆದುಕೊಂಡಿದ್ದಾರೆ. ಇದು ೧೦೫ ವರ್ಷಗಳ ಹಿಂದೆ ಮಾಡಿದಂಥ ಒಂದು ಕಾಯಿದೆ. ಬ್ರಿಟಿಷರ ಕಾಲದಲ್ಲಿ, ಬ್ರಿಟಿಷ್ ಸರ್ಕಾರ ತಯಾರಿಸಿದಂಥ ಒಂದು ಕಾಯಿದೆ. ನಾನು ಅನೇಕಸಾರಿ ಹೇಳಿರತಕ್ಕ ಮಾತನ್ನೇ ಪುನಃ ಈ ಸದನದಲ್ಲಿ ಹೇಳಬಯಸುತ್ತೇನೆ. ಇದು ಒಂದು ದುರ್ದೈವ, ಒಂದು ನಾಚಿಕೆಗೇಡಿನ ಸಂಗತಿ. ನಮಗೆ ಸ್ವಾತಂತ್ರ್ಯ ಬಂದು ೪೪ ವರ್ಷಗಳಾದರೂ ಕೂಡ ಬ್ರಿಟಿಷರು ಪಾಸ್ ಮಾಡಿದಂಥ ಅನೇಕ ಕಾಯಿದೆ ಮತ್ತು ಕಾನೂನುಗಳನ್ನು ನಾವು ಹಾಗೆಯೇ ಊರ್ಜಿತವಾಗಿ ಇಟ್ಟುಕೊಂಡು ಬಂದಿದ್ದೇವೆ. ಅವರು ನಮಗೆ ಬಳುವಳಿಯಾಗಿ ಕೊಟ್ಟು ಹೋಗಿರತಕ್ಕ ಇನ್ನೂ ಅನೇಕ ಕೆಟ್ಟ ವಿಚಾರಗಳಿವೆ, ಆ ಮಾತು ಬೇರೆ. ಅನೇಕ ಕೆಟ್ಟ ಪದ್ಧತಿಗಳಿವೆ. ಅದನ್ನು ನಾವು ಬದಲಾಯಿಸಿಲ್ಲ. ಆ ಮಾತು ಬೇರೆ, ಆದರೆ ಯಾವುದು ನಮ್ಮ ರಾಜ್ಯಾಂಗಕ್ಕೆ, ನಮ್ಮ ಸಂವಿಧಾನಕ್ಕೆ ವಿರೋಧವಾಗಿದೆ, ಆ ಅಧಿಕಾರವನ್ನು ಸರಕಾರಕ್ಕೆ ಕೊಟ್ಟಿದ್ದರೋ ಅಂಥ ಒಂದು ಕಾಯಿದೆಯನ್ನೂ ಕೂಡ ನಾವು ಇನ್ನೂ ಇಟ್ಟು ಕೊಂಡಿದ್ದೇವೆ ಅದರಲ್ಲಿ ಪ್ರಮುಖವಾಗಿ ಇಂಡಿಯನ್ ಟೆಲಿಗ್ರಾಫ್ ಆ್ಯಕ್ಟ್ ಒಂದನೆಯದು ಮತ್ತು ಇನ್ನೊಂದು ಇಂಡಿಯನ್ ಪೋಸ್ಟಲ್ ಸರ್ವಿಸಸ್ ಆ್ಯಕ್ಟ್. ನಮ್ಮ ಇಂದಿನ ಕೇಂದ್ರ ಸರ್ಕಾರ ಈ ಟೆಲಿಗ್ರಾಫಿಕ್ ಆ್ಯಕ್ಟ್‌ನ್ನು ರದ್ದು ಮಾಡುತ್ತೇವೆಂದು ಹೇಳತಕ್ಕ ಅಥವಾ ಅದರಲ್ಲಿ ಆಮೂಲಾಗ್ರಹವಾಗಿ ಬದಲಾವಣೆ ಮಾಡುತ್ತೇವೆ ಎನ್ನತಕ್ಕ ಅಂದರೆ ಸಾಮಾನ್ಯ ನಾಗರೀಕನ ಹಕ್ಕಿಗೆ ಯಾವುದೇ ರೀತಿಯ ಭಂಗ ಅಥವಾ ಅದಕ್ಕೆ ಮೊಟಕು ಆಗತಕ್ಕ ರೀತಿಯಲ್ಲಿ ಅಧಿಕಾರವನ್ನು ಸರಕಾರಕ್ಕೆ ಕೊಡತಕ್ಕದ್ದನ್ನು ತೆಗೆದುಹಾಕಿ ಒಂದು ಒಳ್ಳೆಯ ಕಾನೂನನ್ನು ಜನತೆಗೆ ಕೊಡುತ್ತೇವೆ ಎನ್ನತಕ್ಕಮಾತನ್ನು ಕೊಟ್ಟಿದೆ. ಅದನ್ನು ನಮ್ಮ ಸರಕಾರ ಮಾಡುತ್ತದೆ.

ಮಾನ್ಯ ಅಧ್ಯಕ್ಷರೇ—ಈ ಸಂದರ್ಭದಲ್ಲಿ ನಾನು ಇನ್ನೊಂದು ಪ್ರಮುಖ ಘಟನೆಯನ್ನು ಮಾನ್ಯ ಸದಸ್ಯರಿಗೆ ನೆನಪುಮಾಡಿಕೊಟ್ಟರೆ ಅದು ತಪ್ಪಾಗಲಿಕ್ಕಿಲ್ಲವೆಂದು ನನ್ನ ಭಾವನೆ. ಸುಮಾರು ೨ ವರ್ಷಗಳ ಹಿಂದೆ ಪಾರ್ಲಿಮೆಂಟ್‌ನಲ್ಲಿ ಒಂದು ಕಾಯಿದೆಯನ್ನು ಅಂದಿನ ಸರಕಾರ ತನ್ನ ಬಹುಮತದ ಬೆಂಬಲದಿಂದ ಪಾಸ್‌ಮಾಡಿತು. ಅದು ಇಂಡಿಯನ್ ಪೋಸ್ಟಲ್ ಸರ್ವೀಸಸ್ ಆ್ಯಕ್ಟ್. ಅದಕ್ಕೆ ಮಾನ್ಯ ವಿರೋಧಪಕ್ಷಗಳ ತೀಕ್ಷ್ಣ ವಿರೋಧ ಕೂಡ ಆಯಿತು. ವಿರೋಧಪಕ್ಷದವರು ಇದಕ್ಕೆ ಒಪ್ಪದೆ ವಾಕೌಟ್ ಮಾಡಿದರು. ಆ ಒಂದು ಕಾಯಿದೆಯ ಕೆಳಗೆ ನಿರ್ಲಜ್ಜತನದಿಂದ ದೇಶದ ನಾಗರೀಕರಿಗೆ ಬರತಕ್ಕ ಪ್ರತಿಯೊಂದು ಪತ್ರವನ್ನೂ ಒಡೆದು ಓದಿ ನೋಡತಕ್ಕ ಅಧಿಕಾರ ಸರಕಾರಕ್ಕೆ ಇರತಕ್ಕ ಒಂದು ಪ್ರಾವಿಷನ್ ಇತ್ತು. ಕೇಂದ್ರ ಸರಕಾರ ಇದನ್ನು ಮಾನ್ಯ ರಾಷ್ಟ್ರಪತಿಗಳ ಅನುಮೋದನೆಗಾಗಿ ಅಥವಾ

ಅವರ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿತು. ಆದರೆ ಅದಕ್ಕೆ ಮಾನ್ಯ ರಾಷ್ಟ್ರಪತಿಗಳು ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲ. ನಾನು ಮಾನ್ಯ ಸದಸ್ಯರಿಗೆ ಇದನ್ನು ನೆನಪುಮಾಡಿಕೊಡಲಿಕ್ಕೆ ಬಯಸುತ್ತೇನೆ. ಈ ಅವತ್ತಿನ ರಾಷ್ಟ್ರಪತಿಗಳನ್ನು ಆರಿಸಿದವರು ನಾವಲ್ಲ, ಆದರೆ ಅದರಲ್ಲಿರತಕ್ಕ ಪ್ರಾವಿಷನ್ ಎಷ್ಟರಮಟ್ಟಿಗೆ ಪ್ರಜಾಸತ್ತೆಯ ವಿರೋಧಿಯಾಗಿತ್ತು, ಜನತೆಯ ಮೂಲಭೂತ ಹಕ್ಕುಗಳನ್ನು ಕಿತ್ತುಹಾಕುವುದಕ್ಕೆ ಎಷ್ಟರಮಟ್ಟಿಗೆ ಅದರಲ್ಲಿ ಅಧಿಕಾರ ಇತ್ತು. ನಮ್ಮ ಸರಕಾರ ಅಧಿಕಾರಕ್ಕೆ ಬಂದಮೇಲೆ ನಾವು ಅದನ್ನು ಕಿತ್ತುಹಾಕಿದ್ದೇವೆ. ಪಾರ್ಲಿಮೆಂಟ್‌ನ ಈ ಕಮಿಟಿಯವರ ಮನಸ್ಸಿನಲ್ಲಿ ಈ ಟೆಲಿಗ್ರಾಫ್ ಆ್ಯಕ್ಟ್‌ನ ಕೆಳಗಡೆ ಸರಿಯಾದ ನಿಯಮಾವಳಿಯನ್ನು ಸಿದ್ಧ ಮಾಡಲಿಕ್ಕೆ ಆಗಲಿಲ್ಲ ಎನ್ನುವುದನ್ನು ಹೇಳುವಂಥಾದ್ದು ಇದ್ದರೆ, ಅದನ್ನು ಮಾಡತಕ್ಕ ಆದನ್ನು ನೋಡತಕ್ಕ ಸಂಪೂರ್ಣ ಅಧಿಕಾರ ಆ ಸಮಿತಿಯವರಿಗೆ ಇತ್ತು. ಇದನ್ನು ಯಾರು ಕೊಶ್ಚನ್ ಮಾಡುವುದಿಲ್ಲ. ನಾನಂತೂ ಖಂಡಿತ ಮಾಡುವುದಿಲ್ಲ. ಈ ಒಂದು ಆ್ಯಕ್ಟ್‌ಗೆ ನನ್ನ ವಿರೋಧ ಇಲ್ಲ. ಆದರೆ ಇದರಲ್ಲಿ ಬರತಕ್ಕ ಒಂದು ಪ್ರಶ್ನೆ ಏನೆಂದರೆ ಈ ಒಂದು ಕಮಿಟಿ ಏನಿದೆ, ಇದು ಎನ್‌ಕ್ವೈರಿ ಕಮಿಟಿ ಆಗುವುದಿಲ್ಲ. ಎನ್‌ಕ್ವೈರಿ ಮಾಡತಕ್ಕ ಅಧಿಕಾರ ಆ ಕಮಿಟಿಗೆ ಬರುವುದಿಲ್ಲ. ಪಾರ್ಲಿಮೆಂಟ್‌ಗೆ ಅಥವಾ ಸರ್ಕಾರಕ್ಕೆ ಯಾವುದಾದರೂ ಒಂದು ಘಟನೆಯ ವಿಚಾರದಲ್ಲಿ ಪಾರ್ಲಿಮೆಂಟ್ ಕಮಿಟಿಯಿಂದ ಎನ್‌ಕ್ವೈರಿ ಆಗಬೇಕು ಎಂದು ಹೇಳತಕ್ಕ ಇಚ್ಛೆ ಇದ್ದರೆ ಅದಕ್ಕಾಗಿ ಪ್ರತ್ಯೇಕವಾದ ಕಮಿಟಿಯನ್ನು ಮಾಡುತ್ತಿದ್ದರು. ಬೋಫೋರ್ಸ್ ವಿಚಾರದಲ್ಲಿ ಒಂದು ಕಮಿಟಿ ಆಗಿತ್ತು. ಒಂದುವೇಳೆ ಇದು ಎನ್‌ಕ್ವೈರಿ ಕಮಿಟಿ ತನ್ನ ಅಧಿಕಾರವ್ಯಾಪ್ತಿಯನ್ನು ಮೀರಿ ಎನ್‌ಕ್ವೈರಿ ಮಾಡಿತು ಎಂದು ಇಟ್ಟುಕೊಳ್ಳೋಣ. ಎನ್‌ಕ್ವೈರಿ ಮಾಡುವ ಉದ್ದೇಶವಿದ್ದರೆ ಸಂಬಂಧಪಟ್ಟಂಥ ಎಲ್ಲಾ ಜನರ ತನಿಖೆ ಮಾಡಬೇಕು. I am telling you to-day, debate is the result of that.

SRI M. VEERAPPA MOILY .—We cannot understand all these things.

SRI RAMAKRISHNA HEGDE .—You are so intelligent and you don't understand what I say.

SRI M. VEERAPPA MOILY .—Both of us are not understanding. We are not discussing that issue here.

ಶ್ರೀ ರಾಮಕೃಷ್ಣ ಹೆಗಡೆ .—ಅದನ್ನು ಡಿಸ್‌ಕಸ್ ಮಾಡುವುದಕ್ಕೆ ನಾನೂ ಹೋಗುತ್ತಿಲ್ಲ. ಚರ್ಚೆ ಮಾಡಿದರೆ ಯಾವುದೂ ತೊಂದರೆ ಇಲ್ಲ. ನನಗೂ ಗೊತ್ತಿದೆ.

SRI M. VEERAPPA MOILY .—You are discussing the scope of the...

ಶ್ರೀ ರಾಮಕೃಷ್ಣ ಹೆಗಡೆ .—ಈಗ ಈ ವಿಚಾರ ಪ್ರಸ್ತಾಪ ಮಾಡಲಿಕ್ಕೆ ಕಾರಣ ಒಂದೇ ಒಂದು. ಇವರ ರಿಪೋರ್ಟ್‌ನಲ್ಲಿ ಮುಖ್ಯ ಕಾರ್ಯದರ್ಶಿಯವರ ಪತ್ರದ ಒಂದು ಸಣ್ಣ ಭಾಗಮಾತ್ರ ಉದ್ಧರಿಸಲ್ಪಟ್ಟಿದೆ. ಅದನ್ನೆ ಮಾನ್ಯ ಖರ್ಗೆಯವರು ಓದಿ ಹೇಳಲಿಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ಆಕ್ಷೇಪವನ್ನು ಈ ಕಡೆಯಿಂದ ಎತ್ತಿದ್ದಾರೆ. ಆದರೂ ಕೂಡ ಅವರು ಅದನ್ನು ಓದಿಮುಗಿಸುವ ಪ್ರಯತ್ನಮಾಡಿದರು. ಅವರು ಅದನ್ನು ಓದಿದರೆ, ಆ ಪತ್ರದ ಪೂರ್ತಿ ಪಾಠವನ್ನು ಇಲ್ಲಿಡಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ವಿಚಾರವನ್ನು ತಿಳಿದುಕೊಂಡರು. ಮತ್ತು ತಕ್ಷಣ ತಮಗೆ ಅದರ ಒಂದು ನಕಲನ್ನು ಕಳುಹಿಸಿಕೊಟ್ಟರು. ಸಂದರ್ಭದಲ್ಲಿ ನಾನು ಪಾರ್ಲಿಮೆಂಟರಿ ಕಮಿಟಿಯ ಕೇವಲ ಒಂದೇ ಒಂದು ಅದು ಔಟ್ ಆಫ್ ಕಾನ್‌ಟೆಸ್ಟ್...

SRI M. VEERAPPA MOILY .—It is a reflection.

SRI S. BANGARAPPA .—It is not only reflection on the report but the entire Committee itself.

SRI RAMAKRISHNA HEGDE .—I will face the consequences. Why do you worry ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ .—ನಾನಂ ಪಾಯಿಂಟ್ ಆಫ್ ಆರ್ಡರನ್ನು ಎತ್ತುತ್ತಿದ್ದೇನೆ. ನಿನ್ನೆ ತಾನೆ ವಿರೋಧ ಪಕ್ಷದ ನಾಯಕರಾದ ಶ್ರೀ ಚಂದ್ರೇಗೌಡರು ಅವರ ಭಾಷಣ ಪ್ರಾರಂಭ ಮಾಡಂವಾಗಲೇ ಹೇಳಿದರು. ಏನೆಂದರೆ, ನಾವು ಇವತ್ತು ಈ ವಿಚಾರವನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಪಾರ್ಲಿಮೆಂಟ್ ಮತ್ತು ವಿಧಾನ ಸಭೆಯ ಮಧ್ಯೆ ಸಮರವನ್ನು ತಂದೊಡ್ಡಬಾರದೆಂದು. ಇದನ್ನು ಅವರು ಈ ಸದನಕ್ಕೆ ಹೇಳುವುದಕ್ಕೆ ಬದಲು ಸನ್ಮಾನ್ಯ ಸದಸ್ಯರಿಗೆ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಏಕೆಂದರೆ...

ಶ್ರೀ ಡಿ. ಬಿ. ಚಂದ್ರೇಗೌಡ .—ನಾನು ಯಾರಿಗೆ ಹೇಳಬೇಕೆಂದು ನನಗೆ ಗೊತ್ತು.

SRI M. VEERAPPA MOILY.—You said yesterday, about declaring a war between Vidhana Soudha and Parliament and all that. You must discipline your member. You are the Leader. You must discipline your member. That is your first duty.

SRI D. B. CHANDRE GOWDA.—Who are you to ask me ?

SRI M. VEERAPPA MOILY.—That is your duty. Don't teach al the members.

INTERRUPTION

SRI M. VEERAPPA MOILY.—As a leader, you have to discipline your member instead of teaching others. ನಿಯಮ 60ರ ಪ್ರಕಾರ ಈ ವಿಚಾರವನ್ನು ಎತ್ತುವುದಕ್ಕೆ ಮೊದಲು ಚರ್ಚೆಯಾಗುವಾಗ ನಾವು ಒಂದು ಪರಿಧಿಯಲ್ಲಿ ಈ ವಿಚಾರಕ್ಕನುಗುಣವಾಗಿ ಮಾತನಾಡಬೇಕು, ಪಾರ್ಲಿಮೆಂಟ್‌ನ ಸಮಿತಿ ಏನಿದೆ ಅದರ ಕಾರ್ಯಭಾರ ಏನು ನಡೆದಿದೆ, ಅದರ ವ್ಯಾಪ್ತಿಯ ಬಗ್ಗೆ, ಅದರ ಮೋಟಿವ್ಸ್ ಬಗ್ಗೆ ನಾವು ಚರ್ಚೆ ಮಾಡಬಾರದೆಂದು ನಿರ್ಧಾರ ತೆಗೆದುಕೊಂಡಿದ್ದೇವೆ, ಆದರೆ ಈಗ ಆಗುತ್ತಿರುವ ಚರ್ಚೆ ನೋಡಿದರೆ Perhaps we are transgressing our domain. My request to Hon'ble Speaker is to request the Hon'ble Member to restrict within the domain. Of course, as a politician, he may have a larger domain of the nation but as far as member is concerned, you will have to restrict within the rules and I think every one of us should first understand that we are not in the national forum but we are in the assembly and we should confine to the rules which are framed and that should govern our selves while making any speeches on the Floor of this House.

MR. SPEAKER.— I will make the same appeal which I have made to every other Hon'ble Member who has participated in the discussion, I will make the same appeal to Sri Hegde also.

ಶ್ರೀ ಎಸ್. ಬಂಗಾರಪ್ಪ.— ಇಲ್ಲಿ ಮಾನ್ಯ ಹೆಗಡೆಯವರ ನಾಯಕರು ವಿರೋಧ ಪಕ್ಷದ ನಾಯಕರು. ಚಂದ್ರೇಗೌಡರು ಏನು ಹೇಳಿದ್ದಾರೆ ? ಆ ವರದಿಯ ವ್ಯಾಪ್ತಿಯ ಬಗ್ಗೆ, ಅದನ್ನು ಗಮನದಲ್ಲಿಟ್ಟುಕೊಂಡು ಪಾರ್ಲಿಮೆಂಟಿನ ಸಮಿತಿ ಆಗಲಿ ಅಥವಾ ವರದಿಯ ಬಗ್ಗೆ ಹೋಗುವುದಕ್ಕೆ ಸಂಪೂರ್ಣವಾಗಿ ಅವಕಾಶ ಇಲ್ಲವೆಂದು ತಮ್ಮ ನಾಯಕರು ಹೇಳುವ ಮಾತು.. ಅದನ್ನು ನೀವು ಅನುಸರಿಸಿದರೆ ಸಾಕು. ಇಲ್ಲಿ ನಿಮ್ಮ ನಾಯಕರು ಚಂದ್ರೇಗೌಡರು.

ಶ್ರೀ ಡಿ. ಬಿ. ಚಂದ್ರೇಗೌಡ.— ಪ್ರತಿ ಸ್ಟೇಜ್‌ನಲ್ಲೂ ನೀವು ಕೋಟ್ ಮಾಡಿದ್ದೀರಿ. ಚಂದ್ರೇಗೌಡರು ಹೇಳಿದ ಹಾಗೆ ಕೇಳಬೇಕು ಎನ್ನುವುದು ಈಗ. The whole tenor, tone and basis purview ಬರುವುದಾದರೂ on the basis of it. Now at this point of time, to the Senior Members of this House ಈಗ ನಿಮಗೆ ಬುದ್ಧಿ ಬಂದಿರುವುದು ಬಹಳ ಸಂತೋಷ.

ಶ್ರೀ ರಾಮಕೃಷ್ಣ ಹೆಗಡೆ.— ನಮ್ಮ ಪಕ್ಷದ ನಾಯಕರು ಹೇಳಿದಂತಹ ವಿಚಾರವನ್ನು ನಾನು ನೂರಕ್ಕೆ ಇನ್ನೂರರಷ್ಟು ಸಮರ್ಥನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಹೆಗಡೆ ಅವರೇ, ಒಂದು ನಿಮಿಷ......

ಶ್ರೀ ರಾಮಕೃಷ್ಣ ಹೆಗಡೆ.— ಆಮೇಲೆ ಹೇಳಿ. ಈಗ ಯಾವುದೇ ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಕ್ರಿಯಾಲೋಪ ಏನೂ ಇಲ್ಲ,

ಶ್ರೀ ಮಲ್ಲಿಕಾರ್ಜುನ ಖರ್ಗೆ.— ಈಲ್ಡ್ ಆಗುವುದಿಲ್ಲ ಅಂದರೆ ಅರ್ಥ ಇದೆ. ಕ್ರಿಯಾಲೋಪವೇ ಇಲ್ಲ ಅಂದರೆ ಏನು ? ಆದನ್ನು ಅಧ್ಯಕ್ಷರು ತೀರ್ಮಾನ ಮಾಡಬೇಕು.

ಶ್ರೀ ಟಿ. ಎಂ. ಮಂಜುನಾಥ್.— ಈಗ ಅಧ್ಯಕ್ಷರು ಯಾರೆಂದು ನಮಗೆ ಅನುಮಾನವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ. — ತಾವು ಈ ವಿಷಯವನ್ನು ಚರ್ಚೆ ಮಾಡಬಹುದೆಂದು ತೀರ್ಮಾನ ಕೊಟ್ಟಂತಹ ಕಾಲದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಈ ಪಾರ್ಲಿಮೆಂಟಿನ ಸಬಾರ್ಡಿನೇಟ್ ಕಮಿಟಿ ರಿಪೋರ್ಟ್ ಏನಿದೆ ಅದನ್ನು ಚರ್ಚೆ ಮಾಡುವ ಅಧಿಕಾರ ನಮಗೆ ಇಲ್ಲ, ಅದರಲ್ಲಿ ಬಳಸಿರತಕ್ಕ ಭಾಷೆಗಳನ್ನು ಈ ಚರ್ಚೆಯ ಕಾಲದಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಸಂಪೂರ್ಣ ಅವಕಾಶ ಇದೆ ಎಂದು ಹೇಳಿದ್ದೀರಿ. ಆದುದರಿಂದ ಆ ವರದಿಯಲ್ಲಿ ಕಂಡಂತಹ ಒಂದು ಪತ್ರವನ್ನು ಚರ್ಚೆಯ ವಸ್ತುವನ್ನಾಗಿ ನಾವು ಬಳಸಿಕೊಂಡಿದ್ದೇವೆ. ನಾನೂ ಕೂಡ ಹೇಳಿದ್ದೇನೆ. ಅಷ್ಟಕ್ಕೆ ಸೀಮಿತಗೊಳಿಸುವುದಕ್ಕೆ ಹೆಗಡೆಯವರಿಗೂ ಅವಕಾಶ ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ಈಗ ಸ್ವಲ್ಪಮಟ್ಟಿಗೆ ಮಾನ್ಯ ಮೊಯ್ಲಿನವರಷ್ಟು, ಮಾನ್ಯ ಬಂಗಾರಪ್ಪನವರಷ್ಟು ಅನುಭವ ನನಗೆ ಇಲ್ಲದಿರಬಹುದು. ಆದರೆ ನನಗೂ ಸ್ವಲ್ಪಮಟ್ಟಿಗೆ ಸಂಸದೀಯ ಕಾರ್ಯಕಲಾಪಗಳು ಅಂದರೆ ಏನು, ನಡವಳಿಕೆ ಅಂದರೆ ಏನು. ಸಂಸದೀಯ ಸಭ್ಯತೆ ಅಂದರೆ ಏನು ಎಂಬುದು ನನಗೆ ಸ್ವಲ್ಪಮಟ್ಟಿಗೆ ಗೊತ್ತುಂಟು. ಸಂಸದೀಯ ಅಂದರೆ ಅಲ್ಲಿ. ಇಲ್ಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸಭ್ಯತೆ ಅಂದರೆ ಏನು ಎಂದು ಇಲ್ಲಿ ಕುಳಿತು ಅನುಭವ ಪಡೆಯಬೇಕು. ಇಲ್ಲಿ ಕುಳಿತುಕೊಂಡು ನೀವು ಏನು ಸಭ್ಯತೆ ತೋರಿಸಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.— ಈ ಕಡೆ ಇದ್ದಾಗ ನೀವು ಏನು ಮಾಡುತ್ತಿದ್ದೀರಿ, ಅಲ್ಲಿ ಹೋದ ಮೇಲೆ ಸಹ ಅದೇರೀತಿ ಮಾಡುತ್ತಿದ್ದೀರಿ ಎಂಬುದು ಗೊತ್ತಿದೆ ಈಗ ನಾನು ಈ ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯ ಮಂತ್ರಿಗಳು ಮುಖ್ಯ ಕಾರ್ಯದರ್ಶಿಗಳ ಪತ್ರದ ಪೂರ್ತಿ ಪಾಠದ ನಕಲನ್ನು ಇಲ್ಲಿ ಇಡದೆ ಇದ್ದರೆ ನಾನು ಈ ವಿಚಾರವನ್ನು ಎತ್ತುತ್ತಿರಲಿಲ್ಲ. ಈಗ ಅವರು ಏನು ಓದಿ ಹೇಳಿದರು ಮತ್ತು ಮುಖ್ಯ ಕಾರ್ಯದರ್ಶಿಗಳ ಪತ್ರವನ್ನು ನಾನು ನೋಡಿದೆ. ಅದನ್ನು ನೋಡಿದಾಗ ಏನು ಒಂದು ಗ್ಲಾರಿಂಗ್ ಒಂದು ಲೋಕುನಾ ಇದೆ, ಅದನ್ನು ಎತ್ತಿ ಹೇಳಲಿಚ್ಛಿಸಿ. ... ಈಗ ಏನು ಮೋಟೀವ್ ಹೇಳಿದೆನೇ ? ಅವರು ಉದ್ದೇಶ ಪೂರ್ವಕವಾಗಿ ಈ ರೀತಿ ಮಾಡಿದ್ದಾರೆಂದು ನಾನು ಆಪಾದನೆ ಮಾಡಲಿಲ್ಲ ನನ್ನ ಮನಸ್ಸಿನಲ್ಲಿ ಆ ರೀತಿ ಇದ್ದರೆ ಅದನ್ನು ಅವರಿಗೆ ಬರೆಯುತ್ತೇನೆ ಅಥವಾ ನನಗೆ ಬೇರೆ ಮಾರ್ಗ ಇದೆ. ನಾನು ಪ್ರೆಸ್‌ನಲ್ಲಿ ಕೂಡ ಹೇಳುತ್ತೇನೆ.

೨–೪೦ ಪಿ. ಎಂ.

ಈ ರೀತಿ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಇಲ್ಲದಿದ್ದರೆ ಇದೊಂದೇ ಭಾಗನ್ನು out of context ಉದ್ಧರಿಸುವ ಅಗತ್ಯ ಇರಲಿಲ್ಲ, ಯಾವ ಕಮಿಟಿಯೂ ಮಾಡುವುದಿಲ್ಲ ಎಂದು ಹೊರಗಡೆ ಹೇಳುತ್ತೇನೆ. ನನಗೆ ಯಾರೂ ಬಾಯಿ ಕಟ್ಟುವವರು ಇಲ್ಲ. ಆ ಸ್ವಾತಂತ್ರ್ಯ ಇವೊತ್ತಿನವರೆಗೆ ಈ ಕಾಲದಲ್ಲಿ ಇದೆ. ಆದರೆ ಪೂರ್ತಿ ನೋಡಿದ ಮೇಲೆ ಯಾರಿಗಾದರೂ ಅನ್ನಿಸಬೇಕು. ಮಾನ್ಯ ಸಭಾಧ್ಯಕ್ಷರೆ ತಮಗೂ ಅನ್ನಿಸಿರಬೇಕು, ಏತಕ್ಕೆ ಇದೊಂದನ್ನು ಮಾತ್ರ ಉದ್ಧರಿಸಿದ್ದಾರೆ ಎಂದು. ''ಎ'' ಇಲ್ಲ, ''ಬಿ'' ಇಲ್ಲ, ''ಸಿ'' ಇಲ್ಲ, ''ಇ'' ಇಲ್ಲ ಬರೀ ''ಡಿ'' ಒಂದು ಕೊಟ್ಟಿರುವುದಕ್ಕೆ ಕಾರಣ ಏನು ? ನಾನು ಈ ವಿಚಾರದಲ್ಲಿ ಇನ್ನು ಒಂದು ಹೆಜ್ಜೆಯೂ ಮುಂದೆ ಹೋಗುವುದಿಲ್ಲ, ಇದನ್ನು ಇಷ್ಟಕ್ಕೇ ಬಿಡುತ್ತೇನೆ. ಆದರೆ ಇಷ್ಟು ಮಾತ್ರ ಹೇಳಬೇಕು ಆ ರಿಪೋರ್ಟನ್ನು ನಾನು ನೋಡಿದ್ದೇನೆ, ಆ ರಿಪೋರ್ಟ್ ಬಗ್ಗೆ ಯಾರು ಯಾರು ಯಾವರೀತಿಯ ಪರಿಭಾಷೆ ಕೊಟ್ಟಿದ್ದಾರೋ ಇಂಟರ್‌ಪ್ರಿಟೇಷನ್

ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಪತ್ರಿಕೆಗಳಲ್ಲಿ ಪ್ರಚಾರ ಏನಾಗಿದೆ ಆ ಪ್ರಕಾರ ನನ್ನ ರೆಪ್ಯುಟೇಷನ್‌ಗೆ ಸಂಬಂಧಪಟ್ಟಿದ್ದು. ಅದಕ್ಕಾಗಿ ನಾನು ಹೇಳಲೇಬೇಕು. even to set the records straight ಆ ಒಂದು ರಿಪೋರ್ಟ್‌ನಲ್ಲಿ ಯಾವುದೇ ಒಂದು ಶಬ್ದ ನನ್ನ ಇನ್‌ವಾಲ್ವ್‌ಮೆಂಟ್ ವಿಚಾರದಲ್ಲಿ ಇಲ್ಲ. ಆ ರಿಪೋರ್ಟ್‌ನಲ್ಲಿ ಯಾವುದೇ ಒಂದು ಫೈಂಡಿಂಗ್ಸ್ ಇಲ್ಲ. ಆ ರಿಪೋರ್ಟ್‌ನಲ್ಲಿ ಯಾವುದೇ ಒಪೀನಿಯನ್ ಕಮಿಟಿಯವರು ಎಕ್ಸ್‌ಪ್ರೆಸ್ ಮಾಡಿಲ್ಲ. ಅದರ ಪ್ರತಿ ಬೇಕಾದರೆ ನಾನು ಕೊಡುತ್ತೇನೆ. ಮಾನ್ಯ ಸದಸ್ಯರು ಬೇಕಾದರೆ ಓದಲಿ. ಇದರಲ್ಲಿ ಎರಡು ವಿಚಾರ ಇದೆ. ಒಂದು ಹೋಮ್ ಮಿನಿಸ್ಟ್ರಿ ಮೇಲೆ ಹೇಳಿದ್ದಾರೆ. they have expressed their unhappiness that inspite of several reminders the Home Ministry failed to furnish the replies. ಅದಾವುದು ? ಕೇಂದ್ರದ ಹೋಮ್ ಮಿನಿಸ್ಟ್ರಿ. ಆಮೇಲೆ ಎರಡನೆಯದು ಏನು ಹೇಳಿದ್ದಾರೆಂದರೆ if we can call it a kind of finding or opinion, ಆದರಲ್ಲಿಏನು ಹೇಳಿದ್ದಾರೆಂದರೆ ಇವತ್ತು ಯಾವ ರೂಲ್ಸ್ ಇವೆಯೋ ಇಂಡಿಯನ್ ಟೆಲಿಗ್ರಾಫ್ ಆಕ್ಟ್ ಕೆಳಗೆ ಯಾವ ರೂಲ್ಸ್ ಇದೆಯೋ ಅದರ ಪ್ರಕಾರ ಎಗ್ಸಿಕ್ಯುಟೀವ್‌ಗೆ ಅಧಿಕಾರದ ಮಿಸ್‌ಯೂಸ್ ಮಾಡತಕ್ಕ ಅವಕಾಶ ಇದೆ, ಸ್ಕೋಪ್ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಮುಂದಿನ ಕ್ರಮ ತೆಗೆದುಕೊಳ್ಳಬೇಕು ಎಂದು ಇಷ್ಟೇ ಆದರಲ್ಲಿದೆಯೇ ಹೊರತು, ಇದರ ಹೊರತು ಒಂದು ಬಿಷ್ಟ ಕರ್ನಾಟಕದ ಘಟನೆ ಕಾಯಿದೆಗೆ ವಿರುದ್ಧವಾಗಿ ಆಗಿದೆ ಎಂದಾಗಲೀ ಅಥವಾ ಇದು ಮಿಸ್‌ಯೂಸ್ ಆಗಿದೆ ಎಂದಾಗಲೀ ಅಥವಾ ಇದರಲ್ಲಿ ಇಂಥವರು ಇನ್‌ವಾಲ್ವ್ ಆಗಿದ್ದಾರೆ ಎಂದಾಗಲೀ ಆ ರಿಪೋರ್ಟ್‌ನಲ್ಲಿ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಈಲ್ಡ್ ಆಗುವುದಾದರೆ, to help your debate, I would like to say something.

SRI RAMAKRISHNA HEGDE.—To help my debate ? then O. K. Thank you.

SRI M. VEERAPPA MOILY.—After all it is your point, it is only for the reference I am using, not for discussion. You have stated 2.24 paragraph, of course, if you can go through it further, what does it say ? I am just making a reference.

MR. SPEAKER.—At this point of time I would like to caution the hon'ble members that the parameters which I have set earlier when I gave my ruling on two occasions that I don't want to disown the time honoured convention that we do not generally discuss the reports of the Committees of Parliament.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ ತಾವು ಹೇಳತಕ್ಕದ್ದನ್ನು ಪಾಲನೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿರತಕ್ಕ ಅಭಿಪ್ರಾಯಕ್ಕೆ ನಾವು ಮನ್ನಣೆ ಕೊಡುತ್ತೇವೆ. ಹಾಗಾದರೆ ಮಾನ್ಯ ಸದಸ್ಯರಾದ ರಾಮಕೃಷ್ಣ ಹೆಗಡೆಯವರು ಈಗಾಗಲೇ he has stated in so many words about the findings of the committee.

MR. SPEAKER.—I request to bear with me.

ಶ್ರೀ ಎಸ್. ಬಂಗಾರಪ್ಪ.—ಈಗ ಅವರು ಹೇಳಿರತಕ್ಕ ಪದಗಳು ಕಡತದಲ್ಲಿ ದಾಖಲಾಗಿವೆ. ಅವರು ಹೇಳಿರುವುದು ಏನು ದಾಖಲೆಗೆ ಹೋಗಿವೆ, ದಯಮಾಡಿ ಅದನ್ನು ತೆಗೆದುಹಾಕಿದರೆ ಬಹಳ ಸಂತೋಷ. ತಾವು ಹೇಳಿರತಕ್ಕದ್ದನ್ನು ಮೊಯಿಲಿಯವರು ಪಾಲನೆ ಮಾಡುತ್ತಾರೆ. ನಾವೂ ಕೂಡ ಪಾಲನೆ ಮಾಡುತ್ತೇವೆ. Because he has stated something about the findings of that committee itself about the report, we have to say something now.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ತಾವು ಏನು......

ಶ್ರೀ ಎಸ್. ಬಂಗಾರಪ್ಪ.—ಫೈಂಡಿಂಗ್ಸ್ ಮೇಲೆ ನಾವು ಹೇಳುವುದಕ್ಕೆ ಹೋಗೇ ಇಲ್ಲ......

ಶ್ರೀ ಡಿ. ಬಿ. ಚಂದ್ರೇಗೌಡ.—ಕಮಿಟಿ ಯಾವುದನ್ನೂ ಹೇಳಿಲ್ಲ, "ಇಲ್ಲ" ಅನ್ನುವುದನ್ನು ಹೇಳುವುದು ಅಪರಾಧವೆ? ಇದ್ದದ್ದು ಹೇಳುವುದು ಅಪರಾಧ. "ಇಲ್ಲ" ಎಂದು ಹೇಳುವುದು ಅಪರಾದ ಹೇಗೆ ಆಗುತ್ತದೆ.

SRI S. BANGARAPPA,—Will not that amount to saying something about the findings of the committee ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ನನಗೆ ಅರ್ಥ ಆಗತಕ್ಕ ವಿಚಾರ ಅಲ್ಲ. ಈ ಕಮಿಟಿಯೊಳಗಿನ ಒಂದು ಪ್ಯಾರ ಓದಿ ಹೇಳಬಹುದು. ಅದು ಯಾವರೀತಿ ಎಂದರೆ ನನ್ನನ್ನು, ನನ್ನ ಮೇಲೆ ಏನು ಒಂದು ಅಪಪ್ರಚಾರ ಮಾಡಿದ್ದಾರೆ, ಅದಕ್ಕೆ ಮೆರಗು ಕೊಡುವ ರೀತಿಯಲ್ಲಿ......ಇನ್ ಸೆಲ್ಫ್ ಡಿಫೆನ್ಸ್ ನಾನು ಏನೂ ಹೇಳಕೂಡದಾ ? ಇದು ಯಾವ ತರಹದ ನ್ಯಾಯ ? ಆರೋಪ ಮಾಡಬಹುದು......

MR. SPEAKER.—If certain parts of the report which might come in handy for the hon'ble member to place it before the House to draw the attention of the House in sheer self-defence, how can you prevent him ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಮಾಡಕೂಡದಾ ನಾನು, ಅಷ್ಟೇ ಅಲ್ಲ......

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ ನಾನು ಏನೂ ಹೇಳುವುದಿಲ್ಲ. ಆದರೆ ಇಡೀ ವರದಿಯ ಫೈಂಡಿಂಗ್ಸ್ ಮೇಲೆ ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ. ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ಮೊಯಿಲಿಯವರು ಒಂದು ವಿಚಾರವನ್ನು ದಯವಿಟ್ಟು ನೆನಪಿಡಬೇಕು. ಈ ಪಾರ್ಲಿಮೆಂಟ್ ಕಮಿಟಿಯ ರಿಪೋರ್ಟ್ ಅಂದರೆ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ರಿಪೋರ್ಟ್ ಇದೆಯಲ್ಲಾ, that is not a classified document. It is a public document. It has been laid on the Table of the House. The moment a document or any report is laid on the table of the House, it becomes a public document. ಇಲ್ಲಿ ಅದರ ಬಗ್ಗೆ ಡಿಸ್‌ಕಸ್ ಮಾಡಬೇಡಿ ಎಂದರೆ ನಾನು ಒಪ್ಪುತ್ತೇನೆ. ಡಿಸ್‌ಕಸ್ ಮಾಡುವುದು ಬೇಡ. ಆದರೆ ಕೋಟ್ ಮಾಡಬಾರದು ಎಂದರೆ, ಇದನ್ನು ಯಾವುದೇ ರೂಲ್ ಕೂಡಾ ಹೇಳುವುದಿಲ್ಲ. ಕೋಟ್ ಮಾಡುವುದಕ್ಕೆ ಯಾರೂ ವಿರೋಧ ಮಾಡಿಲ್ಲ. ಕೋಟ್ ಮಾಡುವುದಕ್ಕೂ ವಿರೋಧ ಮಾಡುವುದಾಗಿದ್ದರೆ ಖರ್ಗೆಯವರು ಹೇಳಿದ ಮೇಲೆ ಅದನ್ನು ಕಡತದಿಂದ ತೆಗೆದುಹಾಕಬೇಕಾಗಿತ್ತು. ಅದಕ್ಕೆ ನಾವು ಆಗ್ರಹ ಮಾಡುತ್ತಿದ್ದೆವು. ಆ ವಿಷಯ ಕಾಯ್ದೆಗೆ ವಿರುದ್ಧವಾಗಿದ್ದು, ಅದಕ್ಕೆ ಅವಕಾಶ ಕೊಡಬಾರದು ಎಂದು ನಾವು ಮಾನ್ಯ ಅಧ್ಯಕ್ಷರಿಗೆ ಬಿನ್ನಹ ಮಾಡಿಕೊಳ್ಳುತ್ತಿದ್ದೆವು. ಆದರೆ ಅದನ್ನು ನಾವು ಮಾಡಲಿಲ್ಲ. because any public document can be quoted here. ಅದಕ್ಕೆ ನಾನು ಹೇಳುತ್ತಿದ್ದೇನೆ. ಈಗ ನಾನು ಅದನ್ನು ಕೋಟ್ ಮಾಡಿಲ್ಲ. ಅದು ನನ್ನ ಹತ್ತಿರ ಇದೆ. ಕೋಟ್ ಮಾಡಬೇಕೆಂದರೆ ಕೋಟ್ ಮಾಡುತ್ತೇನೆ ಆದರೆ ಅದರ ಅಗತ್ಯ ಇಲ್ಲ ಎಂದು ನಾನು ಹೇಳುತ್ತೇನೆ. ಅವರ ಒಂದು ಆರ್ಗ್ಯುಮೆಂಟ್‌ನ್ನೇ ತೆಗೆದುಕೊಳ್ಳೋಣ. ಅವರ ಆರ್ಗ್ಯುಮೆಂಟ್ ಏನು ? ನೋಡಿ, ಚೀಫ್ ಸೆಕ್ರೆಟರಿ ಹೇಳಿದ್ದಾರೆ, ಅಥರೈಸ್ಡ್ ಆಫೀಸರ್ ಲಿಸ್ಟ್ ತಯಾರು ಮಾಡುತ್ತಾರೆ, ಆದಾದಮೇಲೆ ಆಡಿಷನ್ ಮತ್ತು ಡಿಲಿಷನ್ ಇದ್ದರೆ ಅದನ್ನು ಸಂಬಂಧಪಟ್ಟ ಆಫೀಸರ್ ಮುಖ್ಯಮಂತ್ರಿಗಳ ಆದೇಶ ಅಥವಾ ಪರ್ಮೀಷನ್ ತೆಗೆದುಕೊಂಡು ಮಾಡುತ್ತಾರೆ ಎಂದು.

ಇದನ್ನು ಹೇಳಿದವರು ಯಾರು ? ಯಾವ ಕಾಲದಲ್ಲಿ ಈ ಘಟನೆ ನಡೆಯಿತು, ಆ ಕಾಲದಲ್ಲಿ ಇದ್ದಂತಹ ಸರ್ಕಾರದ ಮುಖ್ಯ ಕಾರ್ಯದರ್ಶಿಯಲ್ಲ. ಅವರನ್ನು ಈ ಕಮಿಟಿಯವರು ಎಕ್ಸಾಮಿನ್ ಮಾಡಲಿಲ್ಲ. ಈ ಕಮಿಟಿಯವರಿಗೆ ನಿಜವಾದ ಫ್ಯಾಕ್ಟ್ಸ್ ಏನು ಎಂದು ತಿಳಿದುಕೊಳ್ಳುವ ಅಗತ್ಯ ಇದ್ದಿದ್ದರೆ ಅವಗ ಹಿಂದಿನ ಮುಖ್ಯ ಕಾರ್ಯದರ್ಶಿಗಳು ಯಾರಿದ್ದರೋ ಅವರನ್ನು ಕರೆಸಬಹುದಾಗಿತ್ತು,

ಏಕೆಂದರೆ ಅವರಿಗೆ ಗೊತ್ತಿತ್ತು. ಅದರ ನಂತರ, ಐದು ವರ್ಷಗಳ ನಂತರ ಬಂದಂತಹ ಮುಖ್ಯ ಕಾರ್ಯದರ್ಶಿಗಳನ್ನು ಕರೆಸಿ ಕೇಳಿದರೆ ಅವರು ಏನು ಹೇಳುತ್ತಾರೆ ? ನಾವು ಇದ್ದಾಗ ಏನಾಯಿತೆ ಎಂದು ಹೇಳುವುದು ಅವರಿಗೆ ಗೊತ್ತಿದೆಯೋ ? ಅವರಿಗೆ ಪರ್ಸನಲ್ ನಾಲೆಡ್ಜ್ ಏನಾದರು ಇದೆಯೋ ? ಅದಕ್ಕಾಗಿ ಅವರು ಒಂದು ಹೇಳಿಕೆಯನ್ನು ಕೊಡುವ ಪ್ರಸಂಗ ಬಂತು. ಕೆ.ಎಸ್.ಎನ್.ಮೂರ್ತಿಯವರು ಹೇಳಿದ್ದು ಈ ರೀತಿ ಇದೆ :

"That his deposition before the Parliamentary Committee of Subordinate Legislation is: With reference to the Telephone tapping in Karnataka during 1987-88 he had only preseribed the procedure to be followed by the officers concerned in ordering the tapping of telephones. He said that it was not within his personal knowledge, whether the telephone tapping and the list of persons whose telephones were tapped from time to time, had the prior approval of the then Chief Minister or not.'' ಇದಕ್ಕಿಂತ ಹೆಚ್ಚಾಗಿ ಇನ್ನು ಯಾರು ಹೇಳಬೇಕು ಹೇಳಿ.

ಶ್ರೀ ಅಜೀಜ್‌ಸೇಠ್.— ಈ ಮುಖ್ಯ ಕಾರ್ಯದರ್ಶಿಯವರು ಏನಾಯಿತು ಎಂದು ಗೊತ್ತಿಲ್ಲ ಅಂದರೆ ಹಿಂದೆ ಇದ್ದಂತಹ ಸತೀಶ್ಚಂದ್ರ ಮುಖ್ಯ ಕಾರ್ಯದರ್ಶಿ ಅವರನ್ನು ಕೇಳಬೇಕಾಗಿತ್ತು ಎಂದು ತಾವೇ ಹೇಳಿದಿರಿ. Mr. K.S.N. Murthy was not the Chief Secretary when you were there as the Chief Minister.

ಶ್ರೀ ರಾಮಕೃಷ್ಣ ಹೆಗಡೆ.— ತಾವು ದಯವಿಟ್ಟು ಉರ್ದುವಿನಲ್ಲಿ ಮಾತನಾಡಿ.

ಶ್ರೀ ಅಜೀಜ್‌ಸೇಠ್.— (ಉರ್ದುವಿನಲ್ಲಿ ಮಾತನಾಡಿದರು)

ಶ್ರೀ ವಾಟಾಳ್‌ನಾಗರಾಜ್.— ಈ ಸಂಭಾಷಣೆ ಅವರು ಇಬ್ಬರಿಗೆ ಅರ್ಥವಾಯಿತು, ಅದು ನಮಗೆ ಅರ್ಥವಾಗುವುದಿಲ್ಲ. ಇದು ಬಹಳ ಅಪಾಯ.

ಅಧ್ಯಕ್ಷರು.— ನಿಮ್ಮಿಬ್ಬರಿಗೆ ಅರ್ಥವಾಯಿತೇ ವಿನಹ ನಮಗೆ ಯಾರಿಗೂ ಅರ್ಥವಾಗಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಜೀಜ್‌ಸೇಠ್‌ರವರು ಉರ್ದುವಿನಲ್ಲಿ ಮಾತನಾಡಿದರೆ ಮಾನ್ಯ ಹೆಗಡೆಯವರಿಗೆ ಅರ್ಥವಾಗುತ್ತದೆ. ಅವರು ಕನ್ನಡದಲ್ಲಿ ಮಾತನಾಡಿದರೆ ಯಾರಿಗೂ ಅರ್ಥವಾಗುವುದಿಲ್ಲ. (ಸಭೆಯಲ್ಲಿ ನಗು)

ಶ್ರೀ ರಾಮಕೃಷ್ಣ ಹೆಗಡೆ.— ಆದುದರಿಂದ ಯಾವ ಪತ್ರ ಒಂದು ಪ್ಯಾರಾಗ್ರಾಫ್‌ನು ಅಥವಾ ಐದು ಪ್ರಶ್ನೆಗಳ ಪೈಕಿ, ಒಂದು ಪ್ರಶ್ನೆಗೆ ಕೊಟ್ಟ ಉತ್ತರವನ್ನು ಮಾನ್ಯ ಖರ್ಗೆಯವರು ಅಷ್ಟೊಂದು ಉತ್ಸಾಹದಿಂದ ಓದಿ ಹೇಳಿದರೋ, ಅದು ಕೇವಲ ನಾರ್ಮಲ್ ಪ್ರೊಸೀಜರ್‌ಗೆ ಸಂಬಂಧಪಟ್ಟಂತಹದ್ದು ಎಂದು ಯಾರು ಆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ಅವರೇ ಹೇಳಿದ್ದಾರೆ. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಪುನಃ ಒಂದಾವರ್ತಿ ನಾನು ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ, ಜೂನ್ ೨೧, ೧೯೮೭ನೇ ಇಸವಿಯಲ್ಲಿ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿದ ಯಾವ ಒಂದು ಆರ್ಡರ್ ಇದೆ, ಅದನ್ನು ನಾನು ಏನು ಓದಿ ಹೇಳಿದೆ, ಆ ಆರ್ಡರ್ ಇರುವ ಫೈಲನ್ನು ತರಿಸಿ ದಯವಿಟ್ಟು ಈ ಸದನದ ಮುಂದಿಡಬೇಕು. ಸತ್ಯ ಎಲ್ಲಿದೆ ಎನ್ನುವುದು ಆಗ ನಿಮಗೆ ಗೊತ್ತಾಗುತ್ತದೆ. ಸತ್ಯ ಅದರಲ್ಲಿ ಅಡಗಿದೆ. ಅದರಲ್ಲಿ ಏನಾದರೂ ನನ್ನ ಒಪ್ಪಿಗೆ ನನ್ನ ಸಹಿ, ನನ್ನ ಆದೇಶ. ನನ್ನ ಆರ್ಡರ್ ಇದ್ದರೆ ನಾನು ಇವತ್ತೂ ಹೇಳುತ್ತೇನೆ. ನಾನು ಈ ಕ್ಷಣದಿಂದ ರಾಜಕೀಯ ನಿವೃತ್ತಿ ಮಾಡಿಕೊಳ್ಳುತ್ತೇನೆ. ಆದರೂ ನಿಮಗೆ ಸಮಾಧಾನವಿಲ್ಲವಲ್ಲ. ಇಲ್ಲಿ ಕೆಲವರು ನನ್ನಲ್ಲಿ ಏನನ್ನು ನೋಡುತ್ತಾರೋ ನನಗೆ ಗೊತ್ತಿಲ್ಲ. ನನ್ನಲ್ಲಿ ಪ್ರಹಲ್ಲಾದನನ್ನು ನೋಡುತ್ತಾರಾ ? ಪ್ರಹಲ್ಲಾದನನ್ನು ಬೆಂಕಿಗೆ ಹಾಕಿದರೂ ಸಾಯುವುದಿಲ್ಲ; ಬಂಡೆಯಿಂದ ಕೆಳಗೆ ಉರುಳಿಸಿದರೂ ಸಾಯುವುದಿಲ್ಲ. ನನ್ನಲ್ಲಿ ಪ್ರಹಲ್ಲಾದನನ್ನು ನೋಡುತ್ತೀರಿ ಎಂದು ಕಾಣುತ್ತದೆ.

ಶ್ರೀ ವಾಟಾಳ್‌ನಾಗರಾಜ್.— ಇದು ಚಂದ್ರಹಾಸನ ಕತೆ ಆಯಿತು.

ಶ್ರೀ ಎಂ. ಮಹಾದೇವ್.— ಮಾನ್ಯ ಹೆಗಡೆಯವರೆ, ಒಂದು ನಿಮಿಷ. ಈಗ ಏನಾಗಿದೆ ಅಂದರೆ ಬೆಟ್ಟ ಅಗೆದು ಇಲಿ ಹಿಡಿದ ಹಾಗೆ ಆಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.— ನೀವು ಏನೇ ಹೇಳಿದರೂ ಯಾವುದೇ ರೀತಿಯ ಅಪಪ್ರಚಾರ ಮಾಡಿದರೂ ಏನು ನನ್ನ ಹೆಸರು ಇದೆಯೋ, ಅದು ಒಳ್ಳೆಯದೋ ಅಥವಾ ಕೆಟ್ಟದ್ದೋ ಅದಕ್ಕೆ ಯಾವುದೇ ತರಹದ ಎಫೆಕ್ಟ್ ಆಗುವುದಿಲ್ಲವೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ಈ ಮಾತನ್ನು ಸ್ವಲ್ಪ ದೇವಿಲಾಲ್‌ರವರ ಹತ್ತಿರ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ ನಾನು ಮೂರ್ನಾಲ್ಕು ನಿಮಿಷ ಮಾತ್ರ ತೆಗೆದು ಕೊಳ್ಳುತ್ತೇನೆ, ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ಎರಡು ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿದುಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಆದರೆ ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಯಾರ ಟೆಲಿಫೋನ್ ಟ್ಯಾಪ್ ಮಾಡಬೇಕೆಂದು ಅಂತ ಹೇಳಿ ಆ ಅಧಿಕಾರಿ ನಿರ್ಣಯ ಮಾಡುತ್ತಾರೋ, ಆ ಆರ್ಡರಿನಲ್ಲಿ ರೀಸನ್ ಏನು, ಯಾವ ಕಾರಣಕ್ಕಾಗಿ ಎಂದು ಬರೆಯೊಲ್ಲ. ಇದನ್ನು ನೀವು ಮರೆಯಕೂಡದು. ರಾಜಕೀಯದಲ್ಲಿರುವವರೆಲ್ಲರೂ ಸಂಭಾವಿತ ರಾಗಿರುತ್ತಾರೆಂದು ನಾವು ಗ್ಯಾರಂಟಿ ಮಾಡುವುದಕ್ಕಾಗುವುದಿಲ್ಲ. ಒಬ್ಬ ರಾಜಕೀಯ ವ್ಯಕ್ತಿ ಸಂಬಂಧ ಬೇರೆ ವ್ಯವಹಾರ ಮಾಡುವ ವ್ಯಕ್ತಿಯ ಜೊತೆಗೆ ಸಂಬಂಧವಿರುತ್ತದೆ, ಅವರ ಚಲನವಲನದ ಬಗ್ಗೆ ಸಂದೇಹ ಬರುತ್ತದೆ. ಅಂತಹ ಸಂದರ್ಭದಲ್ಲಿ for reasons to be recorded ಇಂಟಲಿಜೆನ್ಸ್ ಆಫೀಸರ್, ಅವರ ಮೇಲಿನ ಚಲನವಲನವನ್ನು ವಾಚ್ ಮಾಡುತ್ತಿದ್ದರೆ, ಅವರ ಮೇಲೆ ನಿಗಾ ಇಟ್ಟರೆ, ಅವರ ಟೆಲಿಫೋನ್ ಟ್ಯಾಪ್ ಮಾಡುತ್ತಿದ್ದರೆ. ಅದು ಇವೊತ್ತಿನ ಕಾಯಿದೆ ಕೆಳಗಡೆ ಅದು ಆ ಅಧಿಕಾರಿಯ ಅಪರಾಧ ಆಗುವುದಿಲ್ಲ. ಎಲ್ಲಿಯವರೆಗೆ ಈ ಕಾಯಿದೆ ಇರುತ್ತದೆ. ಈ ರೂಲ, ಇರುತ್ತದೆಯೋ ಅಲ್ಲಿಯವರೆಗೆ ಯಾರೇ ಅಧಿಕಾರಿ ಯಾರದೇ ಟೆಲಿಫೋನ್ ಟ್ಯಾಪ್ ಮಾಡಿದರೆ ಅವನಿಗೆ ಶಿಕ್ಷೆಕೊಡುವುದಕ್ಕೆ ಆಗುವುದಿಲ್ಲ. ಅದು ಅವರಿಗೆ ಸಂಬಂಧಪಟ್ಟ ಡಿಸ್ಕ್ರಿಪನರಿ ಪವರ್ ಅಕಸ್ಮಾತ್ ಏನಾದರೂ ಒಂದು ಘಟನೆ ಆಗಬಾರದ ಘಟನೆ ಆದರೆ ಆಗ He will be answerable to the Government. He will be hauled up. ಅವರು ಹೇಳುತ್ತಾರೆ. ನೀವು ಅಧಿಕಾರದಲ್ಲಿದ್ದರೂ ಕೂಡ ನೀವು ಇದನ್ನು ಮಾಡಲಿಲ್ಲ; You have failed in your duty ಎಂಬ ಆರೋಪಕ್ಕೆ ಆ ಅಧಿಕಾರಿ ಗುರಿಯಾಗುತ್ತಾನೆ ಇದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಿ. ಆದ್ದರಿಂದ ಎಲ್ಲಿಯವರೆಗೆ ಈ ಒಂದು ಕಾಯಿದೆ ಕೆಳಗೆ ಮಾಡಿರತಕ್ಕ ರೂಲ್ಸ್ ಇದೆ, ಈ ಟೆಲಿಫೋನ್ ಟಾಪಿಂಗ್ ಯಾರೇ ಮಾಡಲಿ, ಯಾವಕಾರಣಕ್ಕೇ ಮಾಡಲಿ ಅದನ್ನು ರೆಕಾರ್ಡ್ ಮಾಡಿದರೆ, He will have full authority. Nobody can question it. Mr. Gundu Rao has made a statment in this House. ಆಮೇಲೆ ಯಾರ ಹೆಸರನ್ನು ಯಾರ ನಂಬರನ್ನು ಯಾವ ವ್ಯಕ್ತಿಗಳ ಟೆಲಿಫೋನ್ ಟ್ಯಾಪ್ ಮಾಡಬೇಕೆಂದು ಇದೆಯೋ, ಅದು ಕೂಡ ಆ ಆರ್ಡರಿನಲ್ಲಿರುತ್ತದೆ. This is the procedure that has been followed for the last nine decades, or more than one century. ಈಗ ಒಂದು ವಿಚಿತ್ರವಾದಂತಹ ವಾದವನ್ನು ಮಾನ್ಯ ಸದಸ್ಯರು ಮಾಡಿದರು. ಮಾನ್ಯ ಖರ್ಗೆಯವರು ಏನು ಮಾಡಿದರು ಅಂದರೆ, ಲಿಖಿತವಾದ ಆರ್ಡರ್ ಇಲ್ಲದಿದ್ದರೆ ಒರಲ್ ಇನ್ಸ್ಟ್ರಕ್ಷನ್ ಇರಬಹುದು ಎಂದು ಹೇಳಿದರು. ಹಾಗೆ ಹೇಳುತ್ತಾ ಹೋದರೆ, ಏನಾದರೂ ಹೇಳಬಹುದು. ಸನ್ನೆ ಮಾಡಿದರೂ ಎಂದು ಹೇಳಬಹುದು, ಕಣ್ಣು ಮಿಟುಕಿಸಿದರೂ ಎಂದು ಹೇಳಬಹುದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಆರ್ಡರ್ ಕೊಟ್ಟಿಲ್ಲವೆಂದು ಹೇಳಬೇಡಿ. ಯಾವ ರಾಜ್ಯದಲ್ಲೂ ಈ ತರಹ ಓರಲ್ ಇನ್ಸ್ಟ್ರಕ್ಷನ್ ಕೊಡುವುದಿಲ್ಲವೆಂದು ಹೇಳಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.— ಇದು ಯಾವ ಒಬ್ಬ ಅಧಿಕಾರಿಗೆ ಕಾನೂನುಬದ್ಧವಾದ ಅಥಾರಿಟಿ ಇರುತ್ತದೋ, ಅಧಿಕಾರವಿರುತ್ತದೆಯೋ, ಪವರ್ ಇರುತ್ತದೆಯೋ ಆ ಪವರನ್ನು ಚಲಾಯಿಸಲಿಕ್ಕೆ ಮೇಲಿನ ಅಧಿಕಾರಿಯ ಅಥವಾ ಮಂತ್ರಿಗಳ ಅನುಮತಿಯನ್ನು ಕೇಳಬೇಕಾಗಿಲ್ಲ. ಮತ್ತು ಯಾವುದಕ್ಕೆ ಅನುಮತಿಯನ್ನು ಕೇಳಬೇಕೆಂಬುದು ಅವರಿಗೆ ಗೊತ್ತು. ನಮ್ಮ ಅಧಿಕಾರಿಗಳ ಪೈಕಿ ಯಾರೂ ಅಷ್ಟು ದಡ್ಡರಲ್ಲ. ಯಾವ ಅಧಿಕಾರವನ್ನು ಚಲಾಯಿಸುವ ಬಗ್ಗೆ ಅವರು ಮಂತ್ರಿಗಳಾಗಿರಬಹುದು.

ಅಥವಾ ಚೀಫ್ ಸೆಕ್ರೆಟರಿಗಳು ಇರಬಹುದು, ಸೆಕ್ರೆಟರಿಯಾಗಿರಬಹುದು, ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿರಬಹುದು, ಅವರ ಪರ್ಮಿಶನ್ ಅಗತ್ಯ ಇದೆಯೋ, ಅಂತಹ ಸಂದರ್ಭದಲ್ಲಿ ಪ್ರತಿಯೊಬ್ಬ ಅಧಿಕಾರಿ ಈ ಪರ್ಮಿಶನ್ ಅನ್ನು ಪಡೆದೇ ಅದನ್ನು ಚಲಾಯಿಸುತ್ತಾನೆ. ಒಂದೊಮ್ಮೆ ಲಿಖಿತವಾದಂಥ ಪರ್ಮಿಶನ್ ಇಲ್ಲದಿದ್ದರೆ, ಕೊನೆಯಪಕ್ಷ ಹೇಳುತ್ತಾನೆ ಈ ಫೈಲನ್ನು ಮುಖ್ಯ ಮಂತ್ರಿಗಳು ನೋಡಿದ್ದಾರೆ ಎಂದು, ಇದರ ಬಗ್ಗೆ ಶ್ರೀಮಾನ್ ಮೊಯ್ಲಿಯವರು

ದೀರ್ಘವಾದ ಸ್ಪಷ್ಟೀಕರಣವನ್ನು ಅವರ ಹಿಂದಿನ ಭಾಷಣದಲ್ಲಿ ಕೊಟ್ಟಿದ್ದಾರೆ; ಅವರು ಹೇಳಿದ್ದಾರೆ ಏನಾದರು ಇರಬಹುದು, ನೋಡಿ ಎಂದು. ನಾನು ನಿಮ್ಮ ಮಾತನ್ನೇ ಒಪ್ಪಿಕೊಳ್ಳುತ್ತೇನೆ ಆ ಫೈಲ್ ಹೇಳಿದೆನಲ್ಲ, ಅದು ಮುಖ್ಯವಾದದ್ದು. ಬೇರೆ ಯಾವ ಫೈಲಿನ ಅಗತ್ಯ ಇಲ್ಲ. ಅಲ್ಲಿಂದ ಹುಟ್ಟಿದ್ದು, ಅದು ಗಂಗೋತ್ರಿ. ನಮ್ಮ ಸರ್ಕಾರದ ಮೇಲೆ ಏನು ಆರೋಪ ನೀವು ಮಾಡಿದ್ದೀರೋ ಅದನ್ನು ಗಂಗೋತ್ರಿ ಎಂದು ಕರೆದರೆ, ಗಂಗೆಗೆ ಅಪಮಾನ ಮಾಡಿದ ಹಾಗೆ ಆಗಬಹುದು, ಏಕೆಂದರೆ ಮಲಿನವಾದಂಥ ಒಂದು ಪ್ರವಾಹವನ್ನು ನೀವು ಕಲ್ಪಿಸಿದ್ದೀರಿ. ಆದರೆ ಅದು ಹುಟ್ಟಿದ್ದು ಅಲ್ಲಿ. ಆದ್ದರಿಂದ ನೀವು ಅದನ್ನು ತೆಗೆದು ನೋಡಬೇಕು. ಆಮೇಲೆ ನಾನು ಎಂದು ಯಾವ ಅಧಿಕಾರಿಗಳಿಗೂ ಏನಾದರೂ ಆರ್ಡರ್ ಇಲ್ಲೀಗಲ್ ಆಗಿದ್ದರೆ, ಅದನ್ನು ಪಾಲನೆ ಮಾಡಬೇಕೆಂದು ಹೇಳಿಲ್ಲ. ಪ್ರೊ. ನಂಜುಂಡಸ್ವಾಮಿಯವರು ಹೇಳಿದರು, ಅದನ್ನು ಪಾಲನೆ ಮಾಡತಕ್ಕದ್ದು ಅವರ ಕರ್ತವ್ಯವೆಂದು. ಇಲ್ಲ. ಅದು ಹಿಂದಿನ ಕಾಲದಲ್ಲಿ ಆಗಿಹೋಯಿತು. ಯಾವ ಕಾಲದಲ್ಲಿ? ಅದು ತುರ್ತುಪರಿಸ್ಥಿತಿ ಕಾಲದಲ್ಲಿ ಆವಾಗ ಶ್ರೀ ನೀರೇಡ್ ಅವರು ಹೇಳಿರತಕ್ಕಂಥಾದ್ದು, ಅವರು ನಮ್ಮ ನಿಮ್ಮ ಪ್ರೊಫೆಷನ್‌ಗೆ ಸೇರಿದಂಥವರು. ಉದ್ದಾಮ ಜ್ಯೂರಿಸ್ಟ್. ಅವರು ಏನು ಹೇಳಿದರು ಎಂದರೆ, ಯಾವುದೇ ಒಬ್ಬ ಅಧಿಕಾರಿ ತನ್ನ ವೈಯಕ್ತಿಕವಾದಂಥ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಒಂದು ಕೊಲೆ ಮಾಡು ಎಂದು ಹೇಳಿದರೂ ಕೂಡ ಅದನ್ನು ಯಾರೂ ಪ್ರಶ್ನೆ ಮಾಡುವಹಾಗಿಲ್ಲ ಎಂದು. ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ಯಾವುದು ಕಾನೂನಿಗೆ ಬದ್ಧವಲ್ಲವೋ ಅಂತಹ ಕೆಲಸವನ್ನು ಮಾಡುವುದಕ್ಕೆ ಆಗ ಒತ್ತಾಯವನ್ನು ತಂದಿದ್ದರು. ಕೆಲವರು ರಾಜೀನಾಮೆ ಕೊಟ್ಟುಹೋದರು, ಕೆಲವರು ಪ್ರಾಯಶ್ಚಿತ್ತವನ್ನು ಅನುಭವಿಸತಕ್ಕಂಥ ಪ್ರಸಂಗ ಆ ಕಾಲದಲ್ಲಿ ಬಂತು. ಆದರೆ ನಮ್ಮ ಕರ್ನಾಟಕದಲ್ಲಿ ನನಗೆ ಗೊತ್ತಿರುವ ಹಾಗೆ ನಾನು ಐದೂವರೆ ವರ್ಷ ಮುಖ್ಯಮಂತ್ರಿಯಾಗಿದ್ದೆ, ಅನೇಕ ವರ್ಷ ಮಂತ್ರಿಯಾಗಿದ್ದೇನೆ. ನಮ್ಮ ಅಧಿಕಾರಿಗಳಲ್ಲಿ. ಕರ್ನಾಟಕದ ಏನು ಒಂದು ಬ್ಯೂರೋಕ್ರಸಿ ಇದೆ, ಅದರ ಕ್ಯಾರೆಕ್ಟರ್ ಬೇರೆಯೇ ಇದೆ. ಆ ಬ್ಯೂರೋಕ್ರಸಿನಲ್ಲಿ ಮಂತ್ರಿಗಳ ಮುಖ ನೋಡಿ ರೆಕಮಂಡೇಶನ್ಸ್ ಮಾಡುವುದಿಲ್ಲ. ತಮಗೆ ಏನು ಯೋಗ್ಯವೆಂದು ಕಾಣುತ್ತದೆ, ಆ ಯೋಗ್ಯವಾದುದನ್ನು ರೆಕಾರ್ಡ್‌ನಲ್ಲಿ ಬರೆಯುತ್ತಾರೆ. ಅದನ್ನು ಮಂತ್ರಿಗಳ ಹತ್ತಿರ ಕಳಿಸಿಕೊಡುತ್ತಾರೆ. ಅದನ್ನು ಮಂತ್ರಿಗಳು ಒಪ್ಪದಿದ್ದರೆ, ಬೇರೆ ಆರ್ಡರ್ ಮಾಡಿದರೆ ಆವಾಗ ಆ ಬಗ್ಗೆ ಚಾಚೂ ಹೇಳದೆ ಅದನ್ನು ಅಮಲಿಗೆ ತರುತ್ತಾರೆ ಇದು ನಮ್ಮ ಕರ್ನಾಟಕದ ಬ್ಯೂರೋಕ್ರಸಿಯ ಒಂದು ವಿಶಿಷ್ಟವಾದ ಪರಂಪರೆ. ಅದಕ್ಕೆ ಕಳಂಕ ತರತಕ್ಕದು ಬೇಡ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಇಲ್ಲಿಗಲ್ ಆರ್ಡರ್ ಇದ್ದರೆ ಅದನ್ನು ಪಾಸ್ ಮಾಡುತ್ತಾರೆ ಎಂದರೆ it is a reflection on the quality of our bureaucracy. ಅದನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ಆಮೇಲೆ...

ಪ್ರೊ: ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಸಭಾಧ್ಯಕ್ಷರೇ, ಶ್ರೀ ರಾಮಕೃಷ್ಣ ಹೆಗಡೆಯವರು ನಾನು ಹೇಳಿದ್ದನ್ನು ಸ್ವಲ್ಪ ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನು ಹೇಳಿದ್ದು a procedure has been laid down. ಏನು ಪ್ರೊಸಿಜರ್ ಅದು? ಆಥರೈಸ್ಡ್ ಆಫೀಸರ್ ಒಬ್ಬ ಇದ್ದಾನೆ. ಲಿಸ್ಟ್‌ಗೆ ಹೆಸರು ಸೇರಿಸಬೇಕಾದರೆ ಅಥವಾ ಬಿಡಬೇಕಾದರೆ ಅಥವಾ ತೆಗೆಯಬೇಕಾದರೆ ಆ ಆಥರೈಸ್ಡ್ ಆಫೀಸರ್ ಮುಖ್ಯ ಮಂತ್ರಿಗಳ... "in consultation with the Chief Minister and with the prior permission of the Chief Minister." This is the procedure that has been laid. ಮುಂಚೆ ನಾನು ಏನು ಹೇಳುವುದಕ್ಕೆ ಪ್ರಯತ್ನ ಪಟ್ಟೆ ಎಂದರೆ—Supposing this authorised officer taking for granted, has not consulted the Chief Minister or has not taken the prior approval or the Chief Minister, acts on his own, the construction is, that the Chief Minister is responsible.

SRI RAMAKRISHNA HEGDE.—That is why Professor Nanjundaswamy I took the responsibility on my side and resigned. I need not have resigned I took the responsiblity It was a constructive responsibility. It was a moral responsibility.

PROF. M. D. NANJUNDASWAMY.—There is another construction also.

MR. SPEAKER.—There are so many constructions.

PROF. M. D. NANJUNDASWAMY.—I am talking of Constitutional Jurisprudence. This is the presumption under law in the way the Parliamentary Executive functions, This is the constitutional construction. Under the concept of collective responsibility, under a Parliamentary Executive, even if the authorised officer does something which is irregular, when he is required to take the consultation of the Chief Minister and take the prior permission of the Chief Minister, but he does it without doing these things, the onus is on the Chief Minister and the entire Cabinet. That is the construction.

ಶ್ರೀ ರಾಮಕೃಷ್ಣ ಹೆಗಡೆ.— ಆಯಿತಲ್ಲ, ಎನ್‌ಟೈರ್ ಕ್ಯಾಬಿನೆಟ್ಟೇ ಹೋಯಿತು. ಇನ್ನು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ...

ಪ್ರೊ. ಎಂ. ಡಿ. ನಂಜುಂಡ ಸ್ವಾಮಿ.— ಹೋಗಬೇಕಾಗಿತ್ತು. ಹೋಗಲಿಲ್ಲ, ಅಷ್ಟೆ;

(ಭಾರಿ ಗೊಂದಲ)

ಶ್ರೀ ಎಂ. ರಾಮಪ್ಪ.— ನೀವು ಮೌಲ್ಯಾಧಾರಿತ ಮಾಡಿ, ಕರ್ನಾಟಕದಲ್ಲಿ ಬರಗಾಲ ಬಂದಿತ್ತು...

(ಭಾರಿ ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಹೌದು, ಹೌದು... ಸ್ವಲ್ಪ ಕೇಳಿ, ನಿಮಗೆ ಅರ್ಥವಾಗದಿದ್ದರೆ, ನಾನು ಅರ್ಥ ಮಾಡಿಸಿಕೊಡುತ್ತೇನೆ. ನಾನು ಮೊನ್ನೆ ಹೇಳಿದೆ, ಒಕ್ಕಣ್ಣ ರಾಜ್ಯಕ್ಕೆ ಎರಡು ಕಣ್ಣು ಇರುವವನು ಹೋದರೆ, ಅವನನ್ನು ವಿಚಿತ್ರ ಪ್ರಾಣಿ ನೋಡಿದ ಹಾಗೆ ನೋಡುತ್ತಾರೆ. ಅಂತಹ ಸಮೂಹದಲ್ಲಿ ನಾನು ಹೋಗಿ ಕೂತವನು. ನಾನು ಆ ರೀತಿ ಕಾಣುತ್ತೇನೆ. ಅದರ ಬಗ್ಗೆ ನನಗೆ ಪಶ್ಚಾತ್ತಾಪ ಇಲ್ಲ. ಅಥವಾ ನ್ಯೂಡಿಸ್ಟ್ ಕಾಲೋನಿಗೆ ಮಾನ್ಯ ಘೋರ್ಪಡೆಯವರು ಪ್ಯಾಂಟ್ ಹಾಕಿಕೊಂಡು ಹೋದರೆ ಅವರೆಲ್ಲಾ ಹಿಹಿಹಿ ಎಂದು ಹೇಸಿಗೆ ದೃಷ್ಟಿಯಿಂದ ನೋಡುತ್ತಾರೆ, ಇವತ್ತಿನ ಪರಿಸ್ಥಿತಿ ಹಾಗಿದೆ, ನಾನು ಮಾನ್ಯ ವೀರೇಂದ್ರ ಪಾಟೀಲರೂ ಬಹಳ ದಿವಸಗಳಿಂದ ಒಟ್ಟಿಗೆ ಕೆಲಸ ಮಾಡಿದವರು. ಕೆಲವೊಂದು ಘಟನೆಗಳ ಬಗ್ಗೆ ಅವರೂ ಸಾಕ್ಷಿ ಇದ್ದಾರೆ. ಅದಕ್ಕಾಗಿಯೇ ಹೇಳಿದೆ.

೩-೧೦ ಪಿ.ಎಂ.

೭೮ನೇ ಇಸವಿಯಲ್ಲಿ ಒಂದು ಹೊಸ ಪಂಚಾಯಿತ್ ರಾಜ್ ಬಿಲ್ಲನ್ನು ನಾವು ತಂದೆವು. ನಾನು ಆ ಒಂದು ಖಾತೆಯ ಮಂತ್ರಿಯಾಗಿದ್ದೆ. ಕೊಂಡಜ್ಜಿ ಬಸಪ್ಪನವರ ಕಮಿಟಿ ಮಾಡಿ ಅವರ ರೆಕಮೆಂಡೇಶನ್ ಆಧಾರದ ಮೇಲೆ ಒಂದು ಕಾನೂನನ್ನು ತಯಾರು ಮಾಡಿದೆವು. ನಮ್ಮ ಪಕ್ಷದಲ್ಲಿ ಅದು ಮೂರು ವೋಟಿನಿಂದ ಬಿದ್ದು ಹೋಯಿತು.

ಶ್ರೀ ಎಸ್. ಬಂಗಾರಪ್ಪ.— ಅದು ಯಾವ ಪಕ್ಷ.

ಶ್ರೀ ರಾಮಕೃಷ್ಣ ಹೆಗಡೆ.— ಕಾಂಗ್ರೆಸ್ ಪಕ್ಷ, ಆದರೆ ಆ ಕಾಂಗ್ರೆಸ್ ಪಕ್ಷ ಇವತ್ತು ಉಳಿದಿಲ್ಲ.

(ಭಾರೀ ಗೊಂದಲ)

ಅಧ್ಯಕ್ಷರು.— ಆರ್ಡರ್, ಆರ್ಡರ್, ಪ್ಲೀಸ್...

ಶ್ರೀ ಡಿ. ಬಿ. ಚಂದ್ರೇಗೌಡ.— ನಿಮ್ಮದು ಯಾವ ಪಕ್ಷ.

ಶ್ರೀ ಎಸ್. ಬಂಗಾರಪ್ಪ.— ಇವರು ಯಾವಾಗ ಕಾಂಗ್ರೆಸ್ ಮಾಡುತ್ತಿದ್ದರು ಆಗ ನಾವೂ ಕೂಡಾ ಅಲ್ಲಿದ್ದೆವು. ಸೋಷಿಯಲಿಸ್ಟ್ ಪಾರ್ಟಿಯಲ್ಲಿದ್ದೆವು. ನಾವು ಅಜೀಜ್ ಸೇಠ್‌ರವರು ಇದ್ದೆವು. ನಮಗೆ ಗೊತ್ತಿದೆ. ಆದರೆ ಯಾವ ಪಕ್ಷ ಎಂದು ಅವರ ಬಾಯಿಂದಲೇ ಹೇಳಿಸಿದರೆ ಒಳ್ಳೆಯದೆಂದು ಕೇಳಿದೆ.

ಶ್ರೀ ರಾಮಕೃಷ್ಣ ಹೆಗಡೆ. – ಕೇಳಿ, ಕಾಂಗ್ರೆಸ್ ಪಕ್ಷದ ಹೆಸರು ಹೇಳುವುದಕ್ಕೆ ನನಗೆ ನಾಚಿಕೆ ಆಗುವುದಿಲ್ಲ. ನಿಮಗೆ ಆಗಬೇಕು.

ಶ್ರೀ ಎಸ್. ಬಂಗಾರಪ್ಪ.— ನಮಗೆ ಏತಕ್ಕೆ ಆಗಬೇಕು?

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಕಾಂಗ್ರೆಸ್ ಇತ್ತೋ ಆ ಕಾಂಗ್ರೆಸ್ಸನ್ನು ಧ್ವಂಸ ಮಾಡಿ ಕಾಂಗ್ರೆಸ್–ಐ ಎಂದು ಹೇಳಿಕೊಳ್ಳುತ್ತಿದ್ದೀರಿ.

(ಭಾರೀ ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಸ್ವಲ್ಪ ದಯವಿಟ್ಟು ಬಂದೇ. ಯಾವ ಕಾಂಗ್ರೆಸ್ ಪಕ್ಷದಿಂದ ಅಧಿಕಾರದ ಪೂರ್ತಿ ಜೀವಾಳ ಹಿಡಿದುಕೊಂಡು ಅನ್ನ ತಿನ್ನತಕ್ಕಂಥ ಕೆಲಸ ಮಾಡಿ ಮೌಲ್ಯಾಧಾರಿತ ರಾಜಕಾರಣ ಮಾಡಿ, ಇಡೀ ಕರ್ನಾಟಕ ರಾಜ್ಯದ ಮುಖಕ್ಕೆ ಮಸಿ ಬಳಿದು ಹೋದರಲ್ಲ ಅದೇ ಕಾಂಗ್ರೆಸ್ ಪಕ್ಷ.

ಶ್ರೀ ರಾಮಕೃಷ್ಣ ಹೆಗಡೆ.— ಕಾಂಗ್ರೆಸ್ ಪಕ್ಷ ಅದನ್ನು ಮಾಡಿರುವುದು ನನಗೆ ಏನು ಗೊತ್ತು. ನಿಮ್ಮ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳಿ. ಯಾರ ಮುಖಕ್ಕೆ ಮಸಿ ಬಳಿದಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಿಮ್ಮ ಮುಖ ಕನ್ನಡಿಯಲ್ಲಿ ನೋಡಿಕೊಳ್ಳುವುದಕ್ಕೆ ಬರುವುದಿಲ್ಲ. ಬೇರೆ ಯಾರದ್ದೋ ಮುಖ ಕನ್ನಡಿಯಲ್ಲಿ ನೋಡಿಕೊಳ್ಳಿ ಎಂದು ಹೇಳುತ್ತೀರಿ. ಮೌಲ್ಯಾಧಾರಿತ ರಾಜಕಾರಣದ ವಿಚಾರ ಮಾತನಾಡಿದ ಮೇಲೆ ನಿಮ್ಮ ಮುಖ ಕನ್ನಡಿಯಲ್ಲಿ ನೋಡಿಕೊಳ್ಳುವುದಕ್ಕೆ ಬರುವುದಿಲ್ಲ. ಬೇರೆಯವರ ಮುಖ ನೋಡಿಕೊಳ್ಳಿ ಎಂದು ಹೇಳಬೇಡಿ. ನಿಮ್ಮ ಮುಖಕ್ಕೆ ರಿಪೇರಿ ಮಾಡಿಕೊಂಡು ನೋಡಿ.

(ಭಾರೀ ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ನನ್ನ ಮುಖಕ್ಕೆ ರಿಪೇರಿ ಮಾಡುವ ಅಗತ್ಯ ಇಲ್ಲ. ನೀವೇ ರಿಪೇರಿ ಮಾಡಿಕೊಳ್ಳಬೇಕು.

(ಭಾರೀ ಗೊಂದಲ)

MR. SPEAKER — Order. Order please. Shri Shivamurthy. Shri Kariyanna. We will confine ourselves to the subject matter of the debate.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ನಾನು ಕಾಂಗ್ರೆಸ್‌ನವನು ಎಂದರೆ ಒರಿಜಿನಲ್ ಕಾಂಗ್ರೆಸ್ ಏನು ಇದೆಯಲ್ಲ, ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟದ್ದು. ಅದರಲ್ಲಿ ಇದ್ದವನು ಎಂದು ಹೇಳಿಕೊಳ್ಳುವುದಕ್ಕೆ ನನಗೆ ಗರ್ವ ಆಗುತ್ತದೆ. ನಾನು ಆ ಪಕ್ಷದಲ್ಲೇ ಹುಟ್ಟಿದವನು. ಇವರೆಲ್ಲಾ ಆಮೇಲೆ ಹುಟ್ಟಿದವರು. ಯಾವ ಯಾವುದೋ ಪಕ್ಷದಲ್ಲಿ ಹುಟ್ಟಿ ಯಾವ ಯಾವುದೋ ಪಕ್ಷದಲ್ಲಿ ಸೇರಿದವರು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ — ಅದೇ ನಮ್ಮ ದೇಶದ ದೊಡ್ಡ ದೌರ್ಭಾಗ್ಯ.

ಶ್ರೀ ರಾಮಕೃಷ್ಣ ಹೆಗಡೆ.— ಕಾಂಗ್ರೆಸ್ ಚಳುವಳಿಯಲ್ಲಿ ಮನೆಮಾರು ಕಳೆದುಕೊಂಡವರು ಯಾರು ಎನ್ನುವುದು ಇವರಿಗೆ ಗೊತ್ತಿರಬೇಕು. ಅದು ಬಿಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.— ಪಕ್ಷದಿಂದ ಪಕ್ಷಕ್ಕೆ ಜಿಗಿಯುವವರಿಗೆ ಏನು ಗೊತ್ತಿದೆ. ಇವರೇನು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೋ ಇಲ್ಲ ನಾನು ಹೊರಗಡೆ ಹೋಗಲೋ. ನಿಮ್ಮ ಬಗ್ಗೆ ಏನಾದರೂ ಹೇಳಿದ್ದೇನೆಯೋ ನಾನು. ಏತಕ್ಕೆ ಬಾಯಿ ಬಡಿದುಕೊಳ್ಳುತ್ತಿದ್ದೀರಿ.

(ಭಾರೀ ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ಹೋಗಿ ಬಿಡುತ್ತೇನೆಂದು ನಮಗೆ ಹೆದರಿಕೆ ಹಾಕುತ್ತಿದ್ದೀರಲ್ಲ. ನಿಮ್ಮ ಜವಾಬ್ದಾರಿ ಏನೆಂದು ತಿಳಿದುಕೊಳ್ಳಬೇಕು.

(ಭಾರೀ ಗೊಂದಲ)

(ಗೊಂದಲ)

(ಎರಡೂ ಕಡೆಯ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು.—ಆರ್ಡರ್ ಪ್ಲೀಜ್, ಆರ್ಡರ್ ಪ್ಲೀಜ್ ...

(ಗೊಂದಲ)

(ಎರಡೂ ಕಡೆಯ ಮಾನ್ಯ ಸದಸ್ಯರು ಎದ್ದು ನಿಂತು ಪರಸ್ಪರ ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ....

(ಗೊಂದಲ)

ಅಧ್ಯಕ್ಷರು.—ಮಾನ್ಯ ಶಿವಮೂರ್ತಿಯವರೇ, ಏನು ನಿಮ್ಮ ಕ್ರಿಯಾಲೋಪ ಹೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ, ಈಗ ನಾವು ಹೊಸದಾಗಿ ಬಂದಿರತಕ್ಕಂಥ ಸದಸ್ಯರು ನಾವು ಮಾನ್ಯ ರಾಮಕೃಷ್ಣ ಹೆಗಡೆಯವರ ವಿರುದ್ಧ ಯಾವ ಸಂಚು ಮಾಡಿಲ್ಲ. ಆದರೆ ಇವರು ಟೇಪ್ ಹಗರಣ ಎಂದು ಸೃಷ್ಟಿಮಾಡಿ......

ಅಧ್ಯಕ್ಷರು.—ನೀವು ಪುನಃ ಹಳಿಯದಕ್ಕೆ ಹೋಗುತ್ತಿದ್ದೀರಿ......

(ಗೊಂದಲ)

ಅಧ್ಯಕ್ಷರು.—ಮಾನ್ಯ ನಾಗರಪಲ್ಲಿಯವರೇ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ?

(ಗೊಂದಲ)

ಶ್ರೀ ಗುರುಪಾದಪ್ಪ ನಾಗರಪಲ್ಲಿ.—ಮಾನ್ಯ ಅಧ್ಯಕ್ಷರೇ, ಅವರು ಈ ಕಡೆ ಕೈಮಾಡಿ ತೋರಿಸಿದರು ಅದಕ್ಕೇ ನಾನು......

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. ಇಲ್ಲಿ ಯಾವ ಕ್ರಿಯಾಲೋಪವೂ ಆಗಿಲ್ಲ. ಮಾನ್ಯ ಸದಸ್ಯರು ತಾವು ಯಾರ್ಯಾರು ಏನೇನು ಮಾತನಾಡಿದ್ದಿರಿ ಎನ್ನುವ ಬಗ್ಗೆ ಕೊಂಚ ಮಟ್ಟಿಗೆ ನಿಮ್ಮ ನಿಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಿ. ಮಾನ್ಯ ರಾಮಕೃಷ್ಣ ಹೆಗಡೆಯವರೇ ತಾವು ಮಾತನಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ೧೯೭೮ನೇ ಇಸವಿಯಲ್ಲಿ ಕೊಟ್ಟಂತಹ ರಾಜೀನಾಮೆ ಮೊದಲನೇ ರಾಜೀನಾಮೆ ಅಲ್ಲ ಅಧಿಕಾರ ಸ್ಥಾನದಿಂದ. ನಾನು ಹೇಳುತ್ತೇನೆ ೧೯೬೪ನೇ ಇಸವಿಯಲ್ಲಿ ಪಂಚಾಯತ್ ರಾಜ್ ಬಿಲ್ ನಮ್ಮ ಪಕ್ಷದಲ್ಲಿ ಅಂದಿನ ಕಾಂಗ್ರೆಸ್‌ನಲ್ಲಿ, ಆವಾಗ ಕಾಂಗ್ರೆಸ್‌ನಲ್ಲಿ ನೀವು ಇರಲಿಲ್ಲ......

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಅದಕ್ಕೆ ನೀವು ಕಾಂಗ್ರೇಸ್ಸ್‌ನಲ್ಲಿ ಇದ್ದೀರಿ ಎಂದು ಹೇಳಿದರೆ ಸಾಕು.

ಶ್ರೀ ರಾಮಕೃಷ್ಣ ಹೆಗಡೆ.—ಕಾಂಗ್ರೆಸ್ ಬಗ್ಗೆ ನಾನು ಅಷ್ಟು ಜನಗಳಿಗೆ ಹೇಳುತ್ತೇನೆ. ಕಾಂಗ್ರೆಸ್ ಬಗ್ಗೆ ನನಗೆ ಯಾರೂ ಕೂಡ ವ್ಯಾಖ್ಯಾನ ಮಾಡತಕ್ಕಂಥ ಅಗತ್ಯ ಇಲ್ಲ ಆ ಅಧಿಕಾರ ಕೂಡ ತಮಗೆ ಯಾರಿಗೂ ಇಲ್ಲ. ಮೂಲತಃ ನೀವು ಕಾಂಗ್ರೆಸ್‌ನವರಲ್ಲ

(ಗೊಂದಲ)

ಆ ದಿವಸ ನಮ್ಮ ಪಕ್ಷದಲ್ಲಿ ಈ ಮಸೂದೆ ಚರ್ಚೆಯಾಗಿ ೩ ವೋಟುಗಳಿಂದ ಅದು ಬಿದ್ದುಹೋಯಿತು. ನಾನು ಪಕ್ಷದ ಮೀಟಿಂಗ್ ಮುಗಿದ ತಕ್ಷಣ ಹೋಗಿ ಅಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರಿಗೆ ನನ್ನ ರಾಜೀನಾಮೆ ಕೊಟ್ಟೆ. ಇದು ನನಗೆ It is a matter of conviction. If I have failed to carry the party in regard to this Bill.

I have no place as Minister in my cabinet. ಎಂದು ಹೇಳಿ ನಾನು ರಾಜೀನಾಮೆ ಕೊಟ್ಟೆ. ೧೯೮೬ನೇ ಇಸವಿಯಲ್ಲಿ, ಇವತ್ತು ಹೇಳುತ್ತಾರಲ್ಲಾ, ಭೂಮರೆಡ್ಡಿ ಭೂಮರೆಡ್ಡಿ ಎಂದು, ಅವರಿಗೆ ಚೆನ್ನಾಗಿ ಗೊತ್ತುಂಟು. ಅವತ್ತು ಒಂದು ಜಡ್ಜ್‌ಮೆಂಟ್ ಬಂತು. ಆ ಜಡ್ಜ್‌ಮೆಂಟಿನಲ್ಲಿ ಏನಾದರು ನನ್ನ ವಿರುದ್ಧ ಅಥವಾ ಸರ್ಕಾರದ ವಿರುದ್ಧ ಒಂದೇ ಒಂದು ವಾಕ್ಯ ಇದದ್ದು ಎಂದರೆ, ೨೪ ಗಂಟೆಗಳಲ್ಲಿ ಅಷ್ಟೂ ಶಾಪ್‌ಗಳನ್ನು ಮೊದಲು ಯಾರಿಗೆ ಹರಾಜು ಆಗಿತ್ತೋ ಅದನ್ನು ಹೈಕೋರ್ಟ್‌ನವರು ರದ್ದು ಮಾಡಿದ್ದರಿಂದ, ಮತ್ತೊಂದು ಪಾರ್ಟಿಯವರಿಗೆ ೨೪ ಗಂಟೆಯಲ್ಲಿ ಅಂದರೆ ನಿನ್ನೆ ರದ್ದಾಯಿತು. ಇವತ್ತು ಅವರ ಹೆಸರಿಗೆ ಅದನ್ನು ಮಾಡಿದರು. ಇಷ್ಟೊಂದು ಎಫಿಷಿಯೆನ್ಸಿ ಹೇಗೆ ತೋರಿಸಿತು ಸರ್ಕಾರ ಎಂದು ಒಂದೇ ಒಂದು ವಾಕ್ಯ ಅಲ್ಲಿತ್ತು ಅವತ್ತು ಒಂದು ದಿವಸ ನಾವು ತಡ ಮಾಡದಿದ್ದರೆ ಕೋಟ್ಯಾನು ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗುತ್ತಿತ್ತು. ಏಕೆಂದರೆ ಶಾಪ್‌ಗಳನ್ನು ಯಾರೂ ನಡೆಸತಕ್ಕಂಥವರು ಇರಲಿಲ್ಲ ಹಿಂದಿನವರದ್ದು ರದ್ದಾಯಿತು, ಮುಂದಿನವರಿಗೆ ಕೊಟ್ಟಿತ್ತು, ಅದರಲ್ಲಿ ಯಾವುದೇ ಫೇವರಿಟಿಸಮ್ ಇರಲಿಲ್ಲ.

ಶ್ರೀ ಎಂ. ರಾಮಪ್ಪ.—ಇನ್ನೊಂದು ಸಾರಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ರೂಲ್ ೭೮ರಲ್ಲಿ ಮತ್ತೊಂದು ನೋಟೀಸ್ ತೆಗೆದುಕೊಂಡು ಬನ್ನಿ ಶ್ರೀಮಾನ್ ಶಿವಮೂರ್ತಿಯವರು ಟೇಪ್ ಬಗ್ಗೆ ಸ್ಪೆಷಲ್ ಆಗಿ ನೋಟೀಸ್ ತೆಗೆದುಕೊಂಡು ಬರಲಿ. ಆಗ ಅದರ ಎಲ್ಲ ಕಥೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಆವಾಗ ನಾನು ರಾಜೀನಾಮೆ ಕೊಟ್ಟೆ. ಆವಾಗ ಇವರು ಮುಖ್ಯ ಮಂತ್ರಿಗಳಾಗಿದ್ದರು ಅದಾದ ಮೇಲೆ. ೧೯೭೭ನೇ ಇಸವಿಯಲ್ಲಿ ಲೋಕಸಭಾ ಚುನಾವಣೆಯಾಯಿತು. ಆ ಲೋಕ ಸಭಾ ಚುನಾವಣೆಗೆ ನಾನು ನಿಂತೆ. ಆಗ ನಾನು ಕೌನ್ಸಿಲ್ ಸದಸ್ಯನಾಗಿದ್ದೆ ಹಾಗೂ ಅಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದೆ. ಆ ಚುನಾವಣೆಯಲ್ಲಿ ನಾನು ೨೫ ೩೦ ಸಾವಿರ ವೋಟುಗಳಿಂದ ಸೋತೆ ನಾನು ಕೌನ್ಸಿಲ್‌ನ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟೆ. ಲೋಕಸಭಾ ಚುನಾವಣೆಗೂ ಮತ್ತು ನನ್ನ ಕೌನ್ಸಿಲ್ ಸದಸ್ಯತ್ವಕ್ಕೂ ಏನು ಸಂಬಂಧ? ನಾನು ಅಂದುಕೊಂಡೆ. ನಾನು ಜನರಿಂದ ನೇರವಾದ ಚುನಾವಣೆಯಲ್ಲಿ ನಿಂತು ಸೋತ ಮೇಲೆ ಅಪ್ರತ್ಯಕ್ಷವಾಗಿ ಜನರಿಂದ ಆಯ್ಕೆಯಾದ ಸದಸ್ಯರುಗಳಿಂದ ನಾನು ಚುನಾಯಿತನಾದ ಈ ಸ್ಥಾನದಲ್ಲಿ ಇರುವುದಕ್ಕೆ ಅರ್ಹನಲ್ಲವೆಂದು ತಿಳಿದುಕೊಂಡು ರಾಜೀನಾಮೆ ಕೊಟ್ಟೆ. ನನಗೆ ಯಾರಾದರು ರಾಜೀನಾಮೆ ಕೊಡಿ ಎಂದು ಹೇಳಿದರಾ? ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಅನೇಕ ಜನ ಸೋತರು. ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಮೇಲೆ ನೀವು ರಾಜ್ಯ ಸಭೆಗೆ ಹೋದ್ರಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಹೋಗಬಾರದಾ ? ಹೋಗಲೇಬಾರದಾ ? ಅದಾದ ಮೇಲೆ ನಾನು ಮೂರು ಸಲ ಚುನಾವಣೆಯಲ್ಲಿ ಅಸೆಂಬ್ಲಿಗೆ ಆರಿಸಿ ಬಂದೆ. ಅದೂ ಆಗಬಾರದಾ? ಮತ್ತೆ ಏನರ್ಥ ? ಇದು, ಕೆಲವೊಂದು ತತ್ವಕ್ಕೆ ಅಂಟಿಕೊಂಡಿರತಕ್ಕವರು ಮಾಡತಕ್ಕಂತಹದ್ದು. ನಗಲಿ ಜನ ನಗುತ್ತಾರೆಂದು ನನಗೆ ಗೊತ್ತು. ಅದರ ಬಗ್ಗೆ ನನಗೆ ಕೆಡಕೆನಿಸುವುದಿಲ್ಲ ನೀವು ನಗುತ್ತಲೇ ಇರಿ. ನಾವು ಒಳ್ಳೆಯದು ಅಥವಾ ನಮಗೆ ಸರಿ ಎಂದು ಕಂಡದ್ದನ್ನು ನಾನು ಮಾಡಿಕೊಂಡು ಹೋಗುತ್ತೇನೆ. ಆಮೇಲೆ ಪುನಃ ೧೯೮೪ರಲ್ಲಿ ಲೋಕಸಭಾ ಚುನಾವಣೆ ಆಯಿತು. ಆ ಲೋಕಸಭಾ ಚುನಾವಣೆಯಲ್ಲಿ ಕೇವಲ ನಾಲ್ಕು ಸೀಟನ್ನು ಬಿಟ್ಟರೆ ಬಾಕಿ ಎಲ್ಲಾ ಸೀಟುಗಳನ್ನು ನಾವು ಕಳೆದುಕೊಂಡೆವು. ಆವಾಗ ನಾನು ಮುಖ್ಯ ಮಂತ್ರಿಯಾಗಿದ್ದೆ. ನಾವು ಹಿಂದಿನ ನಮ್ಮ ಚುನಾವಣೆಯ ಪರ್ಫಾರ್ಮೆನ್ಸ್ ಬಗ್ಗೆ ಹೋಲಿಸಿ ನೋಡಿದರೆ ೪೦೦ ಪರ್ಸೆಂಟ್ ಹೆಚ್ಚಿಗೆ ಇದ್ದೆವು ಒಂದು ಸೀಟ್ ಜಾಗದಲ್ಲಿ ೪ ಸೀಟ್‌ಗಳು ಬಂದವು. ಆಗ ನಾನು ರಾಜೀನಾಮೆ ಕೊಟ್ಟೆ. ರಾಜೀನಾಮೆ ಕೊಡಬೇಕೆಂದು ಯಾವ ಕಾಯಿದೆಯಲ್ಲಿದೆ? ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಹೇಳಿ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಆಗ ನಿಮ್ಮ ಪ್ರಧಾನಮಂತ್ರಿಗಳು ರಾಜಿನಾಮೆ ಕೊಟ್ರಾ ? ಈ ತರಹ ಮಾಡಿದರೆ ನಿಮಗೆ ಕಷ್ಟವಾಗುತ್ತದೆ... ಹೇಳಿಬಿಡುತ್ತೇನೆ...ನಾನು...

ಶ್ರೀ ಎಸ್. ಬಂಗಾರಪ್ಪ.—ಏನು ಹೆದರಿಸುತ್ತಾ ಇದ್ದೀರಾ ?...

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೇ ಕಷ್ಟವಾಗುತ್ತದೆ. ಅಂದರೆ ನಮಗೆ ಅವಾಜ್ ಇಲ್ಲವಾ ? ಆ ಮೇಲೆ ೧೯೮೮ನೇ ಇಸವಿಯಲ್ಲಿ ನಾನು ರಾಜೀನಾಮೆ ಕೊಟ್ಟೆ. ಯಾರೂ ನನ್ನನ್ನು ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಈ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ: ಅಧಿಕಾರ ಬಿಟ್ಟು ಹೋಗತಕ್ಕಂಥಾದ್ದನ್ನು ನಾನು ಎಂದೂ ಹಿಂದು ಮುಂದು ನೋಡಿ

ಬಿಟ್ಟು ಹೋಗಿಲ್ಲ. ಯಾವ ಕ್ಷಣದಲ್ಲಿ ನನಗನ್ನಿಸುತ್ತದೆ, ಯಾವುದಾದರೂ ಒಂದು ತತ್ವಕ್ಕೆ ವಿರುದ್ಧ ವಾಗಿದೆ, ಅದನ್ನು ನಾನು ಅನುಸರಿಸಬೇಕು ಎಂದು ಹೇಳತಕ್ಕಂಥ ಪರಿಸ್ಥಿತಿ ಬಂದಾಗ ನಾನು ಅಧಿಕಾರ ವನ್ನು ಬಿಟ್ಟು ಹೋಗಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಬಾಟ್ಲಿಂಗ್ ವಿಚಾರ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನೂ ಕೂಡ ಹೇಳುತ್ತೇನೆ. ಅದೇ ರೀತಿಯಲ್ಲಿ ಅನೇಕ ಜನರು ಟೀಕೆ ಮಾಡಿದರು. ನಾನು ಮಾತು ಮಾತಿಗೆ ಜ್ಯುಡೀಷಿಯಲ್ ಎನ್‌ಕ್ವಾಯರಿ ಮಾಡಿಸುತ್ತೀರಿ ಎಂದು ಹೇಳಿದರು. ನಾನು ಮುಖ್ಯಮಂತ್ರಿಯಾಗಿ ಇನ್ನೂ ಎರಡು ತಿಂಗಳೂ ಆಗಿರಲಿಲ್ಲ. ಬಂಗಾರಪ್ಪನವರು ನನ್ನ ಮೇಲೆ ಒಂದು ಆಪಾದನೆ ಮಾಡಿದರು. ಅವರಿಗೆ ನನ್ನ ಮೇಲೆ ಅಪಾರವಾದ ಪ್ರೀತಿ–ಮತ್ತು ಅಭಿಮಾನ. ಎಲ್ಲಾದರೂ ಒಂದು ಚೂರು ಏನಾದರೂ ನಾನು ತಪ್ಪು ಮಾಡಬಹುದು ಎಂದು ನನ್ನ ಯಾವಾಗಲೂ ಎಚ್ಚರಿಕೆ ಕೊಡುತ್ತಾ ಇರುತ್ತಾರೆ. ಹೀಗಾಗಿ ಎರಡು ತಿಂಗಳಲ್ಲಿಯೇ ಒಂದು ದೊಡ್ಡ ಆಪಾದನೆ ಬಂತು. ನಾನು ಹುಬ್ಬಳ್ಳಿಯಲ್ಲಿದ್ದೆ. ನನ್ನ ಸಹೋದರ ಅಂದರೆ ನನ್ನ ದೊಡ್ಡಪ್ಪನ ಮಗ, ಗೋವಕ್ಕೆ ಅಕ್ರಮವಾಗಿ ಅಕ್ಕಿ ಭತ್ತ ಕಳುಹಿಸಿ ಸರಕಾರಕ್ಕೆ ಸುಮಾರು ೯ ಕೋಟಿ ರೂಪಾಯಿಗಳಷ್ಟು ನಷ್ಟ ಉಂಟು ಮಾಡಿದ್ದಾರೆ ಎಂದು ಹೇಳಿದರು.

(Interruptions)

ಅಧ್ಯಕ್ಷರು.—Is that relevant ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...ನನ್ನದು ಕ್ರಿಯಾಲೋಪ ಇದೆ...

MR. SPEAKER.—What is your point of order ?

ಶ್ರೀ ಎಸ್. ಬಂಗಾರಪ್ಪ.—ನನ್ನ ಕ್ರಿಯಾಲೋಪ ಏನೆಂದರೆ, ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ನಿಯಮಾವಳಿಗಳ ಪರಿಮಿತಿ ಮತ್ತು ಇತಿಮಿತಿಗಳ ಬಗ್ಗೆ ಗೊತ್ತಿದ್ದು ಮಾತನಾಡಿದ್ದೇನೆ. ಯಾವ ವಿಷಯ ಇವೊತ್ತು ನ್ಯಾಯಾಂಗ ತನಿಖೆ ಇರಬಹುದು. ನ್ಯಾಯಾಲಯಗಳ ಚೌಕಟ್ಟಿನ ಒಳಗಡೆ ಇರಬಹುದು. ಅಂಥಹವುಗಳನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎನ್ನತಕ್ಕಂಥ ವಿಚಾರವನ್ನು ನಿಯಮಾವಳಿಗಳ ಅನುಭವದ ಹಿನ್ನೆಲೆಯಲ್ಲಿ ಅರಿತುಕೊಂಡು ನಾನು ಮಾತನಾಡಿದ್ದೇನೆ. ಅದಕ್ಕಾಗಿ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಿರಲಿಲ್ಲ. ತಾವು ಬೇಕಾದರೆ ಕಡತ ತೆಗೆಸಿ ನೋಡಬಹುದು. ಒಂದು ವೇಳೆ ಅವರು ಪ್ರಸ್ತಾಪ ಮಾಡಲೇ ಬೇಕು ಎಂದಿದ್ದರೆ, ತಾವು ಅನುಮತಿ ಕೊಟ್ಟರೆ ನಿಯಮಾವಳಿಯಲ್ಲಿ ಅವಕಾಶವಿದ್ದರೆ ನಾನು ಅದಕ್ಕೆ ಅಡ್ಡಬರುವುದಿಲ್ಲ ಆದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ ಎನ್ನುವ ದೃಷ್ಟಿಯಿಂದ ಒಂದು ಮಾತನ್ನು ಹೇಳಿದ್ದೇನೆ. ಆದರೆ ಆ ವಿಚಾರವನ್ನು ಚರ್ಚೆ ಮಾಡಬೇಕೆಂದಿದ್ದರೂ ಕೂಡ ಮತ್ತು ಇದು ಹೊಸದಾಗಿ ಬಂದುದರಿಂದ ನಾನು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ...

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಮುಖಕ್ಕೆ ಮಸಿ ಬಳಿದುಕೊಂಡಿರಿ ಅಂದರೆ ಆಗಬಹುದು. ನಾನು ಈ ಸಭೆಯ ಸದಸ್ಯನಾಗಿ ಈ ಮನೆಯ ಎದುರಂಗಡೆ ಇರುವುದಕ್ಕೆ ಆಗುವುದಿಲ್ಲವೆ ? ನೀವು ಮುಖಕ್ಕೆ ಮಸಿ ಬಳಿದುಕೊಂಡಿದ್ದೀರಿ ಎಂದು ಹೇಳಿದರೆ ಆ ಮಾತು ಆಗಬಹುದೇ ?...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಮುಖಕ್ಕೆ ಮಸಿಬಳಿದುಕೊಂಡಿಲ್ಲ. ನೀವು ಬಳಿಸಿಕೊಂಡಿದ್ದೀರಿ, ಬಳಿಸಿಕೊಳ್ಳುತ್ತಿದ್ದಿರಿ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ಯಾರು ಬಳಸಿಕೊಂಡಿದ್ದಾರೆಂಬ ಬಗ್ಗೆ ವಿವರಣೆ ಕೊಡುವುದು ಈಗ ಬೇಡ...

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ಪ್ರಸ್ತಾಪ ಆಗಬೇಕು ಎನ್ನುವುದಾದರೆ ನನ್ನ ಆಕ್ಷೇಪ ಏನೂ ಇಲ್ಲ. ಆದರೆ ನಾನು ಅದಕ್ಕೆ ಕೊಡುವ ಉತ್ತರಕ್ಕೂ ತಾವು ಸಿದ್ಧರಾಗಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇಷ್ಟೇ ಹೇಳಿದೆ, ಅವತ್ತು ಮಾನ್ಯ ಚಂದ್ರೇಗೌಡರು ಸ್ಪೀಕರ್ ಆಗಿದ್ದರು. ಅವರಿಗೆ ಹುಬ್ಬಳ್ಳಿಯಿಂದ ಒಂದು ಪತ್ರ ಬರೆದು ದಯಮಾಡಿಟ್ಟು ಇದನ್ನು ತನಿಖೆ ಮಾಡಲು ಸದನದ ಒಂದು ಕಮಿಟಿ ಮಾಡಿ. ಆ ಕಮಿಟಿಯಲ್ಲಿ ನನ್ನ ಪಕ್ಷದ ಸದಸ್ಯರು ಇರಬಾರದು ; ಎಂದು ; ಅದು ತಪ್ಪೇ ? ಆ ಕಮಿಟಿಯವರು ತನಿಖೆ ಮಾಡಿ ಈ ಒಂದು ಆಪಾದನೆ ಯಾವುದೇ ರೀತಿಯ ಆಧಾರವಿಲ್ಲದ ಆಪಾದನೆ ಎಂದು ವರದಿ ಕೊಟ್ಟಿದ್ದಾರೆ. ಇದು ತಪ್ಪೋ ?

ಶ್ರೀ ಎಸ್. ಬಂಗಾರಪ್ಪ.—ಆ ಕಮಿಟಿಯಲ್ಲಿದ್ದ ನಮ್ಮ ಪಕ್ಷದ ಸದಸ್ಯರು ರಾಜೀನಾಮೆ ಕೊಟ್ಟು ಹೊರ ಬಂದರು ; ನಿಮ್ಮ ಪಕ್ಷದವರು ವರದಿ ಕೊಟ್ಟುಕೊಂಡಿದ್ದಾರೆ. ಬೇಕಾದರೆ ಸ್ಪೀಕರ್‌ರವರು ವರದಿ ತರಿಸಿನೋಡಲಿ.

(ಗೊಂದಲ)

ಅಧ್ಯಕ್ಷರು.—ವರದಿಯನ್ನು ನಾನು ತರಿಸಿನೋಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಏನೆಂದರೆ ಸದನದ ಮುಂದಿರುವ ವಿಷಯದ ಮೇಲೆ ಚರ್ಚೆ ಮಾಡಬೇಕೆ. ವಿಷಯಕ್ಕೆ ಸಂಬಂಧಪಡದ ವಿಚಾರಗಳನ್ನು ಚರ್ಚೆಮಾಡಿ...

ಶ್ರೀ ರಾಮಕೃಷ್ಣ ಹೆಗಡೆ.—ಅವರು ಟೇಪ್ ವಿಷಯ ಪ್ರಸ್ತಾಪಿಸಿದರಲ್ಲ ಅದಕ್ಕೆ ಯಾವ ಸಂಬಂಧ ಇದೆ ಹೇಳಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಮುಂದಿರುವ ಒಂದೇ ವಿಷಯವೆಂದರೆ ಫೋನನ್ನು ಕದ್ದು ಕೇಳುವ ವಿಚಾರದಲ್ಲಿ ಏನು ಡಾಕ್ಯುಮೆಂಟ್ಸ್ ಇದೆ, ಅದಕ್ಕೆ ಸಂಬಂಧಿಸಿದಂತೆ ಹಕ್ಕುಚ್ಯುತಿಯಾಗಿರುವುದರ ಬಗ್ಗೆ ಸ್ಪಷ್ಟ ಉತ್ತರ ಹೇಳಿ ನೀವು ತಿಳಿದವರಾಗಿ ಬುದ್ಧಿವಂತರಾಗಿ, ಅನುಭವವುಳ್ಳವರಾಗಿ. ಸುಮ್ಮನೆ ಯಾವ್ಯಾವುದೊ out of context ಹೋಗಿ you could have taken objection at that time and brought to the notice of the Speaker and could have stopped. ಆದ್ದರಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ನೀವಿಬ್ಬರೂ ಗಲಾಟೆ ಮಾಡಿಕೊಂಡು ಒಬ್ಬರಿಗೊಬ್ಬರು ಸವಾಲು ಹಾಕಿಕೊಂಡು ಕೂತರೆ ನಾವು ಇಲ್ಲಿ ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ಮತ್ತೊಂದು ಆಪಾದನೆ. ಅದು

(ಗೊಂದಲ)

SRI M. VEERAPPA MOILY.—What is the subject matter to-day ?

INTERRUPTION

MR. SPEAKER.—What is the subject matter ? I am also asking the House. ಬನ್ನಿಕೋಡ್ ಅವರೇ, What is the Subject matter ?

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.—ಅಧ್ಯಕ್ಷರೇ ಈ ಸದನದಲ್ಲಿ ಮೌಲ್ಯಾಧಾರಿತ ರಾಜಕೀಯ ಮಾಡಿಲ್ಲ ಎಂದು ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಮಾಡಿದ್ದೇನೆಂದು ಹೆಗಡೆಯವರು ಪ್ರತಿಪಾದನೆ ಮಾಡುತ್ತಿದ್ದಾರೆ. ಅದೇ ಈಗ ಸಭೆಯ ಮುಂದಿರುವ ವಿಷಯ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಸಬ್ಜೆಕ್ಟ್ ಮ್ಯಾಟರ್ ಯಾವುದು ಎಂದು ಕೇಳುತ್ತಾರೆ. ಮಾನ್ಯ ಬಂಗಾರಪ್ಪನವರು ಮಾಡಿದಂಥ ಭಾಷಣ ಇದೆಯಲ್ಲಾ, ಅದರ ಒಂದು ಕಾಪಿ ತರಿಸಿ ಓದಿಬಿಡಲಿ, ಸಬ್ಜೆಕ್ಟ್ ಮ್ಯಾಟರ್ ಯಾವುದು ಎಂದು ಗೊತ್ತಾಗುತ್ತದೆ. ಅದಕ್ಕೆ ಬೇರೆ ವ್ಯಾಖ್ಯಾನ ಬೇಡ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರು ಆ ಪ್ರೊಸೀಡಿಂಗ್ಸ್ ನೋಡಬೇಕಾಗಿಲ್ಲ. ಆ ಏಕಪಕ್ಷ ಕಮಿಟಿ ಮಾಡಿದರಲ್ಲ.

(ಗೊಂದಲ)

SRI M. VEERAPPA MOILY.—It is recorded. It is very important.

SRI RAMAKRISHNA HEGADE.—You should keep quiet. ದೇಸಾಯಿ ಕಮಿಷನ್ ವಿಚಾರ ಎಲ್ಲಾ ಹೇಳಬೇಕಾಗುತ್ತದೆ. ಈಗ ಆ ವಿಚಾರ ಬೇಡ.

(ಗೊಂದಲ)

SRI M. VEERAPPA MOILY.—In the All India Speakers Conference, what were the comments made by the Presiding Officers with regard to the Committee which was formed, which went into this aspect ? That is also a very bad record on the floor of this House.

INTERRUPTION

SRI D. B. CHANDRE GOWDA.—I am glad that the Hon. Law Minister has cast aspersions on the Chair when I was presiding at that point. He has sought for the opinion of the formation of the Committe in the Presiding Officers Conference. Well, I would have said it straight now. But I donot want to say it because let us put the records straight and the best man to know the records is yourself and if any adverse comments were drawn even at that point of time that I have committed a mistake and committed any offence sitting on the Chair, even now I am prepared to get down and resign from this House.

(ಗೊಂದಲ)

SRI P. G. R. SINDHIA.—Let him accept it.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಇವತ್ತು ಅಧ್ಯಕ್ಷರಾಗಿದ್ದೀರಿ. ನಾವು ನಿಮ್ಮಿಂದ ರಕ್ಷಣೆಯನ್ನು ಕೇಳುತ್ತೇವೆ.

(ಗೊಂದಲ)

MR. SPEAKER.—I have called Sri Chandre Gowda.

INTERRUPTION

SRI D. B. CHANDRE GOWDA.—If the Presiding Officer. Conference is going to be a subject matter for discussion I am prepared for it. Bear with me for a minute. ಇವತ್ತು ಬೆಳಿಗ್ಗೆಯಿಂದ ಅನಿರತಕ್ಕಂಥ ಚರ್ಚೆಯಲ್ಲಿ ಇದು ನಾಲ್ಕನೇ ಬಾರಿ ಕಾನೂನು ಮಂತ್ರಿಗಳು ತಮ್ಮ ವ್ಯಾಖ್ಯೆಯನ್ನು ಮೀರಿ ಮಾತನಾಡಿದ್ದಾರೆ. ಮೊದಲನೆಯದು ಪ್ರಿಂಟರ್ಸ್ ಮಿಸ್ಟೇಕ್ ಎಂದರು.

MR. SPEAKER.—Let me put the records straight. It is a printers mistake.

SRI R. V. DESHAPANDE.— He was a Member at that time Proceedings were sent to him for correction.

(ಗೊಂದಲ)

SRI D. B. CHANDRE GOWDA.—Second time when I quoted him he went back and said the situation was different. And the third time he comes out now questioning the Chair and the ruling of the Chair itself. This is not a subject matter to be taken so lightly. It happened to me. It may happen to you tomorrow. It is the question of the office that we held at the relevant point of time. Sir, I would beg of you to kindly call for the records of those days, specially when we met in Bombay which was a subject-matter for discussion and I was the man who sent this subject for discussion and we have debated well. The entire debate be brought and placed before this House.

MR. SPEAKER.—I will take note of your suggestion. Now, Sri Hegde to Speak.

ಶ್ರೀ ರಾಮಕೃಷ್ಣ ಹೆಗಡೆ.—ಒಂದಲ್ಲ, ಎರಡಲ್ಲ ಹತ್ತಾರು ವಿಚಾರ ನಾನು ಪ್ರತಿಯೊಂದನ್ನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಸಮಯದ ಅಭಾವದಿಂದ ರೆಕ್ಟಿಫೈಡ್ ಸ್ಪಿರಿಟ್ ಎಕ್ಸ್‌ಪೋರ್ಟ್ ವಿಚಾರದಲ್ಲಿ ೯೦ ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿದೆ ಎಂದು ಹೇಳಿದರು. ಜುಡಿಷಿಯಲ್ ಎನ್‌ಕ್ವೈರಿಯಲ್ಲಿ ಏನು ಬಂತು? ಅದರಲ್ಲಿ ಸರ್ಕಾರಕ್ಕೆ ನಷ್ಟ ಒಂದು ಕಾಸೂ ಕೂಡಾ ಆಗಿಲ್ಲ. ೧೩ ಕೋಟಿ ರೂಪಾಯಿಗಳು ಹೆಚ್ಚು ಲಾಭವಾಗಿದೆ ಎಂದು ಬಂತು. ನನ್ನ ಮಗನ ಮೇಲೆ ಒಂದು ಆರೋಪ ಬಂತು. ಅದರ ಮೇಲೆ ಜುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಿಸಿದೆ. ಯಾವ ಚೀಫ್ ಮಿನಿಷ್ಟರ್ ಇವತ್ತಿನವರೆಗೂ ಇರತಕ್ಕಂಥ ಒಬ್ಬನೇ ಒಬ್ಬ ಮಗನ ಮೇಲೆ ಈ ರೀತಿ ಮಾಡಿದ್ದಾರೆಂದು ಯಾರಾದರೂ ಹೇಳಲಿ. ಯಾವುದೇ ಒಂದು ರಾಜಕೀಯದಲ್ಲಿ ಕೈ ಹಾಕಿದ್ದಾಗಲಿ ಅಥವಾ ಆಡಳಿತದಲ್ಲಿ ಕೈ ಹಾಕಿದ್ದಾಗಲಿ ತನ್ನ ಪಾಡಿಗೆ ತಾನು ಇರತಕ್ಕಂಥ ಒಬ್ಬ ಮಗನ ಮೇಲೆ ಕೆಲವು ಜನ ಆರೋಪ ಮಾಡಿದರು ಎಂದು ಹೇಳಿ ಜುಡಿಷಿಯಲ್ ಎನ್‌ಕ್ವೈರಿಯನ್ನು ನಾನು ಮಾಡಿಸಿದೆ. ಆಮೇಲೆ ಶ್ರೀಮಾನ್ ಜಾಲಪ್ಪನವರಿಗೆ ಯಾವ ಚೀಫ್ ಮಿನಿಸ್ಟರ್ ಕೇಂದ್ರ ಸರ್ಕಾರದಲ್ಲಿ ಬೇರೆ ಪಕ್ಷದವರು ಇದ್ದಾಗ ಸಿ.ಬಿ.ಐ. ಎನ್‌ಕ್ವೈರಿಯನ್ನು ಮಾಡಿಸಿ ಎಂದು ಧೈರ್ಯದಿಂದ ಹೇಳುತ್ತಾರೆ. ಈಗ ಅದರ ಪರಿಣಾಮವನ್ನು ಅವರು ಅನುಭವಿಸುತ್ತಿದ್ದಾರೆ. ಅದನ್ನು ಮಾಡಿದಕ್ಕೆ ನಾನು ಇವತ್ತು ಖೇದ ಪಡುತ್ತಿದ್ದೇನೆ. ರಾಜಕೀಯದ ಒಂದು ಅಸ್ತ್ರವಾಗಿ ಸಿ. ಬಿ. ಐ. ನವರನ್ನು ಉಪಯೋಗಿಸಿಕೊಂಡರು, ನಾನು ಇದನ್ನು ಹೇಳತಕ್ಕಂಥ ಉದ್ದೇಶ ಇಷ್ಟೆ. ಅಧಿಕಾರದಲ್ಲಿದ್ದಂಥ ವೇಳೆಯಲ್ಲಿ ಹಿಂದೆ ಮುಂದೆ ನೋಡಲಿಲ್ಲ. ಅಧಿಕಾರದಿಂದ ಕೆಳಗಡೆ ಇಳಿಯುದಕ್ಕೆ. ಬಹುಶಃ ನನ್ನಷ್ಟು ಹೆಚ್ಚು ಸಲ ರಾಜೀನಾಮೆಯನ್ನು ನೀಡಿ ಅಧಿಕಾರದ ಜಾಗವನ್ನು ಬಿಟ್ಟು ಕೆಳಗೆ ಇಳಿದಂಥ ಮತ್ತೊಬ್ಬರ ಉದಾಹರಣೆ ಸಿಗಲಿಕ್ಕಿಲ್ಲ.

೩.೪೦ ಪಿ.ಎಂ.

ಅಷ್ಟೇ ಅಲ್ಲ, ಪ್ರತಿ ಒಂದು ಆಪಾದನೆ ಬಂದಾಗ, ಈಗ ಕುಲದೀಪ್ ಸಿಂಗ್ ಕಮೀಷನ್ ಎನ್‌ಆರ್‌ಐ ವಿಚಾರದಲ್ಲಿ ನಾನು ಹೇಳಿದ್ದೇನೆ, ಕಮೀಷನ್ ಅಪಾಯಿಂಟ್ ಮಾಡಿ ಎಂದು. ಈ ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ಕೂಡ ನಾನು ಜುಡಿಷಿಯಲ್ ಕಮೀಷನ್ ಅಪಾಯಿಂಟ್‌ಮೆಂಟ್‌ಗೆ ಕೇಳಿದೆ. ಇಷ್ಟಾದರೂ ಕೂಡ ನನ್ನ ನಿಸ್ಪೃಹತೆ ವಿಚಾರದಲ್ಲಿ, ಪ್ರಾಮಾಣಿಕತೆ ವಿಚಾರದಲ್ಲಿ ಮತ್ತು ಸ್ವಚ್ಛವಾದಂಥ ಒಂದು ಆಡಳಿತ ಕೊಡಬೇಕು ಎಂಬ ಕಮಿಟ್‌ಮೆಂಟ್ ವಿಚಾರದಲ್ಲಿ... .....,...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಆದೇ ಹೇಳಿದನಲ್ಲಾ ನಿಮಗೆ ಒಂದೇ ಕಣ್ಣು, ಈ ತರಹ ಅಪಪ್ರಚಾರವನ್ನು ಮಾಡಿ, ಈ ಅವಕಾಶವನ್ನು ಉಪಯೋಗಿಸಿಕೊಂಡು ಈ ರೀತಿ ಮಾಡತಕ್ಕದ್ದು ಸರಿಯಲ್ಲ. ಅದೇ ಮತ್ತೊಂದು ಕಡೆ ನೋಡಿ. ಎಲ್ಲಿ ಹೂಚ್ ದುರಂತ ಆಯಿತು, ಎಷ್ಟು ಜನ ಸತ್ತರು, ಸರ್ಕಸ್ ದುರಂತ ಆಯಿತು ಎಷ್ಟು ಜನ ಸತ್ತರು ಏನಾದರೂ ರಾಜೀನಾಮೆ ಕೊಟ್ಟರಾ? ಸಂಬಂಧಪಟ್ಟ ಮಂತ್ರಿಗಳಾಗಲೀ ಅಥವಾ ಮುಖ್ಯಮಂತ್ರಿಗಳಾಗಲೀ ಕೊಟ್ಟರಾ? ಇಲ್ಲ, ಅದು ನಿಮಗೆ

ಸಂಬಂಧಪಟ್ಟ ವಿಚಾರ. ಅದು ನಿಮ್ಮ ಸಂಸ್ಕೃತಿ ನಮ್ಮ ಸಂಸ್ಕೃತಿ ಬೇರೆ ಆ ನಮ್ಮ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಸಾಧ್ಯ ಆಗದೇ ಇದ್ದರೆ ನೀವು ಬೇಕಾದ್ದು ಮಾಡಿಕೊಂಡು ಹೋಗಿ, ನಾನು ಬೇಡವೆಂದು ಹೇಳುವುದಿಲ್ಲ......

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಆದ ಮೇಲೆ ನನಗೆ ಅವಕಾಶ ಕೊಡಬೇಕು. ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಹೇಳಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಅವನ್ನು ಹೇಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆಯಿಂದ ಟೆಲಿಫೋನ್ ಕದ್ದಾಲಿಕೆ ಪ್ರಕರಣದ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಆ ಚರ್ಚೆ ಇದೀಗ ಶ್ರೀಮಾನ್ ರಾಮಕೃಷ್ಣಹೆಗಡೆಯವರ ಭಾಷಣದಿಂದ ಮುಕ್ತಾಯದ ಹಂತಕ್ಕೆ ಬಂದಿದೆ. ನಾನು ನಿನ್ನೆಯಿಂದ ಇಲ್ಲಿಯೇ ಕುಳಿತುಕೊಂಡು ಚರ್ಚೆಯನ್ನು ಕೇಳುತ್ತಿದ್ದೇನೆ. ಇದೀಗ ಸುಮಾರು ಒಂದೂವರೆ ಗಂಟೆಗೂ ಮೇಲ್ಪಟ್ಟು ವಿಧಾನ ಸಭೆಯ ಸದಸ್ಯರಾದ ಶ್ರೀ ಮಾನ್ ರಾಮಕೃಷ್ಣಹೆಗಡೆಯವರ ವಿಚಾರ ಕೇಳಿದ್ದೇನೆ. ಆದರೆ ಒಂದು ವಿಚಾರ ಪ್ರಥಮದಲ್ಲಿ ಹೇಳಲಿಕ್ಕೆ ನನಗೆ ಯಾವುದೇ ರೀತಿಯಿಂದಲೂ ಹಿಂದೆ ಮುಂದೆ ನೋಡಬೇಕಾಗಿಲ್ಲ. ಚರ್ಚೆ ವಿಷಯವೇ ಬೇರೆ. ಚರ್ಚೆ ಆಗಿದ್ದೇ ಬಹಳಮಟ್ಟಿಗೆ ಬೇರೆ. ಚರ್ಚೆಗೆ ಸೀಮಿತವಾದಂತಹ ವಿಷಯಕ್ಕೆ ಸೀಮಿತವಾದಂತಹ ಚರ್ಚೆ ಆಗಿದ್ದರೆ ಬಹುಶಃ ಒಳ್ಳೆಯ ಚರ್ಚೆ ಆಗುವುದಕ್ಕೆ ಅವಕಾಶ ಇತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಾಸ್ತಾವಿಕವಾಗಿ ಈ ಪ್ರಕರಣ ಅಥವಾ ಯಾವ ರೀತಿಯಿಂದ, ಪ್ರಕರಣ, ಹಗರಣದಲ್ಲಿ ಡೆವಲಪ್ ಆಯಿತು. ಇದನ್ನು ಪ್ರಸ್ತಾಪ ಮಾಡುವುದಕ್ಕಿಂತಲೂ ಪೂರ್ವದಲ್ಲಿ ಒಂದು ವಿಚಾರವನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ಶ್ರೀ ಬೈರೇಗೌಡರು ನಿನ್ನೆ ಅವರ ಮನಸ್ಸಿನಲ್ಲಿ ಇರುವಂತಹ ಅಳುಕು, ಅಂಜಿಕೆ ವ್ಯಕ್ತಪಡಿಸಿದರು. ಶ್ರೀ ವೀರೇಂದ್ರ ಪಾಟೀಲರೂ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಬಹಳ ವರ್ಷಗಳ ಸ್ನೇಹಿತರು, ಅತೀ ಸಮೀಪದವರು. ಅದಕ್ಕಾಗಿ ವೀರೇಂದ್ರ ಪಾಟೀಲ್ ಈ ಪ್ರಕರಣದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರನ್ನು ಶೀಲ್ಡ್ ಮಾಡುತ್ತಾರೆ ಎನ್ನುವ ಭಯ. ಅಂಜಿಕೆ, ಅಳುಕು ವ್ಯಕ್ತ ಮಾಡಿದರು. ಮೇಲ್ಮನೆಯಲ್ಲಿಯೂ ಸಹ ಯಾರೋ ಒಬ್ಬರು ಅಥವಾ ಇಬ್ಬರು ಸದಸ್ಯರು ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಇರುವವರೆಗೆ ಶ್ರೀ ಹೆಗಡೆಯವರಿಗೆ ಮತ್ತೆ ಯಾರೂ ಪ್ರೊಟೆಕ್ಷನ್ ಕೊಡಬೇಕಾದ ಅವಶ್ಯಕತೆ ಇಲ್ಲ. ಅವರೇ ಸಾಕು ಅನ್ನುವ ಧಾಟಿಯಲ್ಲಿ ಮಾತನಾಡಿದ್ದಾರೆ. ಈ ಈ ಮಾತನ್ನು ಯಾಕೆ ನಾನು ಪ್ರಸ್ತಾಪ ಮಾಡಿದೆ ಅಂದರೆ ಈ ಮನೆಯ ಹೊರಗಡೆ ಈ ತರಹದ ಒಂದು ಪ್ರಚಾರ ನಡೆಯುತ್ತಾ ಇದೆ. ಹಿಂದೆ ನಡೆಯುತ್ತಿತ್ತು, ಸಧ್ಯ ನಡೆಯುತ್ತಾ ಇದೆ, ಮುಂದೆ ಎಷ್ಟು ದಿವಸ ನಡೆಯುತ್ತದೋ ನನಗೆ ಗೊತ್ತಿಲ್ಲ. ಅದಕ್ಕಾಗಿ ಪ್ರಥಮದಲ್ಲಿ ಈ ಪ್ರಕರಣದ ಬಗ್ಗೆ ಸರ್ಕಾರದ ನಿಲುವು ಏನು, ಸರ್ಕಾರದಲ್ಲಿ ಏನು ಮಾಹಿತಿ ಇದೆ, ಇದರ ಬಗ್ಗೆ ನಾನು ಹೇಳುವುದಕ್ಕಿಂತ ಮೊದಲು ಇದನ್ನು ಸ್ಪಷ್ಟೀಕರಿಸಬೇಕಾದಂಥ ಅವಶ್ಯಕತೆ ಇದೆ ಎಂದು ನಾನು ಅಂದು ಕೊಂಡಿದ್ದೇನೆ. ಇದು ನಿಜ ಶ್ರೀಮಾನ್ ಹೆಗಡೆಯವರು ಮತ್ತು ನಾನು ಬಹಳ ವರ್ಷಗಳ ಸ್ನೇಹಿತರು. ೧೯೫೭ ಕ್ಕೆ ಮೊದಲನೇ ಸಲ ಅವರು ಬಾಂಬೆ ಕರ್ನಾಟಕದಿಂದ ಬಂದರು. ಮೊದಲನೇ ಸಲ ನಾನು ಹೈದರಾಬಾದ್ ಕರ್ನಾಟಕದಿಂದ ಬಂದೆ. ಆ ಸ್ನೇಹ ಸುಮಾರು ೧೯೭೮ರ ವರೆಗೂ ಸತತವಾಗಿ, ಸಂಗಮವಾಗಿ, ನಿರಾಂತಕವಾಗಿ ನಡೆಯಿತು. ಈ ಸ್ನೇಹದ ಬಗ್ಗೆ ನಾನು ಏಕೆ ಪ್ರಸ್ತಾಪ ಮಾಡಬೇಕು ಅಂದರೆ ಸ್ನೇಹ ಎರಡು ತರಹದ್ದು. ಒಂದು ಪೊಲಿಟಿಕಲ್ ಫ್ರೆಂಡ್‌ಶಿಪ್, ಇನ್ನೊಂದು ಪರ್ಸನಲ್ ಫ್ರೆಂಡ್‌ಶಿಪ್ ಈಗ ನಾನು ಏನು ಪ್ರಸ್ತಾಪ ಮಾಡಿದೆ, ಅದು ಪೊಲಿಟಿಕಲ್ ಫ್ರೆಂಡ್‌ಶಿಪ್ಪೂ ಇತ್ತು. ಪರ್ಸನಲ್ ಫ್ರೆಂಡ್‌ಶೀಪ್ಪೂ ಇತ್ತು: ೧೯೫೭ ರಿಂದ ೧೯೭೮ ರ ವರೆಗೂ, ಆದರೆ ಈ ಮನೆಯಲ್ಲಿ ನಾನು ಮುಖ್ಯ ಮಂತ್ರಿಯಾಗಿಯೂ ಕೂಡ ಜವಾಬ್ದಾರಿಯಿಂದ ಹೇಳುತ್ತಾ ಇದ್ದೇನೆ. ೧೯೭೮ ರಲ್ಲಿ ನನ್ನ ಅವರ ಮಧ್ಯದಲ್ಲಿ ಇರುವಂಥ ಪೊಲಿಟಿಕಲ್ ಫ್ರೆಂಡ್‌ಶೀಪ್ ಕಡಿದು ಹೋಯಿತು, ಅದಕ್ಕೆ ಕಾರಣ ಕೇಳಬೇಡಿ, ಕಾರಣ ಕೇಳಿದರೆ ಅದಕ್ಕೆ ಒಂದು ಮೂರು ದಿವಸ ಈ ಮನೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ, ಪೊಲಿಟಿಕಲ್ ಫ್ರೆಂಡ್‌ಶೀಪ್ ೧೯೭೮ ಕ್ಕೆ ಕಡಿದು ಹೋಯಿತು. ಆದರೆ ಪರ್ಸನಲ್ ಫ್ರೆಂಡ್‌ಶಿಪ್ ಇವತ್ತೂ ಇದೆ ಮತ್ತು ನಾನು ಅವರು ಇರುವವರೆಗೂ ಮುಂದೆ ಇರುತ್ತದೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೇ ಯಾರಿಗೂ ಅಂಜಿ, ಅಳುಕಿ ಈ ಮಾತನ್ನು ನಾನು ಹೇಳುತ್ತಾ ಇಲ್ಲ. ನಿದರ್ಶನಕ್ಕೆ ಹೇಳಬೇಕಾಗಿದ್ದರೆ, ಅದರ ಎರಡನೇ ಮಗಳ ಲಗ್ನವಾಯಿತು. ಆಗ ಅವರು ಇಲ್ಲಿ ಮುಖ್ಯ ಮಂತ್ರಿಗಳು, ನಾನು ಕೇಂದ್ರದಲ್ಲಿ ಕೇಂದ್ರ ಮಂತ್ರಿ. ಅವರು ಒಂದು ಲಗ್ನಪತ್ರ ಮತ್ತು ಒಂದು ಕಾಗದ ಬರೆದು ಕಳಿಸಿಕೊಟ್ಟರು. ನನ್ನ ಮಗಳ ಲಗ್ನಕ್ಕೆ ಬರಬೇಕು ಎಂದರು. ನಾನು ಬಂದೆ. ನಾನು ಇಲ್ಲಿ ಬರುವುದರಲ್ಲಿ ನಮ್ಮ

ಪಾರ್ಟಿಯಲ್ಲಿ ಈ ಲಗ್ನಕ್ಕೆ ಹೋಗಬಾರದು ಎಂದು ಒಂದು ನಿರ್ಣಯ ಆಗಿತ್ತು. ಅದು ತಪ್ಪೋ, ಒಪ್ಪೋ ಆ ಮಾತು ಬೇರೆ, ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅದರೆ ನಾನು ಹೇಳಿದೆ ನನ್ನ ಅವರ ಮಧ್ಯೆ ಪರ್ಸನಲ್ ಫ್ರೆಂಡ್‌ಶಿಪ್ ಇರುವುದರಿಂದ ಯಾವ ರಾಜಕೀಯ ಪಕ್ಷಗಳು ಈ ಫ್ರೆಂಡ್‌ಶಿಪ್‌ನ ಮಧ್ಯದಲ್ಲಿ ಬರುವುದಕ್ಕೆ ಆಗುವುದಿಲ್ಲ ಎಂದು. ನಾನು ಸಹ ಕುಟುಂಬ ಅವರ ಮಗಳ ಲಗ್ನಕ್ಕೆ ಹೋಗಿ ಬಂದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೇ ಇವೊತ್ತು ಪರ್ಸನಲ್ ರಿಲೇಷನ್‌ಶಿಪ್ ಬೇರೆ ಪರ್ಸನಲ್ ಫ್ರೆಂಡ್‌ಶಿಪ್ ಬೇರೆ, ಪೊಲಿಟಿಕಲ್ ಫ್ರೆಂಡ್‌ಶಿಪ್ ಬೇರೆ. ಇವತ್ತು ಪೊಲಿಟಿಕಲ್ ಫ್ರೆಂಡ್‌ಶಿಪ್ ಎಷ್ಟು ದೂರ ಇದೆ ಅಂದರೆ ಅವರು ನಾನು ಎಷ್ಟು ದೂರ ಇದ್ದೇವೊ ಅಷ್ಟೇ ದೂರ ಇದೆ ಇದರಲ್ಲಿ ಎರಡನೇ ವಿಚಾರವೇ ಇಲ್ಲ. ಅವರು ಜನತಾದಳದ ಪಕ್ಷದ ಸದಸ್ಯರು, ಆ ಪಕ್ಷದ ನಾಯಕರು. ನಾನು ಕಾಂಗ್ರೆಸ್ ಪಕ್ಷದ ಒಬ್ಬ ಸದಸ್ಯ, ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿ ಕಾಂಗ್ರೆಸ್ ಪಕ್ಷದ ಒಬ್ಬ ನಾಯಕ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ದುರ್ದೈವದಿಂದ ಏನೊ ಅವರಿಗೆ ಶೀಲ್ಡ್ ಮಾಡುವುದಕ್ಕೆ ನಾವು ಹೊರಟ್ಟಿದ್ದೇವೆನೋ ಎನ್ನುವಂಥ ಭಾವನೆ ಇದೆ ಅದು ಸರಿಯಾದುದಲ್ಲ. ಮತ್ತು ಇವತ್ತು ನಾನು ವೀರೇಂದ್ರ ಪಾಟೀಲನಾಗಿ ಮಾತನಾಡುತ್ತಾ ಇಲ್ಲ, ಇದನ್ನು ತಾವು ತಿಳಿದುಕೊಳ್ಳಬೇಕು. ಇವತ್ತು ನಾನು ಮಾತನಾಡುತ್ತಾ ಇರುವಂಥಾದ್ದು, ರಾಜ್ಯದ ಮುಖ್ಯ ಮಂತ್ರಿಯಾಗಿ ನಾನು ಮಾತನಾಡುತ್ತಾ ಇದ್ದೇನೆ. ರಾಜ್ಯದಲ್ಲಿ ಏನು ಒಂದು ಪ್ರಕರಣ ನಡೆದಿದೆ, ಅದು ಯಾವ ರೀತಿಯಿಂದ ಹಗರಣದಲ್ಲಿ ರೂಪುಗೊಂಡಿತ್ತು. ಇದರ ಹಿನ್ನೆಲೆ ಏನು, ವಾಸ್ತವಾಂಶ ಏನು ಇದನ್ನು ನಾವು ಇವತ್ತಿನ ದಿವಸ ಚರ್ಚೆ ಮಾಡಬೇಕಾಗಿದೆ.

ಒಬ್ಬ ಮುಖ್ಯ ಮಂತ್ರಿಯಾಗಿ ಏನು ಹೇಳಬೇಕಾಗಿದೆಯೋ ಅದನ್ನು ಹೇಳಿ, ನನ್ನ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಇನ್ನು ಟೆಲಿಫೋನ್ ಕದ್ದಾಲಿಕೆ ಪ್ರಕರಣದ ಬಗ್ಗೆ ಸತ್ಯಶೋಧನೆ ೧೯೮೮ ರಿಂದ ನಡೆಯುತ್ತಾ ಇದೆ, ಆದರೆ ಇನ್ನೂ ಶೋಧನೆ ಮುಗಿದಿಲ್ಲ. ಬಹುಶಃ ಇದೀಗ ಶ್ರೀಮಾನ್ ಹೆಗಡೆಯವರ ಭಾಷಣ ನಾನು ಕೇಳಿದ್ದೇನೆ, ಅವರ ಭಾಷಣ ಕೇಳು ವುದಕ್ಕೆ ನಾನು ಬಹಳ ಕಾತುರನಾಗಿದ್ದೆ, ಏಕೆಂದರೆ, ಬಹಳ ದಿವಸಗಳಿಂದ ಈ ವಿಚಾರ ಪ್ರಸ್ತಾಪ ವಾಗುತ್ತಿದ್ದರೂ, ಶ್ರೀಮಾನ್ ಹೆಗಡೆಯವರು ತಮ್ಮ ಸ್ಪಷ್ಟವಾದ ನಿಲುವು ಏನು ಎನ್ನುವುದನ್ನು ಹೇಳಿಲ್ಲವೆಂದು ಹೇಳುತ್ತಿದ್ದರು, ಆದ್ದರಿಂದ ಇವತ್ತು ಅವರಿಂದ, ಏನಾದರೂ ಹೊರಬರಬಹುದು ಎನ್ನುವಂಥ ದೃಷ್ಟಿಯಿಂದ ಬಹಳ ಕಾತುರತೆಯಿಂದ ಕೇಳುತ್ತಿದ್ದೆ. ಈಗ ಈ ಟೆಲಿಫೋನ್ ಕದ್ದಾಲಿಕೆ ಪ್ರಕರಣ ಹೊರಗೆ ಬಂದದ್ದು ೧೯೮೮ರಲ್ಲಿ ಸ್ವಲ್ಪ ಇದರ ಹಿನ್ನೆಲೆಗೆ ಹೋಗಬೇಕಾಗುತ್ತದೆ. ಇದು ಏತಕ್ಕೆ ಬಂತು ? ಎನ್ನುವ ಪ್ರಶ್ನೆ ಮುಖ್ಯವಾದದ್ದು, ಈ ಹಗರಣ ಹೊರಗೆ ಬರುವುದಕ್ಕೆ ಕಾರಣವೇನು ? ಈ ಹಗರಣ ಹೊರಗೆ ಬರುತ್ತಿರಲಿಲ್ಲ, ಆದರೆ ಅದು ಏನಾಯಿತು ಅಂದರೆ, ಶ್ರೀಮಾನ್ ಹೆಗಡೆಯವರ ಮಂತ್ರಿಮಂಡಲದಲ್ಲಿ ಒಬ್ಬರು ಮಂತ್ರಿಗಳು ಡೆಲ್ಲಿಯಲ್ಲಿರುವಂಥ ತಮ್ಮ ಪಕ್ಷದ ಧುರೀಣರ ಜೊತೆಯಲ್ಲಿ ಮಾತನಾಡಿದ್ದು ಟೇಪ್‌ನಲ್ಲಿ ರೆಕಾರ್ಡ್ ಆಗಿ ಒಂದು ಪತ್ರಿಕೆಯಲ್ಲಿ ರೆಕಾರ್ಡ್ ಆದದ್ದೆಲ್ಲಾ ಪೂರ್ತಿಯಾಗಿ ಬಂತು, ಅವರು ಏನು ಮಾತನಾಡಿದರೂ, ಅವರು ಏನು ಹೇಳಿದರು, ನೀವು ಎಷ್ಟು ನಾಮಿನೇಷನ್ ಹಾಕಿದ್ದಿರಿ. ನನಗೆ ಜ್ಞಾಪಕ ಇದ್ದಂತೆ ಇದೆಲ್ಲಾ ಬಂತು: ಆರಿಸಿಬರುತ್ತಾರೋ, ಪರವಾಯಿಲ್ಲ, ವೆರಿ ಗುಡ್. ವೆರಿಗುಡ್ ಇದೆಲ್ಲಾ ಪ್ರಕರಣ ಪೂರ್ತಿಯಾಗಿ ವರ್ಬಾಟಮ್ ಆಗಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂತು, ಆಗ ನಾವು ಪಾರ್ಲಿಮೆಂಟ್‌ನಲ್ಲಿದ್ದೆವು: ಇದು ಹೇಗೆ ಹೊರಗೆ ಬಂತು, ಟೇಪ್ ಮಾಡಿದ್ದು ಯಾರು ? ಟೇಪ್ ಯಾರಾದರೂ ಮಾಡಿರಲಿ. ಆ ಪತ್ರಿಕೆಗೆ ಹೇಗೆ ಹೋಯಿತು. ಆ ಪತ್ರಿಕೆಯವರು ಇದನ್ನು ಹೇಗೆ ಉಪಯೋಗ ಮಾಡಿದರು ಎನ್ನುವ ಕಾತುರತೆ ಪಾರ್ಲಿಮೆಂಟಿನಲ್ಲಿ ಬಂತು. ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ, ಇದು ಬರದೆ ಹೋಗಿದ್ದರೆ, ಹಗರಣವೂ ಇಲ್ಲ: ಪ್ರಕರಣವೂ ಇಲ್ಲ, ಯಾವುದೂ ಹೊರ ಬರುತ್ತಿರಲಿಲ್ಲ: ಎಲ್ಲರೂ ಆರಾಮವಾಗಿರುತ್ತಿದ್ದೆವು, ಈ ಚರ್ಚೆ ಮಾಡಲು ಅವಕಾಶವೇ ಇರುತ್ತಿರಲಿಲ್ಲ ಈ ಪ್ರಶ್ನೆ ಪಾರ್ಲಿಮೆಂಟ್‌ಗೆ ಬಂದಾಗ, ಪಾರ್ಲಿಮೆಂಟಿನಲ್ಲಿರು ವಂಥ ಸಂಬಂಧಪಟ್ಟ ಮಂತ್ರಿಗಳು ಹೇಳಿದರು, ಹೌದು; ಈ ರೀತಿ ಟೆಲಿಫೋನ್ ಟ್ಯಾಪ್ ಆಗಿದೆ ಟ್ಯಾಪ್ ಮಾಡಿ ರೆಕಾರ್ಡ್ ಮಾಡಿದ್ದಾರೆ ಎಂದು. ಬಹುಶಃ ಸ್ವಾಭಾವಿಕವಾಗಿ ಎಲ್ಲಾ ಸದಸ್ಯರುಗಳೂ, ವಿರೋಧ ಪಕ್ಷದ ನಾಯಕರು ಹೇಳಿದರಲ್ಲ; ಅವರ ಪಕ್ಷದ ನಾಯಕರುಗಳು ಪ್ರಶ್ನೆ ಹಾಕಿದರು. ಎಲ್ಲಿ ಟ್ಯಾಪಿಂಗ್ ಆಗಿದೆ;ಯಾರ ಯಾರದ್ದು ಟ್ಯಾಪ್ ಆಗಿದೆ. ಎಂದು ಕೇಳಿದಾಗ ಸವಿಸ್ತಾರವಾಗಿ ಕಮ್ಯುನಿಕೇಷನ್ ಮಂತ್ರಿಗಳು ೫೧ ರಾಜಕೀಯ ಪಟುಗಳ ಟೆಲಿಫೋನ್ ಟ್ಯಾಪ್ ಆಗಿದೆಯೆಂದು ಒಂದು ಪಟ್ಟಿ ಕೊಟ್ಟರು. ನಾನು ಆ ಪಟ್ಟಿಯನ್ನು ಕೊಡಬೇಕಾಗಿಲ್ಲ. ಅದು ನಿಮ್ಮಲ್ಲೂ ಇದೆ: ಬಹುಶಃ ಎಲ್ಲರಿಗೂ ತಿಳಿದಿದೆಯೆಂದು ನಾನು ಭಾವಿಸುತ್ತೇನೆ. ಈ ಬಗ್ಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದು ಬಹಳ ಪವಿತ್ರವಾದಂಥ ಒಂದು ಭವನ. ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನರ ಪ್ರತಿನಿಧಿಗಳು ಇರುವಂಥ

ಈ ಭವನದಲ್ಲಿ ನಾವು ಸತ್ಯಾಂಶವನ್ನೇ ನುಡಿಯಬೇಕಾಗಿದೆಯೇ ಹೊರತಾಗಿ ಮತ್ತೆ ಬೇರ್ಯಾವುದನ್ನೇ ಹೇಳುವುದಕ್ಕಾಗುವುದಿಲ್ಲ, ಇದು ಹೊರಗೆ ಬಂದಾಗ ನನ್ನ ಮನಸ್ಸಿಗೆ ಏನು ಒಂದು ಭಾವನೆಯಾಯಿತೆಂದರೆ. "ಮ್ಯಾನ್ ಪ್ರೊಪೋಸಸ್ ಗಾಡ್ ಡಿಸ್‌ಪೋಸಸ್" ಈ ಒಂದು ಟೇಪ್ ನಿಂದ ಯಾರ ಮುಖಕ್ಕೆ ಮಸಿ ಬಳಿಯಬೇಕೆಂಬ ಪ್ರಯತ್ನ ಇತ್ತೋ ಆ ಪ್ರಯತ್ನ ಮಾಡಿದವರ ಮುಖಕ್ಕೇ ಮಸಿ ಬಳಿಯಿತೇ ಹೊರತಾಗಿ ಅದರಿಂದ ಬೇರೇನೂ ಆಗಲಿಲ್ಲ ಅಲ್ಲಿಂದ ಸ್ವಾಭಾವಿಕವಾಗಿ ಎಲ್ಲಾ ವಿಚಾರಗಳು ಹೊರಗೆ ಬಂತು ಸರ್ಕಾರದವರು ಇದನ್ನು ರೆಕಾರ್ಡ್ ಮಾಡಿದ್ದಾರೆ ಸರ್ಕಾರದವರೇ ಇದನ್ನು ಟೇಪ್ ಮಾಡಿದ್ದಾರೆ ಸರ್ಕಾರದವರೇ ಇದನ್ನು ಇಂಟರ್‌ಸೆಪ್ಟ್ ಮಾಡಿದ್ದಾರೆ ಎನ್ನುವುದೆಲ್ಲಾ ಹೊರ ಬಂದಾಗ. ಅನೇಕ ಜನ ನಮ್ಮ ಪಕ್ಷದವರೂ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಹೆಗಡೆಯವರು ರಾಜೀನಾಮೆ ಕೊಡಬೇಕೆನ್ನುವ ಒಂದು ದೊಡ್ಡ ಗುಲ್ಲೆದ್ದಿತು. ಆ ವೇಳೆಗೆ ಜನತಾಪಕ್ಷದ ನಾಯಕರಾದಂಥ ಶ್ರೀಮಾನ್ ದಂಡವತೆಯವರು ಸ್ವಲ್ಪ ಕಸಿವಿಸಿಪಟ್ಟರು ಅದು ಆದಮೇಲೆ ಅವರವರು ಏನು ಚರ್ಚೆ ಮಾಡಿದರೋ ಗೊತ್ತಿಲ್ಲ, ಬಹುಶಃ ಮಾರನೆಯ ದಿವಸ ಬಂದು ಹೆಗಡೆಯವರು ರಾಜೀನಾಮೆ ಕೊಟ್ಟಿದ್ದಾರೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಪಾರ್ಲಿಮೆಂಟಿನಲ್ಲಿ ತೋರಿಸಿದರು. ಈಗ ಅವರು ಓದಿದ್ದನ್ನೇ ಅವರು ತೋರಿಸಿದರು ಅದನ್ನು ಸ್ಪೀಕರ್‌ರವರು ರೆಕಾರ್ಡ್ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರು. ಈಗ ಪ್ರಶ್ನೆ ಏನೆಂದರೆ ಶ್ರೀಮಾನ್ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಹೇಳುತ್ತಾರೆ. ಈ ಒಂದು ಪ್ರಕರಣ, ಈ ಒಂದು ಹಗರಣಕ್ಕೆ ಅಂತಿಮ ತೆರೆಯನ್ನು ಎಳೆಯಿರಿ, ಈ ಚಾಪ್ಟರ್ ಕ್ಲೋಸ್ ಮಾಡಿ ಎಂದು ಶ್ರೀಮಾನ್ ಹೆಗಡೆಯವರು ಏನು ಹೇಳುತ್ತಿದ್ದಾರೆ ಅಂದರೆ, ಎಷ್ಟು ಸಲ ಚರ್ಚೆ ಮಾಡುತ್ತೀರಿ, ಇದನ್ನು ಏತಕ್ಕೆ ಚರ್ಚೆ ಮಾಡುತ್ತೀದ್ದೀರಿ ಏನು ಸಾಧಿಸಬೇಕು ಎಂದು ಚರ್ಚೆ ಮಾಡುತ್ತಿದ್ದೀರಿ ಅದು ನನಗೆ ಗೊತ್ತಾಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ ಈ ಸಂದರ್ಭದಲ್ಲಿ ಈ ಒಂದು ಹಗರಣ, ಈ ಒಂದು ಎಪಿಸೋಡ್ ೧೯೭೭ರಲ್ಲಿಕ್ಕೆ ಪ್ರಾರಂಭವಾದಂಥ ಹಗರಣ ಬೆಳಕಿಗೆ ಬಂದಂಥ ಈ ಹಗರಣ. ಇನ್ನೂ ಸಮಾಪ್ತಿ ಹಂತದಲ್ಲಿ ಇದ್ದಂತೆ ನನಗಂತೂ ಕಾಣಿಸುತ್ತಿಲ್ಲ ಇನ್ನೂ ಜೀವಂತ ಆಗಿದೆ. ಇದಕ್ಕೆ ಕಾರಣ ಏನು ಯಾರು ಕಾರಣ ? ತಾವೇ ವಿಚಾರ ಮಾಡಿ, ಈ ಹಗರಣ ಸಮಾಪ್ತಿ ಆಗದೇ ಇರುವುದಕ್ಕೆ ಕಾರಣ ಏನು ಎಂದು

ನಾನು ಸ್ಪಷ್ಟವಾಗಿ ಹೇಳಬೇಕಾದರೆ, ಶ್ರೀಮಾನ್ ಹೆಗಡೆಯವರೇ ಇದಕ್ಕೆ ಕಾರಣ ಏತಕ್ಕೆ ಎಂದು ತಾವು ಕೇಳಬಹುದು ಅವರು ೧೯೮೮ರಲ್ಲಿಕ್ಕೆ ಈ ಹಗರಣ, ಈ ಪ್ರಕರಣ, ಪಾರ್ಲಿಮೆಂಟ್‌ನಲ್ಲಿ ಬಂದಾಗ ಅವರು ರಾಜೀನಾಮೆ ಕೊಟ್ಟಾಗ ಅವರು ರಾಜೀನಾಮೆ ಕೊಡುವ ಮುಂಚೆ ಹೌದು "ಇದೊಂದು ನಾನು ತಪ್ಪು ಮಾಡಿದ್ದೇನೆ, ನನ್ನ ಸರ್ಕಾರವು ತಪ್ಪು ಮಾಡಿದೆ. "I take the responsibility Therefore, as an atonement I am tendering my resignation ಅಂತ ಅಂದಿದ್ದರೆ ಶ್ರೀಮಾನ್ ಹೆಗಡೆಯವರೇ ಇದು ಅವೊತ್ತೇ ಸಮಾಪ್ತಿಯಾಗುತ್ತಿತ್ತು. ನಾನು ಯಾವುದೂ ಬೇಜವಾಬ್ದಾರಿಯಿಂದ ಹೇಳುತ್ತಿಲ್ಲ. ಈ ಜವಾಬ್ದಾರಿ ನನ್ನದು, ಈ ಒಂದು ಫೋನ್ ಟ್ಯಾಪಿಂಗ್ ಮಾಡಿದಂಥ ತಪ್ಪಿಗೆ ಪ್ರಾಯಶ್ಚಿತ್ತ ಕೊಡುತ್ತೇನೆ ಎಂದು ಅವೊತಿನದಿವಸ ರಾಜೀನಾಮೆ ಕೊಟ್ಟಿದ್ದರೆ ಈ ಪರಿಸ್ಥಿತಿ ಇವೊತ್ತು ಬರುತ್ತಿರಲಿಲ್ಲ ಆದರೆ ಅವರು ಏನು ಮಾಡಿದರು, ಅವರು ಬುದ್ಧಿವಂತಿಕೆ ಎಂದು ತಿಳಿದುಕೊಂಡಿರಬಹುದು ನಾನು ತಿಳಿದಿಲ್ಲ ನಾನು ನಿಮಗೆ ಹೇಳುತ್ತೇನೆ, ಅವರು ಏನು ಹೇಳಿದರು ಅಂದರೆ "ನಾನು ಮಾಡಿಲ್ಲ. ಇದರ ಜವಾಬ್ದಾರಿ ನನ್ನದಲ್ಲ I have not given any authority or any approval to tap the telephone still I owe a moraly responsibilty, therefore. I am hereby tendering the resignation"? ಎಂದು ಹೇಳಿದಿದ್ದುದರಿಂದ ಇವೊತ್ತು ಈ ಪ್ರಕರಣ ಜೀವಂತ ಇರುವುದಕ್ಕೆ ಕಾರಣ ಆಯಿತು ನಾನು ಏನು ನಿಮ್ಮ ಪರ ಮತ್ತೊಬ್ಬರ ಪರ ಎಂದು ಹೇಳುತ್ತಿಲ್ಲ. ಏಕೆಂದರೆ ಮೇಲಿಂದಮೇಲೆ ಕೇಳುತ್ತಿದ್ದೀರಿ ಸ್ವಲ್ಪ ದಿವಸ ಇದು ಮಣ್ಣು ಮುಚ್ಚಿದಂತೆ ಕಾಣಿಸುತ್ತಿತ್ತು. ಬಹುಶಃ ಬೂದಿಯೊಳಗಿನ ಕೆಂಡ ಇದ್ದ ಹಾಗೆ ಇತ್ತು. ಅದು ಮತ್ತೆ ಬೆಂಕಿ ಯಾವಾಗ ಆಯಿತು ಅಂದರೆ ಪಾರ್ಲಿಮೆಂಟಿನ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ರಿಪೋರ್ಟ್ ಬಂದಮೇಲೆ ಮತ್ತೆ ಎದ್ದುಬಿಟ್ಟಿತು. ಈಗ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ ಬಹುಶಃ ಈ ಚರ್ಚೆ ಈ ಮನೆಗೆ ಸೀಮಿತವಾಗಿಲ್ಲ ಹೊರಗಡೆ ಚರ್ಚೆ ಯಾಗುತ್ತಿದೆ. ನಿಮ್ಮ ಪಕ್ಷದಲ್ಲಿ ಚರ್ಚೆಯಾಗುತ್ತಿದೆ. ಪತ್ರಿಕೆಗಳಲ್ಲಿ ಚರ್ಚೆಯಾಗುತ್ತಿದೆ ಶ್ರೀಮಾನ್ ಹೆಗಡೆಯವರು ಮತ್ತು ವಿರೋಧ ಪಕ್ಷದ ನಾಯಕರು ಮೇಲಿಂದ ಮೇಲೆ ನಮ್ಮ ನಾಯಕರ ಪ್ರತಿಭೆಗೆ ಮಸಿ ಬಳಿದು ಅವರ ತೇಜೋವಧೆ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಹೇಳುತ್ತಿದ್ದಾರೆ ಶ್ರೀಮಾನ್ ಚಂದ್ರೇಗೌಡರೆ, when you have friends like......ಅದು ನಿಮಗೆ ಬಿಟ್ಟು ಬಿಡುತ್ತೇನೆ, in your own camp, you don't require a political fore here ಅವರೇ ಸಾಕು, ನಿಮ್ಮ ವಾದ ಮಾಡಲಿಕ್ಕೆ ನಾವು ಯಾರು ಬೇಕಾಗಿಲ್ಲ ಇವೊತ್ತು ನಾವು ತೇಜೋವಧೆ ಮಾಡಬೇಕೆಂಬ ಉದ್ದೇಶ ನಮ್ಮದು ಯಾರದೂ ಇಲ್ಲ ಮತ್ತು ತೇಜೋವಧೆ ಎಲ್ಲಿ ಆಗುತ್ತಿದೆ ಇವೊತ್ತು

ಪರಿಸ್ಥಿತಿ ಏನಿದೆ, ಎನ್ನುವುದು ಅನೇಕ ಜನ ಮಾನ್ಯ ಸದಸ್ಯರು ಈ ಕಡೆ ಹೊಸದಾಗಿ ಬಂದಿದ್ದಾರೆ, ಅವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತಿದ್ದಾರೆ.

ಬಹುಶಃ ನೂರಕ್ಕೆ ಸುಮಾರು ೪೦ರಷ್ಟು ಜನ ನನ್ನ ಲೆಕ್ಕದ ಪ್ರಕಾರ ಇವತ್ತು ಈ ಸದನಕ್ಕೆ ಬಂದಿರುವಂತಹ ಸದಸ್ಯರು ಏನು ಇದ್ದಾರೆ, ಅಂದರೆ ನಮ್ಮ ಪಕ್ಷದ ಸದಸ್ಯರಲ್ಲಿ ಹೆಚ್ಚು ಜನ ಹೊಸಬರು ಇದ್ದಾರೆ. ಅವರಿಗೆ ಈ ಪ್ರಕರಣದ ಬಗ್ಗೆ ಪೂರ್ತಿಯಾಗಿ ತಿಳಿದಿಲ್ಲ; ಪತ್ರಿಕೆಯಲ್ಲಿ ಬಂದದ್ದನು ಒಂದು ಚೂರು ಚೂರು ಓದಿರಬಹುದೇ ಹೊರತಾಗಿ ಸವಿಸ್ತಾರವಾಗಿ ಯಾವ ವರದಿ ಇಲ್ಲ. ಅವರು ಇಲ್ಲಿಗೆ ಬಂದ ಮೇಲೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಪತ್ರಿಕೆಯಲ್ಲಿ ಸಾಕಷ್ಟು ಬರುತ್ತಿದೆ. ನಿಮ್ಮ ದೊಡ್ಡ ದೊಡ್ಡ ನಾಯಕರುಗಳೇ ಇದು ಮಾಡುವುದಕ್ಕಾಗುವುದಿಲ್ಲ ರಾಜೀನಾಮೆ ಕೊಡಿ ಎಂದು ಅವರೇ ಬೇಡುತ್ತಿದ್ದಾರೆ. ಆದರೆ ದೋಷಾರೋಪಣೆಯನ್ನು ನಮ್ಮ ಮೇಲೆ ನೀವು ಮಾಡುತ್ತಿದ್ದೀರಿ. ಇದು ನನಗೆ ಅರ್ಥವಾಗುತ್ತಿಲ್ಲ. ಇದು ನಿಮ್ಮಲ್ಲಿ ಒಳಗಡೆ ಇರತಕ್ಕಂತಹ ನಿಮ್ಮ ಎಂಟೈರ್ ಅಂದರೆ ಈ ಒಂದು ಟೇಪ್ ಅನ್ನಿರಿ, ಫೋನ್ ಟ್ಯಾಪಿಂಗ್ ಅನ್ನಿರಿ. ಈ ಹಗರಣ ನಿಮ್ಮ ಅತಃಕಲಹದ ಕೂಸು; ನಮ್ಮದಲ್ಲ ಕೂಸು ಅದು; ಆ ಕೂಸು ನಿಮ್ಮದೇ; ನೀವೇ ಅದಕ್ಕೆ ಜನ್ಮ ಕೊಟ್ಟಿರಿ; ನಾವ್ಯಾರೂ ಅದಕ್ಕೆ ಜನ್ಮ ಕೊಡಲಿಲ್ಲ, ಇದನ್ನು ನೀವು ತಿಳಿದುಕೊಳ್ಳ ಬೇಕಾಗುತ್ತದೆ. ಏನೋ ಈ ಭಾಗದವರು ಶ್ರೀಮಾನ್ ಹೆಗಡೆಯವರ ಮುಖಕ್ಕೆ ಮಸಿ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ವಾದವಿದ್ದರೆ ಅದರಲ್ಲಿ ಅರ್ಥವಿಲ್ಲ. ನಮಗೇನು ಇಂಟರೆಸ್ಟ್; ನಮಗೆ ಈ ಭಾಗದಲ್ಲಿರುವಂತಹ ನಮ್ಮ ಸದಸ್ಯರಿಗೆ ಏನು ಇಂಟರೆಸ್ಟ್ ಎಂದರೆ ಇದರಲ್ಲಿ ನಿಜಾಂಶ ಏನು ಇದೆ; ಈ ರೀತಿಯಾಗುತ್ತಾ ಹೋದರೆ ನಾವು ಈ ಸದನದಲ್ಲಿ ಕೆಲಸ ಮಾಡುವುದು ಹೇಗೆ ಎಂಬ ಒಂದು ಕಳಕಳಿ ಇದೆ. ಈ ರೀತಿ ಆದರೆ ನಾವು ಈ ಸದನದಲ್ಲಿ ಹೇಗೆ ಕೆಲಸ ಕಾರ್ಯಗಳನ್ನು ಮಾಡಬೇಕು; ನಮ್ಮ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅಡ್ಡಿ ಆಗಬಹುದು ಎಂಬ ಆತಂಕ ಇದೆ. ಅನೇಕ ಸಲ ಟೆಲಿಫೋನ್ ಮೂಲಕ ಅನೇಕ ಜನರ ಜೊತೆಯಲ್ಲಿ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇವೆ, ಅನೇಕ ರೀತಿಯಿಂದ ನಮ್ಮ ಕೆಲಸ ಕಾರ್ಯಗಳನ್ನು ಶಾಸಕರಾಗಿ ಮಾಡಬೇಕಾಗುತ್ತದೆ. ಆಗ ಈ ರೀತಿ ನಾವು ಮಾತನಾಡುವುದೆಲ್ಲಾ ಟ್ಯಾಪ್ ಆಗುತ್ತಾ ಹೋದರೆ ನಾವು ಯಾವ ರೀತಿಯಿಂದ ಶಾಸನ ಸಭೆಯ ಸದಸ್ಯರಾಗಿ ಕಾರ್ಯನಿರ್ವಹಣೆ ಮಾಡಬೇಕೆಂಬ ಒಂದು ಕಳವಳ ಅನೇಕ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರುತ್ತದೆಂದು ಹೇಳುತ್ತಿದ್ದೇನೆ. ಇಲ್ಲಿರುವ ಪ್ರಶ್ನೆ ಟೆಲಿಫೋನ್ ಟ್ಯಾಪಿಂಗ್ ಇದು ಏನೂ ಹೊಸದಲ್ಲ. ಏಕೆಂದರೆ ಇದನ್ನು ತಾವು ಒಪ್ಪಿಕೊಳ್ಳುತ್ತೀರಿ ಮತ್ತು ಹೆಗಡೆಯವರೂ ಕೂಡ ಒಪ್ಪುತ್ತಾರೆ. ಟೆಲಿಫೋನ್ ಎಷ್ಟು ಹಳೆಯದೋ, ಪುರಾತನವಾಗಿದೆಯೋ ಟೆಲಿಫೋನ್ ಟ್ಯಾಪಿಂಗ್ ಕೂಡ ಆ ಪದ್ಧತಿ ಕೂಡ ಅಷ್ಟೇ ಪುರಾತನವಾಗಿದೆ. ಬಹುಶಃ ೭೦ರ ರೆಕಾರ್ಡ್ ಸಿಕ್ಕಿರಬಹುದು. ಬಹುಶಃ ಅದಕ್ಕಿಂತ ಹಿಂದಿನ ರೆಕಾರ್ಡ್ ನಿಮಗೆ ಸಿಕ್ಕಿಲ್ಲವೆಂದು ಅನಿಸುತ್ತದೆ. ಅದು ಬೇರೆ. ಬಹುಶಃ ಅನೇಕರು ನನ್ನ ಕಾಲಕ್ಕೆ ಟೆಲಿಫೋನ್ ಟ್ಯಾಪ್ ಆಗಿಲ್ಲವೆಂದು ನಾನು ಹೇಳಿದ್ದೇನೆಂದು ವ್ಯಾಖ್ಯಾನವನ್ನು ಮಾಡುವುದಕ್ಕೆ ಹೋಗಿದ್ದಾರೆ. ಆದರೆ ನಾನು ಹಾಗೆ ಹೇಳಲಿಲ್ಲ. ನಾನು ಏನು ಹೇಳಿದ್ದೇನೆಂದರೆ ಟೆಲಿಫೋನ್ ಟ್ಯಾಪಿಂಗ್ ನನ್ನ ಕಾಲಕ್ಕೆ ಯಾವ ಪೊಲಿಟಿಷಿಯನ್ ಮತ್ತು ಪಬ್ಲಿಕ್ ಲೈಫ್‌ನಲ್ಲಿ ಇರುವಂತಹ ವ್ಯಕ್ತಿಗಳದ್ದು ಟ್ಯಾಪ್ ಆಗಿಲ್ಲ ಅನ್ನುವಂಥಾದ್ದನ್ನು ಹೇಳಿದ್ದೇನೆ. ಬಹುಶಃ ಯಾರದ್ದು ಮಾಡಬೇಕೆಂದು ಕಾನೂನು ಹೇಳುತ್ತದೆ. ಅದರ ಬಗ್ಗೆ ನಾವು ಹೇಳಬೇಕಾದ ಅವಶ್ಯಕತೆ ಇಲ್ಲ. ಅದು ಹಿಂದಕ್ಕೂ ಆಗಿದೆ. ಇವತ್ತೂ ಆಗಿದೆ ಮುಂದೆ ಕೂಡ ಆಗುತ್ತದೆ. ಈ ದೇಶದ ದೃಷ್ಟಿಯಿಂದ ದೇಶದ ಐಕ್ಯತೆಯ ದೃಷ್ಟಿಯಿಂದ ದೇಶದ ಸುವ್ಯವಸ್ಥೆಯ ದೃಷ್ಟಿಯಿಂದ; ಯಾರ ಟೆಲಿಫೋನ್ ಟ್ಯಾಪಿಂಗ್ ಆಗಬೇಕೆಂದರೆ, unsocial elements, antisocial elements, bootleggers drug traffickers blackmarketeers, and persons who are responsible for communal disturbances, ಕಮ್ಯುನಲ್ ಎಲಿಮೆಂಟ್ಸ್ ಮಾಡುವವರದ್ದು ಟೆಲಿಫೋನ್ ಟ್ಯಾಪ್ ಆಗುತ್ತದೆ. ಇದು ಹಿಂದೆ ಕೂಡ ಆಗಿತ್ತು ಇವತ್ತು ಕೂಡ ಆಗುತ್ತಿದೆ ಮುಂದೆ ಕೂಡ ಆಗುತ್ತದೆ, ಈ ಟೆಲಿಫೋನ್ ಟ್ಯಾಪಿಂಗ್ ಹೊಸದು ಅಲ್ಲ. ಆ ಬಗ್ಗೆ ತಾವು ಹೇಳಿದ್ದೀರಿ ಮಾನ್ಯ ಹೆಗಡೆಯವರು ಹೇಳಿದ್ದಾರೆ. ಅಥರೈಸೇಷನ್ ಯಾರು ಕೊಟ್ಟರು ಹೇಗೆ ಕೊಟ್ಟರು ಎಂದು ಹೇಳಿದ್ದಾರೆ. ಅದಕ್ಕೆ ಸವಿಸ್ತಾರವಾಗಿ ಹೇಳುತ್ತೇನೆ. ಈ ಒಂದು ಹಗರಣ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ ನಾನು ಬಹಳ ಕಟುವಾಗಿ ಮಾತನಾಡಿದೆ ಏನು ಮಾತನಾಡಿದ್ದೇನೆಂಬುದು ನೆನಪು ಇಲ್ಲ. ಆದರೆ ಒಂದು ವಿಚಾರವನ್ನು ಹೇಳಿದ್ದೇನೆ ಅದು ನೆನಪಿನಲ್ಲಿ ಇದೆ, ಏನೆಂದರೆ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಕಾರ್ಯಕರ್ತರ ಪ್ರತಿನಿಧಿಗಳ ನಾಯಕರ ಮತ್ತು ಆದೇ ರೀತಿಯಾಗಿ ಪಬ್ಲಿಕ್ ಫೀಲ್ಡ್‌ನಲ್ಲಿ ಕೆಲಸ ಮಾಡುವಂತಹ ವ್ಯಕ್ತಿಗಳ ಟೆಲಿಫೋನ್ ಅನ್ನು ಕದ್ದು ಕೇಳುವಂಥಾದ್ದು ಮಹಾ ಅಪರಾಧ, ಮಹಾ ಪಾಪ, ನೀವು

ನಾವೆಲ್ಲರೂ ಕೂಡ ಇದಕ್ಕೆ ಪೂರ್ತಿಯಾಗಿ ಒಪ್ಪುತ್ತೇವೆ. ನಾನು ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ಮೊದಲನೇ ಸಲ ನಾನು ವಿಚಾರ ಮಾಡಿದ್ದು ಏನೆಂದರೆ, ಹಿಂದೆ ಇಂಥ ಒಂದು ಪ್ರಕರಣ ಆಗಿದೆ ಮತ್ತೆ ಇದಕ್ಕೆ ಆಸ್ಪದವನ್ನು ಕೊಡಬಾರದು ಎಂದು ಒಂದು ನಿರ್ಣಯವನ್ನೂ ಮಾಡಿದೆವು. ಆ ರೀತಿಯ ನಿರ್ಣಯವನ್ನು ಮಾಡಿದ ಮೇಲೆ, ನಾನು ಅಧಿಕಾರವನ್ನು ಸ್ವೀಕಾರ ಮಾಡಿದ ೨-೩ ದಿವಸದಲ್ಲಿ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ, ಇನ್ನು ಮುಂದೆ ಯಾವುದೇ ಸಂದರ್ಭದಲ್ಲೂ ಕೂಡ ಟೆಲಿಫೋನನ್ನು ಟ್ಯಾಪ್ ಮಾಡುವುದನ್ನು ಅಂದರೆ ಪೊಲಿಟಿಷಿಯನ್ಸ್, ಪಬ್ಲಿಕ್ ಫೀಲ್ಡ್‌ನಲ್ಲಿ ಕೆಲಸ ಮಾಡತಕ್ಕ ಯಾವುದೇ ವ್ಯಕ್ತಿಗಳ ಫೋನ್‌ನ್ನೂ ಇನ್ನು ಮುಂದೆ ಟ್ಯಾಪ್ ಮಾಡದಂತೆ ಇಂಟೆಲಿಜೆನ್ಸ್ ಆಫೀಸರ್ಸ್‌ಗೆ ತಿಳಿಸಬೇಕೆಂದು ನಾನು ಹೇಳಿದೆ. ನಾನು ಈ ಮಾತನ್ನು ಏತಕ್ಕೆ ಹೇಳಿದೆ ಎಂದರೆ ಇವತ್ತು ಪತ್ರಿಕೆಯಲ್ಲಿ ಬಂದಿದೆ. ಮೇಲ್ಮನೆಯಲ್ಲಿ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ನಮ್ಮ ಟೆಲಿಫೋನ್ ಟ್ಯಾಪಿಂಗ್ ಇವತ್ತೂ ಕೂಡ ಆಗುತ್ತಿದೆ ಎಂದು ಯಾರೋ ಒಬ್ಬರು ಮೇಜನ್ನು ಗುದ್ದಿ ಗುದ್ದಿ ಮಾತನಾಡುತ್ತಿದ್ದರು. ನಾನು ಈಗಾಗಲೇ ಹೇಳಿದಂತೆ, ನಾನು ಅಧಿಕಾರಕ್ಕೆ ಬಂದ ಎರಡು ದಿವಸದನಂತರ ನನಗೆ ಒಂದು ಸಂಶಯ ಬಂತು. ಏನೆಂದರೆ, ನಾನೇನೋ ಅವರಿಗೆ ಓರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟೆ; ಆದರೆ ಅವರ ಇಂಟೆಲಿಜೆನ್ಸ್ ಆಫೀಸರ್‌ಗೆ ಹೇಳುವುದನ್ನು ಮರೆತರೆ ಏನು ಗತಿ ಎಂದು ಮತ್ತೆ ರೈಟಿಂಗ್‌ನಲ್ಲಿ ಕೊಟ್ಟಿದ್ದೇನೆ. ನಾನು ಇದನ್ನು ಇಲ್ಲಿ ಓದುತ್ತಿದ್ದೇನೆ. ಇದು ಈ ಮನೆಯಲ್ಲಿ ರೆಕಾರ್ಡ್ ಆಗಬೇಕಲ್ಲ. ನಮ್ಮ ಚೀಫ್ ಸೆಕ್ರೆಟರಿಯವರು ಹೋಂ ಸೆಕ್ರೆಟರಿಯವರಿಗೆ ಈ ರೀತಿ ಬರೆದು ಎಲ್ಲರಿಗೂ ತಿಳಿಸಿ ಎಂದು ಬರೆಯುತ್ತಾರೆ.

"Office of the Chief Secretary, Vidhana Soudha, Bangalore, Dated, 13th December 1989"

ನಾನು ನವೆಂಬರ್ ೩೦ ಅಥವಾ ೩೧ನೇ ತಾರೀಖು ಛಾರ್ಜನ್ನು ತೆಗೆದುಕೊಂಡೆ. ಅಲ್ಲಿಂದ ಸುಮಾರು ೧೫ ದಿವಸದೊಳಗೆ ಈ ಇನ್‌ಸ್ಟ್ರಕ್ಷನ್ಸ್ ಹೊರಗೆ ಬಂದಿದೆ. ಅವರು ಏನು ಬರೆದಿದ್ದಾರೆಂದರೆ :

"The Chief Minister has set me the following note regarding the telephone tapping"

ನಾನು ಒಂದು ಮಿನಿಟ್‌ನ್ನು ಹಾಕಿ ಕಳುಹಿಸಿಕೊಟ್ಟಿದ್ದೇನೆ. ನಾನು ಏನು ಬರೆದಿದ್ದೇನೆಂದರೆ,

"The Chief Secretary may please instruct the Home Commissioner and Inspector General (Intelligence) that tapping of telephones of any individual in public or political fields should not be resorted to even otherwise only to prevent spreading of communal hatred, undesirable and anti-social activities such as smuggling, drug craffficking, espionage etc. This extreme step should be taken up that too in the interest of the State and the nation.

The Home Commissioner is requested to kindly to take further action as directed by the Chief Minister. 6 Copy of this note is being marked to Sri T. Srinivasulu. LIG Intelligence",

ಇದನ್ನು ನಾನು ಮಾಡಿದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಕಾಲದಲ್ಲಿ ಯಾವ ಪೊಲಿಟೀಷಿಯನ್ಸ್, ಪಬ್ಲಿಕ್ ಫೀಲ್ಡ್‌ನಲ್ಲಿರತಕ್ಕ ಯಾವ ಕಾರ್ಯಕರ್ತನ ಟೆಲಿಫೋನ್ ಕೂಡ ಟ್ಯಾಪ್ ಆಗಿದೆ ಎನ್ನತಕ್ಕ ದೂರಿಗೆ ಅವಕಾಶ ಇರಬಾರದೆಂದು ಈ ನಿರ್ಣಯವನ್ನು ನಾನು ಮಾಡಿದ್ದೇನೆ. ಅಲ್ಲಿಂದ ಈಗಿರತಕ್ಕ ಪ್ರಶ್ನೆ ಎಂದರೆ ಟೆಲಿಫೋನ್ ಟ್ಯಾಪಿಂಗ್‌ನಲ್ಲಿ ಯಾರು ಜವಾಬ್ದಾರರು? ಎಂಬುದು. ಇದರ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಮುಂದಿಡಲಿಕ್ಕೆ ಬಯಸುತ್ತೇನೆ. ಇಲ್ಲಿ ಪ್ರೊಸೀಜರ್‌ನ್ನು ಹೇಳಬೇಕಾಗುತ್ತದೆ, ಮತ್ತು ಅದರ ಜೊತೆಯಲ್ಲಿ ಇನ್ನೊಂದು ವಿಚಾರ ಎಂದರೆ how the Intelligence works. how the intelligence organisation works in the State and in the Centre. ಕೇಂದ್ರ ಸರ್ಕಾರದ್ದನ್ನು ನಾನು ಹೇಳುವುದಿಲ್ಲ. because.I am not the Prime Minister. ಇದು ಯಾರಿಗಾದರೂ ಗೊತ್ತಿದ್ದರೆ ಅದು ಈ ಸದನದಲ್ಲಿ ಇಬ್ಬರಿಗೆ ಮಾತ್ರ. ಉಳಿಕೆಯವರಿಗೆ ಯಾರಿಗೂ ಗೊತ್ತಿಲ್ಲ. ಅದು ಗೊತ್ತಿಲ್ಲದೇ ಬಹಳಷ್ಟು ಭಾಷಣಗಳಾಗಿವೆ

೪.೧೦ ಪಿ.ಎಂ.

ಇದು ಗೊತ್ತಿಲ್ಲದೆ ಬಹಳಷ್ಟು ಭಾಷಣ ಆಗಿದೆ. ಅದಕ್ಕಾಗಿ ನಾನು ಇಲ್ಲಿರುವ ವಿಷಯವೇ ಒಂದಾದರೆ, ಭಾಷಣವೇ ಒಂದಾಯಿತು ಎಂದು ಹೇಳಿದೆ. Intelligence work is not a file work. It is not a file work. It does not work as we move the file in the Secretariat. It is not that work. ಇದನ್ನು ತಿಳಿದುಕೊಂಡರೆ ಬಹುಶಃ ಮುಂದೆ ಚರ್ಚೆಗೆ ಅವಕಾಶವಿಲ್ಲ. ಇದು ಹೊಸದಲ್ಲ, ಇದು ನನ್ನ ಕಾಲಕ್ಕೆ ಬಂದದ್ದು ಹೆಗಡೆಯವರ ಕಾಲಕ್ಕೆ ಬಂದದ್ದು ಎಂದು ತಾವು ಯಾರೂ ತಿಳಿದುಕೊಳ್ಳಬಾರದು. ಅದು ಇಂಟಲಿಜೆನ್ಸ್ ಕೆಲಸ ಏನು ಇರುತ್ತದೆಂದರೆ ಬಹಳ ಇಂಟಲಿಜೆನ್ಸ್ ಇರುತ್ತದೆ ಎಂಬುದು ನನಗೆ ಗೊತ್ತಿದೆ. ಅವರಿಗೂ ಗೊತ್ತಿದೆ ಅದು ಬಹಳ ಇದೆ. ಅದನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಶ್ರೀಮಾನ್ ಹೆಗಡೆಯವರು ಆಥರೈಜೇಷನ್ ಲೇಟರ್ ಬಗ್ಗೆ ಹೇಳಿದರು. It begins with that. Authorisation letter ಅನ್ನು Chief Minister ಅಪ್ರೂವಲ್‌ನಿಂದ ಕೊಡಬೇಕಾದ ಅವಶ್ಯಕತೆ ಇಲ್ಲ. ಇದನ್ನ ನಾವು ತಿಳಿದುಕೊಳ್ಳಬೇಕು. ಇದು ಸೆಕ್ರೇಟರಿಯಟ್‌ನಲ್ಲಿ ಏನು ಕೆಲಸ ಆಗುತ್ತದೆ. ಪ್ರತಿಯೊಂದಕ್ಕೂ ಚೀಫ್ ಮಿನಿಸ್ಟರ್ ಅವರ ರಿಟನ್ ಅಪ್ರೂವಲ್ ತೆಗೆದುಕೊಂಡು ಕೆಲಸ ಆಗುವ ಹಾಗೆ ಇಲ್ಲ. The duties are assigned to differerent officers. It is an age-old practice. ಇದು ಈಗಿನದಲ್ಲ. ಆಥರೈಜೇಷನ್ ಬಗ್ಗೆ ಶ್ರೀಮಾನ್ ಹೆಗಡೆಯವರು ಹೇಳಿದರು ಎಲ್ಲಿದೆ ತನ್ನಿ; ನಾವು ಅಪ್ರೂವಲ್ ಮಾಡಿರುವುದು ಎಲ್ಲಿದೆ. ತೆಗೆದುಕೊಂಡುಬನ್ನಿ ಎನ್ನತಕ್ಕ ಮಾತನ್ನು ಅವರು ಹೇಳಿದರು. ಇಲ್ಲಿ ಚೀಫ್ ಸೆಕ್ರಟರಿ ಆಥರೈಸ್ ಮಾಡುತ್ತಾರೆ. ಅದನ್ನು ಓದುತ್ತೇನೆ. ಆಗ ನಿಮಗೆ ಅರ್ಥವಾಗುತ್ತದೆ ಈ ಆಥರೈಜೇಷನ್ ಏತಕ್ಕೆ ಬೇಕಾಗುತ್ತದೆ ಅಂದರೆ ಜನರಲ್ ಮ್ಯಾನೇಜರ್ ಟೆಲಿಫೋನ್‌ನವರ ಹತ್ತಿರ ಹೋಗಿ ಕೇಳಿದರೆ ನಾವು ಇಂಟರ್‌ಸೆಪ್ಟ್ ಮಾಡುತ್ತೇನೆಂದು ನಮ್ಮ ಆಫೀಸರ್ ಕೇಳಿದರೆ ಅವರು ಪರ್ಮಿಷನ್ ಕೊಡುವುದಿಲ್ಲ. ಫೆಸಿಲಿಟೀಸ್ ಎಕ್ಸ್‌ಟೆಂಡ್ ಮಾಡುವುದಿಲ್ಲ ಇದನ್ನು ನೀವು ತಿಳಿದುಕೊಳ್ಳಬೇಕು. ಸರ್ಕಾರದಿಂದ ಆಥರೈಸ್ ಮಾಡಬೇಕು ಆ ವ್ಯಕ್ತಿಗೆ. ಆ ಆಫೀಸರ್‌ಗೆ ಮತ್ತು ಆ ಆಥರೈಜೇಷನ್ ಹೆಸರಿನಲ್ಲಿ ಇರುವ ಹಾಗೆ ಇಲ್ಲ. ಆ ಆಫೀಸರ್ ಡಿಸಿಗ್ನೇಷನ್ ಮೇಲೆ ಹೋಗುತ್ತದೆ. ಈಗ ಉದಾಹರಣೆಗೆ ೧೯೮೬ರಲ್ಲಿ ಶ್ರೀಮಾನ್ ಸತೀಶ್ ಚಂದ್ರನ್ ರವರ ಆರ್ಡರ್ ಏನು ಇದೆ ಅದನ್ನು ನಾನು ಓದುತ್ತೇನೆ.

> "In exercise of the powers conferred by Sub-Section 2 of Section 5 of the Indian Telegraph Act 1985, the Govt. of Karnataka hereby specially authorise the Deputy Inspector General of Police (Intelligence) the powers under the said Sub-Section in the interest of public safety."

ಕಾರಣ ಕೊಡಬೇಕು. ಕಾರಣ ಕೊಡಬೇಕು. ಎಂದು ಕೇಳಿದಿರಲ್ಲಾ. ಇದಿಷ್ಟೇ ಕಾರಣ.

ಶ್ರೀ ಡಿ. ಬಿ. ಚಂದ್ರೇಗೌಡ.— ಕಾರಣ ಕೇಳಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.— ಆಥರೈಜೇಷನ್ ಏತಕ್ಕೆ ಕೊಟ್ಟರು. ಯಾರ ಟೆಲಿಫೋನ್ ಟ್ಯಾಪ ಮಾಡಲು ಆಥರೈಜೇಷನ್ ಕೇಳಿದರು? ಇದು ೮೬ರಲ್ಲಿ ಆಗಿದ್ದು. ಇನ್ನು ೮೭ರಲ್ಲಿ ಒಂದು ಆರ್ಡರ್ ಇದೆ. ಆ ಆರ್ಡರ್‌ನಲ್ಲಿ ಏನು ಹೇಳುತ್ತಾರೆಂದರೆ:—

> "In exercise of the powers conferred by Sub-Section 2 of Section 5 of the Indian Telegraph Act 1985, the Govt. of Karnataka hereby specially authorise the Special Inspector General of Police (Intelligence) to exercise the powers under the said Sub-Section in the cnterest of public safety."

ಅದೇ ಸೇಮ್. ಪ್ರೊಫಾರ್ಮ ಏನೂ ಬದಲಾವಣೆ ಆಗಿಲ್ಲ. ಚೀಫ್ ಸೆಕ್ರೆಟರಿಯಾಗಲಿ ಹೋಂ ಸೆಕ್ರೆಟರಿಯಾಗಲಿ, ಏನು ಮಾಡಿದ್ದಾರೆ ಅಂದರೆ ಡಿ.ಜಿ.ಪಿ. ಕರ್ನಾಟಕ ಸ್ಟೇಟ್‌ರವರಿಗೆ ಬರೆದು ಕಾಪಿಯನ್ನು ಜನರಲ್ ಮ್ಯಾನೇಜರ್ ಬೆಂಗಳೂರು ಟೆಲಿಫೋನ್ ಬೆಂಗಳೂರುರವರಿಗೆ ಕಳುಹಿಸಿದ್ದಾರೆ. ಡಿ.ಐ.ಜಿ. ಇಂಟಲಿಜೆನ್ಸ್ ಅವರಿಗೂ ಒಂದು ಕಾಪಿ ಕೊಟ್ಟಿದ್ದಾರೆ. ಆ ಜನರಲ್ ಮ್ಯಾನೇಜರ್ ಅವರಿಗೆ ಒಂದು ಕಾಪಿ ಮತ್ತು ಮೈನ್ ಕಾಪಿಯನ್ನು ಡಿ.ಜಿ.ಪಿ.ಯವರಿಗೆ ಕಳುಹಿಸಿದ್ದಾರೆ. ಇದು ಒಂದು ಪದ್ಧತಿ.

ಇದರಲ್ಲಿ ಮತ್ತೇನು ಇಲ್ಲ. ಫೈಲ್ ತನ್ನಿ, ಫೈಲ್ ಇಟ್ಟರೆ ಎಲ್ಲಾ ಸಿಗುತ್ತದೆಂದು ಹೆಗಡೆಯವರು ಹೇಳಿದರು. ಅದರಲ್ಲೇನು ಸಿಗುವುದಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ಈ ಅಧಿಕಾರವನ್ನು ಒಮ್ಮೆ ಮುಖ್ಯ ಕಾರ್ಯದರ್ಶಿಯವರಿಗೆ ಕೊಟ್ಟಮೇಲೆ, ಆ ಕೆಲಸ ಮುಗಿಯಿತು. ಇದನ್ನು ತಾವು ತಿಳಿದುಕೊಳ್ಳಬೇಕು.

His job is over. The Deputy Inspector General of Police used to be incharge of Intelligence. Later on, the Special I G of Intelligence, designation change ಮಾಡಿ ಪೋಸ್ಟನ್ನು ಅಪ್‌ಗ್ರೇಡ್ ಮಾಡಿದರು. ಅವರ ಹೆಸರು ಇದೇ ರೀತಿ ಇದೆ. ಅಲ್ಲಿಂದ ಏನು ಪ್ರಾರಂಭವಾಗುತ್ತದೆಂದರೆ, The whole drama, exercise, it is only between the Intelligent Officer and the Chief Minister, nobodyelse. That is why I am telling you must understand how the system of intelligence works in the State. It is not peculair to Karnataka; It works throughout in the same manner in all the States in the country including the Centre if my information is correct. ಕೇಳಿಕೊಳ್ಳಿ, ನಾನು ಎಲ್ಲವನ್ನೂ ಹೇಳುತ್ತೇನೆ. ಏನಾದರೂ ಅನುಮಾನ ಇದ್ದರೆ ಆಮೇಲೆ ಕೇಳಬಹುದು. ಅಲ್ಲಿಂದ ಇನ್ಸ್‌ಪೆಕ್ಟರ್ ಜನರಲ್. ನನ್ನ ಪ್ರಾಕ್ಟೀಸ್ ಏನಿದೆ ಎಂಬುದನ್ನು ಹಿಂದಿನ ಪ್ರಾಕ್ಟೀಸ್ ಏನಿತ್ತು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ.

The Intelligence Officer invariably meets attleast twice the Chief Minister ಆ ವೇಳೆಗೆ ಅಲ್ಲಿ ಯಾರೂ ಇರುವ ಹಾಗೆ ಇಲ್ಲ. ಅವನೊಬ್ಬನೇ ಟೈಂ ಫಿಕ್ಸ್ ಮಾಡಿಕೊಂಡು ಬರುತ್ತಾನೆ. ರಾಜ್ಯದಲ್ಲಿ ಏನು ನಡೆಯುತ್ತಿದೆ, ಏನು ವ್ಯವಹಾರಗಳು ಆಗುತ್ತಿವೆ, ಏನು ಡೆವಲಪ್‌ಮೆಂಟ್ ಆಗುತ್ತಿದೆ, ಏನು ಆಕ್ಟಿವಿಟೀಸ್ ನಡೆಯುತ್ತಿವೆ ಎಂಬುದನ್ನು ಮುಖ್ಯ ಮಂತ್ರಿಗಳಿಗೆ ಬ್ರೀಫ್ ಮಾಡುತ್ತಾನೆ. ಮುಖ್ಯ ಮಂತ್ರಿಗಳು ಮತ್ತು ಅವರು ಇಬ್ಬರೂ ಮಾತನಾಡುತ್ತಾರೆ. ಅವರುಗಳು ಏನು ಮಾತನಾಡುತ್ತಾರೆಂಬುದು ಮುಖ್ಯ ಮಂತ್ರಿಗಳಿಗೆ ಮತ್ತು ಇಂಟಲಿಜೆನ್ಸ್ ಆಫೀಸರ್‌ಗೆ ಮಾತ್ರ ಗೊತ್ತು, ಅವರ ಆತ್ಮಕ್ಕೆ ಗೊತ್ತು. ಮೂರನೆಯವರಿಗೆ ಯಾರಿಗೂ ಗೊತ್ತಾಗುವುದಕ್ಕೆ ಸಾಧ್ಯವಿಲ್ಲ. ಈ ಪದ್ಧತಿ ಏನಿದೆ ಎಂದು ತಾವು ತಿಳಿದುಕೊಳ್ಳಬೇಕು. ಮತ್ತೆ ಅವರು ಏನು ಮಾತನಾಡುತ್ತಾರೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದಕ್ಕೆ ಹೇಳಿದೆ. It does not work like file works. ಉದಾಹರಣೆಗೆ, ಮುಖ್ಯ ಮಂತ್ರಿಗಳು ಇಂಟಲಿಜೆನ್ಸ್ ಆಫೀಸರ್‌ಗೆ ಹೇಳುತ್ತಾರೆ, ಈ ಎಂ.ಎಲ್.ಎ. ಏನೋ ಮಾಡಿದ ಹಾಗೆ ಕಾಣಿಸುತ್ತದೆ, ಅವರ ಬಗ್ಗೆ ನಿಗಾ ಇಡಬೇಕೆಂದರೆ ಆ ಇಂಟಲಿಜೆನ್ಸ್ ಆಫೀಸರ್ ಬರೆದುಕೊಡಿ ಎಂದು ಕೇಳುವ ಹಾಗೆ ಇಲ್ಲ. ಬರೆದುಕೊಡಿ, ಆಕ್ಟ್ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಅವರು ಏನು ಹೇಳುತ್ತಾರೆ, ಅದು ಅವರ ಆತ್ಮ ಸಾಕ್ಷಿಗೆ ಗೊತ್ತು, ಇಂಟಲಿಜೆನ್ಸ್ ಅಧಿಕಾರಿಯ ಆತ್ಮವೇ ಅದಕ್ಕೆ ಸಾಕ್ಷಿ, ಏಕೆಂದರೆ. The Intelligence Officer will continue so far he enjoys the confidence of the Chief Minister not the confidence of the Government or any other Minister. ಅವರಿಬ್ಬರೂ ಮಾತನಾಡಿದ ಮೇಲೆ ಅದರ ಪ್ರಕಾರ ಅವನು ವ್ಯವಹಾರ ಮಾಡುತ್ತಾನೆ. ಅಲ್ಲಿಂದ ಹೇಗೆ ಮಾಡುತ್ತಾನೆಂಬುದಕ್ಕೆ ತಮ್ಮ ಮುಂದೆ ಉದಾಹರಣೆಗಳನ್ನು ಇಡುತ್ತಿದ್ದೇನೆ. ಅವರು ಹೇಗೆ ಮಾಡುತ್ತಾರೆಂದು ಹೇಳುವುದಾದರೆ, ಐಜಿಪಿ. ಇಂಟಲಿಜೆನ್ಸ್ ಅಧಿಕಾರಿ ಚೇಂಜ್ ಆದರೆ ಅವನ ಸಕ್ಸಸರ್‌ಗೆ ರೈಟಿಂಗ್‌ನಲ್ಲಿ ಪ್ರೊಸೀಜರ್ ಹೇಳಿಕೊಡುತ್ತಾನೆ. ಅದು ರೆಕಾರ್ಡ್‌ನಲ್ಲಿರುತ್ತದೆ. ಇಂಟಲಿಜೆನ್ಸ್ ಆಫೀಸರ್‌ನ ರೆಕಾರ್ಡ್‌ನಲ್ಲಿರುತ್ತದೆ ಸದನದಲ್ಲಿ ಹೇಳಬೇಕಾದರೆ ಆ ಇಂಟಲಿಜೆನ್ಸ್ ಆಫೀಸರ್‌ನ ಫೈಲನ್ನು ನಾನು ನೋಡಿಲ್ಲ. ನಾನು ಅವರ ಜೊತೆ ಚರ್ಚೆ ಮಾಡಿದ್ದೇನೆ. ಕಾಗದಪತ್ರಗಳು ಬೇಕಾದುದನ್ನು ತೆಗೆದುಕೊಂಡಿದ್ದೇನೆ. ಈಗ ಒಂದು ವಿಚಾರ. ೧೯೮೬ರಲ್ಲಿ ಒಬ್ಬ ಐಜಿಪಿ.ಯ ಟ್ರಾನ್ಸ್‌ಫರ್ ಆಗುತ್ತಿದೆ, ಆಗ ಅವನು ಹೇಳುತ್ತಾನೆ. After taking over charge of the State Intelligence, the Special I.G.P. has left a note dated 30-12-1986 as follows :

''Called on the Chief Minister after taking charge as Special I. G. P. (Intelligence) and discussed the system. ಅವರ ಜೊತೆಗೆ ಸಿಸ್ಟಂ ಡಿಸ್‌ಕಸ್ ಮಾಡುತ್ತೀನೆ. ''I was advised to follow the procedure of adding new number in consultation and prior permission of the Minister'' ಅವರು ಬರೆದಿದ್ದು. ಇವತ್ತಿನದಲ್ಲ ಇದು, ಸುಮಾರು ಐದಾರು ವರ್ಷದ ಕೆಳಗೆ ಬರೆದಿದ್ದು. ಅಲ್ಲಿಂದ at the time of handing over charge Sri M. S. Raghuraman ಏಕೆಂದರೆ ಅವನ ಕಾಲಕ್ಕೆ ಟ್ಯಾಪಿಂಗ್ ಆಯಿತು ಎಂದು ಬಂದಿದೆಯಲ್ಲ, Special I.G.P. (Intelligence) to Sri R. M. Vasant Kumar. I. G. P. has left the following note dt. 14-9-1988 ''Handed over charge to Sri R. M. Vasant Kumar IGP.'' Explained to him the system and suggested to follow the procedure of taking the permission of the Chief Minister, ಅವತ್ತು ಚಾರ್ಜ್ ಕೊಟ್ಟು ಹೋಗುವ ಮುಂದೆ ಏನು ಹೇಳುತ್ತಾನೆಂದರೆ......in case the system is revised and include names with prior permission of the Chief Minister as was being done and ·o send the interepted matter in a sealed cover to the Chief Minister only which is the procedure being followed. ಇದು ಬಹಳ ಹಿಂದಿನದು. ರೆಕಾರ್ಡ್‌ನಲ್ಲಿ ಇರುವುದನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್.

ಶ್ರೀ ವೀರೇಂದ್ರ ಪಾಟೀಲ್.—ಅಂದರೆ ಇದರ ಅರ್ಥ ಏನೆಂದರೆ ಚೀಫ್ ಮಿನಿಸ್ಟರ್ ಮತ್ತು ಇಂಟೆಲಿಜೆನ್ಸ್ ಆಫೀಸರ್ ಮಧ್ಯೆ ನಡೆಯುತ್ತದೆ. ಚೀಫ್ ಮಿನಿಸ್ಟರ್ ಇನ್‌ಸ್ಟ್ರಕ್ಷನ್ ಕೊಡುತ್ತಾರೆ, ಇಂಟೆಲಿಜೆನ್ಸ್ ಆಫೀಸರ್ ಇನ್‌ಸ್ಟ್ರಕ್ಷನ್ ಕ್ಯಾರಿ ಔಟ್ ಮಾಡುತ್ತಾನೆ. ಇವರಿಬ್ಬರ ಮಧ್ಯೆ ಈ ವ್ಯವಹಾರ ಇರುತ್ತದೆ. ಅದನ್ನೇ ಚೀಫ್ ಸೆಕ್ರೆಟರಿ ಹೇಳಿದ್ದಾನೆ. ಮತ್ತೆ ಚೀಫ್ ಸೆಕ್ರೆಟರಿ ಬಗ್ಗೆ ಕೆಲವು ವಿಷಯ ಹೇಳಿದಿರಿ, ಇದೇ ಸಂದರ್ಭದಲ್ಲಿ ಅದನ್ನು ಹೇಳಿದರೆ ಆ ಪ್ರಶ್ನೆಯೂ ಬಗೆಹರಿಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಏನಾಗಿದೆ ? ಚೀಫ್ ಸೆಕ್ರೆಟರಿ ಏನು ಹೇಳಿದ್ದಾನೆ ? ಇವತ್ತು ಅವರು ರಿಟೈರ್ ಆಗಿರಬಹುದು. ಆ ಮಾತು ಬೇರೆ. ಮತ್ತು ಆ ವೇಳೆಗೆ ರೆಕಾರ್ಡ್ ನೋಡಿ ಅವರು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಗೆ ಇನ್‌ಫರ್ಮೇಷನ್ ಕಳುಹಿಸಿದ್ದಾರೆ. ಪ್ರತಿಯೊಂದು strictly in accordance with the records available in the Secretariat and also in the intelligence office. ಅವರು ಏನು ಹೇಳಿದ್ದಾರೆ. ? ''who had been authorised to exercise powers under Section 5 of the Indian Telegraph Act''. ೬-೧೨-೧೯೭೬ರಿಂದ ಡಿ.ಐ.ಜಿ. (ಸಿ.ಐ.ಡಿ, ಮತ್ತು ರೈಲ್ವೇಸ್) ಬೆಂಗಳೂರು ಎಂದಿತ್ತು. ನಾನು ಹೇಳಿದೆ, ಆರ್ಡರ್ ಡೆಸಿಗ್ನೇಷನ್ ಮೇಲೆ ಹೋಗುತ್ತದೆ ಎಂದು ಅಲ್ಲಿಂದ ೧೯೭೮ರಲ್ಲಿ ಏನಾಯಿತು ಎಂದರೆ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ (ಇಂಟೆಲಿಜೆನ್ಸ್) ಎಂದೆ ಬಹುಶಃ ಹೊಸ ಡಿಪಾರ್ಟ್‌ಮೆಂಟ್ ಮಾಡಿದರು ಎಂದು ಕಾಣುತ್ತದೆ. ಡೆಸಿಗ್ನೇಷನ್ ಛೇಂಜ್ ಆದರೆ ತಕ್ಷಣ ಆಥರೈಸೇಷನ್ ಲೆಟರ್ ಕೂಡ ಛೇಂಜ್ ಮಾಡಬೇಕಾಗುತ್ತದೆ. ಹಿಂದೆ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್, ಸಿ. ಐ. ಡಿ. ಮತ್ತು ರೈಲ್ವೇಸ್ ಎಂದು ಇತ್ತು. ಅದನ್ನು ಈಗ ರೀಡೆಸಿಗ್ನೇಷನ್ ಮಾಡಿ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ (ಇಂಟೆಲಿಜೆನ್ಸ್) ಎಂದು ಮಾಡಿದರು. ಆಗ ಇನ್ನೊಂದು ಆರ್ಡರ್ ಆಯಿತು. ಅಲ್ಲಿಂದ ೧೯೮೭ರವರೆಗೆ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ (ಇಂಟೆಲಿಜೆನ್ಸ್) ಬೆಂಗಳೂರು ಎಂದು ಆಯಿತು. ಅದಾದಮೇಲೆ ೩೧-೧೨-೧೯೮೭ರಲ್ಲಿ ಸ್ಪೆಷಲ್ ಐ.ಜಿ.ಪಿ. (ಇಂಟೆಲಿಜೆನ್ಸ್) ಬೆಂಗಳೂರು, ಎಂದು ಆಯಿತು. ಇತ್ತೀಚೆಗೆ ಆಥರೈಸೇಷನ್ ಬೇಕಾಗಿಲ್ಲ. ಏಕೆಂದರೆ this authorisation goes not in the name of the officer who holds the post. ನಾವು ಅಧಿಕಾರಕ್ಕೆ ಬಂದಮೇಲೆ ಸ್ಪೆಷಲ್ಲಾಗಿ ಯಾರಿಗೂ ಆಥರೈಸೇಷನ್ ಪ್ರತ್ಯೇಕವಾಗಿ ಕೊಟ್ಟಿಲ್ಲ. This authorisation stands good so long as the designation of the Intelligence Officer remains the same. ಡೆಸಿಗ್ನೇಷನ್ ಬದಲಾದರೆ ನಾವು ಆಥರೈಸೇಷನ್ ಬದಲು ಮಾಡಬೇಕಾಗುತ್ತದೆ. ಅದನ್ನು ಅವರು ಹೇಳಿದ್ದಾರೆ.

"How was the list drawn up ? Who had drawn up the list ? Who were kept advised and how"

Answer : The list of numbers to be intercepted and the orders thereon were made by the officers who were authorised to exercise the powers under Sub-section (2) of Section 5 of the Indian Telegraph Act. The numbers were added or deleted by the authorised officer in consultation and with prior permission of the Chief Minister. No other functionary was kept advised of the list."

Strictly according to records ಅಂದರೆ ಏನು ಪ್ರೊಸೀಜರ್ ಇದೆ, ಅದನ್ನು ಅವರಿಗೆ ಡಿಟ್ಟೋ ಹೇಳಿದ್ದಾರೆ.

"*Q*.(c) Whether reasons for the interception had been recorded as required by law ?"

ಇದನ್ನು ನೀವು ಕೇಳಿದ್ದೀರಿ. ಅದೇ ರೀಜನ್ ಅಂದರೆ ಪಬ್ಲಿಕ್ ಸೇಫ್ಟಿ. ಅದಷ್ಟೇ ರೀಸನ್. ಮತ್ಯಾವುದನ್ನು ಹೇಳುವ ಹಾಗೆ ಇಲ್ಲ. The answer is, "Reasons were recorded for the interception of the numbers mentioned in the lists, in the order itself" ಆರ್ಡರ್‌ನಲ್ಲಿಯೇ ಪಬ್ಲಿಕ್ ಸೇಫ್ಟಿ ಅಂತ ಮಾಡಿರುತ್ತಾರೆ. ಅಲ್ಲಿಂದ ಕೊಶ್ಚನ್ "What was the method adopted to prevent misuse" ಇದನ್ನು ಸಮಿತಿಯವರು ಚೀಫ್ ಸೆಕ್ರೆಟರಿಯವರಿಗೆ ಕೇಳಿದ್ದಾರೆ. ಅದಕ್ಕೆ ನಾನು ಹೇಳಿದೆ. He is not in the picture. He does not know what transpired every day between the Intelligence Officer and Chief Minister, He is not at all in the picture. ಅದಕ್ಕೆ ಅವರು ಏನು ಹೇಳಿದರು ಅಂದರೆ, "Government of India has not issued any guidelines as required under Section 7 (2) of Indian Telegraphic Act. No instance of misuse had come to the notice of the Government. ಅಂದರೆ ರೂಲ್ಸ್ ಆಗಿಲ್ಲ, ಗೈಡ್‌ಲೈನ್ಸ್ ಆಗಿಲ್ಲ ಅಂತ ಸಬ್ ಕಮಿಟಿಯವರೇ ಹೇಳಿದ್ದಾರೆ. ಅದೇ ಪ್ರಕಾರ ಈ ರೀತಿ ಹೇಳಿದ್ದಾರೆ ಇದರ ಮೇಲೆಯೇ ತಾವು ಬಹಳ ಆರೋಪ ಮಾಡಿದ್ದೀರಿ. ಅವನು ಏನು ಹೇಳುತ್ತಾನೆಂದರೆ No instance of misuse had come to the notice of the Govt. ದುರುಪಯೋಗವಾಗಿರುವುದು ನಮಗೆ ಗೊತ್ತಿಲ್ಲ ಅಂತ ಹೇಳುತ್ತಾನೆ. ಏಕೆಂದರೆ ಈ ವ್ಯವಹಾರ ಇಂಟಲಿಜೆನ್ಸ್ ಆಫೀಸರ್ ಮತ್ತು ಮುಖ್ಯಮಂತ್ರಿಗಳ ಮಧ್ಯದಲ್ಲಿ ನಡೆದಿರುವಂತಹ ವ್ಯವಹಾರವಾಗಿರುವುದರಿಂದ ಯಾರಿಗೂ ಗೊತ್ತಾಗುವ ಹಾಗೆ ಇಲ್ಲ. ಮತ್ತು ಮುಖ್ಯ ಮಂತ್ರಿಗಳಿಗೆ ನೇರವಾಗಿ ಯಾರಿಗೂ ಕೊಡಲಾರದ ಇನ್‌ಫರ್ಮೇಷನ್ ಅನ್ನು ಕೊಡಬೇಕು ಎನ್ನುವಂತಹ ಪ್ರೊಸೀಜರ್ ಇದ್ದಾಗ, ಪ್ರಾಕ್ಟೀಸ್ ಇದ್ದಾಗ, ಕನ್ವೆನ್‌ಷನ್ ಇದ್ದಾಗ– ಚೀಫ್ ಸೆಕ್ರೆಟರಿ ಹೇಳುತ್ತಾನೆ ನನಗೆ ಏನೂ ಗೊತ್ತಿಲ್ಲ ಅಂತ. ಏಕೆಂದರೆ ಗವರ್ನಮೆಂಟ್‌ನಲ್ಲಿ ರೆಕಾರ್ಡ್ ಇಲ್ಲ. ಅದಕ್ಕಾಗಿ ಇದನ್ನು ನೋಡಿ ಇನ್‌ಸ್ಟೆನ್ಸ್ ಆಫ್ ಮಿಸ್ ಯೂಸ್ ಆಗಿಲ್ಲ; ಅದಕ್ಕೆ ಸುಮ್ಮನೆ ಕತೆ ಕಟ್ಟುತ್ತಿದ್ದೀರೆಂದು ತಾವು ಏನು ಹೇಳುತ್ತಿದ್ದೀರಿ. ಅದರಲ್ಲಿ ಅರ್ಥವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.— ಕತೆ ಕಟ್ಟಿದ್ದೀರಿ ಅಂತ ಹೇಳಲಿಲ್ಲ. ಆಗಿಲ್ಲ ಅಂತ ಹೇಳಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.— ಅದನ್ನೆ ನಾನು ಹೇಳುತ್ತಿರುವುದು. ನಾನು ಹೇಳುವುದನ್ನು ಅರ್ಥಮಾಡಿಕೊಳ್ಳಿ. Here the Chief Secretary is furnishing this information not the Intelligence Officer. ಮುಖ್ಯ ಕಾರ್ಯದರ್ಶಿ ಏನು ಹೇಳುತ್ತಾನೆಂದರೆ, ಇಂತಹ ಇನ್‌ಸ್ಟೆನ್ಸಸ್ ನನ್ನ ಗಮನಕ್ಕೆ ಬಂದಿಲ್ಲ ಅಂತ. ಬಂದಿಲ್ಲ, ಏಕೆಂದರೆ ಈ ವ್ಯವಹಾರವಾಗಿರುವುದು ಮುಖ್ಯಮಂತ್ರಿಗಳು ಮತ್ತು ಇಂಟಲಿಜೆನ್ಸ್ ಆಫೀಸರ್ ಮಧ್ಯದಲ್ಲಿ ಆಗಿದೆ. ಅವನಿಗೆ ಹೇಗೆ ಗೊತ್ತಾಗುತ್ತದೆ? ಗೊತ್ತಾಗಲಾರದ ವಿಚಾರವನ್ನು ಅವನನ್ನು ಬರಿ ಅಂತ ಹೇಳಿದರೆ ಅವನು ಹೇಗೆ ಬರೆಯಬೇಕು. ಇವತ್ತು ನನ್ನ ಹತ್ತಿರ ಇಂಟಲಿಜೆನ್ಸ್ ಆಫೀಸರ್ ಬರುತ್ತಾನೆ. ನನ್ನ ಜೊತೆ ಡಿಸ್‌ಕಷನ್ ಮಾಡುತ್ತಾನೆ. ಅವನು ನನಗೆ ಏನೋ ಏನೋ ಹೇಳುತ್ತಾನೆ. ನಾನು ಅವನಿಗೆ ಹೇಳುತ್ತೇನೆ. ಇದು ನಮ್ಮಿಬ್ಬರ ಮಧ್ಯದಲ್ಲಿ ಹೊರತಾಗಿ ಬೇರೆ ಯಾರಿಗೂ ಗೊತ್ತಿಲ್ಲ. ನಮ್ಮ ಆಫೀಸಿನಲ್ಲಿ ಯಾರಿಗೂ ಗೊತ್ತಿಲ್ಲ. ಚೀಫ್

ಸೆಕ್ರೆಟರಿಗೆ ಗೊತ್ತಿಲ್ಲ. ಹೋಮ್ ಕಮೀಷನರ್‌ಗೆ ಗೊತ್ತಿಲ್ಲ. ಯಾರ್‍ಯಾರಿಗೂ ಗೊತ್ತಿಲ್ಲ. ಮತ್ತು ಅದು ಗೊತ್ತಾಗುವುದಕ್ಕೆ ಸಾಧ್ಯವೂ ಇಲ್ಲ. ನೀವೇ ಹೇಳಿಕೊಂಡು ಟಾಂ ಟಾಂ ಮಾಡಿದರೆ ಗೊತ್ತಾಗಬಹುದು. ಆ ಮಾತು ಬೇರೆ. ಇಲ್ಲದಿದ್ದರೆ ಗೊತ್ತಾಗುವುದೇ ಇಲ್ಲ. "No instance of misuse had come to the notice of the Government". ಎನ್ನುವುದರಮೇಲೆ ನಾವು ವಾದ ಮಾಡುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಇದು ಇವರಿಬ್ಬರ ಮಧ್ಯದಲ್ಲಿ ನಡೆದಂತಹ ವ್ಯವಹಾರವಾಗಿರುವುದರಿಂದ ಅವರಿಗೆ ಗೊತ್ತೇ ಹೊರತು ಮತ್ತೆ ಯಾರಿಗೂ ಗೊತ್ತಿಲ್ಲ. ಇನ್ನು ಐನೇ ಪ್ರಶ್ನೆ (ಇ) ಅದನ್ನು ಓದದಿದ್ದರೆ ನೀವು ಅದನ್ನು ಓದೇ ಇಲ್ಲ ಅಂತ ಹೇಳಿ ಬಿಡುತ್ತೀರಿ. ಅದಕ್ಕೆ ಏನು ಹೇಳುತ್ತಾರೆಂದರೆ:-

Q: (e) What action had been taken against any officer who had misused this power?

A: In the light of answer to question (d) the question of action against any officer does not arise"

ಇದು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಚೀಫ್ ಸೆಕ್ರೆಟರಿ ಏನು ಹೇಳಿದ್ದಾರೆ. ಅದು ರೆಕಾರ್ಡ್ ಪ್ರಕಾರ ಅಕ್ಷರಶ: ಅದು ಏನು ಇದೆ ಎನ್ನುವುದನ್ನು ಹೇಳಿದ್ದಾರೆ ಹೊರತಾಗಿ ರೆಕಾರ್ಡ್ ಬಿಟ್ಟು ಏನನ್ನೂ ಹೇಳಿಲ್ಲ. ಅದಕ್ಕಾಗಿ ನಾನು ಹೇಳಿದ್ದು ೧೦೦ ಪರ್ಸೆಂಟ್ ರೆಕಾರ್ಡ್ ಪ್ರಕಾರ ಕರೆಕ್ಟ್ ಆಗಿದೆ ಎನ್ನುವುದನ್ನು ನಾನು ಈ ಸದನದಲ್ಲಿ ಸರ್ಟಿಫೈ ಮಾಡುತ್ತಿದ್ದೇನೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿಂದ ಈ ಆಥರೈಜೇಷನ್ ಲೆಟರ್ ಇಂಟೆಲಿಜೆನ್ಸ್ ಆಫೀಸರ್‌ಗೆ ಹೋದ ಮೇಲೆ ಅವನಿಗೆ ಏನಾಗುತ್ತದೆಂದರೆ ಆಥರೈಜೇಷನ್ ಸಿಕ್ಕಿಬಿಡುತ್ತದೆ. ಟೆಲಿಫೋನ್ ಟ್ಯಾಪ್ ಮಾಡುವುದಕ್ಕೆ. ಅವನು ಒಂದು ವೇಳೆ ದುರುಪಯೋಗ ಮಾಡಿಯಾನು ಅಥವಾ ಯಾರಾದರೂ ಮಾಡಬಹುದು ಎನ್ನುವ ಹೆದರಿಕೆಯಿಂದ ಹಿಂದಿನವರು ಒಂದು ಪ್ರೊಸೀಜರ್ ಹಾಕಿದ್ದಾರೆ. ಏನೆಂದರೆ ಲಿಸ್ಟ್ ಏನು ಇರುತ್ತದೆ, ಲಿಸ್ಟ್ ಅಂದರೆ it mainly consists of telephone numbers of all those undersirable elements ಅದರಲ್ಲಿ ಏನಾದರೂ add ಮಾಡಬೇಕಾದರೆ, ಅಥವಾ ಏನಾದರೂ ಡಿಲೀಷನ್ ಮಾಡಬೇಕಾದರೆ it should be in cosul-tation and with the prior approval of the Chief Minister ಆ ರೀತಿಯು ಕಟ್ಟುಪ್ಪಣೆ ಇದೆ. ರೆಕಾರ್ಡಿನಲ್ಲಿದೆ. ಇವತ್ತಿನ ರೆಕಾರ್ಡಿನಲ್ಲೂ ಇದೆ. ಇವತ್ತು ರೆಕಾರ್ಡನ್ನು ಕುಕಪ್ ಮಾಡಿದ್ದೇವೆ, ರೆಕಾರ್ಡನ್ನು ಬಿಲ್ಡಪ್ ಮಾಡಿದ್ದೇವೆ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಆಗ ಅವನು ಏನು ಮಾಡುತ್ತಾನೆಂದರೆ, ಮುಖ್ಯಮಂತ್ರಿಗಳ ಹತ್ತಿರ ಡಿಸ್ಕಸ್ ಮಾಡಿ, ಉದಾಹರಣೆಗೆ ಕೆಲವು ಎಂ.ಎಲ್.ಎ. ಗಳ ಟೆಲಿಫೋನ್ ಟ್ಯಾಪ್ ಮಾಡಬೇಕು ಅಂತ ಇದ್ದರೆ, ಆ ಟೆಲಿಫೋನ್‌ನ ನಂಬರ್‌ಗಳನ್ನು ಮಾತ್ರ ಕೊಡುತ್ತಾರೆ. ಹೆಸರನ್ನೂ ಬರೆಯುವ ಹಾಗೆ ಇಲ್ಲ. ಜನರಲ್ ಮ್ಯಾನೇಜರ್‌ಗೆ ಲೆಟರ್‌ನಲ್ಲಿ ಬರೆಯುತ್ತಾನೆ. "I want to intercept the following telephone numbers." ನಂಬರ್ ಮಾತ್ರ ಬರೆಯುತ್ತಾನೆ. ಹೆಸರೂ ಇರುವುದಿಲ್ಲ ಇಂತಹ ನಂಬರ್‌ನ ಇಂಟರ್‌ಸೆಪ್ಟ್ ಮಾಡಬೇಕೆಂಬುದಾಗಿ ಜನರಲ್ ಮ್ಯಾನೇಜರ್, ಟೆಲಿಫೋನ್, ಇವರಿಗೆ ಬರೆಯುತ್ತಾನೆ.

ಅದೇ ರಿಪೀಟ್ ಮಾಡುತ್ತಾರೆ, in the interest of public safety ಎಂದು, ಇವನು ಯಾರೂ ಹೋಗಿ ಅಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್‌ನಲ್ಲಿ ಕೊಡುವಹಾಗೆ ಇಲ್ಲ. ಬಹಳ ಜನರಿಗೆ ಆ ಕಲ್ಪನೆ ಇರಬಹುದು. The General Manager is expected to extend all technical facilities to the Intelligence Officer who was been authorised in this behalf. ಅವರು ತಮ್ಮ ಆಫೀಸಿನಲ್ಲಿ ಅರೇಂಜ್‌ಮೆಂಟ್ ಇಟ್ಟುಕೊಂಡಿರುತ್ತಾರೆ. ಮತ್ತು ಯಾವಯಾವ ಟೆಲಿಫೋನ್ ಟ್ಯಾಪ್ ಮಾಡಬೇಕೋ ಅದನ್ನು ಟ್ಯಾಪ್ ಮಾಡಲು ಟೇಪ್ ಇಟ್ಟುಕೊಂಡಿರುತ್ತಾರೆ, ಅವರು ಇರಲಿ ಇಲ್ಲದಿರಲಿ, ಯಾವ ರೀತಿಯಲ್ಲಿ ವ್ಯವಹಾರ ನಡೆಯುತ್ತದೋ ಅದೆಲ್ಲಾ ಟೇಪ್ ಆಗುತ್ತದೆ. ಅವನೊಬ್ಬನಿಗೇ ಈ ಅನುಕೂಲ ಕೊಡುತ್ತಾರೆ. ಜನರಲ್ ಮೇನೆಜರ್‌ಗೆ ಮಾತ್ರ ಇದು ಇದೆ. ಇದು ಪದ್ಧತಿ, ಮತ್ತೆ ಯಾರಿಗೂ ಈ ಫೆಸಿಲಿಟಿ ಇಲ್ಲ. ಈ ಪದ್ಧತಿ ಪ್ರಕಾರ ಇವತ್ತು ಟೆಲಿಫೋನ್ ಟ್ಯಾಪ್ ಆಗಿದೆ. ಮತ್ತೆ ಈ ಒಂದು ಪ್ರಕರಣ ಅನ್ನಿ, ಹಗರಣ ಎನ್ನಿ ನಮ್ಮ ಮುಂದೆ ಇರುವುದು ಬಹಳ ಸೀಮಿತವಾದ ಪ್ರಶ್ನೆ ಇದೆ. ಬಹುಶಃ ಇಷ್ಟೆಲ್ಲಾ ಚರ್ಚೆಗೆ ಅವಕಾಶ ಇರಲಿಲ್ಲ ಎನಿಸುತ್ತದೆ. ಟೆಲಿಫೋನ್ ಟ್ಯಾಪ್ ಆಗಿದೆ, ಇದನ್ನು ಯಾರೂ ಅಲ್ಲಗಳೆಯುವಹಾಗೆ ಇಲ್ಲ. ಪೊಲಿಟೀಶಿಯನ್ಸ್ ಫೋನ್ ಟ್ಯಾಪ್ ಆಗಿದೆ, ಅದನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಯಾರ ಯಾರ ಟೆಲಿಫೋನ್ ಟ್ಯಾಪ್ ಆಗಿದೆ ಎಂದು ೫೧ ಜನರ ಪಟ್ಟಿಯನ್ನು ಪಾರ್ಲಿಮೆಂಟ್‌ನಲ್ಲಿ

ಇಟ್ಟಿದ್ದಾರೆ, ಅದನ್ನು ಯಾರೂ ಅಲ್ಲಗಳೆಯುವಹಾಗೆ ಇಲ್ಲ. ಪ್ರಶ್ನೆ ಏನೆಂದರೆ, ಇವತ್ತು ಇಂಟಲಿಜೆನ್ಸ್ ಆಫೀಸರ್ ತನ್ನ ಆಥರೈಸೇಷನ್ ಪ್ರಕಾರ ಟ್ಯಾಪ್ ಮಾಡಿದ್ದಾನೆ, ಅದೂ ಯಾರೂ ಅಲ್ಲಗಳೆಯುವ ಹಾಗಿಲ್ಲ. ಇವತ್ತು ಸೀಮಿಂತವಾಗಿರುವ ಪ್ರಶ್ನೆ ಏನೆಂದರೆ, ಆ ಆಫೀಸರ್ whether he intercepted these telephones with the prior approval and permission of the Chief Minister or not ? That is all the question before us for consideration. ಮತ್ತೆ ಏನೂ ಇಲ್ಲ. ಎಲ್ಲಾ ಮುಗಿದು ಹೋಗಿದೆ. ಎಲ್ಲಾ ಇದರಲ್ಲಿ ಮುಗಿಸಿ, ಮುಗಿಸಿ, ಮುಗಿಸಿ ಇಲ್ಲಿಗೆ ಬಂದು ನಿಂತಿದೆ. ಬಂದಿರುವುದು ಏನೆಂದರೆ, ಈ ಆಫೀಸರ್ ತಾನು ಸ್ವಂತವಾಗಿ ಮಾಡಿದ್ದಾನೋ ಅಥವಾ ಮುಖ್ಯಮಂತ್ರಿಗಳ ಆದೇಶದ ಮೇಲೆ ಮಾಡಿದ್ದಾನೋ ? ಇದು ಇಷ್ಟೇ ಪ್ರಶ್ನೆ. ಇಷ್ಟು ಹೇಳಿದಮೇಲೆ, ನಾನು ಬರುತ್ತೇನೆ. ಫೈಲ್ ತರ್ರಿ, ಎಂದು ಹೇಳುತ್ತೇನೆ ಫೈಲ್ ಎಂದರೆ ಕಡತ ಎಂದು ಇವತ್ತೇ ನನಗೆ ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್.—ಈ ಕಡತ ಎಂದರೆ ಕಾಗದಪತ್ರ. ಕರತ ಎಂದರೆ ಕಡತ ಇದರಲ್ಲಿ ನೀವು ಯಾವುದರ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ನಿಮ್ಮಿಂದ ಸ್ವಲ್ಪ ಕಲಿಯಬೇಕಾಗುತ್ತದೆ, ಕಲೀತೀನಿ. ಈಗ ಫೈಲ್ ಇಡಿ ಎಂದು ಕೇಳುತ್ತಿದ್ದಾರೆ. ಇದರಲ್ಲಿ ಎರಡು ಫೈಲ್ ಬರುತ್ತದೆ. ಒಂದನೇದು ಸೆಕ್ರೆಟೇರಿಯೇಟ್‌ನಲ್ಲಿ ಇರುತ್ತದೆ. ಅದರಲ್ಲಿ ಆಥರೈಸೇಷನ್ ಮೇಲಿಂದ ಮೇಲೆ ಯಾವ ರೀತಿಯಿಂದ ಕೊಟ್ಟಿದ್ದಾರೆಂದು ಇರುತ್ತದೆ. ಇದರ ಹೊರತು ಬೇರೆ ಏನೂ ಇರುವುದಿಲ್ಲ. ಇನ್ನೊಂದು ಫೈಲ್ ಇಂಟಲಿಜೆನ್ಸ್ ಆಫೀಸರ್ ಹತ್ತಿರ ಇರುತ್ತದೆ. ಇವೆರಡೂ ಸೀಕ್ರೆಟ್ ಫೈಲ್‌ಗಳು. ಈಗ ನನಗೆ ಒಂದು ಆಶ್ಚರ್ಯ ಏನೆಂದರೆ, ಶ್ರೀಮಾನ್ ಹೆಗ್ಡೆಯವರು ಆ ಫೈಲನ್ನು ಟೇಬಲ್ ಮೇಲೆ ಇಡಿ ಎಂದು ಕೇಳುತ್ತಿದ್ದಾರೆ. ಶ್ರೀಮಾನ್ ಬೊಮ್ಮಾಯಿಯವರು ಕೇಳುತ್ತಿದ್ದಾರೆ, ತರ್ರೀ ಇಲ್ಲಿ, ಟೇಬಲ್‌ಮೇಲೆ ಎಲ್ಲ ರೆಕಾರ್ಡ್ ಇಡೀ ಎಂದು. ನಾನು ಇಷ್ಟೇ ಹೇಳುತ್ತೇನೆ, ನಾನು ಇಲ್ಲಿ ಮುಖ್ಯಮಂತ್ರಿಯಾಗಿ ನಿಂತಿದ್ದೇನೆ. ನಾನು ಇಲ್ಲಿ ವೀರೇಂದ್ರಪಾಟೀಲ್ ಆಗಿ ಉತ್ತರವನ್ನು ಕೊಡುತ್ತಾ ಇಲ್ಲ. ಪ್ರಶ್ನೆ ಏನೆಂದರೆ ಫೈಲ್ ಇಡಬೇಕು. ಫೈಲ್ ಇಡುವುದು ಸಾಧ್ಯವೋ ಅಥವಾ ಈ ರೀತಿಯ ಬೇಡಿಕೆ ಯೋಗ್ಯವೋ ? ಇದು ನನ್ನ ಪ್ರಶ್ನೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ಶ್ರೀಮಾನ್ ಬೊಮ್ಮಾಯಿಯವರು ಡಿಮಾಂಡ್ ಮಾಡುತ್ತಿದ್ದಾರೆ. Place the file on the Table of the House. He is demanding. However, what he Sri Bammai has stated as Chief Minister of Karnataka in 1988 ? I will read it. It is in the proceedings of 1988 on page-390.

ಅದು ಈ ರೀತಿ ಇದೆ.—

" ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರ ಮೇಲೂ ಇಲ್ಲ, ಸ್ವಲ್ಪ ದಯವಿಟ್ಟು ಕೇಳಬೇಕು ಇದು ಅಫಿಷಿಯಲ್ ಸೀಕ್ರೆಟ್ ಆಕ್ಟ್. ಅದು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯತನಕ ಇದನ್ನು ಬಹಿರಂಗ ಮಾಡುವುದಕ್ಕಾಗುವುದಿಲ್ಲ. I must discharge my duties under that Act. Anybody in the office must discharge as long, as they act on the statute book. One must obey. If I violate, it will be an offence. " ಆ ಕಾರಣಕ್ಕೆ ಈ ರೆಕಾರ್ಡ್ಸ್‌ನ್ನು ಸಭೆಯ ಮುಂದೆ ಇಡಲಿಕ್ಕೆ ಸಾಧ್ಯವಿಲ್ಲ. ಇನ್ನು ಮಾನ್ಯ ಸದಸ್ಯರು ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಹೇಳಿದರು.......ನಾನು ಈ ಬಗ್ಗೆ ಹೇಳುವುದೇನೆಂದರೆ ಎಸ್. ಆರ್. ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ಇವತ್ತು ಅಧಿಕಾರದಿಂದ ಹೊರಗೆ ಬಂದಮೇಲೆ ಇನ್ನೊಂದು ಸ್ಟ್ಯಾಂಡ್ ತೆಗೆದುಕೊಂಡಿದ್ದಾರೆ. ತರ್ರಿ ಕಡತ ಇಡ್ರಿ ಎಂದು ಹೇಳುತ್ತಾರೆ. ಹೇಗೆ ಇಡಲಿ ತಾವೇ ಹೇಳಿ ? ಇಲ್ಲಿ ಆಶ್ಚರ್ಯವಾಗುತ್ತದೆ, ಹಿಂದಕ್ಕೆ ನನ್ನ ಮಂತ್ರಿಮಂಡಲದಲ್ಲಿ ಏನೋ ಅವರು ಮಂತ್ರಿಗಳಾಗಿದ್ದರು ನಾನು ಮುಖ್ಯ ಮಂತ್ರಿಯಾಗಿದ್ದೆ. ಅದು ಸುಮಾರು ಮೂರು ವರ್ಷ ದಾಟಲಿಲ್ಲ. ಅಷ್ಟರಲ್ಲಿ ನಾವು ಮನೆಗೆ ಹೋದೆವು. ಆ ಮಾತು ಬೇರೆ. ಶ್ರೀಮಾನ್ ಹೆಗಡೆಯವರಿಗೆ ಮುಖ್ಯ ಮಂತ್ರಿಗಳಾಗಿ ಐದೂವರೆ ವರ್ಷಗಳ ಕಾಲ ಮುಖ್ಯ ಮಂತ್ರಿಯಾಗಿ ಅನುಭವವಿದೆ. ಇವು ಸೀಕ್ರೆಟ್ ಫೈಲ್ಸ್. Even ordinary file we are not expected to place on the table of the House. ಇವು ಸೀಕ್ರೆಟ್ ಫೈಲ್ಸ್. ಒಂದು ವೇಳೆ ನಾನು ಆವೇಶದಲ್ಲಿ ಇಡುತ್ತೇನೆಂದು ಹೇಳಿದರೆ, ಸೆಕ್ರೆಟರಿಯೇಟ್‌ನ ಎಲ್ಲ ಫೈಲುಗಳನ್ನು ನಾಳೆ ತಂದು ನಿಮ್ಮ ಮುಂದೆ ಇಲ್ಲಿ ಇಡಬೇಕಾಗುತ್ತದೆ

ಸರ್ಕಾರದ ವ್ಯವಹಾರದ ಎಲ್ಲ ಫೈಲುಗಳನ್ನು ಇಡಬೇಕಾಗುತ್ತದೆ. ಆಗ ಸರ್ಕಾರದ ವ್ಯವಹಾರ ನಡೆಯುವುದಕ್ಕಾಗುವುದಿಲ್ಲ. ಮತ್ತೆ ಏನಾದರೂ ಭಯದಿಂದ, ಅದರಲ್ಲಿ ಏನೋ ಹುದುಗಿಕೊಂಡಿದೆ, ಅದು ಹೊರಗೆ ಬರುತ್ತದೆ ಎನ್ನುವ ಭಯದಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ನನಗೆ ಯಾವ ತರಹ ಭಯದ ಅವಶ್ಯಕತೆಯಿಲ್ಲ. ನಾನು ಕೇವಲ ಒಂದೇ ಒಂದು ದೃಷ್ಟಿಯಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ಇದು ಸೀಕ್ರೇಟ್ ಫೈಲ್ಸ್ ಇರುವುದರಿಂದ ಇಡುವುದಕ್ಕೆ ಆಗುವುದಿಲ್ಲ. ಈ ಸದನದಲ್ಲಿ ಒಂದು ಬ್ಯಾಡ್ ಪ್ರಿಸಿಡೆಂಟ್ ಹಾಕುವುದಕ್ಕೆ ನಾನು ತಯಾರಾಗಿಲ್ಲ. ಏಕೆಂದರೆ ಇವತ್ತು ಒಂದು ಸೀಕ್ರೇಟ್ ಫೈಲ್ ಇಟ್ಟರೆ, ಸದನದಲ್ಲಿ ಮತ್ತೊಂದು ಏನಾದರೂ ಇಂತಹದ್ದು ಪ್ರಕರಣ ಬಂದಾಗ ಫೈಲ್ ತರಲೇಬೇಕು. ಬಹುಶಃ ಸ್ಪೀಕರ್‌ರವರು ಸಹ ರೂಲಿಂಗ್ ಕೊಡುತ್ತಾರೆ. ಹಿಂದೆ ಇಂತಹ ಪ್ರಕರಣದಲ್ಲಿ ಫೈಲನ್ನು ಸಭೆಯ ಮುಂದಿಡಲಾಗಿದೆ ಎಂದು ಹೇಳಿದಾಗ, ಫೈಲ್ ತರ್ರಿ ಎಂದಾಗ ಇಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಿಮಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆ ಫೈಲಿಗೆ ಅಂಜಿ ಈ ಮಾತನ್ನು ಹೇಳುತ್ತಿಲ್ಲ. ಸರ್ಕಾರದ ವ್ಯವಹಾರಗಳು ಸರಿಯಾಗಿ ನಡೆಯಬೇಕಾದರೆ ಯಾವ ವಿಚಾರದಲ್ಲಿ ಫೈಲ್ ನಿಮ್ಮ ಮುಂದೆ ಇಡಬಹುದು, ಯಾವ ಮಾಹಿತಿ ನಿಮಗೆ ಕೊಡಬಹುದು ಎನ್ನುವ ಬಗ್ಗೆ ಸರ್ಕಾರ ನಿರ್ಣಯ ಮಾಡಬೇಕಾಗುತ್ತದೆ. ಅದಕ್ಕಾಗಿ ಈ ತರಹದ ಫೈಲ್‌ಗಳನ್ನು ಇಡಬೇಕೆನ್ನುವ ಒಂದು ಬೇಡಿಕೆ ಸಹಜವಾದುದಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನೊಂದು ವಿಚಾರ. ಶ್ರೀಮಾನ್ ಹೆಗಡೆಯವರು ಚೈನಾ ದೇಶಕ್ಕೆ ಹೋಗಿ ಬಂದಮೇಲೆ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಅವರು ಏನು ಹೇಳುತ್ತಾರೆಂದರೆ, ಬೊಮ್ಮಾಯಿಯವರು ಹೇಳಿದ್ದಾರೆಂದು, ಚೈನಾದೇಶದಿಂದ ಬಂದಮೇಲೆ ೧೫-೬-೧೯೯೦ಕ್ಕೆ ಒಂದು ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಹೇಳಿದ್ದಾರೆ.

' Mr. Bommai had informed him that there was no evidence in the entire file that he had seen it. He told him, that there was a loose sheet of paper inserted in the file. While every page was numbered, the loose sheet did not have any number. An Intelligence Officer had written on the sheet that the list was prepared with the permission of the Chief Minister, Mr. Hegde said. Mr. Hegde further said, it was obvious that the official had done so under the pressure or was asked to pass on the buck, they might have said that the Chief Minister should be made responsible ''

ಈ ಲೂಸ್‌ಶೀಟ್ ಬಗ್ಗೆ ಶ್ರೀಮಾನ್ ಹೆಗಡೆಯವರು ಹೇಳುತ್ತಾರೆ. ಬೊಮ್ಮಾಯಿಯವರು ಬಂದು ಹೇಳಿದರು. ಲೂಸ್‌ಶೀಟ್ ಇದೆ, ಇಂಟಲಿಜೆನ್ಸ್ ಆಫೀಸರ್ ಆ ರೀತಿ ಬರೆದಿದ್ದಾರೆ ಎಂದು. ಈ ಲೂಸ್‌ಶೀಟ್‌ಗೆ ನಂಬರ್ ಇಲ್ಲ, ಮತ್ತೊಂದು ಇಲ್ಲ ಎಂದು ಹೇಳಿದ್ದಾರೆ. ಅಲ್ಲಿಂದ ನಾನು ಪತ್ರಿಕೆಯಲ್ಲಿ ಓದಿದೆ; ಬೊಮ್ಮಾಯಿಯವರು ಹೌದಪ್ಪ ಅನ್ನಬಹುದು ಎಂದು ನಾನು ಲೆಕ್ಕ ಹಾಕಿದ್ದೆ. ಆದರೆ ಅವರು ಹೇಳಿದರು ಏನಾಗಿದೆಯೋ ನನಗೆ ನೆನಪಿಲ್ಲವೆಂದು. ಈ ಬಗ್ಗೆ ಏನು ನಡೆದಿದೆ ಎಂದು ನಿಮ್ಮಲ್ಲಿಯೇ ವಿಚಾರ ಮಾಡಿಕೊಳ್ಳಿ. ಹೆಗಡೆಯವರು ಹೇಳುತ್ತಾರೆ, ಬೊಮ್ಮಾಯಿ ಅವರು ಲೂಸ್‌ಶೀಟ್ ಇದೆಯೆಂದು ನಾನು ಈ ಸದನದಲ್ಲಿ ತಿಳಿಸಿಕೊಂಡಿದ್ದೇನೆ ಅದು ನನಗೂ ಅಪ್ಲೈ ಆಗುತ್ತದೆ. ಮಾನ್ಯ ಹೆಗಡೆಯವರಿಗೆ ಹೇಳುತ್ತೇನೆ. ಇದು ಅಫೀಷಿಯಲ್ ಸೀಕ್ರೇಟ್ ಎಂದು ಬೊಮ್ಮಾಯಿಯವರಿಗೆ ಸೀಕ್ರೇಟ್ ಆಗುವುದಾದರೆ ಹೆಗಡೆಯವರಿಗೆ ಆಗುವುದಿಲ್ಲವೇ ? ಬರೀ ಬೊಮ್ಮಾಯಿಯವರಿಗೆ ಅಫಿಷಿಯಲ್ ಸೀಕ್ರೇಟ್ ಆಕ್ಟ್ ಅಪ್ಲೈ ಆಗುತ್ತದೆ. ಹೆಗಡೆಯವರಿಗೆ ಅಫಿಷಿಯಲ್ ಸೀಕ್ರೇಟ್ ಆಕ್ಟ್ ಅಪ್ಲೈ ಆಗುವುದಿಲ್ಲವೇ ?

೪-೪೦ ಪಿ.ಎಂ.

ಇಲ್ಲಿ ಪ್ರಶ್ನೆ ಏನು ಎಂದರೆ ಈಗ ಹೆಗಡೆಯವರು ಒಂದು ಹೇಳಿದರು. ಶ್ರೀಬೊಮ್ಮಾಯಿಯವರು ಒಂದು ಹೇಳಿದರು. ಮತ್ತು ಅದು ಹೇಳುವುದು ಏನೆಂದರೆ, ಹೆಗಡೆಯವರಿಗೆ ಬೊಮ್ಮಾಯಿಯವರು ಹೇಳುತ್ತಾರೆ ''ನಾನು ನೋಡಿದ್ದೇನೆ'' ಆ ಸಿಕ್ರೇಟ್ ಫೈಲ್‌ನ್ನು; ಇಂಟಲಿಜೆನ್ಸ್ ಆಫೀಸರ್ ಒಂದು ಲೂಸ್ ಶೀಟ್‌ನ್ನು ನನಗೆ ತೋರಿಸಿದ್ದಾನೆ. ಅವನು ಬರೆದಿದ್ದಾನೆ.

"I have prepared this list in conijltation with the then Chief Minister."

ಅಂತ ಬರೆದಿದ್ದಾನೆ. ನಂಬರ್ ಇಲ್ಲ, ಏನೂ ಇಲ್ಲ. ಲೂಸ್ ಶೀಟ್ ಇತ್ತು ಎನ್ನುವಂಥ ಮಾತನ್ನು ಹೇಳಿದ್ದಾನೆ. ನಾನು ಇವತ್ತು ಇಷ್ಟೇ ಕೇಳುವುದು, ಅದು ಲೂಸ್ ಶೀಟ್ ಇದೆಯೋ ? ಅದು ಒಂದು ಪ್ರಶ್ನೆ ಬರುತ್ತದೆ. ಬಹುಶಃ ಅದು ಚರ್ಚೆಗೆ ಬರುತ್ತದೆ. ಇಲ್ಲಿ ಬರದೇ ಹೋದರೂ ಹೊರಗಡೆಯಾದರೂ ಬರುತ್ತದೆ. ಪತ್ರಿಕೆಯಲ್ಲಾದರೂ ಬರುತ್ತದೆ. ಪ್ರಶ್ನೆ ಏನು ಎಂದರೆ, ಲೂಸ್ ಶೀಟ್ ಆ ಒಂದು ಫೈಲಿನಲ್ಲಿ ಇತ್ತೋ ಇಲ್ಲವೋ ಎಂಬುದು. ಒಂದು ವೇಳೆ ಅವರಿಗೆ ಬೊಮ್ಮಾಯಿಯವರು ಹೇಳಿದ ಪ್ರಕಾರ ಲೂಸ್ ಶೀಟ್ ಇದ್ದಿದ್ದರೆ ಮತ್ತು ಯಾವುದಾದರೂ ಪ್ರಶ್ನೆಗೆ ಬಂದು ಆತನು ಲೂಸ್ ಶೀಟ್‌ನ್ನು ಇನ್‌ಸರ್ಟ್ ಮಾಡಿದ್ದರೆ ಅದಕ್ಕೆ ಯಾವುದೇ ತರಹ ನಂಬರ್ ಇಲ್ಲದೇ ಹೋಗಿದ್ದರೆ, ಆ ಲೂಸ್ ಶೀಟ್‌ನ್ನ ಕೇವಲ ಶ್ರೀಮಾನ್ ಹೆಗಡೆಯವರ ತಲೆಗೆ ಇದನ್ನು ಜವಾಬ್ದಾರಿ ಕಟ್ಟಬೇಕು ಎನ್ನುವಂಥ ದುರುದ್ದೇಶದಿಂದ ಈ ಲೂಸ್‌ಶೀಟ್‌ನು ಹಾಕಿದ್ದರೆ. What prevented Mr. Bommai to take action against the officer who was responsible for that loose sheet ? ಇವತ್ತು ನಾನು ಕೇಳುತ್ತೇನೆ. ಇದು ಯಾವಾಗ ಹೇಳಿದ್ದಾರೆ ? ಬಹುಶಃ ಅವರು ಹೇಳಬಹುದು, ಶ್ರೀ ಬೊಮ್ಮಾಯಿಯವರು ೧೫ ದಿವಸವೂ ಇರಲಿಲ್ಲ, ಅವರು ಹಾರಿಹೋದರು ಅಂತ. ೮ ತಿಂಗಳು ಅವರ ಮುಖ್ಯ ಮಂತ್ರಿಯಾಗಿದ್ದರು. ಒಂದು ವೇಳೆ ಇದು ನಿಜ ಇದ್ದರೆ, ಹೆಗಡೆಯವರು ಬೊಮ್ಮಾಯಿಯವರು ಹೇಳುವುದು ನಿಜವೆಂದು ನಂಬಿಕೊಂಡಿದ್ದರೆ, ಬೊಮ್ಮಾಯಿಯವರು ಹೆಗಡೆಯವರಿಗೆ ಈ ಮಾತನ್ನು ಹೇಳಿದ್ದರೆ, ಬೊಮ್ಮಾಯಿಯವರು ಲೂಸ್ ಶೀಟ್‌ನ್ನು ಯಾವನು ಈ ಫೈಲಿನಲ್ಲಿ ಇಟ್ಟಿದ್ದಾನೆ, ಅವನ ಮೇಲೆ ಏಕೆ ಆಕ್ಷನ್ ತೆಗೆದುಕೊಳ್ಳಲಿಲ್ಲ ? ಆಕ್ಷನ್ ತೆಗೆದುಕೊಳ್ಳಬಾರದು ಅಂತ ಯಾರು ತಡೆಹಿಡಿದಿದ್ದರು ? ಅಲ್ಲಿಗೆ ನನ್ನ ಧರ್ಮ ಏನು ? ನನ್ನ ಕರ್ತವ್ಯ ಏನು ? ನಾನು ಅದಕ್ಕೆ ಹೇಳಿದೆ, ನಾನು ಸಿಕ್ರೇಟ್ ಫೈಲನ್ನು ನೋಡಿಲ್ಲ. ನಾನು ಆವತ್ತು ಐ ಜಿ.ಪಿ. ಇಂಟಲಿಜಿನ್ಸ್ ಅವರನ್ನು ಕೇಳಿದೆ, ನೋಡಪ್ಪ, ಈ ಪ್ರಶ್ನೆಯನ್ನು ಯಾರಾದರೂ ಎತ್ತಬಹುದು ಲೂಸ್ ಶೀಟ್ ಇತ್ತೋ ಎಂದರೆ ನಾನು ಏನು ಹೇಳಲಿ ? ನಾನಂತೂ ಫೈಲನ್ನು ನೋಡಿಲ್ಲ Whether the file contains lose sheet or not ? ನಾನು ಅವರಿಗೆ ಪತ್ರ ಬರೆದ. ಅದನ್ನು ಬೇಕಾದರ ಈ ಸದನದ ಮುಂದೆ ಇಡುತ್ತೇನೆ. ಮುಖ್ಯ ಕಾರ್ಯದರ್ಶಿಯವರು ಅವರಿಗೆ ಪತ್ರ ಬರೆಯುತ್ತಾರೆ. ಇದು ತಾರೀಖು ೨೩-೫-೧೯೯೦ ರಂದು ಬರೆದ ಪತ್ರ :

"My dear Srinivasulu,

There have been reports in the Press referring to a loose-sheet of paper which was inserted in the file of your office dealing which the subject of Telephone. monitoring. May I know, whether there is any such loose-sheet in your file. Kindly clarify immediately."

To, D. Srinivasulu. Inspector General of Police.

ಅದಕ್ಕೆ ಶ್ರೀನಿವಾಸಲು ಅವರು ರಿಪ್ಲೈ ಕೊಡುತ್ತಾರೆ ;

Dear Sri Shankaranarayanan,

Please refer to your letter dated 23-5-1990 enquiring whethere there is any loose sheet anserted in the file of my office relating to Telephone-monitoring. This is to inform you that there is no such loose sheet in the concerned file."

ಅವರು ಸ್ಪಷ್ಟವಾಗಿ ಹೇಳಿದ್ದಾರೆ. "There is no such loose sheet in the concerned file."

ಅಂತ ಮತ್ತು ನನ್ನ ಇಂಟಲಿಜೆನ್ಸ್ ಆಫೀಸರ್ಸ್ ಮೇಲೆ ಅವಿಶ್ವಾಸ ಮಾಡುವುದಕ್ಕೆ ನನಗೆ ಏನೂ ಕಾರಣ ಇಲ್ಲ. ಅವರು ಏನು ಹೇಳಿದ್ದಾರೆ, ಅದು ನೂರಕ್ಕೆ ನೂರು ಸತ್ಯ ಎಂದು ತಿಳಿದುಕೊಂಡು ನಾನು ಮುಂದೆ ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಲೂಸ್ ಶೀಟ್ ಎಂದರೆ ಇದು (ಒಂದು ಫೈಲನ್ನು ತೋರಿಸಿ) ಒಂದು ಫೈಲ್ ಅಂತ ಇಟ್ಟುಕೊಳ್ಳೋಣ. (ಒಂದು ಕಾಗದವನ್ನು ತೋರಿಸಿ) ಇದನ್ನು ಸುಮ್ಮನೆ ಇಟ್ಟರೆ ಹೀಗಲ್ಲ. It would be made part of the fiile. The only thing is we have to verify whether it contains page no; along with other pages. ಅದರಿಂದ ಗೊತ್ತಾಗಿ ಬಿಡುತ್ತದೆ ಇದು ಆ ಮೇಲೆ ಹಾಕಿದ್ದೋ ಅಥವಾ ಒಳಗಡೆ ಹಾಕಿದ್ದೋ ಅಂತ.

ಶ್ರೀ ವೀರೇಂದ್ರಪಾಟೀಲ್.— ಅದನ್ನು ರಿಪ್ಲೈ ಕೊಟ್ಟ ಮೇಲೆ ಸಹ ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ...

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದರು... It was under pressure. Under whose pressure? Whether it was Mr. Hegde's pressure or whether it was Mr. Bommais pressure? There was no gap between the two.

ಶ್ರೀ ವೀರೇಂದ್ರ ಪಾಟೀಲ್.— ಅಲ್ಲಿ ಪ್ರೆಶರ್ ಯಾವುದು ಇತ್ತು ಎಂಬುದು ಶ್ರೀ ಹೆಗಡೆ ಯವರಿಗೆ ಗೊತ್ತಿರಬಹುದು, ಶ್ರೀ ಬೊಮ್ಮಾಯಿಯವರಿಗೆ ಗೊತ್ತಿರಬಹುದು. ನಾನಂತೂ ಆವಾಗ ಇರಲೇ ಇಲ್ಲ ಶ್ರೀ ಬೊಮ್ಮಾಯಿಯವರು ಇದನ್ನು ೧೯೮೮ಕ್ಕೆ ಹೇಳಿದ್ದಾರೆ, ಪ್ರೆಸ್ ರಿಪೋರ್ಟ್ ಪ್ರಕಾರ. ಈಗ ಹೇಳಿದ್ದಲ್ಲ. ೧೯೮೮ಕ್ಕೆ ಶ್ರೀ ಬೊಮ್ಮಾಯಿಯವರು ಈ ರೀತಿ ನನ್ನ ಹತ್ತಿರ ಬಂದು ನಾನು ಇಂಟಲಿಜೆನ್ಸ್ ಫೈಲ್‌ನ್ನು ನೋಡಿದ್ದೇನೆ, ಅದರಲ್ಲಿ ಒಂದು ಲೂಸ್ ಶೀಟ್ ಇದೆ. ಅದರಲ್ಲಿ ಇಂಟಲಿಜೆನ್ಸ್ ಆಫೀಸರ್ ಲಿಸ್ಟ್ ಮಾಡಿದ್ದಾನೆ; ಬರೆದಿದ್ದಾನೆ. "It is prepared in consultation with the Chief Minister."
ಎಂದು ಬರೆದಿದ್ದಾನೆ ಎನ್ನುವಂಥಾದ್ದು ಶ್ರೀ ಬೊಮ್ಮಾಯಿಯವರು ಹೇಳಿದರು ಅಂತ ಶ್ರೀಮಾನ್ ಹೆಗಡೆಯವರು ಹೇಳುತ್ತಾರೆ. ಶ್ರೀ ಬೊಮ್ಮಾಯಿಯವರನ್ನು ಪ್ರೆಸ್‌ನವರು ಕೇಳಿದರೆ ನನಗೇನೂ ನೆನಪಿಲ್ಲ ಅಂತ ಅವರು ಹಾರಿಸಿಬಿಟ್ಟರು.

ಅವರು ಕೊಂಕಣ ಎತ್ತಿಬಿಟ್ಟರು, ನನಗೇನೂ ಗೊತ್ತಿಲ್ಲ ಎಂದು. ಈಗ ಪ್ರಶ್ನೆ ಏನೆಂದರೆ. ಇವತ್ತು ನಾನು ಮುಖ್ಯಮಂತ್ರಿಯಾಗಿ ಜವಾಬು ಕೊಡಬೇಕಾದರೆ. ಫೈಲಿನಲ್ಲಿ ಏನಿದೆ ಎನ್ನುವುದನ್ನು ನೋಡಿಕೊಂಡು ಜವಾಬು ಕೊಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಲೂಸ್ ಶೀಟ್‌ನಲ್ಲಿ ಪ್ರಮುಖವಾದ ಅಂಶ ಅಡಗಿರುವುದ ರಿಂದ ತಾವು ಮುಖ್ಯಮಂತ್ರಿಯಾಗಿ. ಆ ರಹಸ್ಯ ಫೈಲನ್ನು ನೋಡುವಂಥ ಅವಕಾಶ ಇದೆ. ಹಾಗೂ ತಾವು ಅಧಿಕಾರಿಗಳ ಬಗ್ಗೆ ಕಾನ್‌ಫಿಡೆನ್ಸ್ ಇಡಲೇಬೇಕಾಗುತ್ತದೆ. ಇಲ್ಲದೇ ಹೋದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ ನಿಮ್ಮ ಮಾತಿಗೆ ನಮ್ಮ ಪೂರ್ಣ ಸಮ್ಮತ ಇದೆ; ನಡೆಯಬೇಕಾದ ರೀತಿ ಅದೇ. ಆದರೆ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದು, ಬಹುಶಃ ಸ್ವಾತಂತ್ರ್ಯ ಬಂದಮೇಲೆ ಈ ೪೩ ವರ್ಷಗಳಲ್ಲಿ ಇಂತಹ ವಿಶೇಷ ಸಂದರ್ಭ ಒದಗಿ ಬಂದಿರತಕ್ಕ ಸಂದರ್ಭದಲ್ಲಿ ಅಧಿಕಾರಿಗಳ ಬಗ್ಗೆ ಇರುವಂಥ ವಿಶ್ವಾಸ ಜನರಲ್ಲಿ ಉಳಿಯಬೇಕಾಗಿದೆ. ಏಕೆಂದರೆ, ಈ ರಾಜ್ಯ, ಈ ದೇಶ ನಡೆಯಬೇಕು. ಈ ದೃಷ್ಟಿಯಿಂದಲಾದರೂ, ತಮಗೆ ವಿಶ್ವಾಸ ಇದೆ. ಆದರೆ ಮತ್ತೊಮ್ಮೆ ಇವತ್ತು ಅಧಿಕಾರಿಗಳ ಮೇಲೆ ಆರೋಪ ಮಾಡುವುದಕ್ಕೆ ಅವಕಾಶವಾಗದಂತೆ, ಆ ಫೈಲನ್ನು ನಾನು ಕಾನ್‌ಫಿಡೆನ್ಸ್ ಆಗಿ ನೋಡಿದ್ದೇನೆ, ಇದನ್ನು ಎತ್ತುವುದಕ್ಕೆ ಅವಕಾಶ ಇಲ್ಲವೆಂದು ಹೇಳಬಹುದಿತ್ತು. ಇದು ನನ್ನ ಸಲಹೆ ಅಷ್ಟೆ;

ಶ್ರೀ ವೀರೇಂದ್ರ ಪಾಟೀಲ್.—ನನಗೆ ಅಧಿಕಾರಿ ಮೇಲೆ ವಿಶ್ವಾಸ ಇಲ್ಲದೇ ಹೋದರೆ, ಇದನ್ನೆಲಾ ಮಾಡಬಹುದು, ನನಗೆ ಅಧಿಕಾರಿ ಮೇಲೆ ವಿಶ್ವಾಸ ಇದೆ. ಇಂಟೆಲಿಜೆನ್ಸ್ ಆಫೀಸರ್ ಮುಖ್ಯಮಂತ್ರಿ ಗಳ ವಿಶ್ವಾಸದಲ್ಲಿ ಇರಲಾರದೇ ಹೋದರೆ, ಒಂದು ನಿಮಿಷವು ಇಂಟೆಲಿಜೆನ್ಸ್ ಆಫೀಸರ್ ಆಗಿ ಅವನು ಕೆಲಸ ಮಾಡುವುದಕ್ಕಾಗುವುದಿಲ್ಲ. ಅಂತಹವರನ್ನು ಇಟ್ಟುಕೊಂಡರೆ ಮುಖ್ಯಮಂತ್ರಿಯಾಗಿಯೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದನ್ನು ತಾವು ತಿಳಿದುಕೊಳ್ಳಿ. ಮಾನ್ಯ ಹೆಗಡೆಯವರು ಕೇಳಿದರು, ಈ ಲೂಸ್ ಶೀಟ್ ಎಂದರೆ, ಏನೋ ಒಂದು ಇಟ್ಟಿದ್ದು ಎಂದಲ್ಲ, ಆದರೆ ಅದನ್ನು ಫೈಲ್‌ನಲ್ಲಿ ಲಗತ್ತಿಸಿದ್ದಾರೆ, ಅದಕ್ಕೆ ನಂಬರ್ ಇಲ್ಲ. ಅವಕ್ಕೆ ನಂಬರ್ ಇದ್ದಂಥ ಒಂದು ಶೀಟ್ ಇದೆಯೋ ಎನ್ನುವ ಮಾತನ್ನು ನಾನು ಅವರ ಜೊತೆ ಚರ್ಚೆ ಮಾಡುವಾಗ ಕೇಳಿದೆ. ಅದಕ್ಕೆ ಅವರು ಲೂಸ್ ಶೀಟ್‌ನಲ್ಲಿ ಏನಿದೆ ಎನ್ನುವುದನ್ನು ಹೇಳಿದ್ದಾರೆ. He told him that there was a loose sheet of paper inserted in the file. While every Page was numbered, that loose sheet did not

have any number. An Intelligence Officer had written on the sheet that the list was prepared with the permission of the Chief Minister," Mr. Hegde said, ಲಿಸ್ಟ್ ಇಲ್ಲ ಫೈಲ್‌ನಲ್ಲಿ, ಅಂದ ಮೇಲೆ ಲೂಸು ಶೀಟ್ ಪ್ರಶ್ನೆ ಎಲ್ಲಿ ಬರುತ್ತದೆ, ತಾವೇ ಹೇಳಿ. ಇಂಟೆಲಿಜೆನ್ಸ್ ಆಫೀಸರ್ ಜೊತೆಯಲ್ಲಿ ನಾನ ಮಾತನಾಡಿದೆ. ಇಂಟೆಲಿಜೆನ್ಸ್ ಆಫೀಸರು ಯಾವ ಜನರ ಹೆಸರನ್ನೂ ಬರೆಯುವ ಹಾಗಿಲ್ಲ. ಅವರಿಗೆ ಏನು ಮಾಡುತ್ತಾರೆಂದರೆ, ಅವರು ಆ ಫೈಲಿನಲ್ಲಿ ಬರೆಯುವುದಿಲ್ಲ. ಅದಕ್ಕೆ ನಾನು ಹೇಳಿದೆ, we must know how the Intelligence system works. ಏನೇನೂ ಇಲ್ಲ, ಎಲ್ಲಾ ಬಾಯಿಯಲ್ಲೇ, ಒಂದು ಬರವಣಿಗೆಯಲ್ಲಿ ಇರುವ ಹಾಗಿಲ್ಲ. ಅವರು ಬರವಣಿಗೆಯಲ್ಲಿ ಬರೆಯುವುದು ಕೇವಲ ಜನರಲ್ ಮ್ಯಾನೇಜರ್ ಅವರಿಗೆ. "Please refer to my authorisation letter so and so. I want to intercept the following numbers. The following numbers may be deleted because I am not interested in interception." ಎಂದು ಬರೆಯುತ್ತಾರೆ. ಇದನ್ನು ಬರೆಯುವುದೇ ಹೊರತು ಮತ್ತೇನೂ ಇರುವ ಹಾಗಿಲ್ಲ. ಆದರೆ ಹೆಗಡೆಯವರು ಏನು ಹೇಳಿದ್ದಾರೆಂದರೆ, ಆ ಲೂಸ್ ಶೀಟಿನಲ್ಲಿ ಲಿಸ್ಟ್ ಇದೆ, ಟೆಲಿಫೋನ್ ನಂಬರು, ಹೆಸರು ಅಂತಾರೆ. ಆ ಲಿಸ್ಟೂ ಇಲ್ಲ, ನಂಬರೂ ಇಲ್ಲವೆಂದು ಅವರೇ ಹೇಳಿದ್ದಾರೆ, ಹೇಳಲಿಲ್ಲ ಎಂದರೆ ಪರವಾಯಿಲ್ಲ. I am going by the Press Reports.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹಾಗೆ ಹೇಳಲಿಲ್ಲ, ನಾನು ಎಂದೆಂದೂ ಆ ಫೈಲನ್ನು ನೋಡಿಲ್ಲ, ಆ ಫೈಲು ನನ್ನ ಎದುರಿಗೆ ಬಂದಿಲ್ಲ. ನಾನು ಬೊಮ್ಮಾಯಿಯವರನ್ನು ಕೇಳಿದಾಗ, ಬೊಮ್ಮಾಯಿಯವರು ಹೇಳಿದರು. ನಾನು ಆ ಫೈಲನ್ನು ತರಿಸಿ ನೋಡಿದೆ, ಎಲ್ಲಾ ಪೇಜುಗಳಿಗೂ ನಂಬರು ಇದೆ. ಅದರಲ್ಲಿ ಒಂದೋ ಅಥವಾ ಎರಡೋ ಲೂಸ್ ಶೀಟು ಇತ್ತು, ಅದರಲ್ಲಿ ಲಿಸ್ಟ್ ಇದೆ ಎಂದು ಅವರು ಹೇಳಲಿಲ್ಲ, ಅದರಲ್ಲಿ ಹೆಸರನ್ನು ಆಡ್ ಮಾಡುವುದು ಮತ್ತು ಡಿಲೀಟ್ ಮಾಡುವುದು "With the permission of the Chief Minister." ಹಾಗೆ ಬರೆದ ಹಾಗೆ ನನಗೆ ನೆನಪಿದೆ ಎನ್ನುವುದನ್ನು ಅವರು ಹೇಳಿದರು. Obviously those one or two pages were not originally the part of the file. ಇದನ್ನು ಬೊಮ್ಮಾಯಿಯವರು ಹೇಳಿದರು. ಅದನ್ನೇ ನಾನು ಪೇಪರಿಗೆ ಹೇಳಿದೆ ಅಷ್ಟೆ, ಆದರೆ ಆ ಫೈಲನ್ನು ನಾನು ನನ್ನ ಜೀವಮಾನದಲ್ಲಿ ನೋಡಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಶ್ರೀಮಾನ್ ಹೆಗಡೆಯವರು ಫೈಲನ್ನು ನೋಡಿದ್ದಾರೆಂದು ಹೇಳಲಿಲ್ಲ. ಫೈಲು ನೋಡಿದ್ದು ಶ್ರೀಮಾನ್ ಬೊಮ್ಮಾಯಿಯವರು. ಬೊಮ್ಮಾಯಿಯವರು ಫೈಲ್ ನೋಡಿ, ಶ್ರೀಮಾನ್ ಹೆಗಡೆಯವರಿಗೆ ಹೇಳಿದ್ದಾರೆ ಎಂದು ಹೆಗಡೆಯವರು ಪ್ರೆಸ್‌ಗೆ ಹೇಳುತ್ತಾರೆ, ಆದರೆ ಬೊಮ್ಮಾಯಿಯವರು ಹೇಳುವುದಿಲ್ಲ ಆದರೆ ಬೊಮ್ಮಾಯಿಯವರು ನನಗೆ ಗೊತ್ತಿಲ್ಲ, ನನಗೆ ನೆನಪು ಇಲ್ಲವೆಂದು ಹೇಳಿಬಿಟ್ಟಿದ್ದಾರೆ. ಆದರೆ ನಾನು ಮುಖ್ಯಮಂತ್ರಿಯಾಗಿ ಹೇಳುವುದೇನೆಂದರೆ, ನಾನು ಬರವಣಿಗೆಯಲ್ಲಿ ತೆಗೆದುಕೊಂಡಿದ್ದೇನೆ. ಲೂಸ್ ಶೀಟ್ ಎನ್ನುವುದು ನಿಮ್ಮ ಅರ್ಥದಲ್ಲಿ ಲೂಸ್ ಶೀಟ್ ಅಲ್ಲ. ನೀವು ಹೇಳಿದಂತೆ ಒಳಗೆ ಒಂದು ಶೀಟ್ ಇರಬಹುದು, ಅದಕ್ಕೆ ನಂಬರ್ ಇರಲಾರದಂತೆ ಇರಬಹುದು. ಅದರಲ್ಲಿ ಈ ಲಿಸ್ಟ್ ಎಂದರೆ, ಹೆಸರು ಬರೆದಿರಬಹುದು, ಬರೆಯಲಾರದೆ ಹೋಗಿರಬಹುದು. ಪ್ರೊಸೀಜರ್ ಬರೆದಿರಬಹುದು, ಅವರು ಹೇಳುವುದೇನೆಂದರೆ, ಈ ಲಿಸ್ಟ್ ನಾನು ಮುಖ್ಯಮಂತ್ರಿಯಾಗಿ, ನನ್ನ ಪರಮಿಷನ್‌ನಿಂದ ಮಾಡಿದ್ದೇನೆ ಎನ್ನುವಂತೆ ಬರೆದಿದ್ದಾರೆ ಇದು after-thought. ಏನೋ ನನ್ನ ಮೇಲೆ ಜವಾಬ್ದಾರಿ ಹೇರುವುದಕ್ಕೆ ಮಾಡಿದ್ದಾರೆ ಎನ್ನುವಂಥ ರೀತಿಯಲ್ಲಿ ತಾವು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ನಾನು ಅದರ ಸಲುವಾಗಿ ಇಂಟೆಲಿಜೆನ್ಸ್ ಆಫೀಸರಿಂದ ತರಿಸಿದೆ. ಅವರು ಹೇಳಿದರು, ಈ ತರಹದ್ದು ಯಾವುದೂ ಇಲ್ಲ, ಆ ಫೈಲಿನಲ್ಲಿ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಏನಾದರೂ ಮಾಹಿತಿ ಬೇಕಾದರೆ ಕೇಳಿ, ನಾನು ತರಿಸಿಕೊಂಡು ಆದರೂ ಹೇಳುತ್ತೇನೆ. ಅಥವಾ ಶ್ರೀಮಾನ್ ಯಡಿಯೂರಪ್ಪನವರು ಹೇಳಿದ ಹಾಗೆ, ನಾನೇ ಖುದ್ದು ಫೈಲ್ ನೋಡಿಕೊಂಡು ಹೇಳುವುದಕ್ಕೆ ಹಿಂದೆ ಮುಂದೆ ನೋಡುವ ಹಾಗಿಲ್ಲ. ಏಕೆಂದರೆ, ಸತ್ಯಾಂಶ ಮುಚ್ಚುವಂತಹ ಉದ್ದೇಶ ನನಗೆ ಇಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ,

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ಉತ್ತರ ಕೇಳಿ ನಮಗೆ ತೃಪ್ತಿಯಾಗಿದೆ. ಎಲ್ಲಾ ಅರ್ಥ ಆಯಿತು ಸ್ಪಷ್ಟವಾಗಿ.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಹತ್ತಿರ ವಿಚಾರ ಮಾಡುವಂತಹ ಒಂದು ವಿಚಾರ ಇದೆ. ಇಷ್ಟೆಲ್ಲಾ ಚರ್ಚೆ ಆದಮೇಲೂ ಕೊನೆಗೆ ಒಂದು ನಿಲ್ಲುವುದು

ಆ ಆಫೀಸರ್‌ಗೆ ಅಥಾರಿಟಿ ಯಾರು ಕೊಟ್ಟರು ? ಇದೇ ಇವತ್ತು ನಮ್ಮ ಮುಂದೆ ಇರತಕ್ಕಂಥಾದ್ದು. ಒಂದು ಕಡೆ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು, ಇನ್ನೊಂದು ಕಡೆ ಐ.ಜಿ.ಪಿ. ಇಂಟಲಿಜೆನ್ಸ್ ಆಗಿ ಆಗ ಕೆಲಸ ಮಾಡಿದವರು. ಮೂರನೆಯವರು ಚೀಫ್ ಸೆಕ್ರೆಟರಿ. ಈಗಾಗಲೇ ಚೀಫ್ ಸೆಕ್ರೆಟರಿಗೆ ಸಂಬಂಧ ಇಲ್ಲ ಎಂದು ನಾನು ಹೇಳಿದ್ದೇನೆ. ಅಂದಮೇಲೆ...

ಶ್ರೀ ಬಿ. ಹೆಚ್. ಬನ್ನಿಕೋಡ್.—ಹಾಗೆ ರೂಲ್ಸ್ ಇದೆಯೇ? ಚೀಫ್ ಸೆಕ್ರೆಟರಿಗೆ ಸಂಬಂಧ ಇಲ್ಲ ಎಂದು ರೂಲ್ಸ್ ಅಥವಾ ಕಾನೂನು ಏನಾದರೂ ಇದೆಯೇ ಎನ್ನುವ ಪ್ರಶ್ನೆ ಕೇಳುತ್ತೇನೆ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಪ್ರಶ್ನೆ ಇರುವುದು who authorised the Intelligence Officer to intercept those telephones and whether he has done it without any authority. ಈ ಪ್ರಶ್ನೆಗೆ ಉತ್ತರ ನೀಡುವವರು ಕೇವಲ ಇಬ್ಬರು. ಏಕೆಂದರೆ ವಿರೋಧ ಪಕ್ಷದ ನಾಯಕರು ವೀರೇಂದ್ರ ಪಾಟೀಲರೇ ಇದಕ್ಕೆಲ್ಲಾ ಉತ್ತರ ನೀಡುತ್ತಾರೆ ಎಂದು, ನಮ್ಮದೇನೂ ಇಲ್ಲ ; ಇದಕ್ಕೆ ಉತ್ತರ ನೀಡಬೇಕಾಗಿದ್ದರೆ ಒಂದು ಕಡೆ ಶ್ರೀಮಾನ್ ಹೆಗಡೆಯವರೂ ಇದ್ದಾರೆ. ಇನ್ನೊಂದು ಕಡೆ ಆ ವೇಳೆಗೆ ಐ.ಜಿ.ಪಿ. ಇಂಟಲಿಜೆನ್ಸ್ ಆಗಿದ್ದ ರಘುರಾಮ್. ಇವತ್ತು ಅವರು one of the Directors General of Police. ಇದ್ದಾರೆ. ಇಲ್ಲಿ ಪ್ರಶ್ನೆ ಏನು ಬರುತ್ತದೆ. ಇವತ್ತು ಮುಖ್ಯಮಂತ್ರಿಯಾಗಿ ನಾನು ಹೆಗಡೆಯವರಿಗೆ ಕೇಳುವ ಅಧಿಕಾರ ಇಲ್ಲ. ಮತ್ತು ಈಗಾಗಲೇ ಅವರು ಹೇಳಿಬಿಟ್ಟಿದ್ದಾರೆ. ಹೇಳಬೇಕಾದ ಅವಕಾಶವೇ ಇಲ್ಲ. ಪಬ್ಲಿಕ್‌ನಲ್ಲಿ 'I have not authorised anybody' ಎಂದು ಹೇಳಿದ್ದಾರೆ. ಇನ್ನು ಅವರಿಗೆ ಕೇಳುವುದೇನು? ಇನ್ನು ಏನಾದರೂ ಕೇಳಬೇಕಾಗಿದ್ದರೆ ಒಬ್ಬನೇ ಆಫೀಸರ್, ಅವನಿಗೇ ಹೇಳಬೇಕು. ಬಹುಶಃ ಜ್ಯುಡಿಷಿಯಲ್ ಎನ್‌ಕ್ವೈರಿ ಆದರೂ ಇವರಿಬ್ಬರ ಮೇಲೆ ಹೋಗುತ್ತದೆ. ರೆಕಾರ್ಡ್ ಮತ್ತು ಇವರಿಬ್ಬರ ಎವಿಡೆನ್ಸ್ ಸಾಕು ಈಗ ಪ್ರಶ್ನೆ ಏನಾಗಿದೆ ಎಂದರೆ ಹೆಗಡೆಯವರು ಇಲ್ಲಿ ಇದ್ದಾರೆ, ಅದಕ್ಕಾಗಿ ಈ ಪ್ರಶ್ನೆ ಕೇಳುತ್ತಿದ್ದೇನೆ, ಯಾವ ಆಫೀಸರ್ ಟ್ಯಾಪ್ ಮಾಡಿದ್ದಾನೆ. ಇಂಟರ್‌ಸೆಪ್ಟ್ ಮಾಡಿದ್ದಾನೆ, ಒಂದು ವಿಚಾರ ಮಾಡೋಣ. He is not an ordinary officer. He is holding the highest office in the Police Department today as one of the Directors General of Police. ಮತ್ತು ಮುಖ್ಯಮಂತ್ರಿಯಾಗಿ ಅವನ ಕೆಲಸ ನೋಡಿದ್ದೇನೆ: ಆರು ತಿಂಗಳಿಂದ ನಾನು ಏನೂ ಅವನನ್ನು ಭೇಟಿ ಆಗಿಲ್ಲ. ಏನಪ್ಪ ಚರ್ಚೆ ಮಾಡುವುದು ಮತ್ತೊಂದು ನನಗೆ ಗೊತ್ತಿಲ್ಲ. ನಾನು ಸಹವಾಸಕ್ಕೆ ಹೋಗಿಲ್ಲ. But according to the information as I got, he is one of our finest officers with an unblemished record for the last 30 years. ಪ್ರಶ್ನೆ ಏನು ಬರುತ್ತದೆ ? ನಾವು ವಿಚಾರ ಮಾಡೋಣ. ಎಲ್ಲರೂ ವಿಚಾರ ಮಾಡೋಣ. ಪ್ರಶ್ನೆ ಏನು ಬರುತ್ತದೆ ಎಂದರೆ ಇವರಲ್ಲಿ ಎರಡು ಸ್ಟ್ಯಾಂಡ್. ಒಂದು ಲೀಗಲ್ ಸ್ಟ್ಯಾಂಡ್, ಇನ್ನೊಂದು ಮಾಡಲ್ ಸ್ಟ್ಯಾಂಡ್, ಎಲ್ಲಿ ಲಾ ಅಪ್ಲೈ ಮಾಡುವುದಕ್ಕೆ ಆಗುವುದಿಲ್ಲ, We have to apply our common sense. ಮತ್ತೆ ಯಾವುದೂ ಇಲ್ಲ ; Where you don't have any direct evidence. you have to go by circumstantial evidence. There is no other possibility. There is no other way. ಇಲ್ಲಿ ಪ್ರಶ್ನೆ ಏನೆಂದರೆ. ೫೧ ಜನ ರಾಜಕೀಯ ವ್ಯಕ್ತಿಗಳ ಟೆಲಿಫೋನ್ ಅನ್ನು ಟ್ಯಾಪ್ ಮಾಡಿದ್ದಾರೆ. ಇದರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿದ್ದಂತಹ ಮಂತ್ರಿಗಳ ಟೆಲಿಫೋನ್ ಅನ್ನು ಟ್ಯಾಪ್ ಮಾಡಿದ್ದಾರೆ. What interest that police officer had in intercepting the telephones of 51 politicians of whom some were the Ministers in the them Government ? ಇದರಲ್ಲಿ ಏನಾದರೂ ಉದ್ದೇಶ ಇರಲೇಬೇಕಲ್ಲ. ಪೊಲಿಟೀಷಿಯನ್ಸ್ ಟೆಲಿಫೋನ್ ಅನ್ನು ಟ್ಯಾಪ್ ಮಾಡುವಂತಹ ಉದ್ದೇಶ ಏನು ಇದೆ ? ಆ ಉದ್ದೇಶ ಸಾಧನೆ ಮಾಡಿಕೊಳ್ಳಬೇಕಲ್ಲವೇ? ನಾನು ಅದನ್ನು ಬಿಚ್ಚಿ ಹೇಳುವಂತೆ ಇಲ್ಲ. If Without his authority he has intercepted it, that fact has to come to the notice of the Government when Mr. Hegde was there. In the normal course as an administrator if an officer does anything which is illegal, which is improper, and which amounts to an offence, what action either Mr. Hegde or Mr. Bommai took against that officer ? ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ? ಈ ಆಫೀಸರ್ ಟೆಲಿಫೋನ್ ಅನ್ನು intercept ಮಾಡಿರತಕ್ಕಂಥಾದ್ದು [illegible] ಗೊತ್ತಾಗಿತ್ತು ಎಂದು ತಿಳಿದುಕೊಳ್ಳೋಣ.

ಶ್ರೀ ಆರ್. ವಿ. ದೇಶಪಾಂಡೆ.—ಆ ವೇಳೆಗೆ ಅವರು ರಾಜೀನಾಮೆ ಕೊಟ್ಟಿದ್ದರು.

ಶ್ರೀ ವೀರೇಂದ್ರಪಾಟೀಲ್.—ಅದಕ್ಕೂ ನಾನು ಬರುತ್ತೇನೆ. ಆ ಪ್ರಶ್ನೆಗೂ ನಾನು ಉತ್ತರಿಸುತ್ತೇನೆ. ಇದು ಎಲ್ಲರಿಗೆ ಗೊತ್ತಾಗಿದ್ದು. ಗೊತ್ತಾದ ಮೇಲೆ ಪತ್ರಿಕೆಗಳಲ್ಲಿ ಬಂದ ಮೇಲೆ ಅಲ್ಲಿಂದ ಅದಕ್ಕೂ ಮೊದಲು ಏನು ಆಯಿತು? ಪೂರ್ತಿಯಾಗಿ ವರ್ಬಾಟಮ್ ರಿಪೋರ್ಟ್ ಟೇಪ್ ಆಗಿದ್ದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂತು. ಆಗ ಮಾನ್ಯ ಹೆಗಡೆಯವರಿಗೆ ಗೊತ್ತಾಗಲಿಲ್ಲವೇ? ಈ ಇಂಟಲಿಜನ್ಸಿ ಆಫೀಸರ್ ಟೆಲಿಫೋನ್ ಅನ್ನು intercept ಮಾಡಿದ್ದು ಗೊತ್ತಾಗಲಿಲ್ಲವೇ? ಆವಾಗ ಅವರಿಗೆ ಏನಾದರೂ ಹೇಳಿದ್ದೀರೇನು? ಅವರಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದೀರೇನು? ಅವರ ಮೇಲೆ ಏನಾದರೂ ಆಕ್ಷನ್ ತೆಗೆದುಕೊಂಡಿದ್ದೀರೇನು? ನೀವು ಹೇಳಿದಿರಿ. ಟೈಮ್ ಇರಲಿಲ್ಲ ಕೊಡಲಿಲ್ಲ ಎಂದು ಹೇಳಿದರು. But even after Mr. Hegde resigned from the Chief Ministership, his own partyman continued as Chief Minister. Mr. Bommai, was your own party-man. ನಾವು ಯಾರೂ ಬರಲಿಲ್ಲ.

SRI RAMAKRISHNA HEGDE.—If I could remind you, in my statement in the Press Conferance, I said, as soon as I came to know that the list of people whose telephones were intercepted included many politicians, I issued a direction that hereafter – until then I was not aware – it must not be resorted to. You may find in the old files. I have announced in the press.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆ ಏನು? ಇನ್ನು ಮುಂದೆ ಮಾಡಬೇಡಿ ಎಂದು ಆರ್ಡರ್ ಮಾಡಿದೆ ಎಂದು, ಆ ಪ್ರಶ್ನೆ ಅಲ್ಲ. ಪ್ರಶ್ನೆ ಏನೆಂದರೆ ಯಾರೋ ಒಬ್ಬ ಕಾನ್‌ಸ್ಟೇಬಲ್. ಹೆಡ್ ಕಾನ್‌ಸ್ಟೇಬಲ್ ಸಬ್ ಇನ್ಸ್‌ಪೆಕ್ಟರ್ ಟೆಲಿಫೋನ್ Intercept ಮಾಡಿರತಕ್ಕಂಥ ಪ್ರಶ್ನೆ ಅಲ್ಲ. ಅವರು ಒಬ್ಬ ದೊಡ್ಡ ಆಫೀಸರ್ ಇದ್ದಾರೆ, who is holding a very high rank, who was enjoying the confidence of the then Chief Minister and he has tapped the telephones without the knowledge of the Chief Minister, do you think it is a small, light offence that is committed if at all it is committed? ನೀವು ಬರೀ ಇನ್ನು ಮುಂದೆ ಮಾಡಬೇಡಿ ಎಂದು ಆರ್ಡರ್ ಮಾಡಿರುವುದರಿಂದ ಎಲ್ಲಾ ಪಾಪ ತೊಳೆದ ಹಾಗೆ ಆಗುತ್ತದೆ ಎಂದು ಏನಾದರೂ ತಿಳಿದುಕೊಂಡಿದ್ದೀರೇನು? What prevented the then Government to immediately atleast issue a show-cause notice? ನೀವು ಅವರಿಗೆ ಷೋಕಾಸ್ ನೋಟಿಸ್ ಏತಕ್ಕೆ ಕೊಡಲಿಲ್ಲ. ಅವರ ಮೇಲೆ ಆಕ್ಷನ್ ಏತಕ್ಕೆ ತೆಗೆದುಕೊಳ್ಳಲಿಲ್ಲ? ಏನಪ್ಪ, ಏತಕ್ಕೆ ನೀನು ಈ ರೀತಿ ಮಾಡಿದ್ದೀಯಾ? ನಮ್ಮ ಮಂತ್ರಿಗಳ ಟೆಲಿಫೋನ್ ಕದ್ದು ಕೇಳುತ್ತಿದ್ದೀಯಾ; ಇದು ಸರಿಯೇ? ನೀನು ಈ ದೇಶದ ಇಂಟಲಿಜನ್ಸ್ ವ್ಯವಹಾರ ನೋಡಿಕೊಳ್ಳುವವರು ಈ ರೀತಿ ಮಾಡಬಹುದೇ ಎಂದು ಏನಾದರೂ ವಿಚಾರ ಮಾಡಿದ್ದೀರಾ? ಇವತ್ತು ಒಬ್ಬ ಆಫೀಸರ್ ಅಧಿಕಾರ ದುರುಪಯೋಗ ಮಾಡಿದ್ದಾನೆ ಅಂದರೆ ಆ ಆಫೀಸರ್‌ನ್ನು ನೀವು ಟಾಲರೇಟ್ ಮಾಡಬೇಕೇನು? Whether it is in the interest of public safety? ಒಂದು ವೇಳೆ ನೀವು ಹೇಳಿದ ಪ್ರಕಾರ you have not authorised. ನಾನು ಒಪ್ಪಿಕೊಳ್ಳುತ್ತೇನೆ. Then he must have done it on his own. When he has done it on his own, that too a heinous crime, ಈ ದೇಶದ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಹಾಕಿ ಇನ್ನು ಮುಂದೆ ಮಾಡಬೇಡಿ ಎಂದು ಹೇಳಿ ಸುಮ್ಮನೆ ಬಿಟ್ಟುಬಿಡಬೇಕೇನು? ಇದನ್ನು ನಾನು ಕೇಳುತ್ತೇನೆ. ಮತ್ತೊಂದು ವಿಚಾರ ಅದನ್ನು ನಂತರ ವಿಚಾರ ಮಾಡೋಣ. ಏನು ಆಕ್ಷನ್ ತೆಗೆದುಕೊಂಡಿರಿ ಎಂದರೆ ಟೈಮ್ ಇರಲಿಲ್ಲ ಎಂದರು. Mr. Bommai was your own party-man, your own nominee. You could have advised Mr. Bommai, "here is a fellow, who has misused the authority of the Government; take action against him; immediately suspend him". ನಾವು ಮಾಡುತ್ತಿಲ್ಲ. ಈಗ ನೀವೂ ನೋಡುತ್ತಿದ್ದೀರಿ. ಕಳೆದ ಐದಾರು ತಿಂಗಳಲ್ಲಿ ಅನೇಕ ಐ. ಎ. ಎಸ್., ಆಫೀಸರ್‌ಗಳು, ಅನೇಕ

ಐ.ಪಿ.ಎಸ್. ಆಫೀಸರ್‌ಗಳು ಸಸ್ಪೆಂಡ್ ಆದರು. ತಪ್ಪು ಮಾಡಿದವನು ಅನುಭವಿಸಬೇಕು. ನಾನು ಕೇಳುತ್ತೇನೆ, ಅವನ ಮೇಲೆ ಏಕೆ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ ? ಇಷ್ಟನ್ನು ಹೇಳಿದ ಮೇಲೆ ನಾನು ಇಷ್ಟಕ್ಕೆ ಬಿಡುವುದಿಲ್ಲ. ಅವನಿಗೆ ನಾನು ಬರೆದು ಕೇಳಿದ್ದೇನೆ. Whether you have intercepted these telephones on your own or with the authority of the Chief Minister ? ಎಂದು ನಾನು ಕೇಳಿದ್ದೇನೆ. ಆ ಲೆಟರನ್ನು ಓದುತ್ತೇನೆ. ಬಹುಶಃ ಈಗ ಕೊನೆ ಅಧ್ಯಾಯಕ್ಕೆ ಬಂದುಬಿಟ್ಟಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆಯಿಂದ ಇದರ ಬಗ್ಗೆ ಚರ್ಚೆ ಆಗುತ್ತಿದ್ದಾಗ ಸುಮ್ಮನೆ ಕುಳಿತುಕೊಂಡು ಈಗ ಒಂದೊಂದೇ ಕಡತ ತೆಗೆಯುತ್ತಿದ್ದೀರಲ್ಲಾ.

ಶ್ರೀ ವೀರೇಂದ್ರಪಾಟೀಲ್ —ಆ ಲೆಟರ್ ಇಲ್ಲಿ ಇದೆ. ಚೀಫ್ ಸೆಕ್ರೆಟರಿ ಬರೆದಿದ್ದಾರೆ.

"My dear Raghuraman,

I have been asked by the Chief Minister to ascertain from you whether in your then capacity as Special I.G.P. you had intercepted the telephone messages of the political leaders, you have done this with or without the approval of the then Chief Minister. Kindly reply to this immediately."

ಅಲ್ಲಿಂದ ರಘುರಾಮನ್ ಕಳುಹಿಸಿದ್ದಾರೆ.

"Please refer to your letter dated 25th June 1990. This is to state that for the past many years, commencing December 1962, the officers who were incharge of the Intelligence, have been intercepting telephone messages in consultation and with the prior permission with the concerned Chief Ministers. During my tenure as I.G.P. (Intelligence), I have only continued this practice"

ಹೀಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. I have continued this practice of preparing the list of telephones to be intercepted in consultation and with the prior approval of the Chief Minister. ಇಷ್ಟು ಹೇಳಿದ ಮೇಲೆ ನಾನು ಹೇಳುವುದು ಏನೂ ಉಳಿದಿಲ್ಲವೆಂದೂ ನನಗನಿಸುತ್ತದೆ. ಫೈಲ್‌ನಲ್ಲಿ ಏನಿದೆ ಎಲ್ಲವನ್ನೂ ತಮ್ಮ ಮುಂದೆ ಇಟ್ಟಿದ್ದೇನೆ. ಇವತ್ತು ಪ್ರಶ್ನೆ ಏನೆಂದರೆ, ಬಹುಶ: ಒಂದು ಕಡೆ ಮಾಜಿ ಮುಖ್ಯ ಮಂತ್ರಿಗಳು ಇದ್ದಾರೆ, ಇನ್ನೊಂದು ಕಡೆ ಹೈಯರ್ ರ್‍ಯಾಂಕಿಂಗ್ ಆಫೀಸರ್ ಇದ್ದಾರೆ. ಇವರಿಬ್ಬರಲ್ಲಿ ಯಾರಾದರೊಬ್ಬರು ತಪ್ಪಿತಸ್ಥರಾಗುತ್ತಾರೋ ಇಲ್ಲವೋ ? ಇದರಲ್ಲಿ ಮೂರನೆಯವರು ಯಾರೂ ಇಲ್ಲ. ಇವರು ಅಪ್ರೂವಲ್ ಕೊಡದೆ ಅವರು ಮಾಡಿರಲಾರರು. ಈ ಎಂಟೈರ್ ಡ್ರಾಮಾದಲ್ಲಿ ಇಬ್ಬರೇ ಇರುವುದು. ಒಂದು ಮಾಜಿ ಮುಖ್ಯ ಮಂತ್ರಿಗಳು, ಇನ್ನೊಂದು ಕಡೆ ಐ.ಜಿ.ಪಿ. ಇವತ್ತು ಅವರು ಡಿ.ಜಿ.ಪಿ., ಆಗಿದ್ದಾರೆ. ತಮ್ಮ ಮುಂದೆ ಆ ಅಧಿಕಾರಿಯ ಪರಿಸ್ಥಿತಿಯನ್ನು ಹೇಳಿದ್ದೇನೆ. ಅವರು ಸ್ಪಷ್ಟವಾಗಿ ಹೇಳಿದ್ದಾರೆ ನಾನು ಹಿಂದಿನ ಪ್ರಾಕ್ಟೀಸ್‌ನ್ನು ಮುಂದುವರಿಸಿಕೊಂಡು ಬಂದಿದ್ದೇನೆಯೇ ಹೊರತಾಗಿ ನಾನಾಗಿ ಏನನ್ನೂ ಮಾಡಿಲ್ಲ ಎಂಬುದನ್ನು ಆ ಅಧಿಕಾರಿ ಹೇಳಿದ್ದಾರೆ. ಇದೆಲ್ಲವನ್ನೂ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ನೀವುಗಳು ಯಾರಾದರೂ ಹೆಗಡೆಯವರು ಹೀಗೆ ಇಂಟರ್‌ಸೆಪ್ಟ್ ಮಾಡಿ ಎಂದು ಬರೆದಿದ್ದಾರೆಯೇ ? ಅದು ಎಲ್ಲಿದೆ ? ಅದನ್ನು ಪ್ರೊಡ್ಯೂಸ್ ಮಾಡಿ ಎಂದು ಕೇಳಿದರೆ ಅದು ಇಲ್ಲ. ಅದಕ್ಕಾಗಿ ನಾನು ಪ್ರಥಮದಲ್ಲಿಯೇ ಹೇಳಿದ್ದೆ. Intelligence Department works in a different way. ಅದಕ್ಕೆ ಪ್ರತಿಯೊಂದಕ್ಕೂ ನೀವು ರೆಕಾರ್ಡ್ ಕೊಡಿ ಅಂದರೆ ರಿಕಾರ್ಡ್ ಕೊಡುವುದಕ್ಕೆ ಆಗುವುದಿಲ್ಲ. ರಿಕಾರ್ಡ್ ಕೊಡುವ ಹಾಗೆ ಇಲ್ಲ, ರಿಕಾರ್ಡ್ ಮಾಡಿಲ್ಲ, ರಿಕಾರ್ಡ್ ಮಾಡುವ ಹಾಗಿಲ್ಲ, ಹಿಂದೆಯೂ ರಿಕಾರ್ಡ್ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ಇವೊತ್ತು ಮಾಡಿಲ್ಲ, ಮಾಡುವುದಿಲ್ಲ. Circumstantial evidence only. ಇನ್ನು ಅನೇಕ ಜನ ದೊಡ್ಡ ದೊಡ್ಡವರು ಹೇಳುತ್ತಾರೆ. ಬಹುಶ: ಅದು ಗಾದೆ ಮಾತು. ಏನೆಂದರೆ,

Witnesses may lie but circumstances do not lie. ಎಂದು, circumstances ನಲ್ಲಿ ಏನು ಇದೆ ಎಂಬುದನ್ನು ತಾವುಗಳು ಊಹೆ ಮಾಡಬೇಕು. ಅದನ್ನು ತಮಗೇ ಬಿಟ್ಟಿದ್ದೇನೆ. ಮತ್ತು ಅಂತಿಮವಾಗಿ ತಮಗೆ ಹೇಳುತ್ತಾ ಇದ್ದೇನೆ, ಯಾರದ್ದೋ ತೇಜೋವಧೆ ಮಾಡಬೇಕೆಂಬ ಉದ್ದೇಶ ನಮ್ಮಲ್ಲಿ ಯಾರಿಗೂ ಇಲ್ಲ. ಆ ಉದ್ದೇಶ ಇರುವವರು ಇಲ್ಲಿ ಇಲ್ಲ, ಅಂಥವರು ನಿಮ್ಮ ಕ್ಯಾಂಪ್‌ನಲ್ಲಿಯೇ ಇದ್ದಾರೆ. ಆ ಹೆಸರುಗಳು ಕೂಡ ನಿಮಗೆ ಗೊತ್ತಿದೆ, ಅದನ್ನು ನಾನು ಹೇಳಬೇಕಾಗಿಲ್ಲ. ಮಾನ್ಯ ಸಿಂಧ್ಯರವರು ಮಾತನಾಡುವಾಗ ಹೇಳುತ್ತಾರೆ ಎಂದು ಅಂದುಕೊಂಡಿದ್ದೆ, ಆದರೆ ಅವರು ಅರ್ಧಕ್ಕೆ ನುಂಗಿ ಬಿಟ್ಟರು...

: ಸಭೆಯಲ್ಲಿ ನಗು :

ನಾವು ತೇಜೋವಧೆಯ ಪಾಪದ ಕೆಲಸಕ್ಕೆ ಹೋಗುವುದಿಲ್ಲ, ಹೋಗುವವರಲ್ಲ. ಅದಕ್ಕಾಗಿ ನಮ್ಮಲ್ಲಿ ಏನು ಮೆಟೀರಿಯಲ್ ಇತ್ತು ಅವುಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಅಂತೆಯೇ ತಾವುಗಳು ಮೂರು ಪ್ರಶ್ನೆಗಳನ್ನು ಹಾಕಿದ್ದೀರಿ. ಅದಕ್ಕೆ ನನ್ನ ಉತ್ತರ ಏನು ? ಮೊಟ್ಟಮೊದಲನೆಯದಾಗಿ ಫೈಲ್‌ಗಳನ್ನು ಇಡಬೇಕು ಎಂದು ಹೇಳಿದ್ದೀರಿ – ಅದು ಆಗುವುದಿಲ್ಲ. ಈ ವಿಚಾರದಲ್ಲಿ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಎರಡನೇಯದಾಗಿ ನಿಮ್ಮಲ್ಲಿ ಏನು ಇದೆ, ಅದರ ಪ್ರಕಾರ ನೀವು ನಿರ್ಧಾರ ಮಾಡಿ, ಯಾರು ತಪ್ಪಿತಸ್ಥರು ಇದ್ದಾರೆ ಎನ್ನುವಂಥಾದ್ದನ್ನು ನೀವೇ ಹೇಳಿ ಎಂದು ಹೇಳಿದ್ದಾರೆ. ಆ ಕುರಿತು ನಾನು ಹೇಳುವುದಾದರೆ, ನಾನು ಪೂರ್ತಿಯಾಗಿ ಎಲ್ಲಾ ಮೆಟೀರಿಯಲ್ಸ್‌ನ್ನು ತಮ್ಮ ಮುಂದಿಟ್ಟಿದ್ದೇನೆ. ಈಗ ತಾವುಗಳೇ ಊಹೆ ಮಾಡಿ. ಇಷ್ಟೆಲ್ಲಾ ಮಾಡಿದ ಮೇಲೆ, ತಮಗೆ ನ್ಯಾಯಾಂಗ ತನಿಖೆ ಬೇಕೆ ಬೇಡವೇ ? ಎಂಬ ನಿರ್ಧಾರಕ್ಕೆ ತಾವುಗಳೇ ಬನ್ನಿ. ಮತ್ತು ತಮ್ಮದೂ ಆ ಬಗ್ಗೆ ಏನಾದರೂ ಡಿಮ್ಯಾಂಡ್ ಇದ್ದರೆ ತಾವುಗಳು ದಯವಿಟ್ಟು ಹೇಳಬೇಕು. ಹಾಗೆ ತಾವುಗಳು ಹೇಳುವುದಾದರೆ ನನ್ನ ಉತ್ತರವನ್ನು ಇಲ್ಲಿಗೆ ಸಮಾಪ್ತಿ ಮಾಡುತ್ತೇನೆ. ಇದೊಂದನ್ನೇ ನಾನು ಹೇಳುತ್ತಿರುವುದು. ಒಂದು ಗಂಟೆಯವರೆಗೆ ನಾನು ಏನು ವಿಚಾರಗಳನ್ನು ಹೇಳಿದ್ದೇನೆ, ಅದರ ಆಧಾರದ ಮೇಲೆ ನಿಮಗೆ ಸಮಾಧಾನ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ನಿಮಗೆ ಜ್ಯುಡಿಷಿಯಲ್ ಎನ್‌ಕ್ವಾಯರಿ ಬೇಕು ಎನ್ನುವಂಥ ವಿಚಾರವನ್ನು ತಾವುಗಳು ತಿಳಿಸುವುದಾದಲ್ಲಿ ಅದರ ಬಗ್ಗೆ ನನ್ನ ವಿಚಾರ ಮತ್ತು ನನ್ನ ಕಾಮೆಂಟ್ಸ್‌ನ್ನು ಹೇಳುತ್ತೇನೆ.

SRI D. B. CHANDRE GOWDA.—I am thankful to the Chief Minister for two reasons.

(ನಗು)

ಏಕೆ ಸ್ವಾಮಿ ನಗು ? ಏಕೋ ನಗುತ್ತಿದ್ದಾರೆ, ನನಗೆ ಅದರ ಅರ್ಥ ಗೊತ್ತಾಗಲಿಲ್ಲ...

(ಗೊಂದಲ)

ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ, ಅದನ್ನೇ ನಾನು ಹೇಳಿದ್ದೇನೆ. ತಮಗೆ ನೆನಪು ಇರಬಹುದು. ಆದರೆ ಇಲ್ಲಿ ನಗುತ್ತಿರುವವರಿಗೆ ನಗುವುದಷ್ಟೇ ಗೊತ್ತು ಹೊರತಾಗಿ ನಾನು ಏನು ಹೇಳಿದ್ದೇನೆ ಎಂಬುದು ನೆನಪಿನಲ್ಲಿ ಇರಲಾರದು.

(ಗೊಂದಲ)

The moment Chief Secretary authorised the DIG (Intelligence or the IG (Intelligence) he deals himself. ಎನ್ನುವಂಥ ಮಾತನ್ನು ತಾವುಗಳು ಹೇಳಿದ್ದೀರಿ. ತಾವು ಅದನ್ನು ಒಪ್ಪಿಕೊಂಡಿದ್ದೀರಿ. ಒಂದು ನನ್ನ ಮನಸ್ಸಿನಲ್ಲಿ ಉಳಿದಿರತಕ್ಕಂಥ ಪ್ರೊಸೀಜರ್‌ನ್ನು ನಾನು ಹೇಳಿದ್ದನ್ನು ಕೂಡ ತಾವು ಹೇಳಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ನನ್ನ ಮನಸ್ಸಿನಲ್ಲಿ ಇದ್ದ ಶಂಕೆ ಕೂಡ ತಾವುಗಳು ದೂರ ಮಾಡಿದ್ದೀರಿ. ಒಂದೇ ಒಂದು ಸ್ಟ್ಯಾಂಡಿಂಗ್ ಆರ್ಡರ್ ಇದೆ ೧೯೬೨ನೇ ಡಿಸೆಂಬರ್‌ನಿಂದ ಹಿಡಿದು ೧೯೮೮ನೇ ಇಸವಿಯವರೆಗೆ ಅದನ್ನು ಫಾಲೋ ಮಾಡಿಕೊಂಡು ಬಂದಿದ್ದೇವೆ. Were there any specific directions in the year 1986 or 1987 to the effect that it wasdone in consultation with the Chief Minister..... From December 1962. ಎಂದು ತಾವುಗಳು ಹೇಳಿದ್ದೀರಿ. ೧೯೬೨ನೇ ಡಿಸೆಂಬರ್ ತಿಂಗಳಿನಿಂದ ಅದೇ ಪ್ರೊಸೀಜರ್‌ನ್ನು ಫಾಲೋ ಮಾಡುತ್ತಾ ಬಂದಿದ್ದಾರೆ ಎಂದು ಹೇಳಿದ್ದೀರಿ. There are no evidence to show that at a specific point of time.. ...ಈಗ ತಾವು ಹೇಳಿದ್ದೀರಿ ಯಾರದ್ದೂ ಮಾಡಬೇಡಿ ಎಂದು

ಹೇಳಿದ್ದೇನೆ. ಆದರೆ ಈ ಪ್ರಸಂಗ ಹಿಂದೆ ಬಂದಿಲ್ಲ. ಇದು ಇತ್ತೀಚೆಗೆ ಚರ್ಚೆಗೆ ಬಂದಮೇಲೆ ನೀವು ಬೇಡ ಎಂದು ಹೇಳುವುದು ಕಾರಣವಾಯಿತು. ಇಲ್ಲದಿದ್ದರೆ ಹಳೆಯ ಪ್ರೊಸೀಜರ್ ಫಾಲೋ ಆಗುತ್ತಿತ್ತು ಆದುದರಿಂದ ಸ್ಪೆಸಿಫಿಕ್ ಆಗಿ ಆ ಸಂದರ್ಭಕ್ಕೆ ಇಂಥದ್ದೇ ಮಾಡಿ ಎಂದು ಎನ್ನತಕ್ಕಂಥಾದ್ದಕ್ಕೆ ಯಾವ ಸಾಕ್ಷ್ಯಾಧಾರಗಳೂ ಸಿಗಲಿಲ್ಲ. ಆ ಕಾರಣಕ್ಕಾಗಿ ನಾನು ನ್ಯಾಯಾಂಗ ವಿಚಾರಣೆಗಾಗಿ ಹೇಳಿದ್ದೇನೆ.

೫.೦೦ ಪಿ ಎಂ.

ಶ್ರೀ ವೀರೇಂದ್ರಪಾಟೀಲ್.— ಬಹುಶಃ ನಾನು ಹೇಳಿದ್ದೆಲ್ಲ ತಮಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಚೀಫ್ ಸೆಕ್ರೆಟರಿಯಾಗಲಿ, ಹೋಮ್ ಸೆಕ್ರೆಟರಿಯಾಗಲೀ ಅಂಡರ್ ಸೆಕ್ಷನ್ ೫(೨) ಏನಿದೆ ಆ ಪ್ರಕಾರ he issues the authorisation letter. That is all. Afterwards his job is over. ಇನ್ನು ಯಾರಿಗೆ ಆಥರೈಜೇಷನ್ ಲೆಟರ್ ಇರುತ್ತದೆ ಅವನು ಜನರಲ್ ಮ್ಯಾನೇಜರ್‌ಗೆ ಯಾವ್ಯಾವ ಟೆಲಿಫೋನ್ ಇಂಟರ್‌ಸೆಪ್ಟ್ ಮಾಡಬೇಕೆಂದು ಬರೆಯುತ್ತಾನೆ. ಅಲ್ಲಿ ಪ್ರೊಸೀಜರ್ ಏನಿದೆ ಅಂದರೆ, Any additions or deletions of the telephone numbers will be with the prior approval and in consultation with the Chief Minister. ಅದೆಲ್ಲ ಇಂಟೆಲಿಜೆನ್ಸ್ ಆಫೀಸರ್ ಜವಾಬ್ದಾರಿ. It is between the Intelligence Officer and the Chief Minister. Chief Secretary does not come into picture at all. ಇದು ಚೀಫ್ ಮಿನಿಸ್ಟರಿಗೆ ಬಿಟ್ಟರೆ ಬೇರೆ ಯಾರಿಗೂ ಗೊತ್ತಿರುವುದಿಲ್ಲ.

ಶ್ರೀ ಡಿ ಬಿ. ಚಂದ್ರೇಗೌಡ.—ನನ್ನ ವಾದವೂ ಅದೇ ಆಗಿತ್ತು. ಸೆಕ್ಷನ್ ೫(೨) ಪ್ರಕಾರ ಆಥರೈಸ್ ಮಾಡಿದ ತಕ್ಷಣ Chief Secretary gets delinked. It is exactly the same. i.e., between the Chief Minister and the I.G.(Intelligence) ಆಗ ಚೀಫ್ ಸೆಕ್ರೆಟರಿ ಏನು ಹೇಳುತ್ತಾರೆ ಎಂದರೆ, in consultation with and prior permission of the Chief Minister. ಇದು ಪ್ರತಿಯೊಬ್ಬ ಮುಖ್ಯ ಮಂತ್ರಿ ಆಯಾಕಾಲಕ್ಕೆ ಕೊಟ್ಟಿದ್ದಲ್ಲ. ಜನರಲ್ ಸ್ಟ್ಯಾಂಡಿಂಗ್ ಆರ್ಡರ್ ಅನ್ನು ಫಾಲೊ ಮಾಡಿಕೊಂಡು ಬಂದದ್ದು. ೬ನೇ ಡಿಸೆಂಬರ್‌ನಿಂದ ೮೮ ರವರೆಗೆ ಅದನ್ನೇ ಫಾಲೋ ಮಾಡಿಕೊಂಡು ಬಂದದ್ದು ಎಂದು ಉತ್ತರ ಬರೆಯುತ್ತಾರೆ ಅವರು ಆದ್ದರಿಂದ There is no specific evidence to show at relevant point of time this was the instruction or the procedure followed at that particular point of time between the Chief Minister and the Intelligence Officer.

ಶ್ರೀ ವೀರೇಂದ್ರಪಾಟೀಲ್.— ಅದನ್ನೇ ನಾನು ಓದಿ ಹೇಳಿದ್ದುದು ನಿಮಗೆ. ಆ ವೇಳೆಗೆ ಐಜಿಪಿ ಏನಿದ್ದ ಅವನು ಇನ್ನೊಬ್ಬ ಐಜಿಪಿಗೆ ೧೯೮೮ ರಲ್ಲಿ ಚಾರ್ಜ್ ಕೊಡುವ ಮುನ್ನ ಅವನು ಏನು ಬರೆದಿದ್ದಾನೆಂದು ಹೇಳುತ್ತಿದ್ದೇನೆ. ಅದಕ್ಕೂ ಹಿಂದೆ ಮುಹಜೂರ್‌ಕರ್ ಎಂಬ ಅಧಿಕಾರಿ ಇದ್ದ. ಆತನೂ ಹಾಗೇ ಬರೆದಿದ್ದಾನೆ. The convention and practice is that any addition or deletion in the list will be in consultation and with prior permission of the Chief Minister. That is the procedure.

ಶ್ರೀ ಡಿ.ಬಿ. ಚಂದ್ರೇಗೌಡ.— ೬ನೇ ಡಿಸೆಂಬರ್‌ನಿಂದ ಪ್ರತಿಯೊಬ್ಬ ಆಫೀಸರೂ ಚಾರ್ಜ್ ಕೊಡುವಾಗಲೂ ಇದನ್ನೇ ಬರೆಯುತ್ತಿದ್ದಾರೆ. At a particular point of time any instruction was given ?

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಮುಖ್ಯ ಮಂತ್ರಿಗಳು ಕಾಯಿದೆ ಪ್ರಕಾರ ಸರಿಯಾಗಿ ಹೇಳಿದ್ದಾರೆ. ಒಮ್ಮೆ ಚೀಫ್ ಸೆಕ್ರೆಟರಿಯವರು ಒಬ್ಬ ಅಧಿಕಾರಿಗೆ ಆಥರೈಜ್ ಮಾಡಿದ ನಂತರ ಅವರು ಡಿಲಿಂಕಾಗುತ್ತಾರೆ. ಮತ್ತು ಆ ಅಧಿಕಾರಿ ಮತ್ತು ಮುಖ್ಯ ಮಂತ್ರಿಗಳ ಜತೆ ಕನ್‌ಸಲ್ಟೇಶನ್ ಮಾಡಿ ಆಡಿಷನ್ ಅಥವಾ ಡಿಲಿಷನ್ ಮಾಡುತ್ತಾನೆ ಎಂದು ಹೇಳಿದ್ದಾರೆ. ನಾನು ಕೇಳುತ್ತೇನೆ ಇದೆ. ಪ್ರಕಾರ ಪ್ರೊಸೀಜರ್ ಇವೊತ್ತಿಗೂ ಕೂಡ ಇದ್ದರೆ, ತಾವು ಮುಖ್ಯ ಮಂತ್ರಿಯಾದ ನಂತರ ನೇರವಾಗಿ ಒಂದು ಪತ್ರ ಬರೆದಿರಿ. abundant ಕಾಷನ್ನಾಗಿ ಇನ್ನು ಮುಂದೆ

ಯಾವ ರಾಜಕಾರಣಿಯದ್ದೂ ಟೆಲಿಫೋನ್ ಟ್ಯಾಪ್ ಮಾಡಬಾರದು ಎಂದು. ನೀವು ಏಕೆ ಬರೆದಿರಿ ? Whithout your consultation the officer may also do it ಎಂದು Otherwise there was no necessity to write. With abundant caution that the offic r may misuse the power. ಅದರ ಫಲವಾಗಿ ಆ ಪತ್ರ ಬರೆದಿರಿ. ಇಲ್ಲದೆ ಹೋದರೆ ಇದನ್ನು ಬರೆಯುತ್ತಿರಲಿಲ್ಲ. You would have said delete this or add this. Because you are worried that it is just a procedure the officer may misuse ಎಂದು ತಿಳಿದು ಅದರ ಫಲವಾಗಿ ಪತ್ರ ಬರೆದಿರಿ ಇದಕ್ಕೆ ತಮ್ಮ ಸ್ಪಷ್ಟೀಕರಣ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇವೊತ್ತು ಜವಾಬ್ದಾರಿ ಸ್ಥಾನದಲ್ಲಿರುವ ಈ ರಾಜ್ಯದ ಮುಖ್ಯ ಮಂತ್ರಿಗಳು ಈ ಟೆಲಿಫೋನ್ ಟ್ಯಾಪಿಂಗನ್ನು ಯಾವ್ಯಾವ ಸಂದರ್ಭದಲ್ಲಿ ಹೇಗೆ ಮಾಡ ಲಾಗುವುದು ಎಂದು ಬಹಳ ಸ್ಪಷ್ಟವಾಗಿ ಕೂದಲು ಎಳೆಯಾಗಿ ಬಿಡಿಸಿ, ಬಿಡಿಸಿ, ನಮಗೆ ಯಾವುದೇ ಸಂಶಯಕ್ಕೆ ಎಡೆಯಿರದಂತೆ ಉತ್ತರ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಎರಡನೆಯದು ಇವತ್ತು ನಾನು ಈ ಭಾಗದಲ್ಲಿ ಅವತ್ತು ಅಲ್ಲಿ ಕೂತಂತಹ ಮಾಜಿ ಮುಖ್ಯ ಮಂತ್ರಿಗಳಲ್ಲಿ ತಮ್ಮ ಮಂಹೂಕ ಗೌರವದಿಂದ ವಿನಂತಿ ಮಾಡಿಕೊಳು ವಂಥದ್ದು, ಇದುವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳು ಈ ಒಂದು ಟೆಲಿಫೋನ್ ಟ್ಯಾಪಿಂಗ್‌ನ ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಏನು ಸಿಸ್ಟಂ ಇದೆ ಎಂದು ಎಕ್ಸ್‌ಪ್ಲೈನ್ ಮಾಡಿದರು. ಇದರಲ್ಲಿ ಅವರು ಹೇಳಿದ್ದಂಥದ್ದರಲ್ಲಿ ಏನಾದರು ಸಂಶಯ ಇದೆಯಾ ಅಥವಾ ನಿಮ್ಮ ಕಾಲದಲ್ಲಿ ಬೇರೆ ಏನಾದರೂ ಪದ್ಧತಿ ಇತ್ತೆ? ಇದನ್ನು ಈ ಸದನದ ಸದಸ್ಯನಾಗಿ ಈ ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ಏನಾದರೂ ಇದ್ದರೆ ತಿಳಿದುಕೊಳ್ಳುವುದಕ್ಕೆ ನಾನು ಇಚ್ಛೆಪಡುತ್ತೇನೆ ಅವರು ಅಪೇಕ್ಷೆ ಪಡುತ್ತಾರೆ ಹೇಳುವುದಕ್ಕೆ ಅವರು ಸದ್ಧವಿದ್ದರೆ. ಎರಡನೆಯದು ಇವತ್ತು ಸರ್ಕಾರವನ್ನು ನಾವು ನಡೆಸುತ್ತಿದ್ದೇವೆ ಎಂದು ನೀವು ಅಂದುಕೊಂಡಿದ್ದೀರೋ, ಅದರೂ ಸಹಾ ಪ್ರಾಮಾಣಿಕವಾದ ಉನ್ನತ ಅಧಿಕಾರಿಗಳು ಇವತ್ತು ಸರ್ಕಾರವನ್ನು ನಡೆಸುವಂಥ ಸಂದರ್ಭದಲ್ಲಿ ರಘುರಾಮನ್ ಅಂಥ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಸಹಾ ಸಂಶಯದಿಂದ ನೋಡುವಂಥ ಒಂದು ವಾತಾವರಣ ಈ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಇದಕ್ಕೆ ಬೇಕಾದಂಥ ಕ್ಲಾರಿಫಿಕೇಷನ್ ಮತ್ತು ಸ್ಪಷ್ಟೀಕರಣವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ನಮಗೆ ಕೊಟ್ಟಿದ್ದಾರೆ. ಇದರಿಂದ ಜನತೆಯಲ್ಲಿ ಅಧಿಕಾರಿಗಳ ಬಗ್ಗೆ ಏನು ಒಂದು ಸಂಶಯ ಇದೆ, ನಮ್ಮ ರಾಜಕೀಯ ಚದುರಂಗದ ಆಟಕ್ಕೋಸ್ಕರ ಅಧಿಕಾರಿಗಳನ್ನು ಉಪಯೋಗ ಮಾಡಿಕೊಂಡು ಅವರ ಮೇಲೆ ಭಾರ ಏರುವಂಥ ಪದ್ಧತಿ ಏನು ಇದೆ, ಇದು ಕೊನೆಯಾಗಬೇಕಾಗಿದೆ. ಮುಂದೆ, ಆದರೂ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ, ಅದಕ್ಕಾಗಿ ಅವರು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ಇವತ್ತು ಮಾಜಿ ಮುಖ್ಯಮಂತ್ರಿಗಳು ಇವತ್ತು ಸದನದ ಸದಸ್ಯರು ಆಗಿರುವ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಎಂದರೆ ಯಾರೋ ಯಾವುದೋ ಒಂದು ಕಾರಣಕ್ಕೋಸ್ಕರ ತೇಜೋವಧೆಗೆ ಯಾವುದೇ ಸಂದರ್ಭದಲ್ಲಿ ಉಪಯೋಗ ಮಾಡಿಕೊಳ್ಳಬಹುದು. ಆದರೆ ನಾನು ವೀರೇಂದ್ರ ಪಾಟೀಲರಾದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛೆಪಡುವುದು ಎಂದರೆ, ತಾವು ಇವತ್ತು ಪಾಲಿಟೀಷಿಯನ್ಸ್‌ನ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡುವುದು ಬೇಡ ಎನ್ನತಕ್ಕಂಥ ಸೂಚನೆಯನ್ನು ಕೊಟ್ಟಿದ್ದೇನೆ ಎಂದು ತಾವು ಹೇಳುತ್ತೀರಿ. ನಾನು ತಮ್ಮಿಂದ ಒಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಇಚ್ಛೆಪಡುವುದು ಏನೆಂದರೆ ಈ ಸದನದಲ್ಲಿ ಒಳಗೆ ಇರತಕ್ಕಂಥವರು ಇರಬಹುದು, ಹೊರಗಡೆ ಇರತಕ್ಕಂಥವರು ಇರಬಹುದು. ಜನತೆಯ ಅಪೇಕ್ಷೆಗೆ ತಕ್ಕಂತೆ ಕೆಲಸವನ್ನು ಮಾಡದೆ ಸರ್ಕಾರಕ್ಕೆ ಜನತೆಗೆ ದ್ರೋಹ ಮಾಡುವಂಥ ಯಾವುದೇ ಒಂದು ಅನಿವಾರ್ಯವಾದಂಥ ಸ್ಮಗ್ಲಿಂಗ್ ವ್ಯವಹಾರದಲ್ಲಿ ಉಳಿದರೂ ಕೂಡಾ ರಾಜ್ಯವನ್ನು ವಿನಾಶಕ್ಕೆ ಕೊಂಡೊಯ್ಯುತ್ತದೆ. ಆಗ ಒಬ್ಬ ಶಾಸಕ ಅಥವಾ ಮಂತ್ರಿ ಎಂದು ನೋಡದೆ ರಾಜ್ಯದ ಹಿತದೃಷ್ಟಿ ಯಿಂದ ಅವನ ಟೆಲಿಫೋನನ್ನು ಟ್ಯಾಪ್ ಮಾಡುವುದು ತಪ್ಪೇನಿಲ್ಲ ಎಂದು ನಾನು ಭಾವಿಸಿದ್ದೇನೆ.

ಆ ಸಿಸ್ಟಂಗೋಸ್ಕರ ಈ ರೀತಿ ಮುಖ್ಯಮಂತ್ರಿಗೆ ಮತ್ತು ಈ ಅಧಿಕಾರಿಗೆ ಮಾತ್ರ ಅಧಿಕಾರ ಇರು ವಂಥದ್ದು, ಇವತ್ತು ರಾಜ್ಯದ ಹಿತದೃಷ್ಟಿಯಿಂದ ಆ ರೀತಿ ಟ್ಯಾಪಿಂಗ್ ಮಾಡಿದೆ ಎಂದು ಅವರು ಹೇಳಬಹುದು ಅಥವಾ ಮಾಡಿಸುವಂಥ ಅನಿವಾರ್ಯ ಸಂದರ್ಭಗಳು ಬಂದಿತ್ತು ಎಂದು ಹೇಳಬಹುದು. ಇವತ್ತು ಅವರು ರಾಜೀನಾಮೆಯನ್ನು ಕೊಟ್ಟಾಗಿದೆ. ಮತ್ತೆ ಹೊಸ ಪನಿಷ್‌ಮೆಂಟ್ ಆಗುವಂಥ ಪ್ರಶ್ನೆ ಇಲ್ಲ. ಅವರು ನೈತಿಕ ಹೊಣೆಯನ್ನು ಹೊತ್ತಿದ್ದಾರೆ. ಆದರೆ ಇವತ್ತು ನಾನು ಕೇಳತಕ್ಕಂಥದ್ದು

ಇನ್ನು ಏನಾದರೂ ಸನ್ಮಾನ್ಯ ವೀರೇಂದ್ರ ಪಾಟೀಲರು, ಈ ರಾಜ್ಯದ ಮುಖ್ಯಮಂತ್ರಿಗಳು ತಾವು ಏನು ಸ್ಪಷ್ಟೀಕರಣವನ್ನು ನೀಡಿದ್ದಾರೆ, ಅದಲ್ಲದೆ ಅವತ್ತಿನ ಸಿಸ್ಟಂನಲ್ಲಿ ಕಾನೂನು ಚೌಕಟ್ಟಿನಲ್ಲಿ ಬೇರೆ ಯಾವುದಾದರೂ ಸಿಸ್ಟಂನ್ನು ಅವರು ಅಳವಡಿಸಿಕೊಂಡಿದ್ದರೆ ತಾವು ದಯ ಮಾಡಿ ಅದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಿ. ನನಗೆ ಅದರ ಬಗ್ಗೆ ಬೆಳಕು ಚೆಲ್ಲಿದಂತಾಗುತ್ತದೆ ಎಂದು ಮಾತ್ರ ತಮ್ಮಲ್ಲಿ ಕಳಕಳಿಯಿಂದ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇನ್ನು ಬೇರೆ ಯಾವುದೇ ದೃಷ್ಟಿಯಿಂದ ಅಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ ನನಗೆ ತೃಪ್ತಿಯಾಗಿದೆ ಮತ್ತೆ ಏನು ಸರ್‌ಕಮ್‌ಸ್ಟಾನ್ಸಸ್ ಎವಿಡೆನ್ಸ್ ಸಂದರ್ಭ ನೋಡಿದಾಗ ಒಬ್ಬ ಉನ್ನತ ಅಧಿಕಾರಿಗೆ ಅವನಿಗೆ ಏನಿದೆ ಸ್ವಾರ್ಥ? ಯಾರೋ ಏನು ಸೂಚನೆಯನ್ನು ಕೊಡುತ್ತಾರೆ, ಅದರಂತೆ ಅವನು ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗ 68 ನೇ ರೂಲ್ ಪ್ರಕಾರ ಏನು ಈ ಒಂದು ಚರ್ಚೆಯನ್ನು ನಾವು ತೆಗೆದುಕೊಂಡಿದ್ದೇವೆ. ಅದು ಈಗಾಗಲೇ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟು, ಬಹುಶಃ ಅದು ಮುಕ್ತಾಯ ಮಾಡಿದಾಗ ಹಾಗೆ ಆಗಿದೆ. ಆದರೆ ಅವರ ಉತ್ತರ ಮತ್ತು ಅವರ ಕೊಟ್ಟಂತಹ ಕೆಲವು ಏನು ನಮ್ಮ ಸದನದ ಮುಂದೆ ಮಂಡಿಸಿದಂಥ ಪತ್ರಗಳನ್ನು ಮತ್ತು ಅವರು ಹೇಳಿದಂಥ ಹೇಳಿಕೆ ಇದೆಯಲ್ಲಾ, ಅದೆಲ್ಲಾ ನೋಡಿದಮೇಲೆ ಇವತ್ತು ಒಂದು ಮಾತು ಸಿದ್ಧವಾಯಿತು. ನಾವು ಏನು ಹಿಂದೆ ಅಕ್ಟೋಬರ್ 88 ರಲ್ಲಿ ಏನು ಹೇಳಿದ್ದೇವೆ. ಈ ಸದನದಲ್ಲಿ ನಾವು ಏನು ಪ್ರಸ್ತಾಪ ಮಾಡಿದ್ದೇವೆ. ಶ್ರೀಮಾನ್ ಹೆಗಡೆಯವರೇ ಈ ಟೆಲಿಫೋನ್ ಟ್ಯಾಪಿಂಗ್‌ಗೆ ಕಾರಣರು ಎನ್ನತಕ್ಕಂಥದ್ದು ಅದು ಸ್ಪಷ್ಟವಾಗಿ ಇವತ್ತಿನ ದಿವಸ ಸಿದ್ಧವಾಯಿತು. ಏಕೆಂದರೆ ರಘುರಾಮನ್ ಅವರು ಸ್ಪಷ್ಟವಾಗಿ ಪತ್ರವನ್ನು ಬರೆದಿದ್ದಾರೆ ಮುಖ್ಯಕಾರ್ಯದರ್ಶಿಗಳಿಗೆ. ಅಂದಿನ ಮುಖ್ಯಮಂತ್ರಿಯವರನ್ನು ಕೇಳಿಕೊಂಡೆ ಅವರನ್ನು ಕನ್‌ಸಲ್ಟ್ ಮಾಡಿ ಅವತ್ತಿನ ದಿವಸ ನಾವು ಇದನ್ನು ಟೆಲಿಫೋನ್ ಟ್ಯಾಪಿಂಗ್ ಮಾಡುತ್ತಿದ್ದೇವೆ, ಇದೇ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಅದನ್ನು ನಾನು ಪ್ರೊಸೀಜರ್ ಬಿಟ್ಟು ಬೇರೆ ಮಾಡಲಿಲ್ಲ ಎನ್ನತಕ್ಕಂಥದ್ದು ಸ್ಪಷ್ಟವಾಗಿ ಇವತ್ತಿನ ದಿವಸ ಅವರು ಕೂಡ ಹೇಳಿದ್ದಾರೆ. ಅಂದಾಗ ರಘುರಾಮನ್ ಅವರಿಗೆ ಕೇಳತಕ್ಕಂಥ ಪ್ರಶ್ನೆ ಬರುವುದಿಲ್ಲ. ಈಗ ಕೇವಲ ಇರತಕ್ಕಂಥವರು ಇಬ್ಬರು ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಹಾಗೆ ಇಬ್ಬರೇ ಇಬ್ಬರು ಅಪರಾಧಿಗಳು, ಇಲ್ಲಿ ಅವರಾದರೂ ಮಾಡಿರಬಹುದು, ಇಲ್ಲದಿದ್ದರೆ ರಘುರಾಮನ್ ಅವರಾದರೂ ಮಾಡಿರಬಹುದು. ಆದರೆ ರಘುರಾಮನ್‌ರವರು ಈಗಾಗಲೆ ಸ್ಪಷ್ಟವಾಗಿ ಇವತ್ತು ಪತ್ರದ ಮುಖಾಂತರ ಹೇಳಿದ ಮೇಲೆ ಈ ಕೆಲಸ ನಾನು ಅವರ ಹೇಳಿಕೆಯ ಮೇಲೆ ಮಾಡಿದ್ದೇನೆ ಎಂದು ಹೇಳಿದಾಗ ಸಂಪೂರ್ಣವಾದಂಥ ಜವಾಬ್ದಾರಿ ಅಂದಿನ ಮುಖ್ಯಮಂತ್ರಿಗಳ ಮೇಲೆ ಬೀಳುತ್ತದೆ. ಅದನ್ನು he has to own that responsibility. ಏಕೆಂದರೆ ಅನೇಕ ಸಲ ಅವರು ಏನು ಹೇಳಿದರು ಇದನ್ನು ಪ್ರೂವ್ ಮಾಡಿದರೆ ಇದನ್ನು ಸಿದ್ಧ ಮಾಡಿದರೆ ಅವತ್ತು ನಾನು ರಾಜಕೀಯ ಸನ್ಯಾಸವನ್ನು ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಪ್ರೆಸ್‌ನಲ್ಲಿಯೂ ಹೇಳಿದ್ದಾರೆ ಮತ್ತೆ ಈ ಸದನದಲ್ಲಿಯೂ ಹೇಳಿದ್ದಾರೆ.

ಈಗ ಆ ಕೇಸ್ ಎಸ್ಟಾಬ್ಲಿಷ್ ಆಗಿದೆ. ಇವೊತ್ತು ಸರ್‌ಕಮ್‌ಸ್ಟೆನ್ಸಿಯಲ್ ಎವಿಡೆನ್ಸ್ ಪ್ರಕಾರ...

ಅಧ್ಯಕ್ಷರು.—ನಾನು ನಿಮ್ಮನ್ನು ಕರೆದ ಮೇಲೆ ಶ್ರೀ ಹೆಗಡೆಯವರು ನನ್ನ ಗಮನವನ್ನು ಸೆಳೆದಿದ್ದಾರೆ. ನೀವು ಮುಗಿಸಿ ನಂತರ ಅವರು ಮಾತನಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾವಾಗ ಸರಕಮ್‌ಸ್ಟೆನ್ಸಿಯಲ್ ಎವಿಡೆನ್ಸ್ ಮೇಲೆ ಇದು ಪ್ರೂವ್ ಮೇಲೆ ಪದೇ ಪದೇ ನಾನು ಮಾಡಿಲ್ಲ ನನಗೆ ಗೊತ್ತಿಲ್ಲ. ಫೈಲ್ ನೋಡಿಲ್ಲ ಎನ್ನುವುದು ಸರಿಯಲ್ಲ. ಈಗ ಒಂದು ಸಾರಿ ಎಲ್ಲಾ ರೆಕಾರ್ಡ್‌ಗಳು ಮತ್ತು ಇರತಕ್ಕ ಲೆಟರ್ಸ್ ಏನು ಇದೆ ಮತ್ತು ಅವರ ಅನುಭವದ ಆಧಾರದ ಮೇಲೆ ಅವರೂ ಹೇಳಿದ್ದಾರೆ, ಇದೇ ಪದ್ಧತಿಯನ್ನು ಅವರೂ ಕೂಡ ಅನುಸರಿಸುತ್ತಾ ಇದ್ದರು ಎಂದು ಸ್ಪಷ್ಟವಾಗಿ ಇವೊತ್ತಿನ ದಿವಸ ಗೊತ್ತಾಗಿದೆ. ಮತ್ತೆ ಇದಕ್ಕೆ ಪುಷ್ಟೀಕರಿಸುತ್ತಾ ಇನ್ನೊಂದು ಮಾತು ಏನೆಂದರೆ, ಶ್ರೀಮಾನ್ ಬೊಮ್ಮಾಯಿಯವರು ಕೂಡ ಆ ಫೈಲ್ ನಾನು ನೋಡಿದ್ದೇನೆ. ಕೆಲವು ಲೂಸ್ ಶೀಟ್ಸ್ ಇತ್ತು ಎಂದು. ಇದರ ಅರ್ಥ ಏನು ಅಂದರೆ ಪ್ರತಿಯೊಂದು ಫೈಲ್, ಇಂಟೆಲಿಜೆನ್ಸ್ ಫೈಲ್ ಅವರಿಗೆ ಹೋಗುತ್ತಿತ್ತು ಅಥವಾ ತೋರಿಸುತ್ತಿದ್ದರು ಎನ್ನುವ ಮಾತು ಸ್ಪಷ್ಟವಾಗಿ ಎಸ್ಟಾಬ್ಲಿಷ್ ಆಗುತ್ತದೆ. ಅದಕ್ಕಾಗಿ ನಾವು ಚರ್ಚೆಗೆ ತಂದಿದ್ದು, ಇವೊತ್ತು ಒಂದು ರೂಪಕ್ಕೆ ಬಂದಂತೆ ಆಗಿದೆ. ಇವೊತ್ತು ನಾವು ಏನು ಛಾರ್ಜಸ್ ಮಾಡಿದ್ದೇವೆ. ಅದು ಎಸ್ಟಾಬ್ಲಿಷ್ ಆಗಿದೆ. ಒಂದು ವೇಳೆ ತಾವು ಹೇಳಿದ್ದನ್ನು ಅವರು ಒಪ್ಪುವುದಿಲ್ಲ ಎಂದರೆ. ಈಗ ಅವರು ಜುಡಿಷಿಯಲ್ ಎನ್‌ಕ್ವೈರಿಗೆ ಅವರು ಕೇಳುತ್ತಿದ್ದಾರೆ. ನಾನು ಜುಡಿಷಿಯಲ್ ಎನ್‌ಕ್ವೈರಿ, ಕೇಳುವುದಿಲ್ಲ ಯಾಕೆಂದರೆ ಇವೊತ್ತು ಎಲ್ಲಾ ಓರಲ್ ಇನ್‌ಸ್ಟ್ರಕ್ಷನ್ ಮೇಲೆ ನಡೆದಾಗ ಇದರಲ್ಲಿ ರೆಕಾರ್ಡ್ಸ್

ಎಲ್ಲಿ ಇರುತ್ತದೆ ಪ್ರತಿ ಒಂದೂ ಇವರು ಇನ್ಸ್ಟ್ರಕ್ಷನ್ ಕೊಡುವುದು, ಅವರು ಪೇಪರ್‌ಗಳನ್ನು ಹರಿದು ಹಾಕುವುದು ಅಥವಾ ಬರೆದುಕೊಂಡು ಹೋಗಿ ಚೀಟಿಗಳನ್ನು ತೆಗೆದು ಹಾಕುವುದು. ಈ ಪದ್ಧತಿ ನಡೆದುಕೊಂಡು ಬಂದಿದೆ ಎಂದು ಸ್ಪಷ್ಟವಾಗಿ ಹೇಳಿದ ಮೇಲೆ ರೆಕಾರ್ಡ್ಸ್ ಎಲ್ಲಿ ಸಿಗುತ್ತದೆ ಮಾತ್ರ ಅದರಲ್ಲಿಯೂ ಕೂಡ 51 ರಾಜಕೀಯ ಮುಖಂಡರಿದ್ದರು, ಅವರೆಲ್ಲರೂ ಕೂಡ ರಘುರಾಮ್ ಅವರಿಗೆ ಬೇಕಾಗದೆ ಇರತಕ್ಕ ಜನ ಇರಲಿಲ್ಲ: ಅಥವಾ ಅವರ ಮೇಲೆ ದ್ವೇಷ ಸಾಧಿಸತಕ್ಕವರು ಇರಲಿಲ್ಲ, ಅದಕ್ಕಾಗಿ ಅಧ್ಯಕ್ಷರೇ, ದಯವಿಟ್ಟು ನಮ್ಮ ವಾದ ಏನು ಇದೆ ಆ ವಾದವನ್ನು ಮುಖ್ಯಮಂತ್ರಿಗಳು ಕೂಡ ಪುಷ್ಟೀಕರಿಸಿದ್ದಾರೆ. ಸರ್‌ಕಮ್‌ಸ್ಟೆನ್ಸಿಯಲ್ ಎವಿಡೆನ್ಸ್ ಪ್ರಕಾರ ಪ್ರೂವ್ ಆಗಿದೆ. ಅವರೇ ಹೇಳಿದ್ದಾರೆ ಪ್ರೂವ್ ಮಾಡಿದರೆ ರಾಜಕೀಯವಾಗಿ ನಿವೃತ್ತಿ ಆಗುತ್ತೇನೆ ಎಂದು. ಇದು ಎಸ್ಟಾಬ್ಲಿಷ್ ಆಗಿದೆ ದಯವಿಟ್ಟು ಅವರ ಹೇಳಿಕೆಯ ಪ್ರಕಾರ ಅವರು ನಡೆದುಕೊಂಡರೆ ಸಾಕು ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನನ್ನ ಹೆಸರನ್ನು ಕುರಿತು ಮಾತನಾಡಿದ್ದಾರೆ,

ಅಧ್ಯಕ್ಷರು.—ನಿಮ್ಮ ಹೆಸರನ್ನು ಪ್ರಾಸ್ತಾವಿಕವಾಗಿ ಹೇಳಿದ್ದಾರೆ...

ಶ್ರೀ ಸಿ. ಬೈರೇಗೌಡ.—ಅದಕ್ಕೆ ನಾನು ನಿನ್ನೆ ಉತ್ತರ ಕೊಟ್ಟಿದ್ದೇನೆ...

ಅಧ್ಯಕ್ಷರು.—ಉತ್ತರ ಕೊಟ್ಟಿದ್ದೀರಲ್ಲ...

ಶ್ರೀ ಸಿ. ಬೈರೇಗೌಡ.—ಇವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಕೆಲವು ದಾಖಲೆಗಳ ಸಹಿತ ತಮ್ಮ ವಾದವನ್ನು ಮಂಡಿಸಿದ್ದಾರೆ. ನಿನ್ನೆ ಅದು ನನ್ನ ಎದುರಿಗೆ ಇರಲಿಲ್ಲ. ಈ ದಾಖಲೆ ಪತ್ರಗಳು ನಮ್ಮ ಎದುರಿಗೆ ಇದ್ದಿದ್ದರೆ ನಾನು ಆ ರೀತಿ ಆರೋಪ ಮಾಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದುದ್ದನ್ನು ಇರುವ ಹಾಗೆ, ನೇರವಾಗಿ ಹೇಳಿದ್ದಾರೆ. ನಾನು ಅವರನ್ನು ಅಭಿನಂದಿಸಬೇಕಾಗಿದೆ. ಅಭಿನಂದಿಸುವುದು ನನ್ನ ಕರ್ತವ್ಯ ಆಗಿದೆ,

ಅಧ್ಯಕ್ಷರು.—ನಿಮ್ಮ ಶಂಕೆ ಪೂರ್ಣವಾಗಿ ನಿವಾರಣೆ ಆಯಿತು, ನಿನ್ನೆ ಏನು ಶಂಕೆ ಇತ್ತು, ಇವೊತ್ತು ಅದು ಪೂರ್ಣವಾಗಿ ನಿವಾರಣೆ ಆಯಿತು.

ಶ್ರೀ ಸಿ. ಬೈರೇಗೌಡ.—ಮತ್ತೆ ಈಗ ಇದನ್ನು ಜುಡಿಷಿಯಲ್ ಎನ್‌ಕ್ವೈರಿ ಅವರು ಬೇಕು ಎಂದು ಕೇಳಿದರೆ ನಾನು ಅದಕ್ಕೆ ತಯಾರು ಇದ್ದೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳಿಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಅಥವಾ ಸಂಬಂಧಪಟ್ಟ ಮಾನ್ಯ ರಾಮಕೃಷ್ಣ ಹೆಗಡೆಯವರಿಗೂ ಸಂಬಂಧಪಟ್ಟ ವಿಚಾರ ಅಲ್ಲ. ನಾನು ಮೊದಲಿನಿಂದ ಕೂಡ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಬ್ಬ ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯ ಹರಣ ಆಗಿರತಕ್ಕ ವಿಚಾರ ಇದು. ಟ್ಯಾಪಿಂಗ್ ಆಗಿಲ್ಲ ಎಂದು ಯಾರೂ ಹೇಳುವ ಹಾಗೆ ಇಲ್ಲ. ಇದಕ್ಕೆ ಕಾರಣಕರ್ತರು ಯಾರು ಎಂದು ಕೂಡ ಹೇಳಿದ್ದಾರೆ. ಆದ್ದರಿಂದ ಇದು ಬಹಳ ಗಹನವಾದ ಪ್ರಶ್ನೆ ಆಗಿರುವುದರಿಂದ ಇದಕ್ಕೆ ಅವರು ಹೇಳಿದ ಹಾಗೆ ನ್ಯಾಯಾಂಗ ವಿಚಾರಣೆಯನ್ನು ಮಾಡುವುದಕ್ಕೆ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಅವರ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

† SRI K. LAKKAPPA.—Mr. Speaker, Sir, this discussion has brought a new chapter in the history of Karnataka Legislature. After hearing the statement of the Hon'ble Chief Minister with all vehemence and facts avaiable he has placed it before the House without any way of doubt and he has produced volumnious circumstantial evidence proved beyond doubt that former Chief Minister Sri Ramakrishna Hegde is responsible for tapping of the telephone. I don't want to go into the details as to what he has stated and all that. In this debate especially the Hon'ble Chief Minister has made it very clear about the documents available and on the basis of these document who are the persons who have been handling the situation in consultation with then Chief Minister etc. Out of this discussion we have come to the conclusion and more so

we have debated this for 2 days and it should not a futile debate. One pertinent question the Hon'ble Chief Minister said......

MR. SPEAKER.— You wanted a clarification Mr. Lakkappa.

SRI K. LAKKAPPA.—Sir, he put a very pertinent question to the Hon. Member and the former Chief Minister of Karnataka Mr. Hegde, it is for you to decide a judicial enquiry or any sort of enquiry. Therefore, it is duty bound even from other side, because the entire House has influenced out of this debate and have relached conclusive proof. Therefore, the I wouldlike to know whether the hon. Member of this House who is responsible for this phone tapping would agree for the appointment of ajudicial enquiry or the House in its wisdom can take the entire evidence and also additional points made out here to come to the conclusion since the guilt is proved. Therefore, you must take a decision and see that he must create a history in the Legislature and the propriety, dignity and decency of the House have to be restored.

SRI A. K. ANANTHAKRISHNA.—Sir, I would like to put a direct poser to Mr. Hegde. My only contention here is that we saw enough. Enough is enough-nothing more answer. Facts have been cleared. Various situations have been established by our Chief Minister. What I am suggesting is, let us not continue to go on hair-splitting any more. It does not pay. Atleast at this late stage let the hon. Member and former Chief Minister of Karnataka admit either his failure to have known what was going on under his nose or admit that he has been responsible for this and thereafter concede his failure to establish what he would not be able to do that.

ಶ್ರೀ ಎಂ. ನಾರಾಯಣಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ, ಈ ಟೆಲಿಫೋನ್ ಹಗರಣದ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ನಿಯಮ 69ರ ಮೇರೆಗೆ ತಮಗೆ ನೋಟೀಸ್ ಕಳಿಸಿದರು. ನಾವು ಹೊಸದಾಗಿ ಬಂದಿರತಕ್ಕ ಶಾಸಕರು ಏನು ಅಂದುಕೊಂಡೆವು ಅಂದರೆ, ಇದರಿಂದ ಎಲ್ಲ ಸದಸ್ಯರ ಏನು ಮೂಲಭೂತ ಹಕ್ಕು ಇತ್ತೋ ಅದು ಹಗರಣವಾಗಿದೆ, ಅದನ್ನು ಚರ್ಚೆ ಮಾಡಬಹುದು. ಇದರಲ್ಲಿ ಮಾನ್ಯ ಹೆಗಡೆಯವರು ತಪ್ಪಿತಸ್ಥರೇ ಇಲ್ಲವೇ ಎಂದು ಕಂಡುಹಿಡಿಯುವುದು. ಎರಡನೆಯ ದಾಗಿ, ಈ ರೀತಿ ಟೆಲಿಫೋನ್ ಹಗರಣ ಆಗದ ರೀತಿಯಲ್ಲಿ ಯಾವ ರೀತಿ ಚರ್ಚೆ ಮಾಡುವುದು, ಇದಕ್ಕೆ ಒಂದು ಒಳ್ಳೆಯ ಬುನಾದಿ ಯಾವ ರೀತಿ ಹಾಕಬಹುದು ಎಂಬ ಬಗ್ಗೆ ಚರ್ಚೆಯಾಗುತ್ತದೆ ಎಂದು ನಾನು ಅಂದುಕೊಂಡಿದ್ದೆ. ನನ್ನ ದೃಷ್ಟಿಯಲ್ಲಿ ಬರೀ ಒಂದು ಮೂಲಭೂತ ಪ್ರಶ್ನೆ ಬಿಟ್ಟು...

ಅಧ್ಯಕ್ಷರು.—ನಿಮಗೆ ಏನಾದರೂ ಸ್ಪಷ್ಟೀಕರಣ ಬೇಕೇ ?

ಶ್ರೀ ಎ. ಟಿ. ರಾಮಸ್ವಾಮಿ.—ಹೆಗಡೆಯವರ ಬಗ್ಗೆ ಒಂದೇ ಒಂದು ಅಂಶ ಹೇಳಿದರೆ ಹೊರತಾಗಿ ಈ ಮೂಲಭೂತವಾದ ಹಗರಣವನ್ನು ಯಾವರೀತಿ ಅವಾಯ್ಡ್ ಮಾಡಬಹುದು ಎನ್ನುವ ದೃಷ್ಟಿಯಿಂದ ಮಾನ್ಯ ಹಿರಿಯ ಸದಸ್ಯರು ಯೋಚನೆ ಮಾಡಿಲ್ಲ ಎಂದು ನಾನು ವಿಷಾದವನ್ನು ವ್ಯಕ್ತ ಮಾಡುತ್ತಾ ಇದ್ದೇನೆ.

ಶ್ರೀ ಪಾಟೀಲ್ ನಾಗರಾಜ್,—ಮಾನ್ಯ ಅಧ್ಯಕ್ಷರೇ ಈ ಚರ್ಚೆಯಲ್ಲಿ ನಾನು ಭಾಗವಹಿಸಿಲ್ಲ ನಿನ್ನೆ ನಾನು ಈ ಸದನದಲ್ಲಿ ಎಲ್ಲ ಕಡತಗಳನ್ನು ಇಡಬೇಕು ಎಂದು ಹೇಳಿದ್ದೆ, ಆದರೂ ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಚಾರಗಳ ಬಗ್ಗೆ ಈ ಸಭೆಯಲ್ಲಿ ಬೆಳಕು ಚೆಲ್ಲಿದ್ದಾರೆ. ಮತ್ತು ಮೊದಲನೆ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಒಂದು ವಿಚಾರದಲ್ಲಿ ರಾಜೀನಾಮೆ ನೀಡಿದರು. ಅದು ಬಹಳ ಅತ್ಯಂತ ಮಹತ್ತರವಾದಂಥ ವಿಚಾರ ಅಷ್ಟೇ. ಸಾಕಾಗಿತ್ತು ರಾಜೀನಾಮೆ ನೀಡಿದಾಗಲೆ ಅವರ ವ್ಯಾಖ್ಯಾನ ಇತ್ತು. ಮುಂದಕ್ಕೆ ಬಹುಶಃ ಬಹಳ ನೋವಿನಿಂದ ಅಥವಾ ಯಾವುದೊ

ಮಾತನಾಡಿರಬಹುದು. ಆದರೆ ಒಂದೇ ಒಂದು ಪ್ರಶ್ನೆ ನನಗನಿಸುತ್ತದೆ. ಅಧಿಕಾರಿಗಳು ಸರ್ಕಾರಗಳನ್ನು ಉರುಳಿಸುವುದಕ್ಕೆ ಕೇಂದ್ರ ಸರ್ಕಾರದ್ದು ಏನಾದರೂ ಪಿತೂರಿಗಳು ಇದರಲ್ಲಿ ನಡೆದಿದೆಯೋ ಎನ್ನುವ ಬಹಳ ದೊಡ್ಡ ಮಹತ್ತರವಾದಂಥ ಪ್ರಶ್ನೆ ಬರುತ್ತದೆ. ನಮ್ಮ ಇಂಟೆಲಿಜೆನ್ಸ್‌ನವರು ಬಹಳ ಮಡಿವಂತಿಕೆಯಿಂದ ಹೇಳಿದಷ್ಟಕ್ಕೇ ನಡೆದುಕೊಳ್ಳುತ್ತಾರೆ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಾವು ಇದನ್ನು ಬಹಳ ತೀವ್ರತರವಾಗಿ ಯೋಚನೆ ಮಾಡಬೇಕಾಗಿದೆ ಒಂದೊಂದು ಸರ್ಕಾರವನ್ನು ಉರುಳಿಸಬೇಕಾದಂಥ ಪ್ರಸಂಗವೂ ಬರುತ್ತದೆ. ಆದ್ದರಿಂದ ಪೋಲೀಸ್ ಅಧಿಕಾರಿಯನ್ನು ಕೇಂದ್ರ ಸರ್ಕಾರ ಉಪಯೋಗಿಸಿಕೊಂಡು ಇವರ ಸರ್ಕಾರ ಉರುಳಿಸುವುದಕ್ಕೆ ವ್ಯವಸ್ಥೆ ನಡೆದಿತ್ತೇ ಎನ್ನುವಂಥ ಪ್ರಶ್ನೆ ಬರುತ್ತದೆ.

ಅಧ್ಯಕ್ಷರು.—ಲಾಸ್ಟ್ ಕ್ಲಾರಿಫಿಕೇಷನ್. ಶ್ರೀ ನಂಜುಂಡ ಸ್ವಾಮಿ ಅವರದ್ದು

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೆ ಎರಡು ದಿವಸದಿಂದ ಚರ್ಚೆಯಾಗಿದೆ ಎರಡು ದಿವಸದಿಂದ ಚರ್ಚೆ ಆದರೂ ತಾರ್ಕಿಕ ಕೊನೆ ಮುಟ್ಟಿಲ್ಲ We heve to come to a logical end ನಾವು ಏತಕ್ಕೋಸ್ಕರ ಚರ್ಚೆ ಮಾಡಿದೆವು. ಬಹಳ ದೊಡ್ಡ ಅಪರಾಧ ನಡೆದಿದೆ, ಅಪರಾಧಿಗಳು ಸಿಕ್ಕಿಲ್ಲ. ಆ ದೃಷ್ಟಿಯಿಂದ ಅಪರಾಧಿಗಳನ್ನು ಪತ್ತೆ ಮಾಡಬೇಕೆಂದು ಆಯಿತು. ಮುಖ್ಯ ಮಂತ್ರಿಗಳು ಏನೇನು ದಾಖಲೆಗಳನ್ನು ಮಂಡಿಸಿದ್ದಾರೆ. ನಾನು ಒಬ್ಬ ವಕೀಲನಾಗಿ ನನ್ನ ಅಭಿಪ್ರಾಯ ಹೇಳಬಹುದು. Though the Chief Minister has b en very successful in proving guilt on the Person beyond all reasonable doubt............. ಆದರೆ ನನಗನ್ನಿಸುವುದು ಇದು ಸ್ವಲ್ಪ ಕ್ರಮಬದ್ಧವಾಗಿ ಆಗಬೇಕು. ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಚರ್ಚೆ ಪ್ರಾರಂಭವಾದಾಗಿನಿಂದ ನ್ಯಾಯಾಂಗ ತನಿಖೆ ಮಾಡಿ ಎರದು ಹೇಳುತ್ತಿದ್ದರು. ನನ್ನ ವಿನಂತಿ ಏನೆಂದರೆ. ಒಬ್ಬ ಕರ್ನಾಟಕದ ಪ್ರಜೆಯಾಗಿ ಕರ್ನಾಟಕದ ಪ್ರಜೆಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಣೆ ಮಾಡಬೇಕೆನ್ನುವ ಸದುದ್ದೇಶದಿಂದ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಆ ಕೆಲಸ ಮಾಡಬೇಕು. ಏಕೆಂದರೆ ನಾನು ಆಲೋಚನೆ ಮಾಡುತ್ತಿದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅದನ್ನು ತಾವು ಅಟೋನ್‌ಮೆಂಟ್ ಅನ್ನಬಹುದು ಏನು ಬೇಕಾದರೂ ಅನ್ನಬಹುದು. He has Punished hims lf once for Whatever he did once..................... ನಮ್ಮ ಕಾನೂನಿನಲ್ಲಿ ಪ್ರಾಹಿಬಿಷನ್ ಜಾರಿಯಲ್ಲಿ ಇದೆ. A person cannot be punished for the same offence, ಅದು ಬೇರೆ ವಿಚಾರ. ಆದರೆ, ಇಲ್ಲಿ ಅವರನ್ನು ನಾನು ರಾಜೀನಾಮೆ ಕೇಳುತ್ತಿಲ್ಲ. ಏಕೆಂದರೆ, He has punished himself once and need not punished himself for the same offence but the fact remains ಶ್ರೀ ರಾಮಕೃಷ್ಣ ಹೆಗಡೆಯವರು ಆ ಸ್ಥಾನದಲ್ಲಿದ್ದರೂ ಈ ಮಾತು ಹೇಳುತ್ತಿದ್ದೆ ಇನ್ನು ಯಾರೇ ಆ ಸ್ಥಾನದಲ್ಲಿದ್ದರೂ ಈ ಮಾತು ಹೇಳುತ್ತಿದ್ದೆ. ಏಕೆಂದರೆ ಸಾರ್ವಜನಿಕ ಜೀವನದಲ್ಲಿ ಇಂತಹ ಗುಣಗಳು ಇರತಕ್ಕ ವ್ಯಕ್ತಿಗಳು ಮುಂದುವರಿಯಬೇಕೇ ಮುಂದುವರಿಯಬಾರದೇ ಎನ್ನುವುದು ಬಹಳ ಮುಖ್ಯ. ಏಕೆಂದರೆ, ಈ ಕೆಲಸ ಮಾಡಿದವರು ಇನ್ನೂ ಹೆಚ್ಚಿನ ಅಧಿಕಾರ ಸಿಕ್ಕಿದಾಗ ಇನ್ನೂ ಹೆಚ್ಚಿನ ಅಪಾಯ ಈ ದೇಶದ ಜನರಿಗೆ ಆಗುತ್ತದೆ. ಈ ಉದ್ದೇಶದಿಂದ ನಾನು ಮುಖ್ಯ ಮಂತ್ರಿಗಳಲ್ಲಿ ಕೇಳುವುದು ತಾವು ದಯವಿಟ್ಟು ನ್ಯಾಯಾಂಗ ತನಿಖೆಯನ್ನು ಮಾಡಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಕೇಳಿದ್ದು. ತಮಗೆ ಕೇಳಿಸಿತೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಅಂಕಿಸಂಖ್ಯೆಗಳ ಬಗ್ಗೆ ನನ್ನ ತಕರಾರು ಇಲ್ಲ, ನೀವು ಆದರ್ಶವಾಗಿ ಹೇಳಿದಿರಿ ಕೇಂದ್ರ ಸರ್ಕಾರವೇ ಪೋಲೀಸ್ ಅಧಿಕಾರಿಗಳನ್ನು ಉಪಯೋಗಿಸಿಕೊಂಡು. ಇವರ ಸರ್ಕಾರ ಉರುಳಿಸುವುದಕ್ಕೆ ಪಿತೂರಿ ನಡೆಸಿದೆಯೋ ಏನು ಎನ್ನುವ ದೊಡ್ಡ ಗುಮಾನಿ ಬರುತ್ತೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಿನ್ನೆ ಚಂದ್ರೇಗೌಡರು ಮಾತನಾಡುವಾಗ ಮಹಾಭಾರತದ ಶಕುನಿ ಯಾರು ಎಂದು ಕೇಳಿದ್ದರು. ಶಕುನಿ ಇಲ್ಲೇ ಇದ್ದಾರೆ. ಇದನ್ನು ಹುಟ್ಟುಹಾಕುವುದಕ್ಕೆ,

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ನಾನು ಅರ್ಜುನನಾಗಿ ಈ ಮಾತನಾಡುತ್ತಿದ್ದೇನೆ. ನನ್ನ ಪಕ್ಕದಲ್ಲಿರತಕ್ಕವರು ಇವರೇ ಶಕುನಿ ಕೌರವರ ಕಡೆ ಸೇರಿ ಈಗ ಈ ಕಡೆ ಬಂದು ಕುಳಿತಿರುವ ಇವರೇ ಶಕುನಿ.

(ಗೊಂದಲ)

ಅಧ್ಯಕ್ಷರು .—ಈಗ ನನಗೆ ನೆನ್ನೆಯಿಂದ ಮಹಾಭಾರತದ ಕೆಲವು ಪಾತ್ರಗಳನ್ನು ನೀವು ಈ ಚರ್ಚೆಯಲ್ಲಿ ತರುತ್ತಿದ್ದೀರಿ. ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ನಾನು ಅರ್ಜುನ, ಅವರು ಶಕುನಿ ಎಂದು ಹೇಳಿದರು ಅವರು, ಇವರು ಶಕುನಿ ಎಂದು ಹೇಳುತ್ತಾರೆ, ಆದ್ದರಿಂದ ನಾನು ಸಭಾಧ್ಯಕ್ಷನಾಗಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಮಹಾಭಾರತದಲ್ಲಿ ಏನು ನಿಜವಾಗಿತ್ತು, ಶಕುನಿ ಮತ್ತು ಅರ್ಜುನ ಒಂದುಕಡೆ ಇರಲಿಲ್ಲ. ಆದ್ದರಿಂದ, ನಿಮ್ಮಿಬ್ಬರನ್ನೂ ಬೇರೆ ಬೇರೆ ಕಡೆ ಹಾಕುತ್ತೇನೆ.

(ನಗು)

ಶ್ರೀ ರಾಮಕೃಷ್ಣ ಹೆಗಡೆ .—ಮಾನ್ಯ ಅಧ್ಯಕ್ಷರೆ, ಎರಡು ದಿವಸ ಈ ಸದನದಲ್ಲಿ ಟೆಲಿಫೋನ್ ಟ್ಯಾಪಿಂಗ್ ವಿಚಾರದಲ್ಲಿ ಏನು ಚರ್ಚೆ ನಡೆಯಿತು ? ಅದರ ಉದ್ದೇಶ ಕೈಗೂಡಿತೆ ಎಂದು ನಾನು ಹೇಳಲಾರೆ, ಉದ್ದೇಶ ನನ್ನ ದೃಷ್ಟಿಯಲ್ಲಿ ಬಹುಶಃ ಮಾನ್ಯ ಅನೇಕ ಸದಸ್ಯರ ದೃಷ್ಟಿಯಲ್ಲೂ ಅದೇ ಇರಬೇಕೆಂದು ನನ್ನ ನಂಬಿಕೆ. ಸತ್ಯವನ್ನು ಹೊರಗಡೆ ತೆಗೆಯಬೇಕು ಎನ್ನತಕ್ಕದ್ದು. ಅದು ಅಲ್ಲದೇ ಇದ್ದರೆ ನಿಮ್ಮ ಉದ್ದೇಶ ಬೇರೆ ಇದ್ದರೆ ಆ ಮಾತು ಬೇರೆ. ನನ್ನ ದೃಷ್ಟಿಯಲ್ಲಿ ನೀವೇ ಪ್ರಾಸಿಕ್ಯೂಟರ್, ನೀವೇ ಜಡ್ಜ್ ಅವರೇ ಲಾಯರ್, ಆದಕ್ಕಾಗಿ ತಮ್ಮ ಜಡ್ಜ್‌ಮೆಂಟನ್ನು ಕೊಟ್ಟುಬಿಟ್ಟಿದ್ದಾರೆ ; ಶ್ರೀಮಾನ್ ಖರ್ಗೆಯವರು, ಇವರು ಹೇಳುವುದಕ್ಕೆ ಮೊದಲೇ ಕೊಟ್ಟಿದ್ದಾರೆ. ಆ ಮಾತು ಬೇರೆ. ಈಗ ಸತ್ಯ ಎಲ್ಲಿದೆ ನಾನು ಅದರ ಬಗ್ಗೆ ಪುನಃ ಹೇಳಲಿಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು .—ಇದು ಬಹಳ ಗಂಭೀರವಾದಂಥ ವಿಚಾರ, ಅವರು ಈ ಸದನದಲ್ಲಿ ಏನು ಹೇಳುತ್ತಾರೆ ಅದನ್ನು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ .—ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಚಾತುರತೆಯಿಂದ...

ಶ್ರೀ ವೀರೇಂದ್ರ ಪಾಟೀಲ್ .—ಚಾತುರತೆ ಯಾವಾಗ ಆಗುತ್ತದೆ ಅಂದರೆ, ಜಾಸ್ತಿ ಟ್ವಿಸ್ಟ್ ಮಾಡಿದರೆ ಚಾತುರತೆ ಆಗುತ್ತದೆ. I have not twisted any facts.

ಶ್ರೀ ರಾಮಕೃಷ್ಣ ಹೆಗಡೆ .—ಚಾತುರತೆ ಅಂದರೆ, ಜಾಣತನ ಬಹಳ ಬುದ್ಧಿವಂತಿಕೆಯಿಂದ ತಮ್ಮ ಕೇಸ್ ಇಟ್ಟಿದ್ದೀರಿ. ಈಗ ಕಡತಗಳನ್ನು ಸಭೆಯ ಮುಂದೆ ಇಡಿ ಎಂದು ಹೇಳಿದೆವು, ಅವರು ಇದರಲ್ಲಿ ಕಡತ ಇಲ್ಲ ಎಂದು ಹೇಳಿದರು. ಇದರಲ್ಲಿ ಫೈಲ್ ಸಿಸ್ಟಮ್ ಇಲ್ಲ ; ಒಂದು ಫೈಲ್ ಏನು ಬಂದಿತ್ತು, ಅದರಲ್ಲಿ ಚೀಫ್ ಸೆಕ್ರೆಟರಿ ಆರ್ಡರ್ ಮಾಡಿರತಕ್ಕಂಥಾದ್ದು ಗ್ರಹಚಾರಲ್ಲಿ. ಅದರ ನಂತರ ಮಾಡಿರ ತಕ್ಕಂತದ್ದು ಸಿಕ್ಕಿದೆ. ಬಹುಶಃ ಗ್ರಹಚಾರಲ್ಲಿ ಅಂದು ಸಿಕ್ಕುತ್ತಿದೆಯೋ ಏನೋ ಗೊತ್ತಿಲ್ಲ. ಮಾನ್ಯ ಬೊಮ್ಮಾಯಿಯವರು ಅದನ್ನು ನಾನು ನೋಡಿದ್ದೇನೆಂದು ಹೇಳಿದರು, ಅದು ಯಾವುದೂ ನಾನು ನೋಡಲಿಲ್ಲ. ಆಮೇಲೆ ಇಂಟೆಲಿಜೆನ್ಸ್ ಸಿಸ್ಟಮ್ ಕೆಲಸಮಾಡತಕ್ಕಂಥಾದ್ದು ಬೇರೆ. ಅದರಲ್ಲಿ ಇಂಟೆಲಿಜೆನ್ಸ್ ಆಫೀಸರ್‌ಗೂ ಮತ್ತು ಬೇರೆಯವರಿಗೂ ಯಾವುದೇ ತರಹದ ಸಂಪರ್ಕ ಇರುವುದಿಲ್ಲ. ಇರತಕ್ಕಂಥ ಸಂಪರ್ಕ, ಸಂಬಂಧ ಕೇವಲ ಸಂಬಂಧಪಟ್ಟಂಥ ಇಂಟೆಲಿಜೆನ್ಸ್ ಆಫೀಸರ್ ಮತ್ತು ಮುಖ್ಯ ಮಂತ್ರಿಗಳ ನಡುವೆ, ಅವರಿಬ್ಬರ ಮಧ್ಯದಲ್ಲಿ ಏನಾಗುತ್ತದೆಂದು ಯಾರಿಗೂ ಗೊತ್ತಿಲ್ಲ. ಇದು ಅವರು ಹೊಸ ವಿಚಾರ ಏನೂ ಹೇಳಲಿಲ್ಲ. ಕೊನೆಗೆ ಇದೆಲ್ಲವನ್ನೂ ಅವರು ಬೈ ಎಲಿಮಿನೇಷನ್ ತೆಗೆದು ತೆಗೆದು ಕೊನೆಗೆ ಅವರು ಏನು ಹೇಳಿದರು ಅಂದರೆ ಸತ್ಯ. ಆ ಇಂಟೆಲಿಜೆನ್ಸ್ ಆಫೀಸರ್‌ಗೂ ಮತ್ತು ನನಗೆ ಗೊತ್ತಿದೆ. ಬೇರೆ ಯಾರಿಗೂ ಗೊತ್ತಿಲ್ಲ ಎಂದು ಹೇಳಿದರು. ಆಮೇಲೆ ಸರ್‌ಕಮ್‌ಸ್ಟೆನ್ಷಿಯಲ್ ಎವಿಡೆನ್ಸ್ ಬಗ್ಗೆ ಹೇಳಿದರು, ಅವರು ಲಾಯರ್ ಇದ್ದಾರೆ, circumstantial evidence is only a corroborating evidence. ಸರ್‌ಕಮ್‌ಸ್ಟೆನ್ಷಿಯಲ್ ಎವಿಡೆನ್ಸ್ ಮೇಲೆ ನೀವು ಯಾರಿಗೂ ಪನಿಷ್‌ಮೆಂಟ್ ಕೊಡುವುದಿಲ್ಲ. ಒಂದು ತೀರ್ಮಾನ ಕೊಡುವುದಿಲ್ಲ. ಜಡ್ಜ್‌ಮೆಂಟ್ ಅದರ ಮೇಲೆ ಬರೆಯುವುದಕ್ಕೆ ಆಗುವುದಿಲ್ಲ.

MR. SPEAKER .—What he means is 'ಸರ್ಕಾರ' not any court of law.

ಶ್ರೀ ರಾಮಕೃಷ್ಣ ಹೆಗಡೆ .—ನಾವು ನಡೆಸ ತಕ್ಕಂಥಾದ್ದು ಸರ್ಕಾರ, ಈ ಸರ್ಕಾರ ಕೆಲವೊಂದು ರೂಲ್ಸ್ ಅಂಡ್ ರೆಗ್ಯುಲೇಷನ್ ಆಧಾರದ ಮೇಲೆ ನಡೆಯುತ್ತದೆ. ಒಂದು ಪ್ರಶ್ನೆ ಅವರಿಗೆ ಕೇಳುತ್ತೇನೆ. ಇವರು ಮುಖ್ಯಮಂತ್ರಿಗಳು ಆದ ಮೇಲೆ ಮೊದಲು ಹೇಗೆ ಇದ್ದರು ಮತ್ತು ಈಗ ಮುಖ್ಯ ಮಂತ್ರಿಗಳು ಆದಮೇಲೆ ಇಂಟೆಲಿಜೆನ್ಸ್ ಆಫೀಸರ್ ಇವರ ಹತ್ತಿರ ಬಂದು, ಹಿಂದೆ ಯಾವ ಲಿಸ್ಟ್ ಇದೆ ಅದರಲ್ಲಿ ಏನು ಸೇರಿಸಬೇಕು ಅಥವಾ ಬೇಡವೊ ಎನ್ನತಕ್ಕದ್ದು ಯಾವಾಗ ಕೇಳಿದರು.

5-40 ಪಿ. ಎಂ.

ಈಗ ನಾನು ಹೇಳುತ್ತೇನೆ, ನಾನು ನನ್ನ ಅಂತಃಸಾಕ್ಷಿಯಾಗಿ ಹೇಳುತ್ತೇನೆ. ಆ ಇಂಟಲಿಜೆನ್ಸ್ ಆಫೀಸರ್‌ರವರು ನನ್ನ ಹತ್ತಿರ ಅನೇಕ ಸಲ ಬಂದಿದ್ದರು. ಪ್ರತಿ ದಿವಸ ಬರುತ್ತಿದ್ದರು. ದಿವಸಕ್ಕೆ ಎರಡು ಸಲ ಬರುತ್ತಿರಲಿಲ್ಲ. ಒಮ್ಮೊಮ್ಮೆ ಎರಡು ದಿವಸಕ್ಕೊಮ್ಮೆ ಬರುತ್ತಿದ್ದರು. ಅವರು ಬಂದಾಗ ಅವರು ಸೀಲ್ ಮಾಡಿದಂತಹ ಒಂದು ವರದಿಯನ್ನು ಕೊಡುತ್ತಿದ್ದರು, ನಾನು ಇದ್ದರೆ ನನ್ನ ಕೈಯಲ್ಲಿ, ನಾನು ಇಲ್ಲದಿದ್ದರೆ ನಮ್ಮ ಕಾರ್ಯದರ್ಶಿಗಳ ಕೈಯಲ್ಲಿ. ಅದನ್ನು ಬೇರೆಯವರು ಒಡೆಯುವುದಿಲ್ಲ. ಆ ಒಂದು ವರದಿಯಲ್ಲಿ ಒಂದು ನರೇಟೀವ್ ರೂಪದಲ್ಲಿ ಇಂಥಾದ್ದರಲ್ಲಿ ಈ ತರಹ ಆಯಿತು, ಇಂತಹ ಕಡೆ ಮೀಟಿಂಗ್ ಆಯಿತು. ಆ ಮೀಟಿಂಗ್‌ನಲ್ಲಿ ಇಂತಹವರು ಮಾತನಾಡಿದರು, ಇಂತಹವರು ಇಂತಹವರಿಗೆ ಹೀಗೆ ಹೇಳಿದರು ಈ ತರಹ ನರೇಟೀವ್ ರೂಪದಲ್ಲಿ ಯಾವಾಗಲೂ ಇರುತ್ತಿತ್ತು. ಕನಿಷ್ಠ ಪಕ್ಷ ಇಂಟೆಲಿಜೆನ್ಸ್ ಇಲಾಖೆಯಲ್ಲಿ ಕೆಲವೊಂದಾದರೂ ರೆಕಾರ್ಡ್ ಇರಬೇಕೋ ಬೇಡವೋ ? ಅಂದರೆ ಮಾನ್ಯ ಮುಖ್ಯ ಮಂತ್ರಿಗಳ ಮಾತನ್ನು ನಾವು ನಂಬುವುದಾದರೆ ಈ ಒಂದು ಇಲಾಖೆ ಯಾವುದೇ ತರಹದ ಒಂದು ಆಧಾರದ ಮೇಲೆ ಇಲ್ಲ, ಬರೀ ಹಣದ ಮೇಲೆ ನಡೆಯುತ್ತದೆ ಎಂಬ ಇಂಪ್ರೆಷನ್ ಆಗುತ್ತದೆ. ಇದು ಸರಕಾರೀ ಪದ್ಧತಿ ಅಲ್ಲ. ಯಾವುದೇ ಒಂದು ಇನ್‌ಸ್ಟ್ರಕ್ಷನ್ ಅನ್ನು ಕೊಟ್ಟಿದ್ದರೆ ಪ್ರತಿ ದಿನ ಬರೆದು ಇಡಬೇಕೆಂದು ಅಲ್ಲ, ಯಾವುದೇ ಒಂದು ಕಾಲದಲ್ಲಿ ಒಂದು ಮುಖ್ಯವಾದಂತಹ ಇನ್‌ಸ್ಟ್ರಕ್ಷನ್ ಅನ್ನು ಕೊಟ್ಟಿದ್ದರೆ ಅದರ ಬಗ್ಗೆ ಡೈರಿಯಲ್ಲೋ ಅಥವಾ ಮತ್ತೊಂದರಲ್ಲೋ ಇಲ್ಲವೇ ಅವರ ದಿನಚರಿ ಬರೆಯುತ್ತಾರಲ್ಲಾ ಅದರಲ್ಲಿ ನಮೂದು ಇರಬೇಕಾಗುತ್ತದೆ ಹೇಳಿರಬೇಕಾಗುತ್ತದೆ. ಈಗ ಮಾನ್ಯ ಮಾನ್ಯಮಂತ್ರಿಗಳು ಈ ರೀತಿ ಜಾರಿಕೊಳ್ಳತಕ್ಕಂಥಾದ್ದು ಅಷ್ಟೊಂದು ನ್ಯಾಯವಲ್ಲವೆಂದು ಹೇಳುತ್ತೇನೆ. ನೀವು ಏನು ಮಾಡುತ್ತಿದ್ದೀರಿ ಎಂದರೆ ನೀವು ಅವರನ್ನು ನೋಡಿಕೊಳ್ಳಿ ನಿಮ್ಮಿಬ್ಬರಲ್ಲೇ ಎಲ್ಲೋ ಸತ್ಯ ಇರಬೇಕು, ನಿಮ್ಮಿಬ್ಬರಲ್ಲಿ ಯಾರು ಹೇಳುತ್ತಿದ್ದೀರಿ ಸತ್ಯವಂತರು ಯಾರು ಅಸತ್ಯವಂತರು ಎಂದು ಹೇಳುವುದನ್ನು ತೀರ್ಮಾನ ಮಾಡಿ ಎಂದು ನೀವು ಈಗ ನಮ್ಮ ಮುಂದೆ ಇರತಕ್ಕಂಥಾದ್ದು ಎರಡು ಪ್ರಶ್ನೆ ಒಂದು ಈಗ ಏನಾಗಿದೆ, ಅದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡೋಣ. ಎರಡನೆಯದು ಕನಿಷ್ಠ ಪಕ್ಷ ಇನ್ನು ಮುಂದೆ ಕರ್ನಾಟಕ ಸರಕಾರದಲ್ಲಿ ಈ ಒಂದು ಆಕ್ಟ್ ಇರುವವರೆಗೆ ಯಾವುದೇ ಒಬ್ಬ ನಾಗರೀಕ unless he is a known criminal ಅಥವಾ ಅವನ ಆ್ಯಂಟಿಸಿಡೆಂಟ್ಸ್ ಬಹಳ ಕೆಟ್ಟದ್ದು ಇದೆ, ಅಥವಾ ಅವರ ಸಂಬಂಧ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಜೊತೆಯಲ್ಲಿ ಇದೆ, ಅಂತಹವರನ್ನು ಬಿಟ್ಟು ಯಾವುದೇ ಒಬ್ಬ ನಾಗರೀಕನ ಟೆಲಿಫೋನ್ ಅನ್ನು ಟ್ಯಾಪ್ ಮಾಡುವುದಕ್ಕಿಂತ ಮೊದಲು ಡಿಸ್ಟ್ರಿಕ್ಟ್ ಜಡ್ಜ್‌ರವರ ಹತ್ತಿರ ಈ ಇಂಟೆಲಿಜೆನ್ಸ್ ಆಫೀಸರ್ ಹೋಗಿ ಅವರಿಂದ ಕ್ಲಿಯರೆನ್ಸ್ ತೆಗೆದುಕೊಂಡು ಬರಬೇಕೆಂಬ ಠರಾವ್ ಬಗ್ಗೆ ಇವತ್ತು ತೀರ್ಮಾನ ಮಾಡಿ. ಇಂಗ್ಲೆಂಡ್‌ನಲ್ಲಿ ಟೆಲಿಫೋನ್ ಟ್ಯಾಪಿಂಗ್ ಇದೆ. ಅಲ್ಲಿ ಕೂಡ ಟೆಲಿಫೋನ್ ಟ್ಯಾಪ್ ಆಗುತ್ತಿದೆ. ಅಲ್ಲಿ ಸಂಬಂಧಪಟ್ಟಂತಹ ಇಂಟೆಲಿಜೆನ್ಸ್ ಆಫೀಸರ ಜಡ್ಜ್‌ರವರ ಹತ್ತಿರ ಹೋಗಿ ಅವರ ಪರ್ಮಿಷನ್ ತೆಗೆದುಕೊಂಡು ಸೇರಿಸಬೇಕಾಗುತ್ತದೆ. ಆದುದರಿಂದ ಇಲ್ಲಿ ನಿನ್ನೆ ಮತ್ತು ಇಂದು ಚರ್ಚೆ ಆಯಿತು......... ಇಂಗ್ಲೆಂಡಿನಲ್ಲಿ ಏನು ಇದೆ ಅದನ್ನು ನಾವು ಇಲ್ಲಿ ತರಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗಿರತಕ್ಕಂತಹ ಸಾಕ್ಷಿಗಳ ಆಧಾರದ ಮೇಲೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ಸಾಧ್ಯವೋ ಅಷ್ಟೆಲ್ಲಾ ಸಾಕ್ಷಿ ಆಧಾರಗಳು ಏನು ಸಿಕ್ಕಿದೆ ಅದರ ಮೇಲೆ ನಿಮಗೆ ಶಿಕ್ಷೆ ಕೊಡುವುದಕ್ಕೆ ಕೆಲವು ರಾಷ್ಟ್ರಗಳಲ್ಲಿ ಬೇಕಾದಷ್ಟು ಕಾನೂನುಗಳು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಶಿಕ್ಷೆ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಇಂಗ್ಲೆಂಡನ್ನು ಸುಮ್ಮನೆ ಏತಕ್ಕೆ ಕೋಟ್ ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಎರಡು ದಿನದ ಚರ್ಚೆಯು ಒಂದು ನ್ಯಾಯ ಬದ್ಧವಾದ ಒಂದು ಪರಿಣಾಮ ಹೊರಡಲಿ. ಕನಿಷ್ಠ ಪಕ್ಷ ಕರ್ನಾಟಕ ರಾಜ್ಯದಲ್ಲಿ ಇನ್ನು ಮುಂದೆ ಟೆಲಿಫೋನ್ ಟ್ಯಾಪಿಂಗ್ ಮಾಡುವಾಗ ಕೇವಲ ಇಂಟೆಲಿಜೆನ್ಸ್ ಆಫೀಸರ್ ಮೇಲೆಯೇ ಬಿಡುವುದಿಲ್ಲ. ಅದನ್ನು ಒಬ್ಬ ಜ್ಯುಡಿಷಿಯಲ್ ಆಫೀಸರ್ ಅನ್ನು ಸರ್ಕಾರ ನೋಟಿಫೈ ಮಾಡಿ, ಸ್ಪೆಸಿಫೈ ಮಾಡಲಿ, ಅವರ ಪರ್ಮಿಷನನ್ನು ತೆಗೆದುಕೊಂಡು ಮಾಡಬೇಕೆಂದು ಒಂದು ಹೊಸ ನೀತಿಯನ್ನು ಹಾಕಿಕೊಳ್ಳಿ. ಇದು ಒಂದು,

(ಗೊಂದಲ

ಶ್ರೀ ಎಸ್. ಬಂಗಾರಪ್ಪ.—ಹೊಸ ಪ್ರೊಸೀಜರನ್ನು ಮಾಡುವುದು ಬೇಡ. ಈಗಿನದನ್ನು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಹೊಸ ಪ್ರೊಸೀಜರ್ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಕೊನೆಗೆ ಹೇಳಿದರು ಇಂಟೆಲಿಜನ್ಸ್ ಆಫೀಸರ್‌ರವರು ಯಾರಿದ್ದಾರೆ ಅವರ ಹೆಸರನ್ನು ಇಲ್ಲಿ ತೆಗೆದುಕೊಳ್ಳುವ ಅಗತ್ಯವಿಲ್ಲ, ಅದಕ್ಕೆ ಮೊದಲು ಬೇರೆ ಇಂಟೆಲಿಜೆನ್ಸ್ ಆಫೀಸರ್ ಇದ್ದರು, ಅವರು ಸತ್ಯವನ್ನು ಹೇಳುತ್ತಾರೋ, ನಾನು ಸತ್ಯವನ್ನು ಹೇಳುತ್ತೇನೋ ಎಂಬುದನ್ನು ಪತ್ತೆ ಹಚ್ಚಲು ನೀವು ಸೂಚನೆ ಮಾಡಿ ಎಂದು ಹೇಳಿದರು, ನಾನು ಸೂಚನೆ ಮಾಡುವುದಿಲ್ಲ, ನೀವೆ ಸೂಚನೆ ಮಾಡಿ. ನೀವು ಇದರ ಬಗ್ಗೆ ಸತ್ಯವನ್ನು ಹೊರಗೆ ತೆಗೆಯಲಿಕ್ಕೆ ನೀವು ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆ ನನ್ನ ಒಪ್ಪಿಗೆ ಇದೆ. ನನ್ನ ಹೇಳಿಕೆಯನ್ನೂ ಈ ಸದನ ಕೇಳಿದೆ, ಅವರ ಹೇಳಿಕೆಯನ್ನೂ ಸದನ ಕೇಳಿದೆ, ನಾನು ಯಾವುದೇ ಸಂದರ್ಭದಲ್ಲೂ ನಿರ್ದಿಷ್ಟವಾದ ಹೆಸರನ್ನು ಅಥವಾ ಲಿಸ್ಟನ್ನು ಕೊಟ್ಟಿಲ್ಲ ಮತ್ತು ಅವರುಗಳ ಟೆಲಿಫೋನ್ ಟ್ಯಾಪ್ ಮಾಡಬೇಕೆಂದು ಹೇಳಿಲ್ಲ......

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಹೆಗಡೆಯವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಫೈಲ್ಸ್ ಬಗ್ಗೆ ಹೇಳಿದರು. ಯಾವುದೇ ಫೈಲೂ ಇಲ್ಲ ಅಂತ. ಆದರೆ ನಾನು ಆ ರೀತಿ ಹೇಳಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ೨ ಫೈಲ್ಸ್ ಇವೆ ಅಂತ. ಅದರಲ್ಲಿ ಒಂದು ಫೈಲು ಸೆಕ್ರೆಟರಿಯೇಟ್‌ನಲ್ಲಿ ಮತ್ತು ಇನ್ನೊಂದು ಫೈಲು ಐ.ಜಿ.ಪಿ. ಇಂಟೆಲಿಜೆನ್ಸ್‌ರವರ ಆಫೀಸಿನಲ್ಲಿ ಇರುತ್ತದೆ ಅಂತ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದು ಈ ಫೈಲುಗಳನ್ನು ನಾನು ಸಭೆಯ ಮುಂದೆ ಇಡುವುದಿಲ್ಲ, ಒಂದು ಕೆಟ್ಟ ಸಂಪ್ರದಾಯವನ್ನು ನಾನು ಮತ್ತೆ ಸ್ಥಾಪಿಸುವುದಿಲ್ಲ, ಮತ್ತು ಆ ಫೈಲ್ಸ್‌ನಲ್ಲಿ ಏನಿದೆ. ಮತ್ತು ಇಂಟಲಿಜೆನ್ಸ್ ಸಿಸ್ಟಂ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆಮೇಲೆ ಕೊನೆಯಲ್ಲಿ ಯಾವ ಇಂಟಲಿಜೆನ್ಸ್ ಆಫೀಸರ್ ಟ್ಯಾಪ್ ಮಾಡಿದ್ದಾನೆ. ಅವನಿಗೆ ಲಿಖಿತ ಮೂಲಕವಾಗಿ ಕೇಳಿದ್ದೇವೆ ಮತ್ತು ಅವನೂ ಕೂಡ ಅದಕ್ಕೆ ಲಿಖಿತ ಮೂಲಕವೇ ಉತ್ತರವನ್ನೂ ಕೊಟ್ಟಿದ್ದಾನೆ. ನಾನು ಅದನ್ನು ತಮಗೆ ಇಲ್ಲಿ ಓದಿ ಹೇಳಿದೆ. ಅವನು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ ೧೯೬೨ ರಿಂದ ಈ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಏನು ಪ್ರೊಸೀಜರ್ ಇದೆ, ಅದನ್ನು ನಾನು ನನ್ನ ಅವಧಿಯಲ್ಲಿ ಅನುಸರಿಸಿದ್ದೇನೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಆ ಪ್ರೊಸೀಜರ್ ಏನು ಎಂಬುದನ್ನು ತಮ್ಮ ಮುಂದೆ ನಾನು ಹೇಳಿದ್ದೇನೆ. ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಏನೊಂದು ಲಿಸ್ಟ್ ಇರುತ್ತದೆ, ಅದರಲ್ಲಿ ಏನಾದರೂ ಅಡಿಷನ್ ಮಾಡಬೇಕಾದರೆ, ಡಿಲಿಷನ್ ಮಾಡಬೇಕಾದರೆ in consultation with the prior approval of the Chief Minister. ಇದನ್ನು ನಾನು ಮಾಡಿದ್ದೇನೆಂದು ಆತ ಹೇಳಿದಾಗ ನಾನು ನನ್ನ ವಿಚಾರಗಳನ್ನು ಮುಗಿಸುವುದಕ್ಕೆ ಮುಂಚಿತವಾಗಿ ಸ್ಪಷ್ಟವಾಗಿ ಹೇಳಿದ್ದೇನೆ: ಏನೆಂದರೆ, ಇಲ್ಲಿ ಎರಡು ಸ್ಟ್ಯಾಂಡ್‌ಗಳಿವೆ. ಮೊದಲನೇ ಸ್ಟ್ಯಾಂಡ್ ಎಂದರೆ ಮಾರಲ್ ಸ್ಟ್ಯಾಂಡ್, ಎರಡನೆಯದು ಎಂದರೆ ಲೀಗಲ್ ಸ್ಟ್ಯಾಂಡ್. ಇದರಲ್ಲಿ ತಮಗೆ ಬೇಕಾದಂಥ ಸ್ಟ್ಯಾಂಡನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ ಹೇಳುವುದಾದರೆ, ೧೯೮೮ರಲ್ಲಿ ತಾವು ಏನು ರಾಜೀನಾಮೆಯನ್ನು ಕೊಟ್ಟಿರಿ, ಅದು ಮಾರಲ್ ಸ್ಟ್ಯಾಂಡ್ ಅದು ಲೀಗಲ್ ಸ್ಟ್ಯಾಂಡ್ ಅಲ್ಲ, ಯಾವುದೋ ಟೆಲಿಫೋನ್ ಟ್ಯಾಪಿಂಗ್ ಮಾಡಿದ್ದಾರೆ ಯಾರೋ ಮಾಡಿದ್ದಾರೆ. ಯಾವುದೋ ಏನೋ ಬಂತು ಎಂದು ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿಲ್ಲ. ನಮ್ಮ ಸಂವಿಧಾನ ಏನು ಹೇಳುತ್ತದೆಂದರೆ. ಈ ಸದನದಲ್ಲಿ ಮುಖ್ಯ ಮಂತ್ರಿಗಳು ಮೆಜಾರಿಟಿಯನ್ನು ಕಳೆದುಕೊಂಡರೆ ರಾಜೀನಾಮೆಯನ್ನು ಕೊಡಬೇಕೆಂದು ಹೇಳುತ್ತದೆ. ಆದರೆ ನೀವು ಇದು ನನ್ನ ಮಾರಲ್ ಪ್ರಶ್ನೆ ಇದೆ, ಆದ್ದರಿಂದ ನಾನು ರಾಜೀನಾಮೆಯನ್ನು ಕೊಡುತ್ತೇನೆ ಎನ್ನತಕ್ಕ ಒಂದು ಮಾರಲ್ ಸ್ಟ್ಯಾಂಡನ್ನು ನೀವು ತೆಗೆದುಕೊಂಡಿದ್ದೀರಿ. ವಿರೋಧ ಪಕ್ಷದವರು ಮಾತೆತ್ತಿದರೆ ನೀವು ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ, ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ ಅಂತ ಕೇಳುತ್ತಾರೆ. ಆದರೆ ಅದನ್ನು ಮಾಡುವುದು ಬಿಡುವುದು ಅಧಿಕಾರದಲ್ಲಿರುವವರ ಇಷ್ಟ. ಆ ವೇಳೆಗೆ ಈ ನಿರ್ಣಯ ಮಾಡಬಹುದಾಗಿತ್ತು. ಇಲ್ಲ, ನಾನು ಏನೂ ತಪ್ಪು ಮಾಡಿಲ್ಲ, ನಾನು ಏಕೆ ರಾಜೀನಾಮೆ ಕೊಡಬೇಕು ಎಂದು ಹೇಳಬಹುದಾಗಿತ್ತು.

ನೀವು ರಾಜೀನಾಮೆ ಕೊಟ್ಟಿದ್ದು ಮಾರಲ್ ಸ್ಟ್ಯಾಂಡ್ ತೆಗೆದುಕೊಂಡು ; ನೀವು ಲೀಗಲ್‌ಸ್ಟ್ಯಾಂಡ್ ತೆಗೆದುಕೊಳ್ಳಲಿಲ್ಲ. ಇವತ್ತು circumstantial evidence ಏನು ಹೇಳುತ್ತದೆ ಅಂದರೆ, ನಿಮ್ಮ ಮಂಜೂರಾತಿ ಇಲ್ಲದೆ ನಿಮ್ಮ ಅಪ್ರೂವಲ್ ಇಲ್ಲದೆ, ಅಧಿಕಾರಿ ಮಾಡಿಲ್ಲ ಎಂದು ; ಇದೇ ಎವಿಡೆನ್ಸ್. ಇದನ್ನು ಎಷ್ಟರಮಟ್ಟಿಗೆ ಒಪ್ಪಬೇಕೋ ಬಿಡಬೇಕೋ ನಿಮಗೆ ಬಿಟ್ಟಿದ್ದು. ಇವತ್ತು ಮುಖ್ಯ ಮಂತ್ರಿಯಾಗಿ ನೀವು ನಿರ್ಣಯ ಮಾಡಿ ಎಂದು ನನ್ನನ್ನು ಕೇಳುತ್ತಿದ್ದೀರಿ, ನನಗೆ ಈಗ ವಿರೋಧಪಕ್ಷದ

ನಾಯಕರು ಪ್ರಶ್ನೆ ಹಾಕಿದ್ದಾರೆ. ನಿಮ್ಮ ಹತ್ತಿರ ಮೂರು ಹಾದಿ ಇದೆ. ಯಾವ ಹಾದಿ ನಿಮಗೆ ಸರಿಯೆನ್ನಿಸುತ್ತದೆ ಎಂಬುದನ್ನು ಹೇಳಿ ಎಂದು ಕೇಳಿದ್ದರು. ಮೊದಲನೆಯ ಹಾದಿ ಫೈಲ್ ಇಡತಕ್ಕದ್ದು ಏನಿದೆ, ಅದನ್ನು ಅನುಸರಿಸುವಂತಿಲ್ಲ. ಎರಡನೆಯ ಹಾದಿ ನಾನು ಎಲ್ಲಾ circumstantial ಎವಿಡೆನ್ಸ್. ಕಂಪ್ಲೀಟ್ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ; ಡಾಕ್ಯುಮೆಂಟ್ಸ್ ಸಮೇತ ಹೇಳಿದ್ದೇನೆ ಇದು ನಿಮಗೆ ಸಮಾಧಾನಕರ ಆಗದೆ ಹೋದರೆ ಇನ್ನು ಮೂರನೆ ಹಾದಿ ಬರುತ್ತದ್ದೆ. ಮೂರನೇ ಹಾದಿ ನಾನು ತಿಳಿಯಬೇಕೋ ಅಥವಾ ನಿಮಗೆ ನನ್ನ ಉತ್ತರ ಸಮಾಧಾನ ಆಗಿದೆಯೋ ಎಂದು ಕೇಳುವುದಕ್ಕೆ ಮೊದಲೇ ನಾನು ಕುಳಿತುಕೊಂಡುಬಿಟ್ಟೆ ಇನ್ನೂ ನನ್ನ ಭಾಷಣ ಮುಗಿಯಲಿಲ್ಲ. ಅಷ್ಟರಲ್ಲಿ ಅನೇಕ ಜನ ಕ್ಲಾರಿಫಿಕೇಷನ್ ಕೇಳಲು ಹೊರಟರು : ಆದಕ್ಕಾಗಿ ಇವತ್ತು ನಾನು ಹೇಳುವುದು ಏನೆಂದರೆ, ನಾನು ಏನು ಹೇಳಿದ್ದೇನೆ, ಇದನ್ನು ನಾನಾಗಿಯೇ ವಿಚಾರ ಮಾಡಿ ಹೇಳಿದ್ದಲ್ಲ. ತಮಗೆ ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಮ್ಮ ಎಲ್ಲಾ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಅಂದರೆ ಚೀಫ್ ಸೆಕ್ರೆಟರಿ, ಹೋಂ ಸೆಕ್ರೆಟರಿ, ಇಂಟಲಿಜನ್ಸ್ ಆಫೀಸರು ಹೀಗೆ ಎಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ನಮ್ಮ ಹತ್ತಿರ ಏನು ಇದೆ ಮತ್ತು ಯಾವ ಸ್ಟ್ಯಾಂಡ್ ನಾನು ಇಲ್ಲಿ ತೆಗೆದುಕೊಳ್ಳಬೇಕು ಎಂಬುದನ್ನು ನಿರ್ಣಯ ಮಾಡಿ ಕೊಂಡು ಬಂದು ಹೇಳುತ್ತಿದ್ದೆನೆಯೇ ಹೊರತು ಇದು ಇನೂ ಪೂರ್ವ ಸಿದ್ಧತೆಯಿಲ್ಲದೆ ಹೇಳಿದ್ದಲ್ಲ. ಇವತ್ತು circumstantial ಎವಿಡೆನ್ಸ್ ಅನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಇದು ನಿಮಗೆ ಸಮಾಧಾನವಾಗದೆ ಹೋದರೆ ಇನ್ನು ಮೂರನೆ ಹಾದಿ ಏನು ಎಂಬುದನ್ನು ನೀವು ಹೇಳಿದ್ದೀರಿ. ನೀವು ಬೇಕಾದರೆ ಹೇಳಿ. ನಮಗೆ ಸಮಾಧಾನವಾಗಿಲ್ಲ, ಅದಕ್ಕಾಗಿ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ನೀವು ಕೇಳಹುದು. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಇನ್ನೂ ನಾನು ಜುಡಿಷಿಯಲ್ ಎನ್‌ಕ್ವೈರಿಗೆ ಕಮಿಟ್ ಮಾಡಿಲ್ಲ ; ಇವತ್ತು ನಿಮ್ಮನ್ನು ನಾವು ಕೇಳುತ್ತಿದ್ದೇನೆ. ಹೆಗಡೆಯವರು ಏನು ಹೇಳುತ್ತಾರೆ :

Whether he wants judicial inquiry. If Mr. Chandre Gowda as Leader of the Opposition demands judicial inquiry, then only I will apply my mind and take a decision.

SRI RAMA KRISHNA HEGDE.—The trush must be found out. ಆದಕ್ಕೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದರಿಂದ ಬರುತ್ತದೆ ಎಂದು ನೀವು ತೀರ್ಮಾನ ಮಾಡಿದ್ದರೆ, ಆದೇ ರೀತಿ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಹೆಗಡೆಯವರು ಪ್ರತಿಮಾತಿಗೂ ಒಂದು ಪ್ರಾವಿಜೋ ಇಟ್ಟುಕೊಂಡು ಮಾತನಾಡುತ್ತಾರೆ. ಪ್ರಾವಿಜೋ ಬೇಡ ; ಖಂಡತುಂಡವಾಗಿ ಹೇಳಿ ; ನಿಮಗೆ ಏನು ಅನ್ನಿಸುತ್ತದೆಯೋ ಹಾಗೆ ಮಾಡಿ ಎಂದರೆ ಏನು ಅರ್ಥ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತುಂಟು, ಏನಾಗಿದ್ದೆ ಎಂಬುದು ಕೆಲವು ಜನ ಆಫೀಸರಿಗೆ ಗೊತ್ತುಂಟು. ಇವೆರಡರ ಮಧ್ಯೆ ಏನು ವಿಚಾರ ಇದೆ ಎಂಬುದನ್ನು ತಿಳಿಯುವ ಬಗ್ಗೆ ಹೇಗೆ ? ಒಂದು. ಅವರು ಹೇಳಿರುವುದು ನಿಜ ಎಂಬುದನ್ನು ನೀವು ತಿಳಿದುಕೊಳ್ಳಬೇಕು ; ಇಲ್ಲವೇ ನಾನು ಹೇಳಿರುವುದು ನಿಜ ಎಂದು ನೀವು ತಿಳಿದುಕೊಳ್ಳಿ ನಿಮಗೆ ಏನಾದರೂ ಅನುಮಾನ ವಿದ್ದರೆ. ನಾನು ಹೇಳಿದ ವಿಚಾರ ಸತ್ಯ ಎಂದು ಇದ್ದರೆ ನೀವು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿ.

ಶ್ರೀ ವೀರೇಂದ್ರ ಪಾಟೀಲ್.—ಚಂದ್ರೇಗೌಡರೇ, ನೀವು ಏನು ಹೇಳುತ್ತೀರಿ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಈ ವಿಚಾರದಲ್ಲಿ ಹಿಂದೆ ಹೇಳಿದ್ದೆ, ೧೯೭೮ನೇ ಅಕ್ಟೋಬರ್ ೫ನೇ ತಾರೀಖು ಚರ್ಚೆ ಮಾಡುವಾಗ ಶ್ರೀ ಮಾನ್ ಮೊಯಿಲಿಯವರು ಜುಡಿಷಿಯಲ್ ಎನ್‌ಕ್ವೈರಿ ಮಾಡಿ. ಈ ರಾಜ್ಯಕ್ಕೆ ಸೀಮಿತವಾಗಿ ಎಂದು ಹೇಳಿದ್ದರು ; ನನಗೆ ಅದಕ್ಕೆ ಸಮ್ಮತಿ ಇದೆಯೆಂದು ಹೇಳಿದ್ದೆ. ತಾವು ಪುನಃ ಪುನಃ ಹೇಳುತ್ತಿದ್ದೀರಿ ; ಪೂರ್ಣ ವಿಶ್ವಾಸ ಯಾವಾಗ ಬರುತ್ತದೆ ? ೧೯೬೨ನೇ ಇಸವಿಯಲ್ಲಿ ಇದಂತಹ ಒಂದು ಆದೇಶ ಅಥವಾ ಒಂದು ನಿಯಮ ಏನಿದೆ, ಅದನ್ನೇ ಮುಂದುವರಿಸಿ ಕೊಂಡು ಬರಲಾಗುತ್ತಿದೆ.

There is no fresh direction. Right from 1962 there was a procedure ; Every time the Chief Minister changed ; Every time the Officer changed, the said Officer went on & handing over to the

subsequent Officer to the effect that this is the procedure you follow. The next man said-This is the procedure you follow. Whether the procedure adopted & accepted by the person in authority at that point of time is not known, is not clear ; Whatever he says, He says that the procedure is followed.
ಜೂನ್ ೩೦ಕ್ಕೆ ೨-೩ ಆರ್ಡರ್ ಇರುವುದಾಗಿ ಹೇಳಿದಿರಿ. ಅಲ್ಲಿಂದ ಅಂದರೆ ೧೯೬೨ ರಿಂದ ಇಲ್ಲಿಯವರೆಗಿನ ಪ್ರೊಸೀಜರ್ ಅನ್ನು ನೋಡೋಣ, ಯಾವ ರೀತಿ ಪ್ರೊಸೀಜರ್ ಫಾಲೋ ಮಾಡಿದ್ದಾರೆಂಬ ಸತ್ಯ ಸಂಶೋಧನೆಯಾಗಬೇಕೆಂದರೆ ೧೯೬೨ ರಿಂದ ಇದುವರೆಗೆ ಏನು ನಡೆದಿದೆ, ಅದರ ಬಗ್ಗೆಯೂ ಶೋಧನೆ ಆಗಬೇಕು. ಶೋಧನೆ ಆಗಬಾರದೇ ? ಯಾರು ಆರ್ಡರ್ ಕೊಟ್ಟರು ? ಇದರ ಸತ್ಯ ಹೊರಬರುವುದು ಬೇಡವೆ ? ತಮಗೆ ಇದರ ಅಗತ್ಯ ಇಲ್ಲವೆ ? ೧೯೬೨ರಲ್ಲಿ ಏನಿತ್ತು ಅದನ್ನೇ ೧೯೭೧ ಲ್ಲಿ ಬಂದವರು ಫಾಲೋ ಮಾಡಿದರು, ೧೯೭೧ರಲ್ಲಿ ಏನಿತ್ತು ಅದನ್ನೇ ೧೯೭೭ರಲ್ಲಿ, ಫಾಲೋ ಮಾಡಿದರು. ೧೯೮೮ರಲ್ಲಿ ಏನಿತ್ತು ಅದನ್ನೇ ೧೯೮೦ರಲ್ಲಿ ಫಾಲೋ ಮಾಡಿದರು. Should we not know who is the man who ordered this. ವಿಚಾರಣೆ ಮಾಡಿಸಿ, ಏನು ಅನುಕೂಲ ಇದೆ ನೋಡಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಪೀರಿಯಡ್ ಹಾಕಿದ್ದೀರೋ ಆ ಪೀರಿಯಡ್‌ಗೆ ಅನ್ವಯಿಸು ವಂತೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮುಖ್ಯ ಕಾರ್ಯದರ್ಶಿಗಳು ಏನು ಹೇಳಿದ್ದಾರೆ. ಅದನ್ನು ಮುಖ್ಯ ಮಂತ್ರಿಗಳು ಏನು ಒಪ್ಪಿಕೊಂಡಿದ್ದಾರೆ...

ಶ್ರೀ ಕಾಗೋಡು ತಿಮ್ಮಪ್ಪ.—ಇವರು ಪುನಃ ಹಳೆಯ ಕಥೆಯನ್ನೇ ಹೇಳುತ್ತಾ ಕುಂತ್ರಲ್ಲ...

ಶ್ರೀ ವೀರೇಂದ್ರ ಪಾಟೀಲ್.—ನಾನು ಪ್ರಾಮಾಣಿಕವಾದ ವಿಚಾರಗಳನ್ನು ಹೇಳಿದ್ದೇನೆ. ಇವತ್ತು ಬೇಕಾದರೆ ರೆಕಾರ್ಡ್ಸ್ ತೆಗೆಸಿ ತಾವು ನೋಡಿ, ತಮ್ಮ ಭಾಷಣದಲ್ಲಿ ಏನು ಹೇಳಿದ್ದೀರೆಂದರೆ ; ಒಂದು ಫೈಲು ಇಡಿ ; ಮತ್ತೆ ಮುಖ್ಯ ಮಂತ್ರಿಗಳು ಇದ್ದೀರಿ, ನಿಮ್ಮ ಕಛೇರಿಯಲ್ಲಿ ಫೈಲುಗಳು ಇವೆ, ತಪ್ಪಿತಸ್ಥರು ಇಂಥವರು ಇದ್ದಾರೆಂದು ನೀವೇ ಹೇಳಿ ಇಲ್ಲದಿದ್ದರೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಿ ಎಂದು, ನಿನ್ನೆಯಿಂದ ಏನು ಚರ್ಚೆ ನಡೆದಿದೆ ಅಂದರೆ ೧೯೮೪ಕ್ಕೆ ಏನು ಒಂದು ಪ್ರಕರಣ ಬೆಳಕಿಗೆ ಬಂದಿದೆ ಅದನ್ನು ಚರ್ಚೆ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್.—ಈಗ ಅವರು ಏನು ಹೇಳುತ್ತಿದ್ದಾರೆಂದರೆ ೧೯೬೨ ರಿಂದ ಇಲ್ಲಿಯವರೆಗೆ ಟೆಲಿಫೋನ್ ಟ್ಯಾಪಿಂಗ್ ಏನು ನಡೆದಿದ್ದರೆ, ಅದರ ಬಗ್ಗೆ ವಿಚಾರಣೆ ಮಾಡಿಸಿ ಎಂದು; ನಾನು ಈ ಸಂದರ್ಭದಲ್ಲಿ...

ಶ್ರೀ ಡಿ. ಬಿ. ಚಂದ್ರೇಗೌಡ.—ಮುಖ್ಯ ಕಾರ್ಯದರ್ಶಿಯವರು ತಮ್ಮ ಪತ್ರದಲ್ಲಿ ಬರೆದು ಅಲ್ಲಿ ಕೊಟ್ಟಿರತಕ್ಕಂಥ...

ಶ್ರೀ ವೀರೇಂದ್ರ ಪಾಟೀಲ್.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ೧೯೬೨ ಅಷ್ಟೇ ಅಲ್ಲ, ಟೆಲಿಫೋನ್ ಸಿಸ್ಟಂ ಎಂದಿನಿಂದ ಈ ದೇಶದಲ್ಲಿ ಬಂದಿದೆಯೋ, ಎಷ್ಟು ಹಳೆಯದಿದೆಯೋ, ಆ ರೀತಿ ಟೆಲಿಫೋನ್ ಟ್ಯಾಪಿಂಗ್ ಹಳೆಯದಿದೆ ; ಇದು ಹೊಸ ಸಿಸ್ಟಂ ಏನಲ್ಲ. ಆದರೆ ದುರ್ದೈವದಿಂದ ಇತ್ತೀಚೆಗೆ ಈ ಒಂದು ಸಿಸ್ಟಂನ ದುರುಪಯೋಗ ನಮ್ಮ ವಿರೋಧಿಗಳು ಮತ್ತು ರಾಜಕೀಯ ವಿರೋಧಿಗಳ ಬಗ್ಗೆ ಸೇಡು ತೀರಿಸಿಕೊಳ್ಳುವುದಕ್ಕೆ ಅವರ ತೇಜೋವಧೆ ಮಾಡುವುದಕ್ಕೆ ಪ್ರಯತ್ನಗಳು ನಡೆದಿದ್ದು ಇತ್ತೀಚೆಗೆ ಕಂಡುಬಂದಿದೆ ಮತ್ತು ಬೆಳಕಿಗೆ ಬಂದಿವೆ. ಇವತ್ತು ಏನು ಜುಡಿಶಿಯಲ್ ಎನ್‌ಕ್ವೈರಿಗೆ ಡಿಮ್ಯಾಂಡ್ ಮಾಡುತ್ತಿದ್ದೀರಿ, ಅದನ್ನು ೧೯೮೮ರಲ್ಲಿ ಮೊದಲನೇ ಸಲ ಶ್ರೀಮಾನ್ ಹೆಗಡೆಯವರು ಟ್ಯಾಪಿಂಗ್‌ನಲ್ಲಿ ನನ್ನ ಜವಾಬ್ದಾರಿ ಇದ್ದರೆ ವಿಚಾರಣೆ ಮಾಡಿಸಿ ಎಂದು ಹೇಳಿದ್ದಾರೆ. ಅದು ರೈಟಿಂಗ್‌ನಲ್ಲೂ ಆದಿದೆ. ಈಗ ನೀವು ಇಬ್ಬರೂ ಕಲೆತು ಏನು ಹೇಳುತ್ತಿದ್ದೀರೆಂದರೆ ೧೯೬೨ ರಿಂದ ವಿಚಾರಣೆ ಮಾಡಿಸಿ ಎಂದು ;

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—೧೯೮೮ರಲ್ಲಿ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಿ ಎಂದು ಡಿಮ್ಯಾಂಡ್ ಮಾಡಿದೆ. ಆದಕ್ಕೆ ಅಂದಿನ ಪ್ರಧಾನ ಮಂತ್ರಿಗಳು ರಿಜೆಕ್ಟ್ ಮಾಡಿದರು. ಅವರು ಏತಕ್ಕೆ ರಿಜೆಕ್ಟ್ ಮಾಡಿದರು ಎಂದು ಹೇಳುತ್ತೇನೆ.

ನಾನು ಏನು ಡಿಮ್ಯಾಂಡ್ ಮಾಡಿದೆ ಎಂದರೆ ಕೇವಲ ಕರ್ನಾಟಕದ ವಿಚಾರ ಅಷ್ಟೇ ಅಲ್ಲ, ಕೇಂದ್ರದಲ್ಲಿ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಈ ತರಹದ ಕೆಲಸ ಏನಾದರೂ ಆಗಿದ್ದರೆ ತನಿಖೆ ಮಾಡಿ ಎಂದು ಹೇಳಿದೆ. ಅದಕ್ಕಾಗಿ ಅವರು ಮಾಡಲಿಲ್ಲ. ಇವತ್ತು ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯ ಮುಂದೆ ಮುಖ್ಯ ಕಾರ್ಯದರ್ಶಿಗಳು ಏನು ಪತ್ರ ಬರೆದಿದ್ದಾರೆ ಅದಕ್ಕಿಂತ ಹಿಂದೆ ಹೋಗಿ ಎಂದು ನಾನು ಹೇಳುತ್ತಿಲ್ಲ. ಅದಕ್ಕಿಂತ ಮುಂದೆ ಹೋಗಿ ಎಂದು ಹೇಳುತ್ತಿದ್ದೇನೆ. ಅವರು ಏನು ಬರೆದಿದ್ದಾರೆ ಎಂದರೆ ಒಂದು ಪದ್ಧತಿಯನ್ನು ೧೯೬೨ರಿಂದ ಅನುಸರಿಸಿಕೊಂಡು ಬಂದಿದ್ದೇವೆ ಎಂಬುದನ್ನು ಹೇಳಿದ್ದಾರೆ. ಚೀಫ್ ಮಿನಿಸ್ಟರನ್ನು ಕೇಳಿ ಇಲ್ಲಿಯವರೆಗೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಡಿ.ಜಿ.ಪಿ.ಯಿಂದ ಕೂಡ ಅದೇ ತರಹ ಒಂದು ಪತ್ರ ಬಂದಿದೆ. ಅದರಲ್ಲಿ ಯಾವ ತರಹ ಪ್ರೊಸೀಜರ್ ಎಂಬುದಿದೆ. ಇದೊಂದರಲ್ಲೇ ಮುಖ್ಯಮಂತ್ರಿಗಳನ್ನು ಕೇಳಿ ಮಾಡಿದ್ದೋ ಅಥವಾ ಆಫೀಸರ್ ತನ್ನ ಬುದ್ಧಿ ಪ್ರಕಾರ ಮಾಡಿದ್ದಾರೋ ಅಥವಾ ಬೇರೆ ಯಾವ ಕಾರಣದಿಂದ ಮಾಡಿದ್ದಾರೆ ಎಂಬುದನ್ನೆಲ್ಲಾ ನೋಡಿ. ಅದಕ್ಕಾಗಿ ಮುಖ್ಯ ಕಾರ್ಯದರ್ಶಿಯವರು ಏನು ಪಿರಿಯಡ್ ತಿಳಿಸಿದ್ದಾರೆ, ಆ ಪಿರಿಯಡ್‌ನ ಎಲ್ಲಾ ವಿಚಾರ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಲಿ.

ಶ್ರೀ ಆರ್. ವಿ. ದೇಶಪಾಂಡೆ.— ನನಗೆ ಕ್ಲಾರಿಫಿಕೇಷನ್ ಕೊಟ್ಟಿಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೆ...

ಅಧ್ಯಕ್ಷರು.— ಮಾನ್ಯ ಕರಿಯಣ್ಣನವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕರಿಯಣ್ಣ.— ಈಗಿರುವುದು ಎರಡೇ ಪಾಯಿಂಟ್.

ಅಧ್ಯಕ್ಷರು.— ಎರಡೇ ಪಾಯಿಂಟಾ?

ಶ್ರೀ ಕರಿಯಣ್ಣ.— ಹೌದು ಸಾರ್. ಒಂದು, ಮಾನ್ಯ ರಾಮಕೃಷ್ಣ ಹೆಗಡೆಯವರು ಟೇಪ ರೆಕಾರ್ಡ್ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಒಪ್ಪಿಕೊಂಡಿಲ್ಲ.

ಅಧ್ಯಕ್ಷರು.— ಯಾವ ಟೇಪ್‌ರೆಕಾರ್ಡ್ ಇಲ್ಲಿ ಎಲ್ಲಿ ಬರುತ್ತದೆ ಟೇಪ್‌ರೆಕಾರ್ಡ್ ?

ಶ್ರೀ ಕರಿಯಣ್ಣ.— ಟೆಲಿಫೋನ್ ಟ್ಯಾಪಿಂಗ್ ಮಾಡಲು ಡಿ.ಜಿ.ಗೆ ಹೇಳಿಲ್ಲ ಎಂದು ರಾಮಕೃಷ್ಣ ಹೆಗಡೆ ಅವರ ವಾದ. ಇನ್ನೊಂದು ಡಿ.ಜಿ.ಯವರು ಇವರನ್ನು ಕೇಳಿಯೇ ಮಾಡಿದ್ದಾರೆ ಎಂದು ಕಾಗದ ಪತ್ರಗಳ ಪ್ರಕಾರ ವಾದ ಇದೆ. ಈ ಎರಡೂ ವಾದದ ಮೇಲೆ ತೀರ್ಮಾನವಾಗಬೇಕೇ ವಿನಾ ೧೯೬೨, ೮೨, ೭೨ ಎಂದರೆ ಏನಾಗುತ್ತದೆ? ಆದ್ದರಿಂದ ಈ ಎರಡು ವಾದದ ಬಗ್ಗೆ ತೀರ್ಮಾನ ಆಗಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಚರ್ಚೆ ಆದಮೇಲೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ಅವರು ಕೊನೇ ಒಂದು ಉತ್ತರಕ್ಕಾಗಿ ಕಾದು ಕುಳಿತಿದ್ದಾರೆ. ಅದಕ್ಕೆ ನಾನು ಹೇಳುವುದು ಎರಡು ಆಪ್‌ಷನ್ನನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ನಿಮಗೆ ನ್ಯಾಯಾಂಗ ತನಿಖೆ ಬೇಕಾದರೆ ಬೇಕು ಎಂದು ಹೇಳಿ ಎಂದು ಹೇಳಿದ್ದಾರೆ. ಅದರ ಬಗ್ಗೆ ಈಗ ವ್ಯಾಖ್ಯಾನ ಮಾಡುವುದು ಅನಾವಶ್ಯಕ. ನಮ್ಮ ಮುಂದೆ ಇರತಕ್ಕ ಪ್ರಸ್ತಾಪ ಚರ್ಚೆಯಾಗಿದೆ. ಅದರ ಆಧಾರದ ಮೇಲೆ ಇಲ್ಲಿ ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ವೋಟಿಂಗ್ ಕೊಡುವುದಕ್ಕೂ ಬರುವುದಿಲ್ಲ. ಆದರೆ ಈ ಸದನ ತೀರ್ಮಾನಕ್ಕೂ ಕೂತುಕೊಳ್ಳಬಹುದು ಅಥವಾ ಪ್ರಿವಿಲೈಜ್ ಕಮಿಟಿಗೂ ಹಾಕಬಹುದು ಈ ಚರ್ಚೆಯಿಂದ ಅನೇಕ ವಿಚಾರಗಳು ಹೊರಗಡೆ ಬಂದಿವೆ. ಇದರ ಆಧಾರದ ಮೇಲೆ ಈ ಸದನ ತೀರ್ಮಾನ ಮಾಡಬೇಕೆಂದರೆ ಪ್ರತ್ಯೇಕವಾದ ಒಂದು ಮೋಷನ್ ಅನ್ನು ಕೊಟ್ಟು ಅವರಿಗೆ ಶಿಕ್ಷೆ ಮಾಡಿಸಬೇಕೋ ಅಥವಾ ಪ್ರಿವಿಲೈಜ್ ಕಮಿಟಿಗೆ ಕಳುಹಿಸಬೇಕೋ ಎಂಬ ಬಗ್ಗೆ ನಿರ್ಣಯ ಮಾಡಬೇಕಾಗುತ್ತದೆ. ಏಕೆಂದರೆ ಸರ್ಕಾರ ಕೊಟ್ಟಿರತಕ್ಕ ದಾಖಲೆಗಳಿಂದ ಮತ್ತು ಆ ಬಗ್ಗೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೊಟ್ಟ ಉತ್ತರದಿಂದ ಸದನಕ್ಕೆ ಒಂದು ಅಭಿಪ್ರಾಯ ಮೂಡಿದೆ. ಏನಾದರೂ ನಿರ್ಣಯ ಮಾಡಲೇಬೇಕು ಎಂದು ಅದು ಯಾವ ನಿರ್ಣಯ ಆದರೂ ಆಗಬಹುದು ಆದ್ದರಿಂದ ನಾನು ಶ್ರೀಮಾನ್ ಹೆಗಡೆ ಅವರಿಗೆ ಹೇಳುತ್ತೇನೆ, ಏಕೆಂದರೆ ಮುಖ್ಯ ಮಂತ್ರಿಗಳು ಅವರಿಗೆ ಆಪ್‌ಷನ್ ಕೊಟ್ಟಿದ್ದಾರೆ. ೧೯೬೨ರಿಂದ ಏನೇನು ನಡೆಯಿತು ಎಂಬುದನ್ನು ತನಿಖೆ ಮಾಡುವುದಕ್ಕಿಂತ ಇವತ್ತು ಚರ್ಚೆ ಆಗಿರುವುದು ನಿಯಮ ೭೮ರ ಪ್ರಕಾರ

ಪ್ರಸ್ತಾವನೆ ಏನಿತ್ತು ಅದರ ಆಧಾರದ ಮೇಲೆ ಆಗಿದೆ. ಈ ಚರ್ಚೆಯ ಫಲಿತಾಂಶದಲ್ಲಿ ಇಲ್ಲಿ ಆಗಿರತಕ್ಕ ಚರ್ಚೆಯಿಂದ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ, ಏಕೆಂದರೆ ಶ್ರೀಮಾನ್ ಹೆಗಡೆಯವರೇ ಹೇಳಿಕೊಂಡಿದ್ದಾರೆ. ಏನೆಂದರೆ ಇದು ಹೌದು ಎನ್ನುವುದಾದರೆ ಸಾರ್ವಜನಿಕ ಜೀವನದಿಂದ ನಾನು ನಿವೃತ್ತನಾಗುತ್ತೇನೆ ಎಂದು. ಈ ಶರತ್ತು ಹಾಕಿಕೊಂಡವರು ನೀವೇ. ನಾವು ಯಾರೂ ನಿಮಗೆ ಹೇಳಲಿಲ್ಲ. ಒತ್ತಾಯ ಮಾಡಲಿಲ್ಲ. ಮುಖ್ಯ ಮಂತ್ರಿಯವರು ಕೊನೆಯದಾಗಿ ಹೇಳಿದರು, you owned moral responsibility. ಆ ಕಾರಣಕ್ಕಾಗಿಯೇ ನೀವು ಮೊದಲೇ ರಾಜೀನಾಮೆ ಕೊಟ್ಟು ಜನರಿಗೆ ಹೇಳಿಬಿಟ್ಟಿದ್ದರೆ ಆಗುತ್ತಿತ್ತು.

SRI RAMAKRISHNA HEGDE.—What he said is, owning moral responsibility I sent my resignation and not owning legal responsibility ಎಂದು ಅವರು ಹೇಳಿದ್ದು.

SRI KAGODU THIMMAPPA.— You could have closed that chapter at that time. ನಾನು ಫೇರ್ ಆಗಿ ಹೇಳುತ್ತೇನೆ. ಅವರಿಗೆ ಶಿಕ್ಷೆ ಮಾಡಬೇಕು ಎಂಬುದಾಗಲೀ ಅವರಿಗೆ ತೇಜೋವಧೆ ಮಾಡಬೇಕು ಎಂಬುದು ನಮಗೆ ಖಂಡಿತ ಇಲ್ಲ,

ಏಕೆಂದರೆ ನಾವೆಲ್ಲಾ ರಾಜಕೀಯದಲ್ಲಿ ಇರತಕ್ಕಂಥವರು ಏನೋ ಬದಲಾವಣೆಯಾಗುತ್ತದೆ. ಯಾವುದಾದರೂ ಸನ್ನಿವೇಶ ಬಂದೇ ಬರುತ್ತದೆ ಆದರೂ ಕೂಡ ಈ ಸದನಕ್ಕೆ ಶಿಕ್ಷೆ ಮಾಡತಕ್ಕ ಅಧಿಕಾರ ಇದೆ. ಆದರೂ ಇಲ್ಲ ಅಂತ ನಾವು ಹೇಳುತ್ತೇವೆ ಆದರೆ ಇವತ್ತು ಏನಾಗಿದೆ ಎಂದರೆ ನಿಜವಾಗಿಯೂ ರಾಜಕಾರಣಿಗಳನ್ನು, ಮಂತ್ರಿಗಳನ್ನು, ಶಾಸನಸಭಾ ಸದಸ್ಯರುಗಳ ಫೋನ್‌ಗಳನ್ನು ಕದ್ದಾಲಿಸತಕ್ಕ ಕೆಲಸಕ್ಕೆ ಯಾರು ಯಾರು ಹೊಣೆಗಾರರು ಇದ್ದಾರೆ ಎನ್ನುವುದನ್ನು ಕಂಡುಹಿಡಿಯಬೇಕು. ಸತ್ಯಶೋಧನೆ ಆಗಬೇಕು ಎಂಬ ಒಂದೇ ಕಾರಣಕ್ಕಾಗಿ ಇದು ಚರ್ಚೆಯಾಗುತ್ತಿದೆ. ಹಿಂದಿನ ಅಧಿವೇಶನದಲ್ಲಿ ಇದನ್ನು ಮಾಡುವುದಕ್ಕೆ ಆಗಲಿಲ್ಲ ಕೊನೆಯಪಕ್ಷ ಈ 2 ದಿವಸಗಳ ಚರ್ಚೆಯಿಂದ ಒಂದು ಅಭಿಪ್ರಾಯ ಜನರಲ್ಲಿ ಮೂಡಿದೆ. ಅಂದ ಮಾತ್ರಕ್ಕೆ ನಾವು ಶಿಕ್ಷೆ ಕೊಡಬೇಕೆಂಬುದಕ್ಕೆ ನಾವು ತಯಾರಿಲ್ಲ ಅದನ್ನು ನಿಮಗೆ ಬಿಟ್ಟಿದ್ದೇವೆ. ನಿಮಗೆ ನ್ಯಾಯಾಂಗ ವಿಚಾರಣೆಯಿಂದಲೇ ಇದು ಮುಕ್ತಾಯವಾಗಬೇಕೆಂದು ನೀವು ಭಾವಿಸಿದ್ದರೆ, ಆಗಲಿ. ಏಕೆಂದರೆ ನೀವು ಹೇಳಿದ್ದಿರಿ; ಹಿಂದಿನ ಎಲ್ಲ ಪ್ರಕರಣಗಳಲ್ಲೂ ನ್ಯಾಯಾಂಗ ವಿಚಾರಣೆಗೆ ನಾನು ಆಜ್ಞೆ ಮಾಡಿದ್ದೇನೆ ಅಂತ. ಆದ್ದರಿಂದ ರಾಜಕಾರಣದಲ್ಲಿ ಒಂದು ಮೌಲ್ಯಕ್ಕೆ, ಮೌಲ್ಯಾಧಾರಿತಕ್ಕೆ ಇವತ್ತೂ ಬದ್ಧನಾಗಿದ್ದೇನೆಂದು ಹೇಳಿದ್ದೀರಿ ಆಯಿತು ಇದನ್ನೂ ಒಪ್ಪಿಕೊಳ್ಳಿ. ನ್ಯಾಯಾಂಗ ವಿಚಾರಣೆ ಮಾಡುವುದರಿಂದ ನಿಮಗೆ ನ್ಯಾಯ ಸಿಕ್ಕುತ್ತದೆಂಬುದಾಗಿ ನಿಮಗೆ ಅನ್ನಿಸಿದ್ದರೆ ಅದಕ್ಕಾದರೂ ಒಪ್ಪಿಕೊಳ್ಳಿ. ಎಲ್ಲವನ್ನೂ ಮುಖ್ಯಮಂತ್ರಿಗಳ ತಲೆಯ ಮೇಲೆ ಹಾಕಿ ನೀವು ಹಾಗೇ ಕೂಡುವುದು ಸರಿಯಲ್ಲ ಎಲ್ಲವೂ ಫೇರ್ ಆಗಿರಬೇಕು. He cannot sit over the Judgement. It is the property of the House, the matter has been discussed for two days, so many documents have been referred and so many speeches have been heard. It is the House that can sit over the Judgement' and not the Chief Minister, Therefore' please consider the matter.

ಈ ಸದನದ ಜವಾಬ್ದಾರಿಯನ್ನು ನೀವು ಮುಖ್ಯಮಂತ್ರಿಗಳ ತಲೆಯ ಮೇಲೆ ಹಾಕಿ ಕುಳಿತು ಕೊಳ್ಳುವುದರಲ್ಲಿ ಅರ್ಥವಿಲ್ಲ. ನ್ಯಾಯಾಂಗ ವಿಚಾರಣೆಯಲ್ಲೇ ನಿಮಗೆ ವಿಶ್ವಾಸವಿದೆ ಎನ್ನುವುದಾದರೆ ಅದನ್ನೇ ಮಾಡಿಕೊಳ್ಳಿ. ಒಂದು ಗಾದೆ ಇದೆ ತಣ್ಣೀರಾದರೂ ತಣಿಸಿ ಕುಡಿ ಅಂತ ಹೇಳುತ್ತಾರೆ ಆದ್ದರಿಂದ ನ್ಯಾಯಾಂಗ ವಿಚಾರಣೆಯಲ್ಲೇ ನಿಮಗೆ ವಿಶ್ವಾಸವಿದೆ ಎನ್ನುವುದಾದರೆ ಅದೇ ಮಾತನ್ನು ಹೇಳಿ You have no option. Otherwise we may have to move a motion because two issues are involved. ಒಂದು, ಹಿಂದಿನ ಅಧಿವೇಶನದಲ್ಲಿ ಈ ಸದನವನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಇನ್ನೊಂದು ಈ ಸದನದ ಸದಸ್ಯರ ಹಕ್ಕುಬಾಧ್ಯತೆಯ ಚ್ಯುತಿಯಾಗಿದೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರನ್ನು ಇದೇ ಕಾರಣಕ್ಕಾಗಿ ಸದನ ಹಕ್ಕುಚ್ಯುತಿಯಾಗಿದೆ. ಸದಸ್ಯರ ಹಕ್ಕುಚ್ಯುತಿ ಬರತಕ್ಕ ಹೇಳಿಕೆಯನ್ನು ಕೊಟ್ಟರು ಎನ್ನುವ ಒಂದೇ ಕಾರಣಕ್ಕಾಗಿ ಅವರನ್ನು ಲೋಕಸಭೆಯಿಂದ ಉಚ್ಚಾಟನೆ ಮಾಡಿದರು. ಆದ್ದರಿಂದ ನ್ಯಾಯಾಂಗ ವಿಚಾರಣೆಗೆ ನೀವು ಒಪ್ಪಿಕೊಳ್ಳದಿದ್ದರೆ ಅನಿವಾರ್ಯವಾಗಿ ಈ ಸದನದ ಹಕ್ಕುಬಾಧ್ಯತಾ ಸಮಿತಿಗೋ ಅಥವಾ ಈ ಸದನದಲ್ಲಿ ನಿಮಗೆ ಶಿಕ್ಷೆ ಕೊಡುವಂತಹ ಮೋಷನ್ ಅನ್ನು ನಾವು ತರಬೇಕಾಗುತ್ತದೆ.

ಡಾ॥ ಜೀವರಾಜ ಆಳ್ವ:—ಮಾನ್ಯ ಅಧ್ಯಕ್ಷರೆ, ಇಷ್ಟೊಂದು ದೊಡ್ಡ ವಿಚಾರವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುತ್ತಾರೆಂದು ನಾನು ಅಂದುಕೊಂಡಿರಲಿಲ್ಲ. ಮಾನ್ಯ ನಮ್ಮ ನಾಯಕರ......

(ಗೊಂದಲ)

ದಯವಿಟ್ಟು ಮಾಡಿ ಕೇಳಿ ಜ್ಯುಡಿಷಿಯಲ್ ಪ್ರೋಬ್‌ಗೆ ನಾವು ಕೇಳುತ್ತೇವೆ. ಯಾವ ವಿಚಾರಕ್ಕಾಗಿ ಕೇಳುತ್ತೇವೆ ಎಂದರೆ ಒಬ್ಬ ವ್ಯಕ್ತಿಯ ಚರಿತ್ರೆಯ ಮೇಲೆ ಎಂದು ಇದೆಯಲ್ಲಾ, ಮೊರಲ್ ಗ್ರೌಂಡ್ಸ್ ಮೇಲೆ ಅವರು ರಾಜೀನಾಮೆ ಕೊಟ್ಟಿದ್ದಾಗಿದೆ. We cannot sit over the Judgement on the acts of Shri Ramakrishna Hegde. Judicial probe should cover certain parameters. It must be defined, Terms of reference will have to be clearly defined. ಇಲ್ಲಿ ವಿಷಯ ಏನಿದೆ ಅಂದರೆ ೧೯೬೨ ರಿಂದ ಇಲ್ಲಿಯವರೆಗೂ ನಡೆದಿರುವ ಈ ಪೂರ್ತಿ......

(ಗೊಂದಲ)

MR. SPEAKER:—Order, Order...Order, please......

(Interruption)

MR. SPEAKER.— Would you kindly yield for me?

DR. JEEVARAJ ALVA:— Yes, Sir.

MR. SPEAKER: Dr. Alva. May I kindly draw your attention to the ruling which I gave while admitting this motion under Rule 68? I have very clearly said that this matter was discussed in the Eighth Assembly as the then Chief Minister was alleged to be responsible for the phone tapping and the neddle of suspicion pointing at the former Chief Minister who is also an hon'ble Member of this House. It is claimed in the explanatory note submitted by Sri Kharge that the then Chief Secretary in a written testimony before the Committee has acknowledged that additions and deletionsof names of whose telephones are to be tapped were decided in consultation with the Chief Minister. So the whole debate since yesterday is concentrated on an earlier debate that took place in October, 1988 and then thereon. Subsequently, so many......

DR. JEEVARAJ ALWA:—Sir, you must also agree that there have been two major documents which have been placed on the floor o the House and there have been lot of discussions. One particular letter pertains to the Chief Secretary written to the Subordinate Legislation Committee and the other letter, a very important letter supposed to have been written by the Director General of Police in reply to a querr by the Chief Secretary. Both the letters Covered the major points of telephone tapping issue from 1962 onwards.

೬-೧೦ ಪಿ. ಎಂ.

ಇವತ್ತು ನಮ್ಮ ಡಿಮ್ಯಾಂಡ್, ಇಟ್ ಈಸ್ ಆನ್ ಇಷ್ಯೂ...ನೀವು ಏನಾದರೂ ಮಾಡಿಕೊಳ್ಳಿ. ಇವೊತ್ತು ನಮಗೆ ಮಾನ್ಯ ರಾಮಕೃಷ್ಣ ಹೆಗ್ಡೆಯವರು ತಪ್ಪುಗಾರರಾಗಿದ್ರೆ ಅವರ ಮೇಲೆ ತಪ್ಪು ಹೊರಿಸಿ, ನಿಮಗೆ ಧೈರ್ಯ ಇದ್ದರೆ ಅವರನ್ನು ಕಟ್ಟೆ ಕಟ್ಟೆಯಲ್ಲಿ ನಿಲ್ಲಿಸಿ ಏನು ಶಿಕ್ಷೆ ವಿಧಿಸುತ್ತೀರೋ ವಿಧಿಸಿ ಇವತ್ತು ನಾನು ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಅವರು On moral responsibility, he need not have resigned ಎಂದು ಹೇಳಿದ್ದಾರೆ. ಇವತ್ತು ಒಂದು ಮಾರಲ್

ರೈಟ್ ಮೇಲೆ ರಾಜೀನಾಮೆ ಕೊಟ್ಟಾದಮೇಲೆ ಕೂಡಾ The issue is not punishment to Mrs. Ramakrishna Hegde. It is a larger issue. The whole parameters are different. The whole issue concerns our rights. ನಾನು ಇವತ್ತು ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ಈ ಮಾತನ್ನು ನಾನು ಹೇಳಬಾರದು ಎಂದು ಇದ್ದೆ. ಇವತ್ತು ನನಗೆ ಅನುಮಾನ ಇದೆ. ವೀರೇಂದ್ರಪಾಟೀಲರು ಇಲ್ಲ ಎಂದು ಹೇಳುತ್ತಾರೆ. ಟ್ಯಾಪ್ ಆಗಿಲ್ಲ ಎಂದು ; ನಮ್ಮ ಒಬ್ಬ ಮಿತ್ರರು ಕೆನಡದಿಂದ ನನಗೆ ಫೋನ್ ಮಾಡುತ್ತಾರೆ. With all sincerity I say, I do not say it but I have a suspicion. ಕೆನಡಾದಿಂದ ಅವರು ಫೋನ್ ಮಾಡುವಾಗ ಪ್ರತಿಯೊಂದು ಸಾರಿ ಅವರು ನಮ್ಮ ಮನೆಗೆ ಫೋನ್ ಮಾಡಿದಾಗ ಅಲ್ಲಿ ಒಂದು ಪರ್ಟಿಕ್ಯುಲರ್ ಟೋನ್ ಬರುತ್ತದೆ. "Strike-7 Malleshwaram Exchange" ಅವರು ನನಗೆ ಹತ್ತುಬಾರಿ ನನಗೆ ಹೇಳಿದರು. ಆದರೆ ನಾನು ಅದನ್ನು ನಂಬಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್,—ಈ ಬಗ್ಗೆ ಚರ್ಚೆಯೇ ಬೇಡ. ಮಾನ್ಯ ಸದಸ್ಯರಿಗೆ ಒಂದು ವಿಷಯ ಗೊತ್ತಿರಲಿಕ್ಕಿಲ್ಲ. ಸೆಂಟ್ರಲ್ ಇಂಟಲಿಜೆನ್ಸ್‌ನ ಆಫೀಸು ಇಲ್ಲೂ ಇವೆ. ಅವರೂ ಕೂಡಾ ಟ್ಯಾಪ್ ಮಾಡುತ್ತಾರೆ. ದಯಮಾಡಿ ತಾವು ತಿಳಿದುಕೊಳ್ಳಿ ; ಟೆಲಿಫೋನ್ ಟ್ಯಾಪ್ ಮಾಡುವುದು ಕರ್ನಾಟಕದಲ್ಲಿ ಮಾತ್ರವಲ್ಲ, It is not the State Intelligence alone but Central Intelligence also functions here.

ಡಾ|| ಜೀವರಾಜ ಆಳ್ವ.—ಇದು ಏನೋ ಇರಬಹುದೆಂದು ನಾನು ತಿಳಿದುಕೊಂಡಿದ್ದೆ. ನಾನು ಲಂಡನ್‌ಗೆ ಹೋದಾಗ ಬೇರೆ ಯಾವುದೇ ಟೆಲಿಫೋನ್ ಕಾಲ್‌ಗೆ ಮಾಡಿದರೂ ಈ ಸ್ಟ್ರೈಕ್ ಸೆವೆನ್ ಬರುವುದಿಲ್ಲ. ಆದರೆ ನನ್ನ ನಂಬರ್‌ಗೆ ಮಾಡಿದರೆ ಸ್ಟ್ರೈಕ್ ಸೆವೆನ್ ಮಲ್ಲೇಶ್ವರಂ ಎಕ್ಸ್‌ಚೇಂಜ್‌ನ ಸಂಕೇತ ಬರುತ್ತದೆ. ಇದನ್ನು ಪ್ರತಿಯೊಬ್ಬ ಶಾಸನಸಭಾ ಸದಸ್ಯರೂ ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು, ಏನೋ ರಾಮಕೃಷ್ಣ ಹೆಗಡೆಯವರ ಮೇಲೆ ಗೂಬೆ ಕೂರಿಸಬೇಕು, ಶಿಕ್ಷೆ ಮಾಡಬೇಕು ಎಂದು ಅಲ್ಲ. ಇಲ್ಲಿ ನಂಜುಂಡಸ್ವಾಮಿಯವರು ಇದ್ದಾರೆ. ನೊಂದ ಮಾನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮನನೊಂದು ನಾನು ಮಾತನಾಡುತ್ತಿದ್ದೇನೆ. I am not concerned about privacy. I have every right to rise.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನಗೊಂದುಪಾಯಿಂಟ್ ಆಫ್ ಆರ್ಡರ್.

ಡಾ| ಜೀವರಾಜ ಆಳ್ವ.—ಇವತ್ತು ನಂಜುಂಡಸ್ವಾಮಿಯವರು ಹೇಳುತ್ತಾರೆ, ಯಡಿಯೂರಪ್ಪನವರು ಹೇಳುತ್ತಾರೆ, ಭೈರೇಗೌಡರು ಹೇಳುತ್ತಾರೆ, ವೀರಪ್ಪ ಮೊಯ್ಲಿಯವರು ಹೇಳುತ್ತಾರೆ. We are concerned, worried and apprehensive about the motive. ಆದುದರಿಂದ ನಾನು ಹೇಳುತ್ತಿದ್ದೇನೆ. ೧೯೬೭ ರಿಂದ ಪೂರ್ಣವಾಗಿ ಯಾವ ಯಾವ ಮುಖ್ಯ ಮಂತ್ರಿ ಏನೇನು ದ್ರೋಹ ಮಾಡಿದ್ದಾನೆ, ಯಾವ ಯಾವ ಮುಖ್ಯ ಮಂತ್ರಿ...ಯಾರ್ಯಾರ ಪ್ರೈವೆಸಿಯನ್ನು ಎನ್‌ಕ್ರೋಚ್ ಮಾಡಿದ್ದಾರೆ ಎಂಬುದು ತೀರ್ಮಾನ ಆಗಬೇಕು. ಜ್ಯುಡಿಶಿಯಲ್ ಪ್ರೋಬ್ ಆಗಬೇಕು. ಅದನ್ನು ಬಿಟ್ಟು ನೀವು ಇವತ್ತು ಬರೀ ಲೆಕ್ಕ ಏನು ಆಯಿತು ಎಂದು ತನಿಖೆ ಮಾಡಿದರೆ. You will be witch-hunting. You will be committing a politically motivated crime. ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ನಿಯಮ ೬೮ರ ಕೆಳಗೆ ತಾವು ಮಾನ್ಯ ಸದಸ್ಯರಿಗೆ ಅನುಮತಿ ಕೊಟ್ಟಿದ್ದೀರಿ, ನಿನ್ನೆಯಿಂದ ಇವತ್ತಿನವರೆಗೆ ಚರ್ಚೆಯಾಗಿದೆ. ಚರ್ಚೆ ವ್ಯಾಪಕವಾಗಿ ಆಗಿದ್ದು ಮುಖ್ಯಮಂತ್ರಿಗಳೂ ಕೂಡಾ ಉತ್ತರವನ್ನು ಕೊಟ್ಟಮೇಲೆ ಹೆಚ್ಚೆಂದರೆ ಕೆಲವು ಸ್ಪಷ್ಟೀಕರಣಗಳನ್ನು ಕೇಳಬಹುದು. ಆದರೆ ಈಗ ಅನಂತರ ನಡೆದಂಥ ಒಂದು ಚಟುವಟಿಕೆಯಿಂದ ಏನು ಕಾಣುತ್ತದೆಂದರೆ ಪುನಃ ಚರ್ಚೆ ಆಗುತ್ತಿದೆ. ನಿಯಮ ೬೮ರ ಚರ್ಚೆಗೆ ತಾವು ಏನು ಪ್ಯಾರಾಮೀಟರ್ ಹಾಕಿದ್ದೀರಿ, ಅದನ್ನು ತಾವು ಪುನರುಚ್ಚರಿಸಿದ್ದೀರಿ. ತಾವು ದಯಮಾಡಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನೋಟೀಸ್ ಮತ್ತು ಅದರ ಎಕ್ಸ್‌ಪ್ಲನೇಟರಿ ನೋಟ್‌ನ್ನು ನೋಡಬೇಕು. ೧೯೮೮ರ ಫೋನ್ ಕದ್ದಾಲಿಕೆ ಏನು ಇದೆ, ಅದಕ್ಕೆ ಸೀಮಿತವಾದ ಒಂದು ನೋಟೀಸ್. ಅದರ ಮೇಲೆ ವ್ಯಾಪಕವಾಗಿ ಬೆಳೆಯಬಾರದು ಎನ್ನುವ ಉದ್ದೇಶದಿಂದ ತಾವು ಅದಕ್ಕೆ ಪ್ಯಾರಾಮೀಟರ್‌ನ್ನು ಪ್ರಸ್ತಾವನೆಯಲ್ಲಿ ಕೊಟ್ಟಿದ್ದೀರಿ. ಇದೆಲ್ಲಾ ಆದಮೇಲೆ ಇವತ್ತು ಈ ಚರ್ಚೆ ಬೇರೆ ದಾರಿಯನ್ನು ಹಿಡಿದು ೧೯೬೭ ಅಥವಾ ೧೯೬೭ ಅಥವಾ ಅದಕ್ಕೆ ಹಿಂದೆ ಚಲಿಸಿದರೆ ಬಹುಶಃ ಇದಕ್ಕೆ ಮಿತಿ ಇರುವುದಿಲ್ಲ. ಇದು ಶತಮಾನಕ್ಕೆ

ಹೋಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟಮೇಲೆ ಅವರು ಹೇಳಿದ್ದಾರೆ. ಸತ್ಯಶೋಧನೆ ಸರ್‌ಕಮ್‌ಸ್ಟೆನ್‌ಯಲ್ ಎವಿಡೆನ್ಸ್ ಇದೆ ಎಂದು ಕೂಡ ಅವರು ಹೇಳಿದ್ದಾರೆ.

ಇದರಲ್ಲಿ ತಮಗೆ ಅನುಮಾನವಿದ್ದರೆ ನ್ಯಾಯಾಂಗ ತನಿಖೆ ಮಾಡಬೇಕೆಂದು ತಮ್ಮ ಅಭಿಪ್ರಾಯ ಇದ್ದರೆ ದಯಮಾಡಿ ಹೇಳಿ ಐ ವಿಲ್ ಅಪ್ಲೈ ಅವರ್ ಮೈಂಡ್ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. I will apply my mind. the ball is in your court. you do not want to kick the ball. The Hon'ble Speaker may kindly order for closure of the debate as far as Rule 68 is concerned,

MR. SPEAKER:—I have heard. the...

SRI D.B. CHANDRE GOWDA:—Regarding Judicial Enuiry. Should I not have my say? Should we not clarify him?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ನಮಗೆ ಗೊತ್ತಾಗಬೇಕು ಏನಾಯಿತೆಂದು, ಜುಡಿಷಿಯಲ್ ಎನ್‌ಕ್ವಾಯರಿ ಆಯಿತೋ ಏನಾಯಿತು ಎಂದು ನಮಗೆ ಗೊತ್ತಾಗಬೇಕು.

ಅಧ್ಯಕ್ಷರು:—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ:—ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು:—ನಾನು ನಿಂತಿದ್ದೇನೆ ದಯವಿಟ್ಟು ಕುಳಿತುಕೊಳ್ಳಿ. ನೀವು ಕೂಡದಿದ್ದರೆ ನಾನೇ ಕೂರುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:—ಮಾನ್ಯ ಸಭಾನಾಯಕರು ಕೇಳಿದ್ದಕ್ಕೆ ನಾನು ಉತ್ತರ ಹೇಳುವುದಕ್ಕೆ ಅವಕಾಶ ಬೇಡವೆ? ಇಲ್ಲದಿದ್ದರೆ ನಾನು ಹೇಳುತ್ತಿರಲಿಲ್ಲ.

ಅಧ್ಯಕ್ಷರು:—ಇದು ಸಮ ಅರಿಯಂದ ನ್ಯಾಯ ಅಂತ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಯಾವುದು ಬೇಕು ಜುಡಿಷಿಯಲ್ ಎನ್‌ಕ್ವಾಯರಿ ಬೇಕೇ ಯಾವುದು ಬೇಕು ಎಂದು ಕೇಳಿ ಕುಳಿತು ಕೊಳ್ಳುತ್ತಾರೆ. ೧೯೭೭ರಿಂದ ಮಾಡಿ ಎಂದು ಹೇಳಿ ನೀವು ಕುಳಿತು ಕೊಳ್ಳುತ್ತೀರಿ. ಇದರಿಂದ.....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ಮಾನ್ಯ ಅಧ್ಯಕ್ಷರೆ, ನಮ್ಮ ನೋಟೀಸಿನಲ್ಲಿ ೧೯೮೮ರ ಬಗ್ಗೆ ಮಾತ್ರ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:—ಇದು ಸಿಂಪಲ್. ಮುಖ್ಯಮಂತ್ರಿಗಳು ಏನಾದರೂ ಮಾಡಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ನಮ್ಮ ನೋಟೀಸ್ ಇದೆ, ನನ್ನ ಪರ್ಸನಲ್ ಒಪೀನಿಯನ್, ತಮಗೆ ಕೇಳಿಕೊಳ್ಳುತ್ತಿದ್ದೇನೆ. ಅವರು ನ್ಯಾಯಾಂಗ ತನಿಖೆಗೆ ಒಪ್ಪದಿದ್ದರೆ ಸದನ ಸಮಿತಿಯನ್ನು ರಚನೆ ಮಾಡಿ, ೧೯೮೮ರ ಬಗ್ಗೆ ಅವರು ತನಿಖೆ ಮಾಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ:—ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—೧೯೮೮ರ ಬಗ್ಗೆ ಮಾತ್ರ ಅವರಿಗೆ ಮಾತನಾಡಲಿಕ್ಕೆ ತಾವು ಅವಕಾಶ ಕೊಡಿ.

SRI. D.B. CHANDRE GOWDA:—May I Submit for your information in the House atleast? ಬಾಯಿ ಇದ್ದವನು ಬದುಕಿದ ಅಂದಹಾಗೆ ಆಯಿತು.

ಶ್ರೀ ಕೆ. ಲಕ್ಕಪ್ಪ:—Sir......

MR. SPEAKER:—I have called the Hon. Leader of the Opposition.

ಶ್ರೀ ಡಿ.ಬಿ. ಚಂದ್ರೇಗೌಡ:—ಇವತ್ತಿನ ಕಾರ್ಯಕಲಾಪದಲ್ಲಿ ಚರ್ಚೆಗೆ ಇರತಕ್ಕ ವಿಷಯ ಏನು? ದೂರವಾಣಿ ಕದ್ದಾಲಿಕೆಗಳ ಬಗ್ಗೆ ಚರ್ಚೆಯನ್ನು ಮುಂದುವರಿಸುವುದು. ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಏನು ಹೇಳಿದರು. ನಿಮ್ಮ ಹತ್ತಿರ ದಾಖಲೆಯಿರುವ ಪ್ರಕಾರ ೩೦–೧೨–೮೭ಕ್ಕೆ ಒಬ್ಬರು

ಇಂಟಲಿಜೆನ್ಸ್ ಆಫೀಸರ್ ಚಾರ್ಜ್ ತೆಗೆದುಕೊಳ್ಳುವ ಕಾಲಕ್ಕೆ, ಮತ್ತೊಬ್ಬರು ೧೯೭೯-೮೦ಕ್ಕೆ ಚಾರ್ಜ್ ತೆಗೆದುಕೊಳ್ಳುವ ಕಾಲಕ್ಕೆ ಈ ಎರಡೂ ಸಾರಿ ೧೯೬೨ರಿಂದ ಬಂದಂತಹ ನಿಯಮಗಳನ್ನೇ ಪಾಲಿಸಿಕೊಂಡು ಬಂದಿದ್ದೇವೆಂದು ಹೇಳಿದ್ದಾರೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು:—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:—ಇದನ್ನು ಹೌಸ್ ಕಮಿಟಿಗೆ ರೆಫರ್ ಮಾಡಿ, ಹೌಸ್ ಕಮಿಟಿ ಯವರು ಇದನ್ನು ತೀರ್ಮಾನ ಮಾಡುತ್ತಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:—೧೯೬೨ರಿಂದ ೧೯೮೬ರವರೆಗೆ ಒಂದೇ ಪ್ರೊಸಿಜರ್ ಫಾಲೋ ಮಾಡು ತ್ತೇವೆಂದು ಹೇಳುತಾರೆ. ನಮಗೆ ಬೇಕಾಗಿರತಕ್ಕದ್ದು ಆಯಾ ಕಾಲಕ್ಕೆ ಬಂದಂತಹ ಮುಖ್ಯ ಮಂತ್ರಿ ಗಳು ಯಾವ್ಯಾವ ನಿಯಮಗಳನ್ನು ಮಾಡಿದರು. ಹಾಗೂ ಆ ನಿಯಮದಂತೆ ನಡೆದುಕೊಂಡಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಮತ್ತು ೧೯೬೨ರಿಂದ ೧೯೮೬ರವರೆಗೆ ಏನೇನು ಪ್ರೊಸಿಜರ್‌ಗಳಿವೆ ಯಾವ್ಯಾವ ಕಾಲದ ಮುಖ್ಯಮಂತ್ರಿಗಳು ಏನೇನು ಮಾಡಿದ್ದಾರೆಂಬ ಬಗ್ಗೆ ಜುಡಿಷಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:—ಇಲ್ಲಿ ಪ್ರಶ್ನೆ ಇರತಕ್ಕದ್ದು ಆಡಳಿತ ಪಕ್ಷ ಮತು ವಿರೋಧಪಕ್ಷದ್ದು ಅಲ್ಲ ಮೂಲಭೂತವಾಗಿ ಪ್ರಶ್ನೆ ಇರತಕ್ಕದ್ದು ಇದನ್ನು ಯಾರು ಮಾಡಿದ್ದಾರೆ? ಎನ್ನುವುದು ರಾಜ್ಯದ! ಜನತೆಗೆ. ದೇಶದ ಜನತೆಗೆ ಗೊತ್ತಾಗಬೇಕಾಗಿದೆ. ಇಲ್ಲಿ ಇಬ್ಬರ ಪ್ರಶ್ನೆ ಇಲ್ಲ It is not an affair between Mr. Veerendra Patil and Mr Ramakrishna Hegde. It. has got wider Scope. It has got bigger limit. ಅದಕ್ಕೋಸ್ಕರ ಸತ್ಯಾಂಶ ಇವತ್ತು ಹೊರಗಡೆ ಬರಬೇಕಾಗಿದೆ. ನ್ಯಾಯಾಂಗ ತನಿಖೆ ಮಾಡುವುದಕ್ಕೆ ನಿಮಗೆ ಅಡ್ಡಬರುವುದಕ್ಕೆ ಏನಿದೆ? ಯಾವ ಕಾನೂನಿನ ಅಡ್ಡಿ ಇದೆ? ಏನೂ ಇಲ್ಲ. ಕೋಳಿಯನ್ನು ಕೇಳಿ ಸಾಂಬಾರು ಅರೆಯ ಬೇಕೆನ್ನುವುದು ಎಷ್ಟು ಕಡೆ ಇದೆ? ಕೋಳಿ ಕೇಳಿ ಯಾವತ್ತೂ ಸಾಂಬಾರು ಅರೆದಿಲ್ಲ. ಸರ್ಕಾರ ತೀರ್ಮಾನ ಮಾಡುವುದಕ್ಕೆ ಸಾಧ್ಯ ಇದೆ. ಏಕೆ ವ್ಯಥಾ ಕಾಲಹರಣ ಮಾಡುತ್ತಿದ್ದೀರಿ? ನಾನು ನಿನ್ನೆ ದಿವಸ ಹೇಳಿದ ಮಾತನ್ನು ಇವತ್ತು ಹೇಳಬೇಕಾಗುತ್ತದೆ......

ಅಧ್ಯಕ್ಷರು.—ಮಾನ್ಯ ಭದ್ರಾವತಿ ಶಾಸಕರು ಏನೋ ಹೇಳಬೇಕು ಅಂತಿದ್ದಾರೆ ? ಈಗ ಅವರು ಮಾತನಾಡುತ್ತಾರೆ.

ಶ್ರೀ ಇಸಾಮಿಯಾ ಎಸ್. (ಭದ್ರಾವತಿ) .—ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಸಾಕಷ್ಟು ಚರ್ಚೆ ನಡೆದಿದ. ಜನರಿಗೆಲ್ಲಾ ಗೊತ್ತಾಗಿದೆ. ಈಗ ಚರ್ಚೆ ಎಲ್ಲಾ ಆಗಿದ್ದು ನಮ್ಮ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಎಲ್ಲಾ ಕೊಟ್ಟಿದ್ದಾರೆ. ಸುಮ್ಮನೆ ನ್ಯಾಯಾಂಗ ತನಿಖೆಯ ತೀರ್ಮಾನಕ್ಕೆ ಒಪ್ಪಿಕೊಂಡರೆ ಸದನದ ಎಲ್ಲರೂ ಅದನ್ನು ಸ್ವಾಗತಿಸುತ್ತಾರೆ. ಇವರಿಗೆ ಆಗತಕ್ಕಂಥ ನೋವಿಗೆ ಒಟ್ಟಾಗಿ ಔಷಧಿ ಕಂಡಿಯಬೇಕೆಂದು ಇವರು ಹೇಳುತ್ತಿದ್ದಾರೆ. ದಯವಿಟ್ಟು ನ್ಯಾಯಾಂಗ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಆರು ಗಂಟೆ ಇಪ್ಪತ್ತು ನಿಮಿಷ ಆಯಿತು.

ಶ್ರೀ ಕೆ. ಲಕ್ಕಪ್ಪ.—ತಮಗೆ ಅಧಿಕಾರ ಇದೆ. You have got inherent powers.

ಅಧ್ಯಕ್ಷರು.—ಶ್ರೀ ಲಕ್ಕಪ್ಪನವರೇ, ನನಗೆ ಇರುವುದು inherent powers ಅಥವಾ inherited powers ?

SRI. K. LAKKAPPA.—This cannot be a futile debate. you have got three options before you. You can take any one of the options. I request you to kindly exercise your inherent powers under the circum stances.

MR. SPEAKER.—Is there any further clarification that the Leader of the Housce would like to give ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮತ್ತು ಶ್ರೀಮಾನ್ ಹೆಗಡೆಯವರು, ಇವತ್ತು ಮೊದಲಿಲ್ಲಿ. ಶ್ರೀ ಹೆಗಡೆಯವರು ಪ್ರಾರಂಭ ಮಾಡಿದರು, ನಿಮಗೆ ಅನುಮಾನ ಇದ್ದರೆ ಮಾಡಿ ಅಂತ ಹೇಳಿದರು. ಏಕೆಂದರೆ ಪ್ರಶ್ನೆ ಸೀಮಿತವಾದದ್ದು. ಟೆಲಿಫೋನ್ ಟ್ಯಾಪಿಂಗ್ ಯಾವ ಅವಧಿಯಲ್ಲಿ ಆಗಿದೆ. ಅದು ಸ್ಪಷ್ಟವಾಗಿದೆ. ಆ ಅವಧಿಯಲ್ಲಿ ಯಾವ ಆಫೀಸರ್ ಇದ್ದ, ಅದೂ ಸ್ಪಷ್ಟವಾಗಿದೆ. ಪ್ರಶ್ನೆ ಏನು ಎಂದರೆ ಆ ಆಫೀಸರ್ ಟ್ಯಾಪಿಂಗ್ ಮಾಡುವುದಕ್ಕೆ ಮೊದಲು ಮುಖ್ಯ ಮಂತ್ರಿಗಳ ಪರ್ಮಿಶನ್ ತೆಗೆದುಕೊಂಡು ಮಾಡಿದ್ದಾನೆಯೋ ? ಇಷ್ಟೆ. ಇದರ ಬಗ್ಗೆ ನಾನು ಆ ಆಫೀಸರ್‌ರಿಂದ ಲಿಖಿತ ಮೂಲಕ ಉತ್ತರ ತರಿಸಿ ತಮ್ಮ ಮುಂದೆ ಇಟ್ಟಿದ್ದೇನೆ. ಅದಕ್ಕೇ ನಾನು ಹೇಳಿದೆ, ಇಷ್ಟೆಲ್ಲಾ ಆದಮೇಲೆ ಜ್ಯೂಡಿಶಿಯಲ್ ಎನ್‌ಕ್ವೈರಿ ಏಕೆ ಅಂತ. ವಿರೋಧ ಪಕ್ಷದ ನಾಯಕರು ಹೇಳಿದರು ಇಲ್ಲ, ಜ್ಯುಡಿಶಿಯಲ್ ಎನ್‌ಕ್ವೈರಿ ಬೇಕು ಎಂದು. ಅದಕ್ಕೆ ನಾನು ಸ್ಪಷ್ಟವಾಗಿ ಹೇಳಿದೆ. ನೋಡಿ, ಇದನ್ನೆಲ್ಲ ತಮ್ಮ ಮುಂದೆ ಇಟ್ಟಿದ್ದೇನೆ. ನಾನು ಹೇಳಿದ್ದಕ್ಕೆ ಸಮಾಧಾನ ಆಗಿಲ್ಲ ಎಂದರೆ ಬೇಕಾದರೆ ಜ್ಯುಡಿಶಿಯಲ್ ಎನ್‌ಕ್ವೈರಿ ಕೇಳಿರಿ ಅಂತ ಹೇಳಿದರೆ, ಈಗ ಅದನ್ನು ಟ್ವಿಸ್ಟ್ ಮಾಡಿ ೬೨ ರಿಂದ ಮಾಡಿರಿ ಅಂತ............

(ಗೊಂದಲ)

ಶ್ರೀ ಸಿ. ಬೈರೇಗೌಡ.—ಅವರು ಕೇಳುವುದಂತೆ ನೀವು ಮಾಡುವುದಂತೆ, ಹಾಗಾದರೆ ತಾವು ಏಕೆ ಬಂದಿದ್ದೀರಿ, ಹೇಳಿ ನೋಡೋಣ.

ಶ್ರೀ ವೀರೇಂದ್ರ ಪಾಟೀಲ್.—ಅವರು ಕೇಳಿದ್ದಕ್ಕೆ ನಾನು ಉತ್ತರ ಹೇಳುತ್ತಿದ್ದೇನೆ. ಅವರು ಡಿಮ್ಯಾಂಡ್ ಮಾಡಿದರು............

ಅಧ್ಯಕ್ಷರು.—ನೀವೂ ಡಿಮ್ಯಾಂಡ್ ಮಾಡಿ. ನಿಮಗೂ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ.—Yes, I am demanding.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಾವೇ ರೂಲಿಂಗ್ ಕೊಟ್ಟಹಾಗೆ ಚರ್ಚೆ ಯಾವ ಪೀರಿಯಡ್‌ನಿಂದ ಟೆಲಿಫೋನ್ ಟ್ಯಾಪಿಂಗ್ ಆಗಿತ್ತು ಎಂಬುದಕ್ಕೆ ಸೀಮಿತವಾದದ್ದು. ಯಾರೋ ಒಂದು ಲೆಟರ್‌ನಲ್ಲಿ ೬೨ರಿಂದ ಅಂತ ಬರೆದಿದ್ದಾರೆ, ೬೨ರಿಂದ ಎನ್‌ಕ್ವೈರಿ ಮಾಡಿಸಬೇಕೆಂದು ಯಾರೂ ಸಹ ಹೇಳುವಹಾಗಿಲ್ಲ. ಪ್ರಶ್ನೆ ಏನು ಎಂದರೆ ನಿನ್ನೆಯಿಂದ ಮಾತನಾಡುತ್ತಿದ್ದೇವೆ. ತಮ್ಮ ರೂಲಿಂಗ್‌ನಲ್ಲಿ ಅಡ್ಮಿಟ್ ಮಾಡುವುದಕ್ಕೆ ಮುಂಚೆ ತಾವು ಹೇಳಿದ್ದೀರಿ, ಈ ಚರ್ಚೆ ೮೮ರಲ್ಲಿ ಆಗಿತ್ತು ಎಂದು. ೬೨ರಿಂದ ಈ ಚರ್ಚೆ ಆಗಿತ್ತೇ? ಅಥವಾ ನಿನ್ನೆಯಿಂದ ಚರ್ಚೆ ಮಾಡುತ್ತಿದ್ದೇವೆ. ಒಂದು ಘಟನೆಯಾದರೂ, ೧೯೬೨ರ ಕೆಳಗಿನ ಯಾವುದಾದರೂ ಒಂದು ಘಟನೆ ಇಲ್ಲಿ ಪ್ರಸ್ತಾಪವಾಗಿದೆಯೋ? ೧೯೬೨, ೧೯೬೮, ೧೯೭೯ರ ಘಟನೆಗಳನ್ನು ಯಾರಾದರೂ ಹೇಳಿದ್ದಾರೆಯೋ? ಅದಕ್ಕಾಗಿ ೧೯೮೮ರ ಘಟನೆ ಬಗ್ಗೆ ಇಲ್ಲಿ ಚರ್ಚೆಯಾಗಿರುವುದರಿಂದ, ಒಂದುವೇಳೆ ನಿಮಗೆ ಬೇಕೇನು ಎಂದು ಕೇಳಿದೆ. ಅದಕ್ಕೆ ನೀವು ೧೯೬೨ರಿಂದ ಮಾಡಿ, ಬಹುಶಃ ಇದಾದಮೇಲೆ, ಎರಡನೇ ಸ್ಟೇಟ್‌ನಲ್ಲಿ ಏನಾಗಿದೆ ಅದೂ ಮಾಡಿ, ಇಲ್ಲ ಕೇಂದ್ರ ಸರ್ಕಾರದವರೇ ಮಾಡಲಿ ಎಂದು ಹೇಳಬಹುದು ಒಂದು ಮಾತನ್ನು ಹೇಳುತ್ತೇನೆ, ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾಗಿದ್ದರೆ, ವಿರೋಧಪಕ್ಷದವರನ್ನು ಕೇಳಿ ಮಾಡಬೇಕಾಗಿಲ್ಲ, ಆ ಅಧಿಕಾರ ಸರ್ಕಾರಕ್ಕೆ ಇದೆ. ನಾನು ಏನು ಹೇಳಿದೆ ಆ ಅಧಿಕಾರ ಇದೆ, ಅದನ್ನು ಚಲಾಯಿಸಬೇಕೇ ಬೇಡವೇ ಎನ್ನುವ ನಿರ್ಣಯವನ್ನು ನಾನು ತೆಗೆದುಕೊಳ್ಳುತ್ತೇನೆ, ಆದರೆ ಇಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಬೇಡಿಕೆ ನಿಮ್ಮಿಂದ ಬಂತು. ಇವತ್ತು ಬೇಕಾದರೆ ರೆಕಾರ್ಡ್ಸ್ ತೆಗೆಸಿ ನೋಡಿ; ಆ ವೇಳೆಗೆ ೧೯೬೨ರಿಂದ ಮಾಡಿ ಎಂದು ಹೇಳಲಿಲ್ಲ. ಈಗ ಪಾಯಿಂಟೆಡ್ ಆಗಿ ಕೇಳಿದಾಗ, ೧೯೬೨ರಿಂದ ಮಾಡಿ ಎಂದು ಹೇಳುತ್ತಿದ್ದೀರಿ. ಅಂದರೆ ಅದನ್ನು ಕಾಂಪ್ಲಿಕೇಟ್ ಮಾಡುವಂಥ ವಿಚಾರ ತಮಗಿದೆ ಎಂದು ಕಾಣುತ್ತದೆ. ಅದಕ್ಕಾಗಿ ಈ ಬಗ್ಗೆ ನನ್ನ ಅಭಿಮತ ಸ್ಪಷ್ಟವಾಗಿದೆ.

ಅಧ್ಯಕ್ಷರು.—ಈಗ ಸಭೆ ಮುಂದುವರೆದು, ನಾಳೆ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ

(ಸದನವು, ಸಂಜೆ ೬ ಗಂಟೆ ೨೭ ನಿಮಿಷಕ್ಕೆ ಮುಕ್ತಾಯವಾಗಿ, ಮರುದಿನ ಅಂದರೆ ೨೭–೬–೧೯೯೦ರಂದು ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)